# ಶ್ರೀ ಶಂಕರಸಂಸ್ಮರಣ

ಲೇಖಕರು :
ಬ್ರಹ್ಮಜ್ಞಕವಿ ಶ್ರೀದೇವರಾಯ ಕುಲಕರ್ಣಿ (ಹೊಂಬಳ)

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
2001

ಅಧ್ಯಾತ್ಮಗ್ರಂಥಾವಳಿ

# ಶ್ರೀ ಶಂಕರಸಂಸ್ಮರಣ

ಮತ್ತು

# ಶ್ರೀ ಶಂಕರಸಿದ್ಧಾಂತಸಂಸ್ಮರಣ

(ಸಾಕ್ಷ್ಯನುಭವ)

ಲೇಖಕರು :

'ಬ್ರಹ್ಮಜ್ಞಕವಿ' ಶ್ರೀ ದೇವರಾಯ ಕುಲಕರ್ಣಿ (ಹೊಂಬಳ)

ಕ್ರಮಾಂಕ ೧೫೧

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

೨೦೦೧

ಮೊದಲನೆಯ ಮುದ್ರಣ ೧೯೭೦ (೧೦೦೦ ಪ್ರತಿಗಳು)
ಎರಡನೆಯ ಮುದ್ರಣ ೨೦೦೧ ( ೨೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದ್ದು
All Rights Reserved

ಅಕ್ಷರ ಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ.10/1, ನಾಗಸಂದ್ರ
ತ್ಯಾಗರಾಜನಗರ ಪೋಸ್ಟ್, ಬೆಂಗಳೂರು – 28
ದೂರವಾಣಿ : 6764650

ಮುದ್ರಣಸ್ಥಾನ :
**ಗಣೇಶಮಾರುತಿ ಪ್ರಿಂಟರ್ಸ್**
ನಂ.76, 3ನೇ ಬ್ಲಾಕ್, 6ನೇ ಮುಖ್ಯರಸ್ತೆ
ತ್ಯಾಗರಾಜನಗರ, ಬೆಂಗಳೂರು – 28
ದೂರವಾಣಿ : 6766342

# ಮುನ್ನುಡಿ

ಈಗ ವಾಚಕರ ಕರಕಮಲಗಳಿಗೆ ಸಮರ್ಪಿಸುತ್ತಿರುವ **ಶಂಕರಸಂಸ್ಮರಣ** ಗ್ರಂಥವು ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಶಿಷ್ಯರಾದ ದಿವಂಗತ **ಬ್ರಹ್ಮಜ್ಞಕವಿ ದೇವರಾಯ ಕುಲಕರ್ಣಿ, ಹೊಂಬಳ** (ಗದಗಜಿಲ್ಲೆ) ರವರ ಕೃತಿಯಾಗಿದೆ. ದಿವಂಗತರು ೧೯೭೦ರಲ್ಲಿ ಪ್ರಕಟಿಸಿದ್ದ **ಶ್ರೀಶಂಕರಸಂಸ್ಮರಣ** ಎಂಬ ಗ್ರಂಥ ಹಾಗೂ ೧೯೭೩ರಲ್ಲಿ ಪ್ರಕಟಿಸಿದ್ದ **ಶ್ರೀಶಂಕರಸಿದ್ಧಾಂತಸಂಸ್ಮರಣ (ಸಾಕ್ಷ್ಯನುಭವ)** ಎಂಬ ಗ್ರಂಥ, ಈ ಎರಡು ಗ್ರಂಥಗಳ ಪೂರ್ಣಬರವಣಿಗೆಯನ್ನೇ ಈ ಗ್ರಂಥದಲ್ಲಿ ಪುನರ್ಮುದ್ರಿಸಿ ವಾಚಕರಿಗೆ ಅರ್ಪಿಸಲಾಗಿದೆ. ಗ್ರಂಥಕರ್ತರು ಬ್ರಹ್ಮೀಭೂತ ಶ್ರೀಶ್ರೀಗಳವರ ಆಪ್ತಶಿಷ್ಯರಾಗಿದ್ದು ತಮ್ಮ ಜೀವಿತಕಾಲದಲ್ಲಿ ಗುರುಗಳವರ ಅಧ್ಯಾತ್ಮವಿದ್ಯಾಪ್ರಚಾರಕಾರ್ಯವನ್ನು ಹೆಚ್ಚಿನ ಆಸಕ್ತಿಯಿಂದ ನಿರ್ವಹಿಸಿ ಉಪನ್ಯಾಸಗಳು ಹಾಗೂ ಗ್ರಂಥರಚನೆಯ ರೂಪದಲ್ಲಿ ಹೊರಪಡಿಸಿ ಅತ್ಯಂತ ಶ್ರದ್ಧಾಭಕ್ತಿಗಳಿಂದ ತಮ್ಮ ಜೀವನವನ್ನೇ ಮೀಸಲಾಗಿಟ್ಟು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ- ಪ್ರದೇಶಗಳಲ್ಲಿ ಪ್ರಚಾರಮಾಡಿದ್ದರು. ಹಾಗೆಯೇ ಶ್ರೀಶ್ರೀಗಳವರ ವಿಚಾರಸರಣಿಯನ್ನೇ ಪೂರ್ಣವಾಗಿ ಅವಲಂಬಿಸಿ ಇನ್ನೂ ಕೆಲವು ಗ್ರಂಥಗಳನ್ನೂ ಬರೆದು ಪ್ರಕಟಿಸಿದ್ದರು. ಇವುಗಳಲ್ಲಿ ಈಗ ವಾಚಕರ ಕೈಯಲ್ಲಿರುವ ಈ ಗ್ರಂಥವೂ ಒಂದಾಗಿದೆ. ಇದಲ್ಲದೆ ಸರ್ವಜ್ಞಕವಿಯ ಪದ್ಯಗಳ ಶೈಲಿಯಲ್ಲಿ **ಶುದ್ಧಶಾಂಕರಪ್ರಕ್ರಿಯೆ**ಯನ್ನು ವಿವರಿಸುವ ವಿನೂತನವಾದ **ಬ್ರಹ್ಮಜ್ಞವಚನಗಳು** ಎಂಬ ಅಮೋಘವಾದ ಕೃತಿಯನ್ನೂ ರಚಿಸಿ ಅದರ ಹಕ್ಕುಗಳನ್ನೆಲ್ಲ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೇ ಸಮರ್ಪಿಸಿ ಗುರುಕೃಪಾಪಾತ್ರರಾಗಿದ್ದರು. ಇಂಥ ಮಹನೀಯರ ಕೃತಿಯಾದ ಈ ಗ್ರಂಥವನ್ನು ಈಗ ವಾಚಕರಿಗೆ ಸಮರ್ಪಿಸಲು ನಮಗೆ ಬಹಳ ಸಂತೋಷ ವಾಗಿದೆ.

ಈ ಗ್ರಂಥಕರ್ತರು ಶ್ರೀಸದ್ಗುರುದತ್ತಾತ್ರೇಯರ ಪರಮಭಕ್ತರು ; ಹಾಗೆಯೇ ತಮ್ಮ ಜೀವನವನ್ನೆಲ್ಲ ವೇದಾಂತತತ್ತ್ವಪ್ರಚಾರಕ್ಕಾಗಿಯೇ ಮೀಸಲಾಗಿಟ್ಟು ಗುರುಭಕ್ತಿಗೆ ಆದರ್ಶರಾಗಿದ್ದವರು. ಶ್ರೀಶ್ರೀಗಳವರ ಕಾಲಾನಂತರವೂ ಅಧ್ಯಾತ್ಮಪ್ರಕಾಶ ಕಾರ್ಯಾಲಯಕ್ಕೆ ಸೇವಾಮನೋಭಾವದಿಂದ ತಮ್ಮ ಕೈಂಕರ್ಯವನ್ನು ಸಲ್ಲಿಸುತ್ತಿದ್ದು ೭.೧೨.೧೯೯೩ರಂದು ದೈವಾಧೀನರಾದರು. ಇಂಥ ಆದರ್ಶಗುರುಭಕ್ತರು ವಿರಳರೆಂದೇ ಹೇಳಬಹುದು. ಶ್ರೀಸದ್ಗುರುದತ್ತಾತ್ರೇಯರ ಅನುಗ್ರಹವು ವಾಚಕರೆಲ್ಲರಿಗೂ ದೊರಕಲೆಂದು ಹಾರೈಸುತ್ತಾ ಈ ಮುನ್ನುಡಿಯನ್ನು ಪೂರ್ಣಗೊಳಿಸಲಾಗಿದೆ.

ತಾ. ೭-೧೨-೨೦೦೧

–ಪ್ರಕಾಶಕರು

ಅ.ಪ್ರ.ಕಾ.

## ಪೀಠಿಕೆ

ಶ್ರೀಶಂಕರಾಚಾರ್ಯರ ಭಾಷ್ಯಗಳ ವಿಚಾರವನ್ನು ಹೇಳಲುಪಕ್ರಮಿಸಿದೊಡನೆಯೇ "ಇದೆಲ್ಲವೂ ಶಾಸ್ತ್ರಾಧ್ಯಯನದ ಹುಚ್ಚು ; ನಿಜವಾಗಿಯೂ ಅನುಭವವು ಬೇಕಿದ್ದರೆ ಶಾಸ್ತ್ರದ ಬೆನ್ನುಹತ್ತಬಾರದು. ಅನುಭವಿಗಳಾದ ಗುರುಗಳನ್ನೇ ನಂಬಬೇಕಲ್ಲದೆ ಈ ಪುಸ್ತಕ ಬರೆಯುವ, ಶಾಸ್ತ್ರಾಧ್ಯಯನಮಾಡುವ ಹುಚ್ಚನ್ನು ಬಿಟ್ಟುಬಿಡಬೇಕು" ಎಂದು ಮೂಗುಮುರಿಯುವವರನ್ನು ನಾನು ಅಲ್ಲಲ್ಲಿ ಕಂಡಿದ್ದೇನೆ. ಆದ್ದರಿಂದ ಮುಖ್ಯವಾಗಿ ಶಾಸ್ತ್ರ, ಅನುಭವ, ಗುರು – ಈ ಮೂರೂ ವಿಷಯಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಬಯಲಿಗಿಡಬೇಕೆಂದು ಸಂಕಲ್ಪಿಸಿ ಈ ಪೀಠಿಕೆಯನ್ನು ಬರೆಯುತ್ತಿದ್ದೇನೆ. ಶ್ರೀಶಂಕರರ ಭಾಷ್ಯದ ಸಂಪರ್ಕವು ತಪ್ಪಿ ಪರಮಾರ್ಥಪಥದಲ್ಲಿ ಯಾವಯಾವ ತಪ್ಪುಅಭಿಪ್ರಾಯಗಳು ಹೇಗೆಹೇಗೆ ನೆಲೆಯಾಗಿರುತ್ತವೆ– ಎಂಬುದನ್ನೂ ಇಲ್ಲಿ ತೋರಿಸಲು ಯತ್ನಿಸುತ್ತೇನೆ. ಅದಕ್ಕೂ ಮೊದಲು ಈ ಚರ್ಚೆಯ ಅಗತ್ಯವೇನು ? ಎಂಬುದನ್ನು ವಿಚಾರಮಾಡೋಣ.

## ಸಾಂಪ್ರದಾಯಿಕಪ್ರಕ್ರಿಯೆ

ವೇದಾಂತಗಳಲ್ಲಿ ಎಂದರೆ ಉಪನಿಷತ್ತುಗಳಲ್ಲಿ ಸಾರ್ವತ್ರಿಕಪೂರ್ಣಾನುಭವ ರೂಪವಾದ ಅದ್ವಿತೀಯಬ್ರಹ್ಮತತ್ತ್ವವನ್ನು ಜಿಜ್ಞಾಸುಗಳಿಗೆ ತಿಳಿಸಲು **ಅಧ್ಯಾರೋಪಾಪವಾದ** ಎಂಬ ಮುಖ್ಯಪ್ರಕ್ರಿಯೆಯನ್ನು ಬಳಸಿಕೊಂಡಿರುತ್ತದೆ. ಈ ಅಂಶವನ್ನು ಶ್ರೀಶಂಕರಾಚಾರ್ಯರಿಗಿಂತ ಹಿಂದೆಯೇ ವೇದಾಂತಸಂಪ್ರದಾಯ ಪರಂಪರೆಯಲ್ಲಿದ್ದ ಆಚಾರ್ಯರುಗಳು ಸಂಕ್ಷಿಪ್ತವಾಗಿ ಹೇಳಿಯೂ ಇದ್ದರೆಂಬುದು ನಮಗೆ ಭಾಷ್ಯಗಳಿಂದಲೇ ತಿಳಿದುಬರುತ್ತದೆ. "ಸಿದ್ಧಂ ತು ನಿವರ್ತಕತ್ವಾತ್ ಇತ್ಯಾಗಮವಿದಾಂ ಸೂತ್ರಮ್" (ಮಾಂ.ಕಾ. ೨–೩೨) "ತಥಾ ಹಿ ಸಂಪ್ರದಾಯ ವಿದಾಂ ವಚನಮ್– ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ ಇತಿ" (ಗೀ.ಭಾ. ೧೩–೧೩)– ಮುಂತಾದ ವಾಕ್ಯಗಳಲ್ಲಿ ಇದು ಸ್ಪಷ್ಟವಾಗಿದೆ. ಮೂಲತಃ ಉಪನಿಷತ್ತುಗಳಲ್ಲಿರುವ ಹಾಗೂ ಸಾಂಪ್ರದಾಯಿಕರು ಅನುಮೋದಿಸಿರುವ ಈ ಪ್ರಕ್ರಿಯೆಯನ್ನೇ ಪ್ರಧಾನವಾಗಿಟ್ಟುಕೊಂಡು ಶ್ರೀಶಂಕರಾಚಾರ್ಯರು ವೇದಾಂತಶಾಸ್ತ್ರದ ಬೋಧನೆಯ ಕ್ರಮವನ್ನು ಇನ್ನಷ್ಟು ವಿಶದಪಡಿಸಿ ಅದು ಇಲ್ಲಿಯೇ ಈಗಲೇ ಅನುಭವದಲ್ಲಿ ಕೊನೆಗೊಂಡು ಫಲವನ್ನುಂಟುಮಾಡುವದೆಂದು ತಮ್ಮ ಭಾಷ್ಯಗಳಲ್ಲಿ ತೋರಿಸಿಕೊಟ್ಟಿದ್ದಾರೆ.

## ತರ್ಕದ ಬಳಕೆ

ಭಾಷ್ಯರಚನೆಯ ಪ್ರಧಾನೋದ್ದೇಶವು ಮೇಲೆ ವಿವರಿಸಿದಂತೆಯೇ ಇದ್ದರೂ ಆಚಾರ್ಯರು ತಮ್ಮ ಕಾಲದಲ್ಲಿ ಪ್ರಚಾರದಲ್ಲಿದ್ದ ಇತರ ದರ್ಶನಗಳ ಅಭಿಪ್ರಾಯ

ಗಳನ್ನೂ ವಿವರಿಸಿ ಅವುಗಳ ಬಗ್ಗೆ ತಮ್ಮ ಸಮ್ಮತಿ–ಅಸಮ್ಮತಿಗಳನ್ನು ವ್ಯಕ್ತಪಡಿಸುವದು ಅತ್ಯವಶ್ಯವೆಂದು ಭಾವಿಸಿ ಇತರದರ್ಶನಗಳ ಬಗ್ಗೆ ತಮ್ಮ ನಿಲುವು ಏನು ? ಎಂಬುದನ್ನೂ ಭಾಷ್ಯದಲ್ಲಿ ಪ್ರಕಟಗೊಳಿಸಿದ್ದಾರೆ. ಅದಕ್ಕೆ ಉದಾಹರಣೆಯಾಗಿ:–

(೧) ಕೇವಲ ಅಥವಾ ಶುಷ್ಕತರ್ಕವಾದಿಗಳಾದ ಶೂನ್ಯವಾದಿ ಬೌದ್ಧರುಗಳನ್ನು– ಅವರಿಗಿಂತಲೂ ಉತ್ತಮರಾದ ವೈಶೇಷಿಕನೈಯಾಯಿಕರೆಂಬ ತಾರ್ಕಿಕರ ದೃಷ್ಟಿಯನ್ನು ಅವಲಂಬಿಸಿ ಖಂಡಿಸಿರುತ್ತಾರೆ. ಬೌದ್ಧರಲ್ಲಿ ಶೂನ್ಯವಾದಿಯಾದ ನಾಗಾರ್ಜುನನು ಇಂಥ ತರ್ಕವನ್ನೇ ಉಪಯೋಗಿಸಿದ್ದಾನೆ.

(೨) ವೈಶೇಷಿಕರಿಗಿಂತಲೂ ಉತ್ತಮರಾದ ಸಾಂಖ್ಯರ ದೃಷ್ಟಿಯನ್ನವಲಂಬಿಸಿ ವೈಶೇಷಿಕಮತದಲ್ಲಿಯ ಪೂರ್ವಾಪರವಿರೋಧವನ್ನು ತೋರಿಸಿ ಅವರನ್ನೂ ಖಂಡಿಸಿರುತ್ತಾರೆ.

(೩) ಪೂರ್ವಮೀಮಾಂಸಕರ ದೃಷ್ಟಿಯನ್ನವಲಂಬಿಸಿ ಮೀಮಾಂಸಾನ್ಯಾಯಗಳನ್ನು ಉಪಯೋಗಿಸಿ ಸಾಂಖ್ಯಮತದಲ್ಲಿಯೂ ಸಹ ಪೂರ್ವಾಪರವಿರೋಧ ಮತ್ತು ಶ್ರುತಿವಿರೋಧವನ್ನು ತೋರಿಸಿ ಅವರನ್ನೂ ಖಂಡಿಸಿರುತ್ತಾರೆ.

(೪) ವೇದವಾಕ್ಯಕ್ಕೆ ಅರ್ಥಮಾಡುವಾಗ ಉಪಯೋಗಿಸುವ ಪೂರ್ವಮೀಮಾಂಸಕರ ನ್ಯಾಯಗಳನ್ನು ಮೆಚ್ಚಿಕೊಂಡರೂ ವೇದಾಂತಾರ್ಥವನ್ನು ನಿಶ್ಚಯಮಾಡುವಾಗ 'ನ ಶ್ರುತ್ಯಾದಯ ಏವ ಪ್ರಮಾಣಂ, ಕಿಂ ತು ಅನುಭವಾದಯಶ್ಚ ಯಥಾಸಂಭವಂ ಇಹ ಪ್ರಮಾಣಂ ಭವತಿ' ಎಂಬ ವಾಕ್ಯದಂತೆ ಸಾರ್ವತ್ರಿಕ ಪೂರ್ಣಾನುಭವದಲ್ಲಿ ವಾಕ್ಯಾರ್ಥವು ಪರ್ಯವಸಾನವನ್ನು ಹೊಂದಬೇಕೆಂಬ ತತ್ತ್ವವನ್ನವಲಂಬಿಸಿ ಎಲ್ಲಕ್ಕೂ ಕೊನೆಯಲ್ಲಿ ಪರಮಸಿದ್ಧಾಂತವನ್ನು ತಿಳಿಯುವದಕ್ಕೆ ಸಾಧನವಾದ ಅಧ್ಯಾರೋಪಾಪವಾದಪ್ರಕ್ರಿಯೆಯನ್ನು ಉಪಯೋಗಿಸಿರುತ್ತಾರೆ.

ಹೀಗೆ ಕೆಳಕೆಳಗಿನ ದರ್ಶನಗಳನ್ನು ಮೇಲುಮೇಲಿನ ದರ್ಶನಗಳ ವ್ಯಾಪಕ ದೃಷ್ಟಿಕೋನದಿಂದ ಖಂಡಿಸಿ ಕೊನೆಯಲ್ಲಿ ಆಚಾರ್ಯರು ತಮ್ಮ ಪರಮಸಿದ್ಧಾಂತವನ್ನು ಮಂಡಿಸಿರುತ್ತಾರೆ. ಹೀಗೆ ಮಾಡುವಾಗ ಕೇವಲತರ್ಕವನ್ನು ಪ್ರಮಾಣಾನುಗ್ರಾಹಕ ತರ್ಕದಿಂದಲೂ ಪ್ರಮಾಣತರ್ಕಗಳಲ್ಲೂ ದುರ್ಬಲವಾದದ್ದನ್ನು ಪ್ರಬಲತರ್ಕದಿಂದಲೂ ಖಂಡಿಸಿರುವದು ಭಾಷ್ಯಗಳಲ್ಲಿ ಕಂಡುಬರುತ್ತದೆ. ಆದರೆ 'ಮುಮುಕ್ಷುಗಳು ಇತರ ದರ್ಶನದವರು ಹೇಳುವ ತರ್ಕದ ಮಾತಿಗೆ ಮರುಳಾಗಿ ವೇದಾಂತಗಳ ಉಪದೇಶದಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ ಮಾತ್ರವೇ ಈ ರೀತಿಯ ಖಂಡನೆಗಳನ್ನು ಮಾಡಲಾಗಿದೆಯೇ ಹೊರತು ಮಿಕ್ಕವರಂತೆ ನಮಗೆ ಖಂಡನೆಯಲ್ಲಿ ತಾತ್ಪರ್ಯವೂ ಇಲ್ಲ, ತರ್ಕದ ಚಟವೂ ಇಲ್ಲ' (ಪ್ರ.೬–೩) – ಎಂದು ಆಚಾರ್ಯರೇ ಬಾಯಿಬಿಟ್ಟು ಹೇಳಿರುವದರಿಂದ ವೇದಾಂತದ ಪರಮೋಪದೇಶಗಳ ಪ್ರಯೋಜನ

ವನ್ನು ಪಡೆಯಬೇಕೆನ್ನುವವರಿಗೆ ಈ ಶುಷ್ಕತರ್ಕಗಳ ಅವಶ್ಯಕತೆ ಇಲ್ಲವೇಇಲ್ಲವೆಂಬುದು ಸಹಜವಾಗಿಯೇ ಏರ್ಪಡುತ್ತದೆ.

ಇನ್ನು ವೇದಾಂತೋಪದೇಶವನ್ನೇ ಗುರಿಯಾಗಿಟ್ಟುಕೊಂಡು ಬೋಧಿಸುವಾಗ ಆಚಾರ್ಯರು ಶ್ರುತಿಯಲ್ಲಿಯೇ ಮೂಲತಃ ಉಪಯೋಗಿಸಿರುವ ಅಧ್ಯಾರೋಪ ಗಳನ್ನು– ಅವಿದ್ಯೆ, ವ್ಯಾಕೃತಾವ್ಯಾಕೃತರೂಪವಾದ ಮಾಯೆ ಮುಂತಾದವುಗಳನ್ನು – ಅನುವಾದಿಸಿಕೊಂಡು ಸಾರ್ವತ್ರಿಕಪೂರ್ಣಾನುಭವದಲ್ಲಿ ನೆಲೆನಿಲ್ಲಿಸುವದರ ಮೂಲಕ ಅವುಗಳನ್ನಲ್ಲಗಳೆದು ಮುಮುಕ್ಷುಗಳನ್ನು ತತ್ತ್ವೀಭೂತರನ್ನಾಗಿ ಮಾಡುತ್ತಾರೆ. ಹೀಗೆ ಬೋಧಿಸುವಾಗ ಸ್ವತಃ ಶ್ರುತಿಯೇ ಮನನಕ್ಕಾಗಿ ತೋರಿಸಿಕೊಟ್ಟ ಅನುಭವಪರ್ಯವ ಸಾಯಿಯಾದ ತರ್ಕ ಹಾಗೂ ತಾವೇ ಕಲ್ಪಿಸಿದ ಕೆಲವು ಅನುಭವಾಂಗತರ್ಕಗಳನ್ನೂ ಭಾಷ್ಯಗಳಲ್ಲಿ ಉಪಯೋಗಿಸಿರುತ್ತಾರೆ.

ಈ ರಹಸ್ಯವು ಗೊತ್ತಾಗದಿದ್ದುದರಿಂದಲೇ 'ಅದ್ವೈತವನ್ನು ತರ್ಕಪರಿಶುದ್ಧವಾಗಿ ತಿಳಿಸಬೇಕು. ಅದಕ್ಕಾಗಿ ಇತರ ತಾರ್ಕಿಕರ ಹೊಡೆತಕ್ಕೆ ಸಿಕ್ಕದಂತೆ ಅಭ್ಯುಪಗಮಗಳನ್ನೂ ಬಲವಾದ ಯುಕ್ತಿಗಳನ್ನೂ ಭದ್ರಗೊಳಿಸಿ ಇಟ್ಟುಕೊಳ್ಳಬೇಕು' ಎಂಬ ಭ್ರಾಂತಿಯು ಅದ್ವೈತಾಭಿಮಾನಿಗಳಲ್ಲಿ ಹೊಗುವದಕ್ಕೆ ಅವಕಾಶವಾಯಿತು ; ಮತ್ತು ಈ ಕಾರಣದಿಂದಲೇ 'ವೇದಾಂತವಾಕ್ಯಗಳ ನಿರ್ಣಯಕ್ಕೆ ಅನುಭವಾಂಗತರ್ಕಗಳೂ ಬೇಕು' ಎಂಬ ಆಚಾರ್ಯರ ವಾಕ್ಯವನ್ನಾಧರಿಸಿ ಪ್ರಮಾಣತರ್ಕದ ಪದ್ಧತಿಯಿಂದ ಸಿದ್ಧಾಂತದಲ್ಲಿಯ ಬೇರೆಬೇರೆ ಅಭ್ಯುಪಗಮಗಳನ್ನಿಟ್ಟುಕೊಂಡು ಅನೇಕ ವ್ಯಾಖ್ಯಾನ ಕಾರರುಗಳೂ ಸ್ವತಂತ್ರಗ್ರಂಥಕರ್ತೃಗಳೂ ತರ್ಕಕರ್ಕಶಶೈಲಿಯಲ್ಲಿಯೇ ವಿಷಯವನ್ನು ನಿರೂಪಿಸುವ ಕೆಲಸಕ್ಕೆ ತೊಡಗಿದರು. ಇಲ್ಲಿ ತರ್ಕದ್ದೇ ಮೇಲುಗೈಯಾಗಿ ವೇದಾಂತ ಶಾಸ್ತ್ರವು ತರ್ಕಶಾಸ್ತ್ರದಲ್ಲಿಯೇ ಸೇರಿಹೋಗಲು ಅವಕಾಶವಾಯಿತಲ್ಲದೆ ಬೋಧ ಸೌಕರ್ಯಕ್ಕಾಗಿ ಕಲ್ಪಿಸಿದ ಅಧ್ಯಾರೋಪದೃಷ್ಟಿಯ ಅಂಶಗಳನ್ನು ಪರಮಾರ್ಥವೆಂದೇ ಒಪ್ಪಿ ಅವುಗಳ ನಿವಾರಣೆಗೆ ಸೊಂಟಕಟ್ಟುವಂತಾಯಿತು. ಇದರ ಪರಿಣಾಮವಾಗಿ :–

(೧) ಸಾರ್ವತ್ರಿಕಪೂರ್ಣಾನುಭವವಾದ, ಮೊದಲೇ ಸಿದ್ಧವಾಗಿರುವ ಸಾಕ್ಷ್ಯನು ಭವವನ್ನು ಕೈಬಿಟ್ಟು ಪಾತಂಜಲಯೋಗಾದಿಗಳಲ್ಲಿ ಉಪದಿಷ್ಟವಾದ ಅಸಂಪ್ರಜ್ಞಾತಾದಿ ಸಮಾಧಿಗಳ ಅನುಭವವನ್ನಿಟ್ಟುಕೊಂಡು ಪ್ರತಿಪಾದಿಸುವದು (೨) ಆಚಾರ್ಯರೇ ಅನುಭವಕ್ಕಾಗಿ ತೋರಿಸಿಕೊಟ್ಟ ಶ್ರೌತತರ್ಕಗಳನ್ನು ಕಡೆಗಣಿಸಿ ವ್ಯಾಮೋಹದಿಂದ ಪ್ರಮಾಣತರ್ಕಕ್ಕೇ ಬೆನ್ನುಹತ್ತುವದು (೩) ಶ್ರುತಿವಚನಗಳು ಅನುಭವಪರ್ಯವಸಾಯಿ ಗಳಾಗಿವೆ ಎಂಬುದನ್ನು ಮರೆತು ಕೇವಲ ಶ್ರದ್ಧೆ, ಯುಕ್ತಿ, ಮೀಮಾಂಸಾನ್ಯಾಯಗಳ ಮೂಲಕವೇ ಶ್ರುತ್ಯುಕ್ತ ಆತ್ಮತತ್ತ್ವವನ್ನು ಪ್ರತಿಪಾದಿಸುವದು (೪) ವ್ಯಾವಹಾರಿಕದೃಷ್ಟಿ ಯಿಂದ ಬೋಧಸೌಕರ್ಯ ಕ್ಕಾಗಿ ಅಧ್ಯಾರೋಪಿತವಾಗಿ ಕಲ್ಪಿಸಿದ ಅವಿದ್ಯೆ, ಮಾಯೆ– ಮುಂತಾದ ತತ್ತ್ವಗಳು ಆತ್ಮಸ್ವರೂಪಕ್ಕೇ ಸೇರಿವೆಯೆಂದು ಬಗೆದು ಅದರ ನಿವಾರಣೆಗೆ

ಉಪಾಯಗಳನ್ನು ಬೋಧಿಸುವದು (೫) ಕಾರ್ಯಕಾರಣಾದಿಪ್ರಕ್ರಿಯೆಗಳನ್ನು ಪರಮಾರ್ಥವಾಗಿಯೇ ಇರುವಂತೆ ಭಾವಿಸಿಕೊಂಡು ಶಂಕಾಪರಿಹಾರಗಳನ್ನು ವಿವರಿಸುವದು – ಇವೇ ಮುಂತಾದ ಅನೇಕದೋಷಗಳು ಪ್ರಚಾರದಲ್ಲಿ ಬಂದಿರುವದನ್ನು ಕಾಣಬಹುದು.

## ಜಿಜ್ಞಾಸುಗಳಿಗೆ ಅಡ್ಡಿ

ಈಗ್ಗೆ ಪಂಡಿತರೆನ್ನುವವರಲ್ಲಿ ಬಹುಜನರು ಭಾಷ್ಯಪ್ರತಿಪಾದನೆಯ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳದಿರುವದರಿಂದಲೇ ಪರಿಶುದ್ಧಶಾಂಕರವೇದಾಂತದ ತಿರುಳನ್ನು ತಿಳಿಯದವರಾಗಿದ್ದಾರಲ್ಲದೆ ಸರಿಯಾದ ಶುದ್ಧಶಾಂಕರಪ್ರಕ್ರಿಯೆಯನ್ನೇ ಅನುಸರಿಸುವ ಜಿಜ್ಞಾಸುಗಳೆದುರಿಗೆ ತಮ್ಮ ತರ್ಕದ ಪ್ರೌಢಿಮೆಯನ್ನು ಹೇಳಿಕೊಂಡು ಬೆರಗುಗೊಳಿಸುತ್ತಾ ಸಮ್ಯಗ್ಜ್ಞಾನೋತ್ಪತ್ತಿಗೆ ಅಡ್ಡಿಯನ್ನೂ ತಂದೊಡ್ಡುತ್ತಿದಾರೆ. ಇವರಲ್ಲದೆ 'ಭಾಷ್ಯಪ್ರಕ್ರಿಯೆಗಳೆಂಬಿವು ಶಾಸ್ತ್ರಪಾಂಡಿತ್ಯಸಂಪಾದನೆಯ ಭ್ರಾಂತಿಯೇ ; ಈ ಶಾಸ್ತ್ರದ ಭ್ರಮೆಗೆ ಹೋಗಬೇಡಿರಿ' ಎಂದು ದೂಷಿಸುತ್ತಾ ತಾವೇ ಅನುಭವಿಗಳೆಂದು ಬಗೆದಿರುವ ಗುರುಗಳೂ ಎಷ್ಟೋ ಇದ್ದಾರೆ.

ಹೀಗೆ ಪಂಡಿತರು, ಗುರುಗಳು– ಇವರಿಬ್ಬರ ನಡುವೆ ಸಿಕ್ಕಿಕೊಂಡಿರುವ ಜಿಜ್ಞಾಸುಗಳಿಗೆ ಪರಿಶುದ್ಧಶಾಂಕರಪ್ರಕ್ರಿಯೆಯಂತೆ ಉಂಟಾಗಬೇಕಾದ ಸಿದ್ಧಾಂತದ ತಿಳಿವಳಿಕೆ ಹಾಗೂ ಸಾಧನೆಗಳ ಮರ್ಮಗಳು ದೂರವಾಗಿವೆ– ಎಂಬಿದನ್ನು ಕಂಡೇ ಈ ಪೀಠಿಕೆಯಲ್ಲಿ ಶಾಸ್ತ್ರ, ಅನುಭವ, ಗುರು – ಈ ಮೂರು ವಿಷಯಗಳನ್ನೂ ಭಾಷ್ಯಾಭಿಪ್ರಾಯದೊಂದಿಗೆ ಚರ್ಚಿಸಲಾಗಿದೆ.

## ಶಾಸ್ತ್ರ

ಶ್ರೀಶಂಕರಭಗವತ್ಪಾದಾಚಾರ್ಯರ ಮುಖ್ಯಕೃತಿಗಳಾದ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಶಾಸ್ತ್ರ ಎಂಬ ಮಾತಿಗೆ 'ವೇದ' ಎಂದು ಅರ್ಥವಿದೆ. ಈ ವೇದದ ಅಪೌರುಷೇಯತ್ವ, ನಿತ್ಯತ್ವ, ಪ್ರಾಮಾಣ್ಯಾದಿಗಳ ಬಗ್ಗೆ ಈ ಗ್ರಂಥದಲ್ಲಿಯೇ ೮ ರಿಂದ ೧೨ನೆಯ ಪುಟಗಳವರೆಗೆ ಶ್ರೀಶಂಕರಾಚಾರ್ಯರ ಅಭಿಪ್ರಾಯಗಳನ್ನು ಸಂಕ್ಷಿಪ್ತವಾಗಿ ಕೊಟ್ಟಿರುತ್ತದೆ. ಆದರೆ ಜನಸಾಮಾನ್ಯರಿಂದ ಹಿಡಿದು ದೊಡ್ಡ ದೊಡ್ಡ ಅನುಭವಿಗಳು, ಸಂತರು, ಸಾಧುಸತ್ಪುರುಷರೂ ಸಹ 'ಶಾಸ್ತ್ರಾಧ್ಯಯನದಿಂದ ಆತ್ಮಾನುಭವವಾಗಲಾರದು, ಶಾಸ್ತ್ರವನ್ನೋದಿ ಕೆಡಬೇಡಿ' ಮುಂತಾಗಿ ಬೋಧಿಸುವದನ್ನು ನೋಡಿದರೆ 'ಶಾಸ್ತ್ರ' ಎಂಬ ಶಬ್ದವು ಯಾವ ಅರ್ಥದಲ್ಲಿ ಪ್ರಚಾರದಲ್ಲಿದೆ ಎಂಬುದು ವಿಚಾರಣೀಯ ವಿಷಯವಾಗಿದೆ.

## ಭಾಷ್ಯಕಾರರ ಮತ

ಸೂತ್ರಭಾಷ್ಯದಲ್ಲಿ 'ಶಾಸ್ತ್ರಯೋನಿತ್ವಾತ್' ಎಂಬ ಸೂತ್ರವನ್ನು ಆಚಾರ್ಯರು ವಿವರಿಸುವಾಗ (೧) ಋಗ್ವೇದಾದಿಶಾಸ್ತ್ರವು ಬ್ರಹ್ಮದಿಂದಲೇ ನಿರಾಯಾಸವಾಗಿ ಉಸಿರಿನಂತೆ ಹೊರಬಂದಿರುವದಾದ್ದರಿಂದ ಈ ಬ್ರಹ್ಮವೇ ಶಾಸ್ತ್ರಕ್ಕೆ ಅಂದರೆ ವೇದಕ್ಕೆ ಕಾರಣವು (ಯೋನಿಯು). (೨) ಅಥವಾ ಋಗಾದಿವೇದವೇ ಎಂದರೆ ಶಾಸ್ತ್ರವೇ ಬ್ರಹ್ಮವನ್ನರಿಯಲು ಪ್ರಮಾಣವಾಗಿದೆಯಾದ್ದರಿಂದ ಬ್ರಹ್ಮಜ್ಞಾನಕ್ಕೆ ಶಾಸ್ತ್ರವೇ ಯೋನಿಯು ಎಂದರೆ ಕಾರಣವು – ಎಂದು ಎರಡು ಬಗೆಯ ಅಭಿಪ್ರಾಯಗಳನ್ನು ಬರೆದಿದ್ದಾರೆ (ಸೂ.ಭಾ. ೧–೧–೩). ಮತ್ತು ಪುರುಷಮತಿಕಲ್ಪಿತಗಳಾದ ತಾರ್ಕಿಕದರ್ಶನಗಳಿಂದ ಎಂದಿಗೂ ಪರಮಾರ್ಥತತ್ತ್ವವು ತಿಳಿದುಬರಲಾರದೆಂಬುದನ್ನು ಸೂ.ಭಾ.೨–೧–೧೧ರಲ್ಲಿ ಪ್ರಸ್ತಾಪಿಸುತ್ತಾ ''**ವೇದಸ್ಯ ತು ನಿತ್ಯತ್ವೇ ವಿಜ್ಞಾನೋತ್ಪತ್ತಿಹೇತುತ್ವೇ ಚ ಸತಿ ವ್ಯವಸ್ಥಿತಾರ್ಥವಿಷಯತ್ವೋಪಪತ್ತೇಃ ತಜ್ಜನಿತಸ್ಯ ಜ್ಞಾನಸ್ಯ ಸಮ್ಯಕ್ತ್ವಮ್ ಅತೀತಾನಾಗತವರ್ತಮಾನೈಃ ಸರ್ವೈರಪಿ ತಾರ್ಕಿಕೈಃ ಅಪಹ್ನೋತುಮ್ ಅಶಕ್ಯಮ್** ॥'' ಎಂದಿರುತ್ತಾರೆ. ಈ ವಾಕ್ಯದಲ್ಲಿ (೧) ವೇದವು ನಿತ್ಯವಾಗಿದೆ ; (೨) ಆತ್ಮವಿಜ್ಞಾನವನ್ನುಂಟುಮಾಡಲು ಕಾರಣವಾಗಿದೆ ; (೩) ನಿಶ್ಚಿತವಾಗಿ ನೆಲೆನಿಂತ ಅರ್ಥದ ವಿಷಯವಾಗಿದೆ (ಕಾಲದೇಶಲಿಂಗಜಾತಿಮತಗಳಿಂದ ಬದಲಾಯಿಸಲಾಗದ ಸಾರ್ವತ್ರಿಕಪೂರ್ಣಾನುಭವವೇ ವೇದಕ್ಕೆ ವಿಷಯವಾಗಿದೆ) ; (೪) ವೇದವಾಕ್ಯಗಳಿಂದ ಸಮ್ಯಗ್ಜ್ಞಾನವೇ ಉಂಟಾಗುತ್ತದೆ ; (೫) ಆ ಜ್ಞಾನವು ನಿರ್ಬಾಧವಾಗಿರುತ್ತದೆ – ಎಂಬ ಐದು ಅಂಶಗಳನ್ನು ಭಗವತ್ಪಾದರು ತಿಳಿಸಿದಂತಾಗಿರುತ್ತದೆ.

ಇದರಂತೆಯೇ ಸೂ.ಭಾ.೨–೧–೩ರಲ್ಲಿ ಸಾಂಖ್ಯ ಮತ್ತು ಯೋಗಸ್ಮೃತಿಗಳ ಅಭಿಪ್ರಾಯಗಳನ್ನು ಖಂಡಿಸುವಾಗ ಅವರಲ್ಲಿಯೂ ಗುಣವಿರುವದನ್ನು ಸ್ವೀಕರಿಸಲಡ್ಡಿಯಿಲ್ಲ ಎಂದು ತಿಳಿಸಿದ ಮೇಲೆ '**ಏತೇನ ಸರ್ವಾಣಿ ತರ್ಕಸ್ಮರಣಾನಿ ಪ್ರತಿವಕ್ತವ್ಯಾನಿ**' ಎಂದು ಹೇಳಿ ಸಕಲತರ್ಕಮತಗಳನ್ನೂ ತಳ್ಳಿಹಾಕುತ್ತ '**ತಾನ್ಯಪಿ ತರ್ಕೋಪಪತ್ತಿಭ್ಯಾಂ ತತ್ತ್ವಜ್ಞಾನಾಯ ಉಪಕುರ್ವನ್ತಿ ಇತಿ ಚೇತ್ ಉಪಕುರ್ವನ್ತು ನಾಮ**' ಅವುಗಳಲ್ಲಿಯೂ ತರ್ಕಯುಕ್ತಿಗಳು ತತ್ತ್ವಜ್ಞಾನಕ್ಕೆ ಉಪಕಾರಕಗಳಾಗುತ್ತವೆ ಎಂದು ಹೇಳುವದಾದರೆ, ಉಪಕಾರವಾಗುವಷ್ಟರಮಟ್ಟಿಗೆ ಅವುಗಳೂ ಇರಲಿ ಎಂದು ಅನುಮೋದಿಸಿ ಮುಂದೆ ಹೀಗೆ ಬರೆದಿದ್ದಾರೆ. ಅದೇನೆಂದರೆ : ''**ತತ್ತ್ವಜ್ಞಾನಂ ತು ವೇದಾನ್ತವಾಕ್ಯೇಭ್ಯ ಏವ ಭವತಿ, 'ನಾವೇದವಿನ್ಮನುತೇ ತಂ ಬೃಹನ್ತಮ್'** (ತೈ. ಬ್ರಾ. ೩–೧೩–೯–೭) '**ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ**' (ಬೃ.೩–೯–೨೬), **ಇತ್ಯೇವಮಾದಿಶ್ರುತಿಭ್ಯಃ**'' ಅಂದರೆ : ಆತ್ಮತತ್ತ್ವವಿಜ್ಞಾನವು ವೇದಾಂತವಾಕ್ಯಗಳಿಂದ ಮಾತ್ರವೇ ಆಗುತ್ತದೆ ಎಂಬುದನ್ನು ಈ ವಾಕ್ಯದಲ್ಲಿ ದೃಢಪಡಿಸಿದ್ದಾರೆ. ಮತ್ತು '**ವೇದಸ್ಯ ಹಿ ನಿರಪೇಕ್ಷಂ ಸ್ವಾರ್ಥೇ ಪ್ರಾಮಾಣ್ಯಂ ರವೇರಿವ ರೂಪವಿಷಯೇ**' ಎಂಬ ವಾಕ್ಯದಲ್ಲಿ ವೇದಕ್ಕೆ ತನ್ನ ಅರ್ಥ

ಎಂದರೆ ತನಗೆ ವಿಷಯವಾದ ಬ್ರಹ್ಮದ ಬಗ್ಗೆ – ಸೂರ್ಯನಿಗೆ ರೂಪವನ್ನು ತೋರಿಸುವ ಬಗ್ಗೆ ಹೇಗೋಹಾಗೆ – ಇನ್ನೊಂದರ ಅಪೇಕ್ಷೆ ಇಲ್ಲದೆಯೇ ಪ್ರಾಮಾಣ್ಯವಿದೆ ಎಂದೂ ಸ್ಪಷ್ಟವಾಗಿ ತಿಳಿಸಿದ್ದಾರೆ.

ಇದೇ ರೀತಿಯಲ್ಲಿ ಸೂ.ಭಾ.೧–೧–೧೦ರಲ್ಲಿ '**ಮಹಚ್ಚ ಪ್ರಾಮಾಣ್ಯಕಾರಣಮೇತತ್ ಯದ್ ವೇದಾನ್ತವಾಕ್ಯಾನಾಂ ಚೇತನಕಾರಣತ್ವೇ ಸಮಾನಗತಿತ್ವಮ್, ಚಕ್ಷುರಾದೀನಾಮಿವ ರೂಪಾದಿಷು** ।' ಕಣ್ಣೇ ಮುಂತಾದವು ರೂಪಾದಿಗಳನ್ನು ಗೊತ್ತಾಗಿ ತಿಳಿಸುವಂತೆ ವೇದಾಂತವಾಕ್ಯಗಳು ಚೇತನಕಾರಣವನ್ನೇ ಸಮಾನವಾಗಿ ತಿಳಿಸುತ್ತವೆ ಎಂಬಿದು ಅವುಗಳು ಪ್ರಮಾಣವೆಂಬುದಕ್ಕೆ ಒಂದು ಹೆಚ್ಚಿನ ಕಾರಣವಾಗಿರುತ್ತದೆ – ಎಂದು ಬರೆದಿದ್ದಾರೆ. ಈ ವಾಕ್ಯದಲ್ಲಿ ರೂಪವನ್ನರಿಯಲು ಕಣ್ಣು ಪ್ರಮಾಣವಾಗಿರುವಂತೆ ಬ್ರಹ್ಮವನ್ನರಿಯಲು ಶಾಸ್ತ್ರವೇ ಪ್ರಮಾಣವಾಗಿದೆಯೆಂದು ಒತ್ತಿಹೇಳಿದ್ದಾರೆ.

**ಅಂತೂ ಶಾಸ್ತ್ರ ಎಂದರೆ ಉಪನಿಷದ್ವಾಕ್ಯಗಳೆಂತಲೂ ಆತ್ಮವಿಜ್ಞಾನಕ್ಕೆ ಈ ಶಾಸ್ತ್ರವೇ ಪ್ರಮಾಣವೆಂತಲೂ ಹೇಳಿದಂತಾಗಿದೆ.** ಇನ್ನು ಈ ಶಾಸ್ತ್ರದಿಂದ ತಿಳಿದುಬರುವ ತತ್ತ್ವವಾದ 'ಬ್ರಹ್ಮ' ಎಂಬುದರ ಸ್ವರೂಪವೇನು ? ಆ ಬ್ರಹ್ಮತತ್ತ್ವಕ್ಕೆ ಈ ಶಾಸ್ತ್ರವೇ ಪ್ರಮಾಣವು ಹೇಗೆ ? ಎಂಬ ವಿಷಯಗಳನ್ನು ವಿಚಾರಿಸೋಣ.

## ಬ್ರಹ್ಮತತ್ತ್ವ

ಬ್ರಹ್ಮತತ್ತ್ವವನ್ನು ಶ್ರುತಿಗಳಲ್ಲಿ '**ಸ ಏಷ ನೇತಿ ನೇತ್ಯಾತ್ಮಾ**' ಎಂದು ಆತ್ಮಶಬ್ದದಿಂದ ತಿಳಿಸಿದೆ. ಆತ್ಮ ಎಂದರೆ ತಾನು ; ತನ್ನನ್ನು ತಾನು ಅಲ್ಲಗಳೆಯುವದು ಎಂದಿಗೂ ಶಕ್ಯವಿಲ್ಲ. ಹಾಗೆ ಅಲ್ಲಗಳೆಯಹೋದರೆ ಹಾಗೆ ಮಾಡುವವನ ಸ್ವರೂಪವೇ ಆತ್ಮನಾಗಿರುವದರಿಂದಲೂ ಸ್ವರೂಪವನ್ನು ಕೊಡವಿಕೊಳ್ಳುವದೆಂಬುದು ಅಸಂಭವನೀಯವಾದ್ದರಿಂದಲೂ ಉಪನಿಷತ್ತುಗಳಲ್ಲಿ ತಿಳಿಸಿದ ಬ್ರಹ್ಮ ಅಥವಾ ಆತ್ಮನೆಂಬ ತತ್ತ್ವವನ್ನು ಇಲ್ಲವೆಂದಾಗಲಿ, ವೇದಾಂತವಾಕ್ಯಗಳಿಂದ ತಿಳಿಯಬರುವದಿಲ್ಲವೆಂದಾಗಲಿ ಹೇಳುವದಕ್ಕೆ ಆಗಲಾರದು – ಎಂಬ ಅಭಿಪ್ರಾಯವನ್ನು ಸೂ. ಭಾ. ೧–೧–೪ರಲ್ಲಿ ವ್ಯಕ್ತಪಡಿಸಿದ ಮೇಲೆ ಆಚಾರ್ಯರು ಒಂದು ಪ್ರಶ್ನೆಯನ್ನು ಎಬ್ಬಿಸಿರುತ್ತಾರೆ. ಅದೇನೆಂದರೆ :– ಆತ್ಮನೆಂದರೆ ತಾನು ; ಈ ತಾನೇ ಬ್ರಹ್ಮವೆಂದು ನೀವು ಹೇಳುವದಾದರೆ ಎಲ್ಲರಿಗೂ ಗೊತ್ತಿರುವಂತೆಯೇ 'ನಾನು' ಎಂಬ ಪ್ರತ್ಯಯಕ್ಕೆ ಎಂದರೆ ಅರಿವಿಗೆ ವಿಷಯನಾಗಿರುವವನೇ ಆತ್ಮನೆಂದು ಆಯಿತು. ಆಗ ಇಂಥ ಆತ್ಮನನ್ನರಿಯಲು ಉಪನಿಷತ್ತೇ ಆಗಬೇಕೆಂಬುದೇಕೆ ? ಎಲ್ಲರಿಗೂ ನಾನು, ನಾನು– ಎಂಬುದೇ ನಮ್ಮ ಸ್ವರೂಪವು ಎಂದು ಗೊತ್ತೇಇದೆಯಲ್ಲ! ವೇದಾಂತೇತರಶಾಸ್ತ್ರಗಳೆಲ್ಲವೂ ಈ ನಾನು– ಎಂಬುದನ್ನು ಆದರಿಸಿಯೇ ಹೊರಟಿವೆಯಲ್ಲ ! ಹೀಗಿರುವಾಗ ವೇದಾಂತಶಾಸ್ತ್ರವು ಮಾತ್ರವೇ ಆತ್ಮನನ್ನು ತಿಳಿಸುವದಕ್ಕೆ ಪ್ರಮಾಣವು ಎಂಬುದೇಕೆ ?– ಎನ್ನುವದೇ ಆ

ಪ್ರಶ್ನೆ. ಇದಕ್ಕೆ ಉತ್ತರವನ್ನು ಹೇಳುತ್ತಾ ಆಚಾರ್ಯರು ಅಹಂಪ್ರತ್ಯಯಕ್ಕೂ ಹಿಂದೆ ಇದ್ದು ಅಹಂಪ್ರತ್ಯಯವು ತೋರಿದ್ದನ್ನೂ ತೋರದಿದ್ದುದನ್ನೂ ಬೆಳಗುವ ಕೇವಲ 'ತಾನು' ಎಂಬ ಸ್ವರೂಪವನ್ನೇ ಉಪನಿಷತ್ತುಗಳಲ್ಲಿ ಬ್ರಹ್ಮ ಎಂದು ಹೇಳಿದೆಯೇ ಹೊರತು ಈಗ ಎಲ್ಲರೂ ಅರಿತಿರುವ 'ನಾನು' ಎಂಬುದನ್ನು ಅಲ್ಲ – ಎಂದು ಸ್ಪಷ್ಟವಾಗಿ ತಿಳಿಸಿ ಅದನ್ನು ಸಾಕ್ಷಿ ಎಂದು ಕರೆದಿದ್ದಾರೆ. **'ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ । ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ।'** (ಶ್ವೇ.೬–೧೧) ಎಂಬ ಮಂತ್ರದಲ್ಲಿ ಬ್ರಹ್ಮವನ್ನು ಸಾಕ್ಷಿ ಎಂದು ಕರೆದಿರುವದನ್ನು ಲಕ್ಷಿಸಬಹುದು. ಈ ಸಾಕ್ಷಿಸ್ವರೂಪದ ಕಡೆಗೆ ನಮ್ಮಗಳ ಗಮನವನ್ನು ಹರಿಸಿ ಅದನ್ನು ತಿಳಿಸುವದೇ ಶಾಸ್ತ್ರದ ಕೆಲಸ– ಎಂದಿದ್ದಾರೆ ಆಚಾರ್ಯರು.

ಸೂ.ಭಾ.೧–೧–೪ರಲ್ಲಿ 'ಯದಪಿ ಕೇಚಿದಾಹುಃ....' ಎಂಬಲ್ಲಿಂದ ಪ್ರಾರಂಭಿಸಿ 'ಅತೋ ಭೂತವಸ್ತುಪರೋ ವೇದಭಾಗೋ ನಾಸ್ತೀತಿ ವಚನಂ ಸಾಹಸಮಾತ್ರಮ್' ಎಂಬಲ್ಲಿಯವರೆಗಿನ ಪೂರ್ಣಭಾಷ್ಯಭಾಗವನ್ನೇ ಈ ಬಗ್ಗೆ ನೋಡಿರಿ.

## ಸಾಕ್ಷಿಯು ಅನುಭವಸ್ವರೂಪ

ಸಾಕ್ಷಿ ಎಂದು ವರ್ಣಿಸಿರುವ ಬ್ರಹ್ಮತತ್ತ್ವವು ಅಹಂಪ್ರತ್ಯಯ ಎಂದರೆ ನಾನು ಎಂಬ ಅನಿಸುವಿಕೆಗೂ ಹಿಂದೆ ಇದ್ದುಕೊಂಡಿರುವದರಿಂದ ನಾನು ಎಂಬುದರ ಮುಂದೆ ಇರುವ ಬುದ್ಧಿ, ಮನಸ್ಸು, ಇಂದ್ರಿಯಗಳಿಗೆ ಅದು ಗೋಚರವಾಗತಕ್ಕದ್ದಲ್ಲ. ಮತ್ತು ಸಾಕ್ಷಿ ರೂಪವಾದ ಈ ಬ್ರಹ್ಮವು ಇಂದ್ರಿಯಗಳಿಗೂ ಹೊರಗಿನ ವಿಷಯಗಳಿಗೂ ಸಂಯೋಗ ವುಂಟಾದಾಗ ಬರುವ ಪ್ರತ್ಯಯಾನುಭವ, ಅಂತಃಕರಣದಲ್ಲಿಯೇ ತೋರಿಕೊಳ್ಳುವ ರಾಗದ್ವೇಷಾದಿ ವೇದನಾನುಭವಗಳಿಗಿಂತ ಬೇರೆಯಾಗಿದ್ದು ಇವೆಲ್ಲವುಗಳನ್ನೂ ತನ್ನ ಬೆಳಕಿನಿಂದಲೇ ಬೆಳಗಿತೋರಿಸುವ ಸ್ವತಂತ್ರಾನುಭವವೆನಿಸಿಕೊಂಡಿದೆ. ಇದನ್ನೇ ಉಪ ನಿಷತ್ತಿನಲ್ಲಿ 'ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ' (ಬೃ.೨–೫–೧೯) ಎಂದು ಹೇಳಿದೆ. 'ಸರ್ವಾತ್ಮನಾ ಸರ್ವಮನುಭವತೀತಿ ಸರ್ವಾನುಭೂಃ' ಎಂದು ಆಚಾರ್ಯರು ಇದಕ್ಕೆ ವಿವರಣೆಯನ್ನು ನೀಡಿದ್ದಾರೆ. ಅಹಂಪ್ರತ್ಯಯದಲ್ಲಿ ಉಂಟಾಗುವ ಎಲ್ಲಾ ಅನುಭವ ಗಳನ್ನೂ ಬೆಳಗಿತೋರಿಸುತ್ತ ಸರ್ವರಲ್ಲಿಯೂ ಆತ್ಮನಾಗಿದ್ದುಕೊಂಡಿರುವ ಸರ್ವವ್ಯಾಪಕ ತತ್ತ್ವವಿದು ಎಂಬುದೇ ಈ ವಾಕ್ಯದ ಭಾವ. ಅಂತೂ ಸಾಕ್ಷಿ, ಆತ್ಮ, ಬ್ರಹ್ಮ – ಎಂದು ಮುಂತಾಗಿ ಕರೆಯಲ್ಪಡುವ ತತ್ತ್ವವು ಅನುಭವಸ್ವರೂಪವಾಗಿದ್ದು, ವೇದನಪ್ರತ್ಯಯ ಗಳೆಲ್ಲವನ್ನೂ ಬೆಳಗುತ್ತಿದ್ದು, ಇವು ತೋರಿದಾಗಲೂ ತೋರದಿರುವಾಗಲೂ ಯಾವ ವಿಕಾರವನ್ನೂ ಹೊಂದದೆ ಇರುವ ನಮ್ಮೆಲ್ಲರ ಸ್ವರೂಪವೇ ಆಗಿದೆ ಎಂಬುದು ಆಚಾರ್ಯರ ಅಭಿಪ್ರಾಯ.

ಈ ಅನುಭವವು ಸರ್ವರಿಗೂ ಆತ್ಮನೆಂದದ್ದರಿಂದ ಇದು ಸಾರ್ವತ್ರಿಕಾನುಭವವೇ ಹೊರತು ವೈಯುಕ್ತಿಕಾನುಭವವಲ್ಲ. ಇದನ್ನು ಪರಿನಿಷ್ಠಿತ, ಪರಿನಿಷ್ಪನ್ನ, ಭೂತವಸ್ತು – ಎಂದು ವರ್ಣಿಸಿರುವದರಿಂದಲೂ '**ಸ್ವಯಂ ಪ್ರಸಿದ್ಧಂ ಹಿ ಏತತ್ ಶಾರೀರಸ್ಯ ಬ್ರಹ್ಮಾತ್ಮತ್ವಮ್ ಉಪದಿಶ್ಯತೇ, ನ ಯತ್ನಾನ್ತರಪ್ರಸಾಧ್ಯಮ್** ।' (ಸೂ.ಭಾ. ೨–೧–೧೪), '**ನ ಹಿ ತತ್ತ್ವಮಸಿ ಇತ್ಯಸ್ಯ ವಾಕ್ಯಸ್ಯಾರ್ಥಃ ತತ್ತ್ವಂ ಮೃತೋ ಭವಿಷ್ಯಸಿ ಇತ್ಯೇವಂ ಪರಿಣೇತುಂ ಶಕ್ಯಃ** ।' (ಸೂ.ಭಾ.೩–೩–೩೨) ಎಂಬಿತ್ಯಾದಿವಾಕ್ಯಗಳಿಂದಲೂ ಇದು ನಮ್ಮೆಲ್ಲರ ಸ್ವಾಭಾವಿಕಸ್ವರೂಪವೇ ಹೊರತು ಪ್ರಯತ್ನಮಾಡಿಪಡೆದುಕೊಳ್ಳುವ ಹೊಸ ಸ್ಥಿತಿಯಲ್ಲ; 'ತತ್ ತ್ವಂ ಅಸಿ' ಅದೇ ನೀನು ಆಗಿರುತ್ತೀಯೆ – ಎಂದದ್ದರಿಂದ ಸತ್ತಮೇಲೆ ಪಡೆಯುವ ಸ್ವರೂಪವೆಂದು ಈ ವಾಕ್ಯವನ್ನು ತಿರುಚಲು ಸಾಧ್ಯವಿಲ್ಲ; 'ಅಸಿ' ಎಂಬ ಕ್ರಿಯಾಪದವು ವರ್ತಮಾನಕಾಲವಾಚಕವಾಗಿದೆ. ಆದ್ದರಿಂದ ಈಗ ೧ೀ ಇಲ್ಲಿಯೇ ಎಲ್ಲರಿಗೂ ಸಮಾನವಾಗಿರುವ ಸಿದ್ಧಾನುಭವ–ಮೂಲಾನುಭವಸ್ವರೂಪವೇ ಸಾಕ್ಷಿಯು ಎಂಬುದು ಸ್ಪಷ್ಟವಾಗಿ ಏರ್ಪಡುತ್ತದೆ.

## ಶಾಸ್ತ್ರ ಹಾಗೂ ಸಾಕ್ಷ್ಯನುಭವ

ಅನುಭವಸ್ವರೂಪವಾದ ಸಾಕ್ಷಿಯು ಅಹಂಪ್ರತ್ಯಯಕ್ಕೆ ಆಧಾರವಾಗಿ ಅದಕ್ಕೂ ..ಚಗಿರುವದರಿಂದ ಅದರಲ್ಲಿ ನಾನಾತ್ವವಿಲ್ಲ. ನಾನಾತ್ವಕ್ಕೆ ಅಹಂಪ್ರತ್ಯಯವೇ ಬೇಕು. ಅದಕ್ಕೂ ಆಚೆಗಿರುವ ತತ್ತ್ವದಲ್ಲಿ ನಾನಾತ್ವವಿರಲು ಶಕ್ಯವಿಲ್ಲ. ಆದ್ದರಿಂದ ಅದು ಏಕ, ಅದ್ವಿತೀಯ. ವಾಕ್ಕುಮನಸ್ಸುಗಳಿಗೆ ಆ ತತ್ತ್ವವು ಗೋಚರವಲ್ಲ ಎಂದರೆ ವಿಷಯವಲ್ಲ. ಏಕೆಂದರೆ ಅಹಂಪ್ರತ್ಯಯದ ಮುಂದಕ್ಕೆ ಮನಸ್ಸೂ ವಾಕ್ಕೂ ಇವೆ. ಆದ್ದರಿಂದ ಅಹಂಪ್ರತ್ಯಯವನ್ನೊಳಗೊಂಡು ಈ ಎಲ್ಲವನ್ನೂ ವ್ಯಾಪಿಸಿ ಬೆಳಗುವ ಸಾಕ್ಷಿಸ್ವರೂಪಾನುಭವವು ಇವುಗಳಿಗೆ ವಿಷಯವಾಗಲೇಆರದು. ಹಾಗಾದರೆ ಶಬ್ದರೂಪವಾಗಿರುವ ಶಾಸ್ತ್ರವು ಸಾಕ್ಷ್ಯನುಭವವನ್ನು ತಿಳಿಸಲು ಪ್ರಮಾಣವಾಗಿರುವದು ಹೇಗೆ ? ಎಂಬ ಪ್ರಶ್ನೆಗೆ ಆಚಾರ್ಯರು ಈ ಕೆಳಗಿನಂತೆ ಉತ್ತರಿಸಿದ್ದಾರೆ : '**ನ ಹಿ ಶಾಸ್ತ್ರಮ್ ಇದಂತಯಾ ವಿಷಯಭೂತಂ ಬ್ರಹ್ಮ ಪ್ರತಿಪಿಪಾದಯಿಷತಿ । ಕಿಂ ತರ್ಹಿ ಪ್ರತ್ಯಗಾತ್ಮತ್ವೇನ ಅವಿಷಯತಯಾ ಪ್ರತಿಪಾದಯತ್ ಅವಿದ್ಯಾಕಲ್ಪಿತಂ ವೇದ್ಯವೇದಿತೃವೇದನಾದಿ ಭೇದಮ್ ಅಪನಯತಿ** ।' (ಸೂ.ಭಾ.೧–೧–೪) ಶಾಸ್ತ್ರವು ಬ್ರಹ್ಮವನ್ನು ಇದು ಎಂದು ವಿಷಯವಾಗಿಸಿಕೊಂಡು ತಿಳಿಸುವದಕ್ಕೆ ಹೊರಟಿಲ್ಲ; ಮತ್ತೇನೆಂದರೆ ಅದು ನಮ್ಮೊಳಗಿನ ಆತ್ಮನೇ ಆಗಿರುವದರಿಂದ ವಿಷಯವಲ್ಲವೆಂದು ತಿಳಿಸಿ ಅವಿದ್ಯಾಕಲ್ಪಿತವಾದ ತಿಳಿಯುವವನು, ತಿಳಿಯಲ್ಪಡುವ ವಸ್ತು, ತಿಳಿಯುವಿಕೆ – ಎಂಬ ಭೇದವನ್ನು ಅಲ್ಲಗಳೆಯುತ್ತದೆ.

ಹೀಗೆ ಶಾಸ್ತ್ರವು ಉಪದೇಶಿಸಿದೊಡನೆಯೇ ಅಧಿಕಾರಿಯಾದವನು ತನ್ನೊಳಕ್ಕೆ ಸರಿದು ಸಾಕ್ಷ್ಯನುಭವದಲ್ಲಿಯೇ ನೆಲೆನಿಲ್ಲುತ್ತಾನೆ ; ಇದೇ ಶಾಸ್ತ್ರದ ಕೆಲಸ. ಈ

ಕೆಲಸವನ್ನು ವೇದಾಂತಶಾಸ್ತ್ರವಲ್ಲದೆ ಮಿಕ್ಕ ಯಾವ ಶಾಸ್ತ್ರಗಳೂ ಮಾಡಲಾರವು. ಮಿಕ್ಕ ಶಾಸ್ತ್ರಗಳೆಲ್ಲ ಅಹಂಪ್ರತ್ಯಯವಿಷಯವಾದ ಸಂಗತಿಗಳನ್ನೇ ತಿಳಿಸುತ್ತವೆ. ಈ ವೇದಾಂತ ಶಾಸ್ತ್ರವು ಮಾತ್ರವೇ **'ಸ್ವಾಭಾವಿಕಕಾರ್ಯಕರಣಸಙ್ಘಾತಪ್ರವೃತ್ತಿಗೋಚರಾತ್ ವಿಮುಖೀಕೃತ್ಯ ಪ್ರತ್ಯಗಾತ್ಮಸ್ರೋತಸ್ತಯಾ ಪ್ರವರ್ತಯನ್ತಿ ।'** (ಸೂ.ಭಾ.೧–೧–೪) ಹೊರಗೆ ನೋಡುವ ಅವಿದ್ಯಾಸ್ವಭಾವದಿಂದ ತಪ್ಪಿಸಿ ತನ್ನೊಳಗೆ ಸಾಕ್ಷ್ಯನುಭವದ ಕಡೆಗೆ ಮನಸ್ಸು ಹರಿಯುವಂತೆ ಮಾಡುವದೇ ಶಾಸ್ತ್ರದ ಕೆಲಸ – ಎಂದಂತೆ ನಮ್ಮನ್ನು ಹೊರದೃಷ್ಟಿಯಿಂದ ಹಿಂತಳ್ಳಿ ಸಾಕ್ಷ್ಯನುಭವದಲ್ಲಿ ನಿಲ್ಲುವಂತೆ ಮಾಡುತ್ತದೆ. ಒಟ್ಟಿನಲ್ಲಿ 'ಶಾಸ್ತ್ರ' ಎಂದರೆ ಸಾಕ್ಷ್ಯನುಭವದಲ್ಲಿ ನಿಲ್ಲುವಂತೆ ಮಾಡುವ ಉಪನಿಷದ್ವಾಕ್ಯಗಳು ; **'ಅನುಭವ' ಎಂದರೆ ಸಾರ್ವತ್ರಿಕವಾದ ಪೂರ್ಣವಾದ ಅಹಂಪ್ರತ್ಯಯಕ್ಕೂ ಹಿಂದೆ ಇರುವ ಪ್ರತಿಯೊಬ್ಬರ ಸ್ವರೂಪ** – ಎಂಬ ಎರಡು ಮಹತ್ತ್ವದ ವಿಚಾರಗಳನ್ನು – ಆಚಾರ್ಯರು ಭಾಷ್ಯದಲ್ಲಿ ಸ್ಪಷ್ಟಪಡಿಸಿದ್ದಾರೆ ಎನ್ನಲಡ್ಡಿಯಿಲ್ಲ.

## ಗುರುವಿನ ಅಗತ್ಯ

ಸಾಕ್ಷ್ಯನುಭವವನ್ನು ತೋರಿಸುವ ಶಾಸ್ತ್ರವೂ ಇದ್ದು ಸಾಕ್ಷ್ಯನುಭವವು ನಮ್ಮೆಲ್ಲರ ಸ್ವರೂಪವೇ ಆಗಿರುವದಾದ್ದರಿಂದ ಶಾಸ್ತ್ರವನ್ನು ಅವಲೋಕಿಸುವದರಿಂದಲೇ ಆತ್ಮ ವಿಜ್ಞಾನವು ಉಂಟಾಗುವದೆಂದು ಹೇಳಬಹುದೆ ? ಹಾಗಾದರೆ **'ಸ ಗುರುಮೇವಾಭಿ ಗಚ್ಛೇತ್'** (ಮುಂ.೧–೨–೧೨) ಎಂಬ ಮಾತಿಗೆ ಬೆಲೆಯೇನು ? **'ಶಾಸ್ತ್ರಜ್ಞೋಽಪಿ ಸ್ವಾತಂತ್ರ್ಯೇಣ ಬ್ರಹ್ಮಜ್ಞಾನಾನ್ವೇಷಣಂ ನ ಕುರ್ಯಾತ್'** ಎಂದು ಅಲ್ಲಿಯೇ ಆಚಾರ್ಯರು ಬರೆದುದೇತಕ್ಕೆ ? ಎಂದು ಸಂಶಯವು ಬರಬಹುದು. ಆದರೆ ಶಾಸ್ತ್ರ ವಾಕ್ಯದ ವಿಚಾರವನ್ನು ನಾವುನಾವೇ ಮಾಡಿದರೆ ಎಂದಿಗೂ ಆತ್ಮಾನುಭವವಾಗಲಾರದು ಎಂಬುದು ಖಂಡಿತ. ಏಕೆಂದರೆ ವಿಚಾರಮಾಡಹೊರಟಿರುವ ನಾನು 'ನಾನು ವಿಚಾರ ಮಾಡುವವನು' ಎಂದಿಟ್ಟುಕೊಂಡೇ ಹೊರಡಬೇಕಾಗಿರುತ್ತದೆ. ಆದರೆ ಆತ್ಮಸ್ವರೂಪವು ಈ ನಾನಿಗೂ ಹಿಂದೆ ಇರುವದರಿಂದ ಸ್ವತಂತ್ರವಾಗಿ ವಿಚಾರಿಸುವ ಯಾವನೂ 'ನಾನು' ಎಂಬುದನ್ನು ಕೈಬಿಟ್ಟು ಅದಕ್ಕಾಧಾರವಾದ ಸಾಕ್ಷ್ಯನುಭವದಲ್ಲಿ ನೆಲೆನಿಲ್ಲುವ ಸಂಭವವೇ ಇಲ್ಲ. ಇನ್ನೂ ಜಾಣನಾದರೆ ಶಾಸ್ತ್ರದ ಪ್ರಕಾರ 'ನಾನು ಎಂಬುದಕ್ಕೂ ಹಿಂದೆ ಒಂದು ತತ್ತ್ವವಿದೆ' ಎಂದಿಷ್ಟೇ ಶ್ರದ್ಧೆಯುಕ್ತಿಗಳ ಬಲದಿಂದ ನಿರ್ಧರಿಸಬಲ್ಲನೇ ಹೊರತು ವಿಚಾರಸಮಕಾಲದಲ್ಲಿಯೇ ಸಾಕ್ಷಿಸ್ವರೂಪದಲ್ಲಿ ನಿಂತುಬಿಡಲು ಶಕ್ಯವಾಗುವದಿಲ್ಲ. ಈ ಅರ್ಥದಲ್ಲಿ ಬರಿಯ ಶಾಸ್ತ್ರವಿದ್ದೂ ಪ್ರಯೋಜನವಾಗಲಾರದೆಂಬುದು ನಿಶ್ಚಿತ. ಆದರೆ ಶಾಸ್ತ್ರವು ತಿಳಿಸುವ ಸಾಕ್ಷ್ಯನುಭವವನ್ನು ಕಂಡುಕೊಂಡು ನೆಲೆನಿಂತಿರುವ ಆಗಮವನ್ನು ಬಲ್ಲ ಶ್ರೋತ್ರಿಯಬ್ರಹ್ಮನಿಷ್ಠನಾದ ಸದ್ಗುರುವು ಅದೇ ವಾಕ್ಯವನ್ನು ಉಪದೇಶಿಸಿದಾಗ ಉಪದೇಶದ ಸಮಕಾಲದಲ್ಲಿಯೇ ಮುಮುಕ್ಷುವು ಈ ಅಹಂಪ್ರತ್ಯಯಕ್ಕೂ ಹಿಂದೆ ಇರುವ ಸಾಕ್ಷ್ಯನುಭವಸ್ವರೂಪದಲ್ಲಿಯೇ ನಿಂತುಬಿಡುವನಲ್ಲದೆ 'ಇದೆಲ್ಲವೂ ಈ

ಆತ್ಮನೇ ಹೊರತು ಇಲ್ಲಿ ನಾನಾತ್ವವೆಂಬುದಿಲ್ಲವೇ ಇಲ್ಲ' ಎಂದು ಈಗಲೇ ಇಲ್ಲಿಯೇ ಸ್ಪಷ್ಟವಾಗಿ ಕಂಡುಕೊಂಡೇಬಿಡುತ್ತಾನೆ. ಆದ್ದರಿಂದ ಸಾಕ್ಷ್ಯನುಭವವನ್ನು ಅರಿಯಲು ಶಾಸ್ತ್ರವೇ ಪ್ರಮಾಣವಾದರೂ ಅನುಭವದಲ್ಲಿ ನೆಲೆನಿಂತ ಗುರುವಿನ ಮೂಲಕ ಉಪದೇಶಿಸಲ್ಪಟ್ಟ ಶಾಸ್ತ್ರವೇ ಫಲಕಾರಿಯಾಗುತ್ತದೆ ಎಂಬುದೇ ಇಲ್ಲಿ ತಾತ್ಪರ್ಯ. ಈ ಬಗ್ಗೆ 'ಅನನ್ಯಪ್ರೋಕ್ತೇ ಗತಿರತ್ರ ನಾಸ್ತಿ' (ಕ.೨-೮) ಎಂಬುದರ ಭಾಷ್ಯವನ್ನು ನೋಡಿ.

ಒಟ್ಟಿನಲ್ಲಿ ಬ್ರಹ್ಮವು ನಮ್ಮ ಸ್ವರೂಪವೇ ಆಗಿದ್ದರೂ ಅತ್ತಕಡೆಗೆ ತಿರುಗಿನೋಡಿ ಆ ತತ್ತ್ವದಲ್ಲಿಯೇ ನಿಂತು ಅದರ ಫಲವಾದ ಜೀವನ್ಮುಕ್ತಿ ಅಥವಾ ಅತ್ಯಂತಶಾಂತಿಯನ್ನು ಅನುಭವಿಸಲು ಶಾಸ್ತ್ರವೂ ಗುರುಗಳೂ ನಮಗೆ ಹೊರಗಿನಿಂದ ಸಹಾಯಮಾಡಲೇ ಬೇಕು. ಒಳಗೆ ನಮಗೂ ಕೂಡ ಕೆಲವು ಯೋಗ್ಯತೆಗಳಿರುವದು ಅತ್ಯವಶ್ಯ. ಚಿತ್ತಶುದ್ಧಿ, ವೈರಾಗ್ಯ, ಪ್ರತ್ಯಕ್‌ಪ್ರವಣತೆ, ಐಕಾಗ್ರ್ಯ – ಮುಂತಾದವುಗಳೇ ಆ ಯೋಗ್ಯತೆಗಳು. ಪ್ರಜಾಪತಿ, ವಾಮದೇವ, ಈಚೆಗೆ ಶ್ರೀರಮಣರೇ ಮುಂತಾದವರಿಗೆ ಗುರುವಿನ ಸಹಾಯವಿಲ್ಲದೆಯೇ ಆತ್ಮಜ್ಞಾನವಾಯಿತೆಂಬ ಸಂಗತಿಯು ಕೇವಲ ಅಪವಾದಾತ್ಮಕವೇ ಆಗಿದೆ. ಅಲ್ಲದೆ ಅವರುಗಳು ಜನ್ಮಾಂತರದಲ್ಲಿ ಮಾಡಿದ ಗುರೂಪಸತ್ತ್ಯಾದಿಸಾಧನಗಳ ಬಲದಿಂದಲೇ ಈಗ್ಗೆ ಪ್ರತಿಬಂಧವು ನಿವಾರಣೆಯಾಗಲು ಜ್ಞಾನನಿಷ್ಠೆಯನ್ನು ಪಡೆದ ರೆಂದೂ ಇದಕ್ಕೆ ಪರಿಹಾರವನ್ನು ಹೇಳಬಹುದಾಗಿದೆ. ಆದ್ದರಿಂದ ಆತ್ಮಾನುಭವವಾಗಲು ಶಾಸ್ತ್ರ ಹಾಗೂ ಗುರು ಇವೆರಡೂ ಅವಶ್ಯಕ ಎಂಬಲ್ಲಿ ಸಂದೇಹಕ್ಕೆಡೆಯೇ ಇಲ್ಲ.

## ಈಗಿನ ಸ್ಥಿತಿ

ಆಚಾರ್ಯರ ಪ್ರಕಾರ ಅನುಭವವನ್ನು ತೋರಿಸುವ ಉಪನಿಷದ್ವಾಕ್ಯವೇ ಶಾಸ್ತ್ರ ಎಂಬ ಶಬ್ದಕ್ಕೆ ಅರ್ಥ ; ಸಾರ್ವತ್ರಿಕಪೂರ್ಣಾನುಭವವಾದ ಸಾಕ್ಷಿಸ್ವರೂಪವೇ ಅನುಭವ ಎಂಬ ಮಾತಿಗೆ ಅರ್ಥ : ಈ ಅನುಭವದಲ್ಲಿ ನೆಲೆನಿಂತು ಬೋಧಿಸಬಲ್ಲ ಯೋಗ್ಯತೆಯುಳ್ಳ ಮಹಾನುಭಾವನೇ ಗುರು ಎಂಬ ಶಬ್ದಕ್ಕೆ ಅರ್ಹ– ಎಂದಾಯಿತು. ಆದರೆ ಈಗ್ಗೆ ಈ ಮೂರೂ ಶಬ್ದಗಳ ಬಗ್ಗೆ ಪ್ರಚಾರದಲ್ಲಿರುವ ಬಗೆಬಗೆಯ ಗ್ರಹಿಕೆಗಳನ್ನು ವಿಚಾರಿಸಿದರೆ ಭೂಮ್ಯಾಕಾಶದಷ್ಟು ಅಂತರವು ಕಂಡುಬರುತ್ತದೆ. ಶಾಸ್ತ್ರ ಎಂದರೆ ತರ್ಕ, ನ್ಯಾಯ, ಮೀಮಾಂಸೆ, ವ್ಯಾಕರಣಾದಿಗಳಲ್ಲಿ ಪಾಂಡಿತ್ಯವನ್ನು ಪಡೆದು ವಾದಗಳನ್ನು ಹೂಡುವದು ; ಅನುಭವ ಎಂದರೆ ಪತಂಜಲಯೋಗಶಾಸ್ತ್ರದಲ್ಲಿ ಹೇಳಿದ ನಾನಾವಿಧದ ಸಮಾಧಿಗಳು ಹಾಗೂ ಪವಾಡಗಳು ಅಥವಾ ಸಾಧನೆಯಿಂದ ಸಾಧಿಸಿದ ಅನೇಕವಿಧದ ಯೌಗಿಕಾನುಭವಗಳು ; ಗುರು ಎಂದರಂತೂ ಅದರಲ್ಲಿ ಅನೇಕ ಬಗೆಯ ಗುರುಗಳಿದ್ದಾರೆ. ಈ ಬಗ್ಗೆ 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯ ಹಳೆಯ ಸಂಚಿಕೆಯೊಂದರಲ್ಲಿಯ 'ಗುರುಗಳ ದಂಡು' ಎಂಬ ಲೇಖನವನ್ನು ಓದಿ ನೋಡ ಬೇಕು. ಸದ್ಯಕ್ಕೆ (೧) ನಾನಾಪ್ರಕಾರದ ಯೋಗಾನುಭವ ಹಾಗೂ ಪವಾಡಗಳನ್ನು

ತೋರಿಸುವ ಗುರುಗಳು ಮತ್ತು (೨) ತಮಗೆ ತಿಳಿದ ಪರಮಾರ್ಥಗ್ರಂಥಗಳನ್ನಿಟ್ಟು ಕೊಂಡು ತಮಗೆ ತಿಳಿದಂತೆ ಬೋಧಿಸುತ್ತಾ ಶಿಷ್ಯರನ್ನು ಕಲೆಹಾಕಿ ತಾವು ಅನುಭವಿಗಳು ಎಂದು ತೋರಿಸಿಕೊಳ್ಳುವದರಲ್ಲಿಯೇ ಸಂತೃಪ್ತರಾಗಿರುವ ವೇದಾಂತಬೋಧಕರು – ಹೀಗೆ ಗುರುಗಳಲ್ಲಿ ಎರಡು ಪಂಗಡಗಳನ್ನು ನೋಡಬಹುದಾಗಿದೆ. ಮೊದಲನೆಯ ಪಂಗಡದವರಲ್ಲಿ ಕೆಲವರಿಗೆ ವೇದಾಂತಶಾಸ್ತ್ರದ ಪರಿಚಯವೇ ಇಲ್ಲದಿರುವ ಸಂಭವವೂ ಇರಬಹುದಾದರೂ ಜನಸಾಮಾನ್ಯರಲ್ಲಿ ಕಾಮ್ಯಭಕ್ತರಾದ ಅನೇಕರ ಆದರಕ್ಕೆ ಅವರು ಪಾತ್ರರಾಗಿಬಿಡುವದರಿಂದ ಈ ವರ್ಗದವರಿಗೆ ಪ್ರಸಿದ್ಧಿ ಹಾಗೂ ಗುರುಸ್ಥಾನಗಳು ಬೇಗನೆ ಸಿಕ್ಕುತ್ತವೆ. ಎರಡನೆಯ ಪಂಗಡದವರಿಗೆ ತತ್ತ್ವವಿಚಾರಕ್ಕಿಂತ ಗುರುತ್ವಸಂಪಾದನೆಯೇ ಮುಖ್ಯವಾಗಿರುತ್ತದೆ. ಗುರುತ್ವದ ಅಭಿಮಾನವನ್ನು ಬಿಟ್ಟು ತತ್ತ್ವವಿಚಾರಕ್ಕೆ ಬರಲು ಇವರಿಗೆ ಶಕ್ಯವಾಗುವದೇ ಇಲ್ಲ.

ಆಚಾರ್ಯರ ಹೆಸರು ಹಾಗೂ ಅವರ ಗ್ರಂಥಗಳು ಜೀವಂತವಾಗಿದ್ದೂ ಹೀಗೆ ನಾನಾಬಗೆಯ ಗ್ರಹಿಕೆಗಳುಂಟಾಗಲು ಕಾರಣವೇನಿರಬಹುದು ?– ಎಂಬುದನ್ನು ಪರಿ ಶೋಧಿಸಿ ನೋಡಿದಲ್ಲಿ ನನಗೆ ಕಂಡ ಸತ್ಯಸಂಗತಿಗಳನ್ನು ಇಲ್ಲಿ ತೋರಿಸಲು ಪ್ರಯತ್ನಿಸು ತ್ತೇನೆ. ಹೆಚ್ಚಿನ ವಿಚಾರಮಾಡುವ ಯೋಗ್ಯತೆಯುಳ್ಳ ವಿದ್ವಜ್ಜನರು ಈ ಬಗ್ಗೆ ಮನಸ್ಸು ಹಾಕಿ ಇನ್ನೂ ಚೆನ್ನಾಗಿ ಪರಿಶೀಲನೆಮಾಡಲು ಅನುಕೂಲವಾಗಲೆಂದೇ ನನ್ನ ಈ ಪ್ರಯತ್ನ.

## ತರ್ಕದ ಜಾಲ

ಶಾಂಕರಭಾಷ್ಯರಚನೆಯಾದ ನೂರಾರುವರ್ಷಗಳಮೇಲೆ ಭಾಷ್ಯದಮೇಲೆ **ಪಂಚಪಾದಿಕೆ, ಭಾಮತಿ**– ಎಂಬ ವ್ಯಾಖ್ಯಾನಗಳು ಹುಟ್ಟಿ ಈ ಎರಡೂ ವ್ಯಾಖ್ಯಾನಗಳಿಗೆ ಉಪವ್ಯಾಖ್ಯಾನಗಳೂ ಹುಟ್ಟಿ ಈ ವ್ಯಾಖ್ಯಾನಾರಣ್ಯಗಳು ಅದ್ಭುತವಾಗಿ ಬೆಳೆದು ನಿಂತದ್ದೇ ಅಲ್ಲದೆ ಇದೇ ಜಾಡನ್ನೇ ಹಿಡಿದು ಅದ್ವೈತವೇದಾಂತದಲ್ಲಿ **ಖಂಡನಖಂಡ ಖಾದ್ಯ, ಚಿತ್ಸುಖಿ, ಅದ್ವೈತಸಿದ್ಧಿ, ಸಿದ್ಧಾಂತಲೇಶಸಂಗ್ರಹ, ವೇದಾಂತಪರಿಭಾಷೆ** – ಮುಂತಾದ ತರ್ಕಕರ್ಕಶಗ್ರಂಥಗಳೂ ಹುಟ್ಟಿಕೊಂಡವು. ಆಚಾರ್ಯರ ಭಾಷ್ಯಾಭಿ ಪ್ರಾಯವನ್ನು ಅರಿಯಲು ಅಥವಾ ಶಾಂಕರಾದ್ವೈತವನ್ನು ಅರಿಯಲು ಈ ಗ್ರಂಥಗಳ ಅಧ್ಯಯನವು ಅತ್ಯವಶ್ಯ ಎಂಬ ಗ್ರಹಿಕೆಯು ಪಂಡಿತರಲ್ಲಿ ಬಲವಾಗತೊಡಗಿತು. ಮೂಲವ್ಯಾಖ್ಯಾನಗಳು ಆಚಾರ್ಯರು ಭಾಷ್ಯದಲ್ಲಿ ಹೇಳುವ ಸಾರ್ವತ್ರಿಕಪೂರ್ಣಾ ನುಭವದ ಪರಮಾರ್ಥದೃಷ್ಟಿಯ ವೈಶಿಷ್ಟ್ಯವನ್ನರಿಯದೆ ಸರ್ವವನ್ನೂ ವ್ಯಾವಹಾರಿಕ ದೃಷ್ಟಿಯಿಂದಲೇ ಅಳೆಯತೊಡಗಿದ್ದರಿಂದ, ತರ್ಕದ ಜಾಲದಿಂದ ಭಾಷ್ಯಕ್ಕೆ ವ್ಯಾಖ್ಯಾನ ವನ್ನು ರಚಿಸಿ, ಭಾಷ್ಯವಾಕ್ಯಗಳನ್ನು ಸಂದರ್ಭಾನುಸಾರ ತಿರುಚಿ ಅರ್ಥಮಾಡುತ್ತಾ ಭಾಷ್ಯಬಾಹಿರವಾದ ಪ್ರಕ್ರಿಯೆಗಳನ್ನು ಆಚಾರ್ಯರ ಹೆಸರಿನಲ್ಲಿಯೇ ಹರಡುತ್ತಾ ಭಾಷ್ಯಕ್ಕೆ ವಿರುದ್ಧವಾಗಿ ಹೇಳುತ್ತಲೇ ಭಾಷ್ಯದ ಅಭಿಪ್ರಾಯವನ್ನೇ ವಿವರಿಸುತ್ತಿದ್ದೇವೆಂಬ

ಭ್ರಾಂತಿಯನ್ನು ಹುಟ್ಟಿಸುತ್ತಾ ಇರುತ್ತವೆ. ಹೀಗಿರುವಾಗ ಅವುಗಳನ್ನೇ ನಂಬಿ ಹೊರಟ ಇತರ ವ್ಯಾಖ್ಯಾನಗಳ, ಪ್ರಕರಣಗ್ರಂಥಗಳ ಪಾಡನ್ನು ಬೇರೆ ಹೇಳಬೇಕಾದದ್ದೇ ಇಲ್ಲ. ಈ ಮಾತಿನ ಸತ್ಯತೆಯನ್ನು ಮನಗಾಣಬೇಕೆನ್ನುವವರು ಹೊಳೆನರಸೀಪುರದ ಅಧ್ಯಾತ್ಮ ಪ್ರಕಾಶಕಾರ್ಯಾಲಯದಲ್ಲಿ ಪ್ರಕಟವಾಗಿರುವ **'ಪಂಚಪಾದಿಕಾಪ್ರಸ್ಥಾನಮ್'**, **'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ'** ಮುಂತಾದ ಸಂಸ್ಕೃತಗ್ರಂಥಗಳನ್ನೂ **'ವೇದಾಂತ ವಿಚಾರದ ಇತಿಹಾಸ'**, **'ಪಂಚಪಾದಿಕೆ'** ಮುಂತಾದ ಕನ್ನಡಗ್ರಂಥಗಳನ್ನೂ ಅವಶ್ಯವಾಗಿ ಓದಬೇಕು.

ಒಟ್ಟಿನಲ್ಲಿ 'ಶಾಸ್ತ್ರವು ಅನುಭವದಲ್ಲಿ ನೆಲೆನಿಲ್ಲಿಸುವ ಏಕೈಕಪ್ರಮಾಣವು' ಎಂದು ಹೇಳಿದ ಆಚಾರ್ಯರ ಉಕ್ತಿಯು ಎತ್ತಲೋಹೋಗಿ 'ಶಾಸ್ತ್ರದ ಅಭ್ಯಾಸದಿಂದ ಬ್ರಹ್ಮ ರಾಕ್ಷಸರಾಗುವ ಸಂಭವವುಂಟು ; ಆದ್ದರಿಂದ ಶಾಸ್ತ್ರದ ಹುಚ್ಚಿಗೆ ಹೋಗಬೇಡಿ' ಎಂದು ಶ್ರೀಸಮರ್ಥರಾಮದಾಸರಂಥ ಮಹನೀಯರೂ ಸಹ ಜನರುಗಳಿಗೆ ಎಚ್ಚರಿಕೆನೀಡು ವಷ್ಟು ಶಾಸ್ತ್ರಶಬ್ದಕ್ಕೆ ಅಪಾರ್ಥಬಂದಿದ್ದಕ್ಕೆ ಕಾರಣ ಈ ತರ್ಕಕರ್ಕಶವ್ಯಾಖ್ಯಾನಗಳ ರಾಶಿಯೇ ಎಂದು ಹೇಳಿದರೆ ತಪ್ಪಾಗಲಾರದು. ಇವುಗಳಿಂದಲೇ ತರ್ಕಶಾಸ್ತ್ರ ವನ್ನೋದದೆ ವೇದಾಂತವು ತಿಳಿಯಲಾರದು – ಎಂದು ಎಲ್ಲರೂ ಭ್ರಾಂತರಾಗುವದಕ್ಕೆ ಅವಕಾಶವಾಯಿತು ; ಮತ್ತು ವಾದವಿವಾದಗಳೂ ಬೆಳೆಯಲಾರಂಭಿಸಿದವು. ಇದರಿಂದ ಶ್ರೀಶಂಕರಾಚಾರ್ಯರು ಸೂತ್ರಭಾಷ್ಯಾದಿಗಳಲ್ಲಿ ಬರೆದ ಅನುಭವಪೂರ್ಣವಾದ ವಾಕ್ಯರತ್ನಗಳ ಕಡೆಗೆ ಭಾಷ್ಯಗಳನ್ನೋದಿದ ಪಂಡಿತರಿಗೂ ಕೂಡ ಲಕ್ಷ್ಯವಿಲ್ಲದಂತಾಗಿ ಬರಿಯ ತರ್ಕ–ವಾದ, ಪೂರ್ವಪಕ್ಷ– ಉತ್ತರಪಕ್ಷ, ಮೀಮಾಂಸ–ನ್ಯಾಯ, ಖಂಡನೆ–ಮಂಡನೆಗಳಲ್ಲೇ ಆಸಕ್ತರಾಗಿಬಿಡುವ ಗೀಳು ಅಂಟಿಕೊಳ್ಳುವದಕ್ಕೆ ಆಸ್ಪದವಾಯಿತು. ಮತ್ತು ಮುಖ್ಯವಾಗಿ ಎಲ್ಲ ಸಂತರೂ ಸತ್ಪುರುಷರೂ ಸಹ ಈ ತರ್ಕಜಾಲವನ್ನು ಕುರಿತೇ ಶಾಸ್ತ್ರವನ್ನು ಓದಿ ಕೆಡಬೇಡಿರೆಂದು ಉಪದೇಶಿಸಿರುವರೇ ಹೊರತು ಶಾಸ್ತ್ರ ಎಂಬುದಕ್ಕೆ ನಿಜಾರ್ಥವಾದ ವೇದವನ್ನಾಗಲಿ ಅದರ ಉಪದೇಶವನ್ನಾಗಲಿ ಅವರಾರೂ ನಿಂದಿಸಿಲ್ಲ ಎಂಬ ಮಾತನ್ನೂ ಈ ಸಂದರ್ಭದಲ್ಲಿ ಮರೆಯದೆ ಇರಬೇಕು.

## ಅನುಭವದ ಅಪಲಾಪ

ಶಾಸ್ತ್ರಶಬ್ದಕ್ಕೆ ವ್ಯಾಖ್ಯಾನಗಳಿಂದಲೇ ಅಪಕೀರ್ತಿಯು ಬಂದಿರುವಂತೆ ಅನುಭವ ಶಬ್ದಕ್ಕೂ ಇವುಗಳಿಂದಲೇ ಅಪಕೀರ್ತಿಯು ಬರಲವಕಾಶವಾಯಿತೆನ್ನಬಹುದು. ಅದೇ ಕೆಂದರೆ 'ಪಾತಂಜಲಯೋಗದರ್ಶನವು ಅವೈದಿಕದ್ವೈತಮತವಾಗಿದೆ, ಆದ್ದರಿಂದ ಅದನ್ನು ಪೂರ್ಣವಾಗಿ ನಾವು ಒಪ್ಪುವದಿಲ್ಲ' – ಎಂದು ಆಚಾರ್ಯರು ಬಾಯಿಬಿಟ್ಟು ಭಾಷ್ಯಗಳಲ್ಲಿ ಹೇಳಿರುವದೇ ಅಲ್ಲದೆ ಅದರಲ್ಲಿರುವ ಸಂನ್ಯಾಸ, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರಗಳವರೆಗಿನ ಅಂಶಗಳನ್ನು ಮಾತ್ರ ವೇದಾಂತ

ಸಿದ್ಧಾಂತದ ಅನುಭವವನ್ನು ಮನಗಾಣಲು ಸಹಾಯಕವಾಗಿ ಅನುಮೋದಿಸುತ್ತೇವೆ ಎಂದು ಸ್ಪಷ್ಟವಾಗಿ ಸಾರಿದ್ದಾರೆ. ನಿಜವು ಹೀಗಿದ್ದರೂ ಆಚಾರ್ಯರು ಒಪ್ಪದಿರುವ ಅಂಶಗಳಾದ ಧಾರಣಧ್ಯಾನಸಮಾಧಿಗಳನ್ನು ಭಾಮತೀವ್ಯಾಖ್ಯಾನಕಾರರು ಶ್ರವಣ ಮನನನಿದಿಧ್ಯಾಸನಗಳೆಂದು ವರ್ಣಿಸಿ ಪಾತಂಜಲಯೋಗಶಾಸ್ತ್ರವನ್ನು ವೇದಾಂತ ಶಾಸ್ತ್ರದೊಳಕ್ಕೆ ತೂರಿಸುವ ಕೆಲಸಮಾಡಿದ್ದಾರೆ. ಪಂಚಪಾದಿಕೆ, ವಿವರಣ– ಮುಂತಾದ ವ್ಯಾಖ್ಯಾನಕಾರರೂ ಪಾತಂಜಲಯೋಗದ ಸಮಾಧಿಯೇ ಮುಂತಾದವುಗಳನ್ನು ಬೆರೆಯಿಸಿ ಅರ್ಥಮಾಡಿದ್ದರಿಂದ ವೇದಾಂತಶಾಸ್ತ್ರದ ಪರಮಪ್ರಯೋಜನವು ಬರಿಯ ವಾಕ್ಯಾರ್ಥವಿಚಾರದಿಂದ ಆಗಲಾರದು ; ಆ ಪ್ರಯೋಜನವನ್ನು ಪಡೆಯಲು ಪಾತಂಜಲಯೋಗಕ್ಕೇ ಶರಣುಹೋಗಬೇಕೆಂಬ ಗ್ರಹಿಕೆಯು ಜನರಲ್ಲಿ ಬೇರೂರಲು ಕಾರಣವಾಯಿತು. ಇಲ್ಲಿಗೆ '**ವಾಕ್ಯಾರ್ಥಜ್ಞಾನಸಮಕಾಲೇ ಏವ ತು ಪರ್ಯವಸಿತೋ ಭವತಿ । ಕೇವಲಶಬ್ದಪ್ರಕಾಶಿತಾರ್ಥಜ್ಞಾನಮಾತ್ರನಿಷ್ಠಾವ್ಯತಿರಿಕ್ತಾಭಾವಾತ್ ।**' (ಮುಂ. ೧–೧–೬) ವಾಕ್ಯಾರ್ಥಜ್ಞಾನಸಮಕಾಲದಲ್ಲಿಯೇ ಎಲ್ಲವೂ ಮುಗಿದುಹೋಗುತ್ತದೆ ; ಏಕೆಂದರೆ ವೇದಾಂತಶಬ್ದವು ಎಂದರೆ ಉಪನಿಷತ್ತು ತೋರಿಸಿಕೊಟ್ಟ ತತ್ತ್ವವಾದ ಆತ್ಮಸ್ವರೂಪದಲ್ಲಿ ನೆಲೆನಿಲ್ಲುವದನ್ನು ಬಿಟ್ಟರೆ ಮತ್ತೇನೂ ಮಾಡಬೇಕಾದದ್ದು ಇರುವದಿಲ್ಲ. '**ತಸ್ಮಾತ್ ಪ್ರತಿಷೇಧವಿಜ್ಞಾನಪ್ರಮಾಣವ್ಯಾಪಾರಸಮಕಾಲಮೇವ ಆತ್ಮನ್ಯಧ್ಯಾರೋಪಿತಾನ್ತಃಪ್ರಜ್ಞತ್ವಾದ್ಯನರ್ಥನಿವೃತ್ತಿರಿತಿ ಸಿದ್ಧಮ್ ॥**' (ಮಾಂ.೧, ಮುಂ.೭) ಅವಿದ್ಯಾಕಲ್ಪಿತವಾದ ಅಂತಃಪ್ರಜ್ಞತ್ವಾದಿಗಳನ್ನು ಅಲ್ಲಗಳೆದು ಅನುಭವಸ್ವರೂಪದಲ್ಲಿಯೇ ನಿಲ್ಲಿಸುವ ವೇದಾಂತವಾಕ್ಯವು ಮುಮುಕ್ಷುವಿನ ಅಂತಃಕರಣದಲ್ಲಿ ಕೆಲಸ ಮಾಡುವ ಸಮಕಾಲದಲ್ಲಿಯೇ ಆತ್ಮನಲ್ಲಿ ಕಲ್ಪಿಸಲ್ಪಟ್ಟ ಅಂತಃಪ್ರಜ್ಞತ್ವಾದ್ಯಾರೋಪಗಳೂ ಹಾಗೂ ಅವುಗಳಿಂದಾಗುವ ಅನರ್ಥಗಳೂ ತೊಲಗಿಹೋಗುತ್ತವೆ–ಎಂದು ಮುಂತಾಗಿ ಬರೆದಿರುವ ನೂರಾರು ಭಾಷ್ಯವಾಕ್ಯಗಳಿಗೆ ಪ್ರಯೋಜನವೇ ಇಲ್ಲದಂತಾಯಿತು. ಭಾಷ್ಯದಲ್ಲಿ ಹೇಳಿದ್ದೆಲ್ಲವೂ ಬರಿಯ ಶಬ್ದಜ್ಞಾನ ಎಂದು ತಿಳಿದುಕೊಳ್ಳುವಂತಾಯಿತು.

## ದರ್ಶನ–ಸಾಕ್ಷಾತ್ಕಾರ

ಅನುಭವಿಯಾದ ಗುರುವಿನ ಮೂಲಕ ಉಪನಿಷದ್ವಾಕ್ಯಗಳನ್ನು ಶ್ರವಣಮಾಡಿ ತನ್ನ ಅನುಭವಸ್ವರೂಪದೆಡೆಗೆ ಹಿಂದಿರುಗಿ ಅಲ್ಲಿಯೇ ನಿಂತು 'ಇದಕ್ಕಿಂತ ವ್ಯತಿರಿಕ್ತವಾದ ಅನಾತ್ಮವೆಂಬುದಿಲ್ಲವೇ ಇಲ್ಲ, ಇದೆಲ್ಲವೂ ಆತ್ಮನೇ ಆಗಿದೆ' ಎಂದು ಅನುಭವಪೂರ್ವಕವಾಗಿ ಕಂಡುಕೊಳ್ಳುವದನ್ನೇ ವೇದಾಂತಗಳಲ್ಲಿ **ದರ್ಶನ** ಎಂದಿದೆ. ಇದನ್ನೇ ಭಾಷ್ಯಕಾರರು 'ಸಮ್ಯಗ್ದರ್ಶನ' ಎಂದು ಕರೆದಿದ್ದಾರೆ. '**ಆತ್ಮಾ ವಾ ಅರೇ ದ್ರಷ್ಟವ್ಯಃ**' (ಬೃ.೨–೪–೫) ಎಂಬ ಮಾತಿಗೂ ಇದೇ ತಾತ್ಪರ್ಯವು. ಇನ್ನು ಈ ಸಮ್ಯಗ್ದರ್ಶನದಲ್ಲಿ ನೆಲೆನಿಲ್ಲುವ ಯೋಗ್ಯತೆ ಇಲ್ಲದವರಿಗಾಗಿ ಶಾಸ್ತ್ರವು ಅದೇ ಬ್ರಹ್ಮವನ್ನು ಮನೋಮಯತ್ವಾದಿಗುಣವಿಶಿಷ್ಟವಾಗಿಯೋ, ಓಂಕಾರಾದಿಪ್ರತೀಕಗಳಿಂದಲೋ ನಿರಂತರ

ಧ್ಯಾನಮಾಡುವ ರೂಪದ ಉಪಾಸನೆಗಳನ್ನು ಹೇಳಿರುತ್ತದೆ. ಈ ಉಪಾಸನೆಗಳನ್ನು ಒಂದೇಸಮನೆ ನಡೆಸುತ್ತಿದ್ದರೆ ಕೊನೆಯಲ್ಲಿ ಸಾಕ್ಷಾತ್ಕಾರವಾಗಿ ಬ್ರಹ್ಮಲೋಕವೇ ಮುಂತಾದ ಲೋಕಾಂತರಗಳನ್ನು ಪಡೆದು ಅಲ್ಲಿ ಅನೇಕ ಮಹಿಮೆಗಳನ್ನನುಭವಿಸಿ ಕೊನೆಗೆ ಅಲ್ಲಿಯೇ ಸಮ್ಯಗ್ದರ್ಶನವುಂಟಾಗಲು ಮುಕ್ತಿಯನ್ನು ಪಡೆಯುತ್ತಾರೆ. ಹಾಗೆ ಸಮ್ಯಗ್ದರ್ಶನವುಂಟಾಗದಿದ್ದಲ್ಲಿ ಮತ್ತೆ ಸಂಸಾರಕ್ಕೆ ಮರಳುತ್ತಾರೆ. ಬಹುಶಃ ಬ್ರಹ್ಮಲೋಕದಲ್ಲಿರುವವರಿಗೆ ಕಲ್ಪಾಂತದಲ್ಲಿ ಬ್ರಹ್ಮನ ಉಪದೇಶದಿಂದ ಸಮ್ಯಗ್ದರ್ಶನ ವಾಗುವ ಸಂಭವವು ಅತ್ಯಂತ ಹೆಚ್ಚಾಗಿಯೇ ಇರುತ್ತದೆ. ಅಂತೂ ಅಲ್ಲಿಯೂ ಸಮ್ಯಗ್ದರ್ಶನದಿಂದಲೇ ಮೋಕ್ಷವಾಗುತ್ತದೆ. ಇದನ್ನು 'ಕ್ರಮಮುಕ್ತಿ' ಎಂದು ಕರೆಯು ತ್ತಾರೆ. ಈ ಕ್ರಮಮುಕ್ತಿಯನ್ನು ಪಡೆಯಬೇಕಾದ ಮಾರ್ಗದಲ್ಲಿ ಆಯಾ ಉಪಾಸನೆಗೆ ಸಂಬಂಧಪಟ್ಟ ಸಾಕ್ಷಾತ್ಕಾರ– ಎಂಬುದು ಉಂಟು. ಆದರೆ ಸಮ್ಯಗ್ದರ್ಶನ ರೂಪವಾದ ಇಲ್ಲಿಯೇ ಈಗಲೇ ತತ್ತ್ವವನ್ನು ಕಂಡುಕೊಳ್ಳುವ ಆತ್ಮವಿಜ್ಞಾನದಲ್ಲಿ ಸಾಕ್ಷಾತ್ಕಾರ ವೆಂಬುದು ಎಂದಿಗೂ ಹೊಂದಲಾರದು. ಏಕೆಂದರೆ ಈ ಆತ್ಮತತ್ತ್ವವು '**ಯಃ ಸಾಕ್ಷಾತ್ ಅಪರೋಕ್ಷಾತ್ ಬ್ರಹ್ಮ**' ಎಂಬಂತೆ ಮೊದಲೇ ಸಾಕ್ಷಾತ್ತಾಗಿರುವ ಅಪರೋಕ್ಷವಾದ ವಸ್ತುವಾಗಿದೆ, ಹೊಸದಾಗಿ ಸಾಕ್ಷಾತ್ಕರಿಸಿಕೊಳ್ಳಬೇಕಾದದ್ದಲ್ಲ.

ಭಾಷ್ಯಗಳಲ್ಲಿ ಹೀಗೆ ಸಮ್ಯಜ್ಜ್ಞಾನ ಹಾಗೂ ಉಪಾಸನೆಗಳನ್ನು ಚೆನ್ನಾಗಿ ಬಿಡಿಸಿ ಹೇಳಿದ್ದರೂ ವ್ಯಾಖ್ಯಾನಕಾರರು 'ದರ್ಶನ ಎಂದರೆ ಸಾಕ್ಷಾತ್ಕಾರ' ಎಂದು ಅರ್ಥಮಾಡಿ, ವಸ್ತುತಂತ್ರವಾದ ಜ್ಞಾನವನ್ನೂ ಕರ್ತೃತಂತ್ರವಾದ ಉಪಾಸನೆಯನ್ನೂ ಕಲಬೆರಕೆ ಯಾಗಿಸಿ ಆತ್ಮಜ್ಞಾನವಾದಮೇಲೆ ಆತ್ಮಸಾಕ್ಷಾತ್ಕಾರವಾಗಬೇಕೆಂಬ ಭ್ರಾಂತಿಯನ್ನು ಹೊಗಿ ಸುವದಕ್ಕೆ ಕಾರಣರಾದರು. ಹೀಗೆ ಶಾಸ್ತ್ರ, ಅನುಭವ – ಎಂಬ ಎಲ್ಲಾ ಮಾತುಗಳಿಗೂ ಜನರಲ್ಲಿ ನಾನಾಬಗೆಯ ಗೊಂದಲವುಂಟಾಗುವುದಕ್ಕೆ ಈ ವ್ಯಾಖ್ಯಾನಗಳ ಗದ್ದಲವೇ ಕಾರಣ – ಎಂಬುದು ನನಗಂತೂ ಸ್ಪಷ್ಟವಾಗಿ ಕಂಡಿರುತ್ತದೆ. ಈ ಗದ್ದಲವೆಲ್ಲವೂ ಅಡಗಿ ಸರಿಯಾದ **ಶುದ್ಧಶಾಂಕರಪ್ರಕ್ರಿಯೆಯನ್ನು** ಗುರುತಿಸಲು ಏನಾದರೂ ಪರಿಹಾರೋ– ಪಾಯವಿದೆಯೆ ? ಎಂಬ ಪ್ರಶ್ನೆಗೆ ಈಗ ಉತ್ತರವನ್ನು ಕಂಡುಕೊಳ್ಳೋಣ.

## ಪರಿಹಾರೋಪಾಯ

ಹಿಂದೆ **ಶಂಕರದರ್ಶನ** (ಬ್ರಹ್ಮಜ್ಞವಚನಗಳು ಪು.೨೧–೨೨) ಗ್ರಂಥದ ಪೀಠಿಕೆಯಲ್ಲಿ ಹೇಳಿದಂತೆ ಶ್ರೀಶಂಕರಭಗವತ್ಪಾದರ ಪ್ರಸ್ಥಾನತ್ರಯಭಾಷ್ಯಗಳ ನೇರಾದ ಅಧ್ಯಯನವು ಪಂಡಿತರುಗಳಲ್ಲಿ ಪ್ರಚಾರಕ್ಕೆ ಬರಬೇಕು. ಅದರಂತೆ ನೇರಾಗಿ ಭಾಷ್ಯವಾಕ್ಯಗಳ ತಾತ್ಪರ್ಯವನ್ನೇ ಒಳಗೊಂಡ ದೇಶಭಾಷೆಯಲ್ಲಿ ಸುಲಭವಾಗಿ ಬರೆದ ಗ್ರಂಥಗಳು ಸಾಮಾನ್ಯಜಿಜ್ಞಾಸುಗಳಿಗೆ ಸಿಕ್ಕುವಂತಾಗಬೇಕು. ಈ ಎರಡು ಅಂಶಗಳೇ ಇಲ್ಲಿ ಪರಿಹಾರೋಪಾಯಗಳು. ಹೀಗೆ ಸೂಚಿಸಿದ ಉಪಾಯಗಳಲ್ಲಿ ಸಾಕ್ಷಾತ್

ಭಾಷ್ಯವಾಕ್ಯಗಳನ್ನೊಳಗೊಂಡ ಗ್ರಂಥವೊಂದನ್ನು ಜಿಜ್ಞಾಸುಗಳಿಗೆ ಅರ್ಪಿಸಬೇಕೆಂಬ ಉದ್ದೇಶವೇ ಈ ಗ್ರಂಥರಚನೆಗೆ ಕಾರಣವಾಯಿತು. ಇದರಲ್ಲಿ ಶ್ರೀಶಂಕರರ ಬಗ್ಗೆ – ಅವರ ಭಾಷ್ಯಗಳಲ್ಲಿಯ ವಿಷಯಗಳ ಬಗ್ಗೆ – ಪ್ರಶ್ನೋತ್ತರರೂಪದಿಂದ ತಕ್ಕಮಟ್ಟಿಗೆ ವಿಷಯಗಳನ್ನು ನಿರೂಪಿಸಿರುತ್ತದೆ. ಇದಲ್ಲದೆ ಶಾಂಕರಭಾಷ್ಯವು ಬರಿಯ ತರ್ಕವಾದ ಗಳ ಗ್ರಂಥವಲ್ಲ, ನಮ್ಮ ಜೀವನಕ್ಕೆ ಅತ್ಯವಶ್ಯವಾಗಿಬೇಕಾಗಿರುವ ಅನೇಕ ಉತ್ತಮ ವಿಚಾರಗಳ ಶ್ರೇಷ್ಠರತ್ನಭಂಡಾರವಾಗಿದೆ ಎಂಬುದನ್ನೂ ಸಹ ಈ ಚಿಕ್ಕಗ್ರಂಥದಲ್ಲಿ ತೋರಿಸಿಕೊಡಲು ಪ್ರಯತ್ನಿಸಿರುತ್ತದೆ. ಜೀವನಕ್ಕೆ ಸುಖಶಾಂತಿಗಳನ್ನೀಯಬಲ್ಲ ಭಕ್ತಿ ವೈರಾಗ್ಯ, ಜ್ಞಾನ, ಕರ್ಮ, ಯೋಗ – ಮುಂತಾದ ಅನೇಕ ವಿಚಾರಗಳು ಭಾಷ್ಯದಲ್ಲಿವೆ. ಆಚಾರ್ಯರ ವ್ಯಕ್ತಿಚಿತ್ರಣವೂ ಇದರಲ್ಲಡಗಿದೆ. ಇನ್ನು ಮುಂದೆ 'ಶಂಕರಸಿದ್ಧಾಂತ ಸಂಸ್ಮರಣ' ಎಂಬ ಹೆಸರಿನ ಗ್ರಂಥವನ್ನು ಭಾಗ ಭಾಗವಾಗಿ ಹೊರಡಿಸಿ ವೇದಾಂತ ಸಿದ್ಧಾಂತದ ಒಂದೊಂದೇ ವಿಷಯಗಳಮೇಲೆ ಭಾಷ್ಯಕಾರರು ಹೇಗೆಹೇಗೆ ಹೇಳು ತ್ತಾರೆ?– ಎಂಬುದನ್ನೂ ಜಿಜ್ಞಾಸುಗಳಿಗೆ ತಿಳಿಸಬೇಕೆಂಬ ಸಂಕಲ್ಪವಿದೆ. ಶ್ರೀಶಂಕರ ಭಗವತ್ಪಾದರ ಅನುಗ್ರಹದಿಂದಲೇ ಈ ಕಾರ್ಯವಾಗಬೇಕೆಂದು ಭಾವಿಸುತ್ತೇನೆ.

## ನಾಡಿನ ಕೀರ್ತಿ

ಸಾವಿರಾರುವರ್ಷಗಳಿಂದಲೂ ನಮ್ಮೀ ಜಗತ್ತು ಶ್ರೀಶಂಕರಾಚಾರ್ಯರ ಬಗೆಗೆ, ಅವರ ಸಿದ್ಧಾಂತತತ್ತ್ವನಿರೂಪಣೆಯ ಬಗೆಗೆ ತಳೆದಿದ್ದ ಗ್ರಹಿಕೆಗಳನ್ನೆಲ್ಲ ಪರಿಶೀಲಿಸಿ ನೇರಾದ ಭಾಷ್ಯಾಭ್ಯಾಸದ ಒರೆಗಲ್ಲಿಗೆ ಅವುಗಳನ್ನು ತಿಕ್ಕಿ ಪರಿಶುದ್ಧವಾದ ಶಾಂಕರ ಸಂಪ್ರದಾಯದ ಕೆಚ್ಚನ್ನು ಇಡೀ ಜಗತ್ತಿಗೇ ಮೊಟ್ಟಮೊದಲು ತೋರಿಸಿಕೊಟ್ಟ ಸತ್ಕೀರ್ತಿಯು ನಮ್ಮ ಕನ್ನಡನಾಡಿಗೆ – ಕರ್ನಾಟಕಕ್ಕೆ – ಅಥವಾ ವಿಶಾಲಮೈಸೂರಿಗೆ ಪ್ರಾಪ್ತವಾಗಿದೆ. ಇದೊಂದು ನಮ್ಮ ದೇಶದ ಮೊದಲಭಾಗ್ಯ.

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ತಮ್ಮ ಪೂರ್ವಾ ಶ್ರಮದಲ್ಲಿಯೇ ಶ್ರೀ ॥ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರಿಂದ ಪ್ರಭಾವಿತರಾಗಿ ಪ್ರಸ್ಥಾನತ್ರಯಭಾಷ್ಯಕ್ಕೂ ವ್ಯಾಖ್ಯಾನಪ್ರಸ್ಥಾನಗಳಿಗೂ ಇರುವ ವ್ಯತ್ಯಾಸವನ್ನು ಗುರುತಿಸಿ ಆಗಲೇ ಸಂಸ್ಕೃತದಲ್ಲಿ ಗ್ರಂಥರಚನೆಮಾಡಿ ಅಲ್ಲಿಂದ ಮುಂದಕ್ಕೆ ಪರಿಶೋಧನೆಯ ಕಾರ್ಯವನ್ನು ಮುಂದುವರಿಸುತ್ತಾ ಬಂದು ಭಾಷ್ಯಗಳ ಸಂಪೂರ್ಣ ಕನ್ನಡ ಅನುವಾದ ಮತ್ತು ಅನೇಕ ಗ್ರಂಥಗಳ ರಚನೆಯ ಮಹಾಕಾರ್ಯವನ್ನು ಹೊಳೆನರಸೀಪುರದ ಅಧ್ಯಾತ್ಮಪ್ರಕಾಶಕಾರ್ಯಾಲಯದ ಮೂಲಕ ನೆರವೇರಿಸಿದ್ದಾರೆ. ಇದಲ್ಲದೆ ಬ್ರಹ್ಮ ಸೂತ್ರಗಳ ಅಧ್ಯಾಸಭಾಷ್ಯವನ್ನೊಳಗೊಂಡು ನಾಲ್ಕು ಸೂತ್ರಗಳಿಗೂ ಸಂಸ್ಕೃತದಲ್ಲಿ ನೂತನವ್ಯಾಖ್ಯಾನಗಳನ್ನು ರಚಿಸಿ ಶುದ್ಧಶಾಂಕರಪ್ರಕ್ರಿಯೆಯ ಮರ್ಮವನ್ನು ಬಿಚ್ಚಿ ತೋರಿಸಿದ್ದಾರೆ. 'ಮಾಂಡೂಕ್ಯರಹಸ್ಯ ವಿವೃತಿಃ', ಬ್ರಹ್ಮವಿದ್ಯಾರಹಸ್ಯವಿವೃತಿಃ'

ಮುಂತಾದವುಗಳನ್ನೂ 'ಗೀತಾಶಾಸ್ತ್ರಾರ್ಥವಿವೇಕಃ' ಎಂಬ ಗ್ರಂಥವನ್ನೂ ಸಂಸ್ಕೃತದಲ್ಲಿ ರಚಿಸಿ ಪ್ರಸ್ಥಾನತ್ರಯಗಳ ಬಗ್ಗೆಯೂ ಜಿಜ್ಞಾಸುಗಳಿಗೆ ಹೊಸಬೆಳಕನ್ನು ಈ ತಮ್ಮ ಮೇರುಕೃತಿಗಳ ಮೂಲಕ ನೀಡಿದ್ದಾರೆ. ಈಚೆಗೆ ಇಂಗ್ಲಿಷಿನಲ್ಲಿಯೂ ಗ್ರಂಥಗಳನ್ನು ರಚಿಸಿ ಪರದೇಶೀಯರಿಗೂ ಕೂಡ ಶುದ್ಧಶಾಂಕರತತ್ತ್ವದ ಬಗ್ಗೆ ಹೊಸದೃಷ್ಟಿಯನ್ನು ನೀಡಿದ್ದಾರೆ. ಹೀಗೆ ಈ ಕ್ರಾಂತಿಕಾರಿಯುಗಪುರುಷರು ಅಪರ ಶಂಕರಾಚಾರ್ಯರೆನಿಸಿ ನಮ್ಮ ಕನ್ನಡನಾಡಿನಲ್ಲಿಯೇ ಅವತರಿಸಿದ್ದರಿಂದ ನಮ್ಮೆಲ್ಲರಿಗೂ ಇವರ ಸಾನ್ನಿಧ್ಯದ ಮೂಲಕ ಶುದ್ಧಶಾಂಕರಪ್ರಕ್ರಿಯೆಯ ಅರಿವಾಗಲು ಅನುಕೂಲವಾಯಿತು.

ಕನ್ನಡನಾಡಿನ, ಭಾರತದೇಶದ ಕೀರ್ತಿಕಲಶವನ್ನು ಬೆಳಗಿದ ಅನೇಕ ವಿಭೂತಿ ರತ್ನಗಳ ಮಾಲಿಕೆಯಲ್ಲಿ ಶ್ರೀಶ್ರೀಗಳವರ ಹೆಸರು ಚೂಡಾಮಣಿಯಂತೆ ಶೋಭಿಸುತ್ತಿರುವದರಲ್ಲಿ ಸಂಶಯವೇ ಇಲ್ಲ. ಇಡೀ ವಿಶ್ವಕ್ಕೇ ಇವರು ತೋರಿರುವ ಹೊಸಬೆಳಕು ಈಗೀಗ ಎಲ್ಲಾ ಕಡೆಗೂ ಹರಡುತ್ತಿದೆ.

## ಉಪಸಂಹಾರ

ಇನ್ನು ಮುಂದಾದರೂ **ಶಾಸ್ತ್ರಂ ಶಾರೀರಮೀಮಾಂಸಾ, ಆಚಾರ್ಯಾಃ ಶಂಕರಾಚಾರ್ಯಾಃ** ಎಂಬ ಸಾಂಪ್ರದಾಯಿಕರ ವಚನವು ಅಕ್ಷರಶಃ ನಿಜವಾಗಲಿ ! ಶಾಸ್ತ್ರ ಎಂಬ ಶಬ್ದಕ್ಕೆ ಹತ್ತಿದ ಕಲಂಕವು ತೊಲಗಲಿ ! ಶಾಸ್ತ್ರೋಕ್ತಜ್ಞಾನ–ಉಪಾಸನೆ – ಶಾಸ್ತ್ರೋಕ್ತ ಆಚರಣೆಗಳು ನಮ್ಮ ಭಾರತಭೂಮಿಯಲ್ಲಿ ಬೇರೂರಲಿ ; ಶಾಸ್ತ್ರವು ತೋರಿಸಿಕೊಡುವ ಸಾರ್ವತ್ರಿಕಪೂರ್ಣಾನುಭವದ ಸ್ವರೂಪದೆಡೆಗೆ ಇಡೀ ವಿಶ್ವದ ಮುಮುಕ್ಷುಗಳ ಗಮನವು ಹರಿಯಲಿ ! ಅದನ್ನು ತೋರಿಸಿಕೊಡುವ ಸದ್ಗುರುಗಳ ಉಪದೇಶಗಳಲ್ಲಿ ಭಕ್ತಿಶ್ರದ್ಧೆಗಳು ಹುಟ್ಟಲಿ !– ಎಂದು ಸರ್ವಾತ್ಮಸ್ವರೂಪರಾದ ಶ್ರೀಶಂಕರಭಗವತ್ಪಾದಾಚಾರ್ಯರ ಅಡಿದಾವರೆಗಳಿಗೆ ವಂದಿಸಿ ಬೇಡಿಕೊಳ್ಳುವೆನು.

ಉಪಾಸ್ಯನಾದ ಶ್ರೀದತ್ತಾತ್ರೇಯಸದ್ಗುರುವಿನ ಅನುಗ್ರಹದಿಂದಲೇ ಗ್ರಹಿಸಲ್ಪಟ್ಟ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರ ಉಪದೇಶಗಳನ್ನೇ ಆಧರಿಸಿ ಇಲ್ಲಿ ವಿಷಯಗಳನ್ನು ಪ್ರತಿಪಾದಿಸಿರುತ್ತದೆ. ಇದರಿಂದ ಕೆಲವು ಜಿಜ್ಞಾಸುಗಳಿಗಾದರೂ ಭಾಷ್ಯದಕಡೆಗೆ ಗಮನವು ಸೆಳೆಯಲ್ಪಟ್ಟು ಶ್ರೀಶಂಕರರನ್ನು ಕುರಿತಾದ ತಪ್ಪುಗ್ರಹಿಕೆಗಳು ತೊಲಗಿದರೆ ನನ್ನ ಈ ಶ್ರಮವು ಸಾರ್ಥಕವಾಯಿತೆಂದು ಭಾವಿಸುತ್ತೇನೆ.

॥ ಶ್ರೀಗುರುದೇವದತ್ತ॥

ತಾ ॥ 5–7–1970

–ದೇವರಾಯ ಕುಲಕರ್ಣಿ

------

# ವಿಷಯಾನುಕ್ರಮಣಿಕೆ

## ಶ್ರೀಶಂಕರಸಂಸ್ಮರಣ


ಸಾಮಾನ್ಯವಿಭಾಗ — ಪುಟ

ಗ್ರಂಥಸಾಹಿತ್ಯ ೧

ವಿಶೇಷವಿಭಾಗ

೧ ಭಾಷ್ಯರಚನೆಯ ಉದ್ದೇಶ ೫
೨ ವೇದಪ್ರಾಮಾಣ್ಯ ೮
೩ ಸಂನ್ಯಾಸ ೧೨
೪ ಯೋಗ ೧೪
೫ ಸಾಂಖ್ಯ ೧೭
೬ ಇತರ ದರ್ಶನಗಳು ೧೯
೭ ಪೂರ್ವಮೀಮಾಂಸೆ ೨೧
೮ ಪಾಶುಪತಭಾಗವತಮತಗಳು ೨೩
೯ ತರ್ಕ ೩೧
೧೦ ಭಕ್ತಿ ೩೪
೧೧ ದೇವತೆಗಳು ೩೮
೧೨ ದೈವವಾದ, ಪೌರುಷವಾದ ೩೯
೧೩ ಭೌತಿಕವಿಜ್ಞಾನ ೪೪
೧೪ ಮನೋವಿಶ್ಲೇಷಣೆ ೪೫
೧೫ ಶ್ರೀಶಂಕರರೂ ಪಾಶ್ಚಾತ್ಯದರ್ಶನಗಳೂ ೫೬
೧೬ ಸಾಪೇಕ್ಷವಾದ ೫೯
೧೭ ವ್ಯಕ್ತಿಚಿತ್ರಣ ೬೩
೧೮ ಪರಿಶಿಷ್ಟ ೬೯

## ಶ್ರೀಶಂಕರ ಸಿದ್ಧಾಂತ ಸಂಸ್ಮರಣ


| | | |
|---|---|---|
| ಪ್ರಕರಣ ಒಂದು : | (ಸಾಕ್ಷ್ಯನುಭವ ) | ಪುಟ |
| ೧ | ಶಾಂಕರವೇದಾಂತದ ಮರ್ಮ | ೯೩ |
| ೨ | ಅನುಭವ ಎಂದರೇನು ? | ೯೬ |
| ೩ | ಸಾಕ್ಷ್ಯನುಭವವು ಪ್ರಮಾಣಕ್ಕೆ ನಿಲುಕುವದಲ್ಲ | ೧೦೦ |
| ೪ | ಸಾಕ್ಷ್ಯನುಭವಕ್ಕೆ ಶಾಸ್ತ್ರವು ಪ್ರಮಾಣವು ಹೇಗೆ ? | ೧೦೩ |
| ೫ | ಸಾಕ್ಷ್ಯನುಭವದಲ್ಲಿ ತರ್ಕದ ಸ್ಥಾನ | ೧೦೬ |
| ೬ | ಸಾಕ್ಷ್ಯನುಭವವು ಸರ್ವವ್ಯಾಪಿ | ೧೦೮ |
| ೭ | ಸಾಕ್ಷಿಸ್ವರೂಪವು ಅದ್ವಿತೀಯ | ೧೧೧ |
| ೮ | ಸಾಕ್ಷಿಶಬ್ದವು ಸಾಪೇಕ್ಷ | ೧೧೬ |
| ೯ | ಸಾಕ್ಷಿಪ್ರತ್ಯಯವೂ ಸಾಪೇಕ್ಷ | ೧೨೧ |
| ೧೦ | ಸಾಕ್ಷಿಗಳು ಅನೇಕರಿಲ್ಲ | ೧೨೬ |
| ಪ್ರಕರಣ ಎರಡು : | ವೇದಾಂತ ಪ್ರಕ್ರಿಯೆ | |
| ೧ | ಅಧ್ಯಾರೋಪಾಪವಾದ | ೧೨೯ |
| ೨ | ಉದಾಹರಣೆಗಳು | ೧೩೨ |
| ೩ | ಈ ಪ್ರಕ್ರಿಯೆಯೇ ಏಕೆ ? | ೧೩೪ |
| ೪ | ಪ್ರಕ್ರಿಯೆಯ ಪ್ರಕಾರಗಳು | ೧೩೭ |
| ೫ | ಸಂಪ್ರದಾಯದ ಅವನತಿ | ೧೩೮ |
| ಪ್ರಕರಣ ಮೂರು : | ವಸ್ತುತಂತ್ರ – ಕರ್ತೃತಂತ್ರ | |
| ೧ | ಅವನತಿಗೆ ಕಾರಣ | ೧೪೦ |
| ೨ | ವಸ್ತುತಂತ್ರ ಹಾಗೂ ಕರ್ತೃತಂತ್ರಗಳಲ್ಲಿರುವ ವ್ಯತ್ಯಾಸ | ೧೪೧ |
| ೩ | ವಸ್ತುತಂತ್ರಬೋಧೆ | ೧೪೩ |
| ೪ | ಈಗಿನ ಬೋಧಪದ್ಧತಿ | ೧೪೬ |
| ೫ | ಇದರಲ್ಲಿಯ ದೋಷಗಳು | ೧೪೭ |
| ಪ್ರಕರಣ ನಾಲ್ಕು : | ಎರಡು ದೃಷ್ಟಿಗಳು | |
| ೧ | ವ್ಯವಹಾರ ದೃಷ್ಟಿ | ೧೫೫ |
| ೨ | ಪರಮಾರ್ಥ ದೃಷ್ಟಿ | ೧೫೬ |
| ೩ | ಭಾಷ್ಯಕಾರರ ಬೋಧೆ | ೧೫೮ |
| ೪ | ಎರಡು ಉದಾಹರಣೆಗಳು | ೧೬೦ |
| ೫ | ತಿಳಿಯುವದೆಂದರೇನು ? | ೧೬೬ |
| ೬ | ಉಪಸಂಹಾರ | ೧೬೭ |

# ಸಂಕೇತಗಳ ವಿವರ

| | |
|---|---|
| ಅ. | ಅಧ್ಯಾಯ |
| ಅ. ಭಾ. : ಅಧ್ಯಾ. ಭಾ. | ಅಧ್ಯಾಸಭಾಷ್ಯ |
| ಕಾ. | ಕಾಠಕೋಪನಿಷತ್ತು |
| ಗೀ. | ಭಗವದ್ಗೀತೆ |
| ಗೀ. ಅವ. | ಗೀತೆಯ ಅವತರಣಿಕೆ |
| ಗೀ. ಭಾ. | ಗೀತಾಭಾಷ್ಯ |
| ಛಾಂ. | ಛಾಂದೋಗ್ಯೋಪನಿಷತ್ತು |
| ಛಾಂ. ಅವ. | ಛಾಂದೋಗ್ಯ ಅವತರಣಿಕೆ |
| ಛಾಂ. ಭಾ. | ಛಾಂದೋಗ್ಯೋಪನಿಷತ್ತಿನ ಭಾಷ್ಯ |
| ತೈ. | ತೈತ್ತಿರೀಯೋಪನಿಷತ್ತು |
| ತೈ. ಅವ. | ತೈತ್ತಿರೀಯ ಅವತರಣಿಕೆ |
| ತೈ. ಭಾ. | ತೈತ್ತಿರೀಯೋಪನಿಷತ್ತಿನ ಭಾಷ್ಯ |
| ಪ್ರ. | ಪ್ರಶ್ನೋಪನಿಷತ್ತು |
| ಪ್ರ. ಭಾ. | ಪ್ರಶ್ನೋಪನಿಷತ್ತಿನ ಭಾಷ್ಯ |
| ಭಾ. ಭಾ. | ಭಾಷ್ಯಭಾಗ |
| ಬೃ. | ಬೃಹದಾರಣ್ಯಕೋಪನಿಷತ್ತು |
| ಬೃ. ಭಾ. | ಬೃಹದಾರಣ್ಯಕೋಪನಿಷತ್ತಿನ ಭಾಷ್ಯ |
| ಮಾಂ. ಕಾ. | ಮಾಂಡೂಕ್ಯ ಕಾರಿಕೆ |
| ಮುಂ. | ಮುಂಡಕೋಪನಿಷತ್ತು |
| ಮುಂ. ಭಾ. | ಮುಂಡಕೋಪನಿಷತ್ತಿನ ಭಾಷ್ಯ |
| ಸೂ. ಭಾ. | ಬ್ರಹ್ಮಸೂತ್ರಭಾಷ್ಯ |

——————

# ಶಂಕರ ಸಂಸ್ಮರಣ

## ಗ್ರಂಥಪ್ರಕಟನೆಗೆ ಸಹಾಯಮಾಡಿದ ಮಹನೀಯರುಗಳು

ಶ್ರೀಯುತರುಗಳಾದ

| | | | | |
|---|---|---|---|---|
| 1. | ಟಿ. ಆರ್. ಚಂದ್ರಶೇಖರ್ | ಬೆಂಗಳೂರು | 10,000 | ರೂ. |
| 2. | ಅಧ್ಯಾತ್ಮ ಪ್ರಚಾರ ಸಮಿತಿ | ” | 3,500 | ” |
| 3. | ಶ್ರೀಶ್ರೀಶ್ರೀ ವಿಷ್ಣುಪಾದಸ್ವಾಮೀಜಿ<br>ಶ್ರೀ ಶಂಕರಭಗವತ್ಪಾದಾಶ್ರಮ,<br>ಸೀಗೇಹಳ್ಳಿ, ಬೆಂಗಳೂರು ದಕ್ಷಿಣ. | ” | 3,000 | ” |
| 4. | ಅಂತರಂಗ ಭಕ್ತರು | ” | 2,000 | ” |
| 5. | ಅಂತರಂಗ ಭಕ್ತರು | ” | 1,008 | ” |
| 6. | ಶ್ರೀ ನಾರಾಯಣಪಾದ ಸ್ವಾಮೀಜಿ | ಕನ್ನಮಂಗಲ | 1,001 | ” |
| 7. | ಡಾ॥ ಜೆ. ವಿ. ಪೂರ್ಣಚಂದ್ರರಾವ್ | ಗುಂಟೂರು (A.P) | 1,000 | ” |
| 8. | ಡಾ॥ ಜೆ. ಹನುಮಂತರಾವ್ | ನರಸರಾವ್‌ಪೇಟೆ | 1,000 | ” |
| 9. | ಕೆ. ಟಿ. ಅನಂತಸುಬ್ಬರಾವ್ | ಬೆಂಗಳೂರು | 1,000 | ” |
| 10. | ಎಂ. ರಾಘವೇಂದ್ರ | ಸ್ವಿಡ್ಜರ್‌ಲೆಂಡ್ | 1,000 | ” |
| 11. | ಶ್ರೀಮತಿ ವಿಜಯಾ ನಾಗರಾಜ್‌ರಾವ್ | ಬೆಂಗಳೂರು | 750 | ” |
| 12. | ಎಂ. ವಿ. ರಾಮಚಂದ್ರ ಮತ್ತು ಬಂಧುಗಳು | ” | 520 | ” |
| 13. | ಕೆ. ಸತ್ಯನಾರಾಯಣ | ” | 501 | ” |
| 14. | ಡಾ॥ ಹೆಚ್. ಎನ್. ರಾಜಾರಾವ್ | ” | 501 | ” |
| 15. | ಶ್ರೀಪಾದ ಡಿ. ಕುಲಕರ್ಣಿ | ” | 501 | ” |
| 16. | ಶಂಕರಜಯಂತಿ ಮಂಡಳಿ, ಜಯನಗರ | ” | 500 | ” |
| 17. | ನ್ಯೂ ಮಾಡ್ರನ್ ಹೋಟೆಲ್, ವಿಶ್ವೇಶ್ವರಪುರಮ್ | ” | 251 | ” |
| 18. | ಶಿವರಾಮ್ ಡಿ. ಕುಲಕರ್ಣಿ | ” | 251 | ” |

–ಮುಂದುವರೆದಿದೆ

| | | | |
|---|---|---|---|
| 19. | ಡಾ|| ಹೆಚ್. ಎ. ನಾರಾಯಣಿ | ಬೆಂಗಳೂರು | 251 ರೂ. |
| 20. | ಶ್ರೀಮತಿ ಎಸ್. ಆರ್. ಶಾರದಮ್ಮ | ,, | 251 ,, |
| 21. | ಡಾ|| ಬಿ. ಕೆ. ಅನಂತರಾಮಯ್ಯ | ಮುಂಬಯಿ | 251 ,, |
| 22. | ಆರ್. ಡಿ. ವಾಸುದೇವಯ್ಯ | ಬೆಂಗಳೂರು | 251 ,, |
| 23. | ಬಿ. ಪಿ. ಶ್ರೀನಿವಾಸಮೂರ್ತಿ (ಯಲಹಂಕ) | ,, | 251 ,, |
| 24. | ಆರ್. ಬಿ. ಗೋಪೀನಾಥ್ | ,, | 251 ,, |
| 25. | ಶ್ರೀಮತಿ ಎ. ಎಸ್. ನಾಗಮ್ಮ | ,, | 251 ,, |
| 26. | ಪಿ. ಲಿಂಗಣ್ಣ | ,, | 251 ,, |
| 27. | ಜಿ. ಎಸ್. ಸೌಮ್ಯ ಸ್ವರೂಪ್ (ತಂದೆ ದಿ|| ಎಸ್.ಜಿ. ಶ್ರೀನಿವಾಸನ್‌ರ ಸ್ಮರಣಾರ್ಥ) | ,, | 251 ,, |
| 28. | ಶಕುಂತಳಾ ತಾ. ರಾ. ನಾಗರಾಜ್ | ,, | 251 ,, |
| 29. | ಶ್ರೀಮತಿ ಎಸ್. ವಿ. ಅರುಂಧತಿ ಗುಪ್ತ | ,, | 251 ,, |
| 30. | ಶ್ರೀಮತಿ ಓ. ಆರ್. ಲಲಿತಮ್ಮ | ಮದನಪಲ್ಲಿ | 251 ,, |
| 31. | ಜಿ. ಎ. ಸೂರ್ಯನಾರಾಯಣ | ಬೆಂಗಳೂರು | 250 ,, |
| 32. | ಎಸ್. ಎಲ್. ವೆಂಕಟೇಶ್ | ,, | 250 ,, |
| | | ಒಟ್ಟು | 31,796 ,, |

ಮೇಲ್ಕಂಡ ದಾನಿಗಳಿಗೆಲ್ಲ ಕಾರ್ಯಾಲಯದ ಕೃತಜ್ಞತಾಪೂರ್ವಕವಾದ ವಂದನೆಗಳು.

---

|| ಓಂ ||

|| ಶ್ರೀಶಂಕರಾಚಾರ್ಯ ಸದ್ಗುರವೇ ನಮಃ ||

# ಶಂಕರಸಂಸ್ಮರಣ

## ಸಾಮಾನ್ಯವಿಭಾಗ

### ಗ್ರಂಥಸಾಹಿತ್ಯ

**ಪ್ರಶ್ನೆ :– ಶ್ರೀಶಂಕರಭಗವತ್ಪಾದರ ವಿಷಯಕವಾದ ಸಾಹಿತ್ಯಗಳಾವವು ?**

ಉತ್ತರ :– ಶ್ರೀಶಂಕರರ ಬಗ್ಗೆ ಇರುವ ಸಾಹಿತ್ಯದಲ್ಲಿ ಚರಿತ್ರಭಾಗ, ತತ್ತ್ವಭಾಗ– ಎಂಬ ಎರಡು ಭಾಗಗಳಿದ್ದು ಎರಡನೆಯದಾದ ತತ್ತ್ವಭಾಗದಲ್ಲಿ ಪುನಃ ನಾಲ್ಕು ವಿಭಾಗಗಳಿರುತ್ತವೆ.

**ಪ್ರಶ್ನೆ :– ಚರಿತ್ರಭಾಗದ ಸಾಹಿತ್ಯದಲ್ಲಿ ಮುಖ್ಯವಾದವುಗಳು ಯಾವವು ?**

ಉತ್ತರ :– ''ಶಂಕರದಿಗ್ವಿಜಯ''ಗಳೆಂದು ಕರೆಯುವ ಹತ್ತುಹನ್ನೆರಡು ಸಂಸ್ಕೃತ ಕಾವ್ಯಗ್ರಂಥಗಳು, ಹಾಗೂ ಶ್ರೀಶಂಕರರಿಂದ ಸ್ಥಾಪಿತವಾದವುಗಳೆನ್ನಲಾಗುವ ಭಾರತ ದೇಶದಲ್ಲಿರುವ ಮಠಗಳವರಿಗೆ ಪ್ರಮಾಣಗಳೆನಿಸಿದ ಆಮ್ನಾಯಗಳು ಮತ್ತು ಇತ್ತೀಚೆಗೆ ಶ್ರೀಬಲದೇವ ಉಪಾಧ್ಯಾಯರಂಥ ಕೆಲವು ಸಂಶೋಧಕರು ಬೇರೆಬೇರೆ ಭಾಷೆಗಳಲ್ಲಿ ಪ್ರಕಟಿಸಿರುವ ಶ್ರೀಶಂಕರಾಚಾರ್ಯರ ಬಗೆಗಿನ ಗ್ರಂಥಗಳು.

**ಪ್ರಶ್ನೆ :–ಇವುಗಳೆಲ್ಲವೂ ಏಕಾಭಿಪ್ರಾಯವುಳ್ಳವುಗಳಾಗಿವೆಯೆ ?**

ಉತ್ತರ :– ಇಲ್ಲ, ತುಂಬಾ ಭಿನ್ನಾಭಿಪ್ರಾಯಗಳುಳ್ಳವುಗಳಾಗಿವೆ. ಅಲ್ಲದೆ ಪರಸ್ಪರ ವಿರುದ್ಧಾಭಿಪ್ರಾಯಗಳಿಂದಲೂ ಕೂಡಿವೆ. ದಿಗ್ವಿಜಯಗಳು ಶಂಕರರು ಆಗಿ ಹೋದ ಸಾವಿರಾರು ವರ್ಷಗಳ ನಂತರ ಈಚೆಗೆ ಪಂಡಿತರಿಂದ ರಚಿಸಲ್ಪಟ್ಟ ಕಾವ್ಯಗಳಾಗಿವೆಯೆಂದು ಖಂಡಿತವಾಗಿ ಹೇಳಬಹುದು. ಮಠಾಮ್ನಾಯಗಳೂ ಕೂಡ ಆಚಾರ್ಯರ ಕಾಲದವಲ್ಲ.

**ಪ್ರಶ್ನೆ :– ಹಾಗಾದರೆ ಇವುಗಳಿಂದ ಅವಿರೋಧವಾದ ಅಭಿಪ್ರಾಯಗಳನ್ನು ಸಂಗ್ರಹಿಸಿ ಒಂದು ನಿರ್ಣಯಕ್ಕೆ ಬರುವದು ಹೇಗೆ ?**

ಉತ್ತರ :– ''ಶ್ರೀಶಂಕರಭಗವತ್ಪಾದವೃತ್ತಾಂತಸಾರಸರ್ವಸ್ವ'' ಎಂಬ ಗ್ರಂಥ ವನ್ನು ನೋಡಬೇಕು. ಅದರಲ್ಲಿರುವ ವಿಮರ್ಶೆಯಿಂದ ಭಗವತ್ಪಾದರ ಬಗ್ಗೆ ಗ್ರಹಿಸ

ಬೇಕಾದ ವಿಷಯಗಳ ಕಲ್ಪನೆಯು ಬರುತ್ತದೆ. ಈ ಗ್ರಂಥವು ಹೊಳೆನರಸೀಪುರದ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ದೊರೆಯುತ್ತದೆ.

**ಪ್ರಶ್ನೆ :— ತತ್ತ್ವಭಾಗದಲ್ಲಿ ನಾಲ್ಕು ಭಾಗಗಳು ಯಾವವು ?**

ಉತ್ತರ :— ಶ್ರೀಶಂಕರಭಗವತ್ಪಾದರೇ (ಆದ್ಯಶಂಕರರೇ) ಬರೆದವುಗಳೆಂದು ಸರ್ವರೂ ಒಪ್ಪಿರುವ ಹಾಗೂ ಮುಂದಿನ ಮೂರು ಭಾಗಗಳ ಗ್ರಂಥರಚನೆಗೂ ಬುನಾದಿಯಾಗಿರುವ ''ಪ್ರಸ್ಥಾನತ್ರಯಭಾಷ್ಯ''ಗಳು ಮೊದಲನೆಯ ಭಾಗ. ಇದೇ ಮಹತ್ತ್ವದ ಭಾಗವಾಗಿದ್ದು ಶ್ರೀಶಂಕರರನ್ನು ಮೊದಲು ಇದರ ಆಧಾರದಿಂದ ಅರಿತು ಕೊಂಡನಂತರವೇ ಮಿಕ್ಕವುಗಳನ್ನು ತುಲನಾತ್ಮಕದೃಷ್ಟಿಯಿಂದ ಅಭ್ಯಾಸಮಾಡಬೇಕು. ಆಗ ನಿಜವಾದ ಶಾಂಕರತತ್ತ್ವ, ಶಂಕರರ ಅಭಿಪ್ರಾಯ ಮತ್ತು ವ್ಯಕ್ತಿಚಿತ್ರಣದ ಕೆಲವು ಅಂಶಗಳೂ ಸಹ ಗೊತ್ತಾಗುತ್ತವೆ.

**ಪ್ರಶ್ನೆ :— ಎರಡನೆಯ ಭಾಗವಾವುದು ?**

ಉತ್ತರ :— ಭಾಷ್ಯಗಳ ಅಭಿಪ್ರಾಯವನ್ನು ವಿವರಿಸಲು ಹೊರಟಿರುವ ವಾರ್ತಿಕ ಹಾಗೂ ವ್ಯಾಖ್ಯಾನಗಳು.

**ಪ್ರಶ್ನೆ :— ವಾರ್ತಿಕ ಎಂದರೇನು ?**

ಉತ್ತರ :— ಹೇಳಿದ್ದನ್ನು ವಿವರಿಸಿ ಹೇಳುವ, ಹೇಳದಿದ್ದುದನ್ನು ಸೂಚಿಸುವ, ಕಠಿನವಾಗಿಹೇಳಿದ್ದನ್ನು ಹಗುರಾಗಿ ತಿಳಿಸುವ ವ್ಯಾಖ್ಯಾನಕ್ಕೆ ವಾರ್ತಿಕವೆನ್ನುವರು.

**ಪ್ರಶ್ನೆ :— ಆಚಾರ್ಯರ ಭಾಷ್ಯಕ್ಕಿರುವ ವಾರ್ತಿಕವಾವುದು ?**

ಉತ್ತರ :— ಶ್ರೀಶಂಕರ ಪಾದಸೇವೆಯನ್ನು ಮಾಡಿ ಈ ವಿದ್ಯೆಯನ್ನು ಪಡೆದಿರುವೆ ನೆಂದು ಸ್ಪಷ್ಟವಾಗಿ ಹೇಳಿರುವ ಶ್ರೀಸುರೇಶ್ವರಾಚಾರ್ಯರೆಂಬವರು ಆಚಾರ್ಯರ ತೈತ್ತಿರೀಯ ಹಾಗೂ ಬೃಹದಾರಣ್ಯಕಭಾಷ್ಯಗಳಿಗೆ ವಾರ್ತಿಕವನ್ನು ಬರೆದಿದ್ದಾರೆ. ಇದಲ್ಲದೆ 'ನೈಷ್ಕರ್ಮ್ಯಸಿದ್ಧಿ' ಎಂಬ ಸ್ವತಂತ್ರಗ್ರಂಥವನ್ನೂ ಇವರು ರಚಿಸಿದ್ದಾರೆ. ಈ ಮೂರೂ ಸೇರಿ 'ವಾರ್ತಿಕಪ್ರಸ್ಥಾನ' ಎನಿಸಿಕೊಳ್ಳುತ್ತದೆ.

**ಪ್ರಶ್ನೆ :— ಇದು ಶ್ರೀಶಂಕರರ ಭಾಷ್ಯಕ್ಕೆ ಅನುಗುಣವಾಗಿಯೇ ಇದೆಯಷ್ಟೆ ?**

ಉತ್ತರ :— ಓಹೋ ! ಸಂಶಯವೇನು ? ಶಂಕರರ ಅಭಿಪ್ರಾಯವನ್ನೇ ಇದು ಸ್ಪಷ್ಟವಾಗಿ ತಿಳಿಸುತ್ತದೆ. ಎಲ್ಲೂ ಭಿನ್ನಾಬಿಪ್ರಾಯವಿಲ್ಲ.

**ಪ್ರಶ್ನೆ :— ಇನ್ನು ವ್ಯಾಖ್ಯಾನಗಳೆಂದರೆ ಯಾವವು ?**

ಉತ್ತರ :— ಭಾಷ್ಯದಮೇಲೆ ಶ್ರೀಸುರೇಶ್ವರರ ಅನಂತರ ಬರೆಯಲ್ಪಟ್ಟ 'ಪಂಚಪಾದಿಕೆ' ಮತ್ತು 'ಭಾಮತೀ' ಎಂಬ ಎರಡು ಟೀಕೆಗಳು.

**ಪ್ರಶ್ನೆ :– ಇವೂ ಸಹ ಭಾಷ್ಯಾಭಿಪ್ರಾಯವನ್ನು ಸರಿಯಾಗಿಯೇ ವಿವರಿಸುತ್ತವೆಯಲ್ಲವೆ ?**

ಉತ್ತರ :– ಇಲ್ಲ, ಹಾಗೆ ಹೇಳಲು ಬರುವದಿಲ್ಲ. ಒಟ್ಟಿನಲ್ಲಿ ಅದ್ವೈತವನ್ನೇ ಒಪ್ಪುತ್ತಿದ್ದರೂ ಪರಸ್ಪರಭಿನ್ನವಾದ ಹಾಗೂ ಭಾಷ್ಯಬಾಹಿರವಾದ ಪ್ರಕ್ರಿಯೆಗಳನ್ನು ಬಳಸಿಕೊಂಡು ಅವುಗಳನ್ನೇ ಭಾಷ್ಯವಾಕ್ಯಗಳಲ್ಲಿಯೂ ತೋರಿಸಿಕೊಡುವ ಸಾಹಸವು ಇವುಗಳಲ್ಲಿ ಕಾಣುತ್ತದೆ.

**ಪ್ರಶ್ನೆ :– ಇವುಗಳ ಕರ್ತರಾರು ?**

ಉತ್ತರ :– ಪಂಚಪಾದಿಕೆಯು 'ಪದ್ಮಪಾದ'ರೆಂಬ ಶಂಕರಾಚಾರ್ಯರ ಶಿಷ್ಯರೊಬ್ಬರು ಬರೆದದ್ದೆಂದು ಜನಜನಿತವಾಗಿದೆ. ಆದರೆ ಆ ಗ್ರಂಥದಲ್ಲಿ ಹಾಗಿಲ್ಲ. ಅದರ ಕರ್ತರಾರೆಂಬ ಉಲ್ಲೇಖವೇ ಅಲ್ಲಿಲ್ಲ. ಅಲ್ಲದೆ ಆ ಗ್ರಂಥಕ್ಕೆ 'ವಿವರಣ' ಎಂಬ ಹೆಸರಿನ ಉಪವ್ಯಾಖ್ಯಾನವನ್ನು ಬರೆದಿರುವ ಪ್ರಕಾಶಾತ್ಮಯತಿಗಳೂ ಅದು ಪದ್ಮಪಾದಕೃತವೆಂದು ಹೇಳಿಲ್ಲ. ಇನ್ನು ಭಾಮತೀವ್ಯಾಖ್ಯಾನವನ್ನು 'ವಾಚಸ್ಪತಿಮಿಶ್ರ'ರೆಂಬುವರು ಬರೆದಿದ್ದಾರೆ. ಇದರಮೇಲೆ 'ಕಲ್ಪತರು' ಎಂಬ ಉಪವ್ಯಾಖ್ಯಾನವಿದೆ. ಹೀಗೆಯೇ 'ರತ್ನಪ್ರಭಾ' ಮುಂತಾದ ಇನ್ನೂ ಅನೇಕ ಭಾಷ್ಯವ್ಯಾಖ್ಯಾನಗಳೂ ಇವೆ. ಇವೆಲ್ಲವುಗಳನ್ನೂ ವ್ಯಾಖ್ಯಾನ ಪ್ರಸ್ಥಾನಗಳೆನ್ನಬಹುದು. ಇದೇ ಎರಡನೆಯ ಭಾಗ.

**ಪ್ರಶ್ನೆ :– ಇನ್ನು ಮೂರನೆಯ ಭಾಗವಾವುದು ?**

ಉತ್ತರ :– ಶ್ರೀಶಂಕರರಿಂದಲೇ ರಚಿಸಲ್ಪಟ್ಟಿವೆಯೆಂದು ಹೇಳಲಾಗುವ ಉಪದೇಶಸಾಹಸ್ರಿ, ವಿವೇಕಚೂಡಾಮಣಿ, ಅಪರೋಕ್ಷಾನುಭೂತಿ, ಶತಶ್ಲೋಕಿ – ಮುಂತಾದ ನೂರಾರು ಪ್ರಕರಣಗ್ರಂಥಗಳು.

**ಪ್ರಶ್ನೆ :– ಇವುಗಳಾದರೂ ಮೂಲಭಾಷ್ಯಾಭಿಪ್ರಾಯಕ್ಕೆ ಹೊಂದಿಕೆಯಾಗಿವೆಯೆ?**

ಉತ್ತರ :– 'ಉಪದೇಶಸಾಹಸ್ರಿ' ಎಂಬುದೊಂದು ಮಾತ್ರ ಭಾಷ್ಯಗಳಿಗೆ ಹೊಂದಿಕೆಯಾಗಿದೆ. ಮಿಕ್ಕವುಗಳು ವ್ಯಾಖ್ಯಾನಪ್ರಸ್ಥಾನಗಳ ಜಾಡನ್ನು ಅನುಸರಿಸಿರುವದರಿಂದ ಅವು ಆಚಾರ್ಯಕೃತವೆಂದು ಹೇಳುವದಕ್ಕೆ ಬರುವಂತಿಲ್ಲ. ಅವರ ಅನಂತರ ಪೀಠಕ್ಕೆ ಬಂದವರೆಲ್ಲರಿಗೂ ಶಂಕರಾಚಾರ್ಯರೆಂದೇ ಗೌರವದ ಹೆಸರಿರುವದರಿಂದ ಅವರಲ್ಲನೇಕರು ಇವುಗಳನ್ನು ರಚಿಸಿರಬಹುದಾಗಿದೆ. ಇದರಂತೆ ಆಚಾರ್ಯರ ಹೆಸರಿನಲ್ಲಿರುವ ಅನೇಕ ಸ್ತೋತ್ರಗಳೂ ಕಾಲಕಾಲಕ್ಕೆ ಬಂದ ಪೀಠಸ್ಥಶಂಕರರ ಕೃತಿಗಳೇ ಆಗಿರಬೇಕೆಂದು ಊಹಿಸುವದಕ್ಕೂ ಬಲವಾದ ಆಧಾರಗಳಿರುತ್ತವೆ. ಹೀಗೆ ಪ್ರಕರಣಗ್ರಂಥಗಳೂ ಸ್ತೋತ್ರಾದಿಗಳೂ ಮೂರನೆಯ ಭಾಗಕ್ಕೆ ಸೇರಿದವುಗಳಾಗಿವೆ.

**ಪ್ರಶ್ನೆ :– ನಾಲ್ಕನೆಯ ಭಾಗದ ಸಾಹಿತ್ಯವಾವುದು ?**

ಉತ್ತರ :– ವ್ಯಾಖ್ಯಾನಪ್ರಸ್ಥಾನಗಳ ಅನಂತರ ಅದ್ವೈತತತ್ತ್ವದ ಮೇಲೆ ಬೇರೆಬೇರೆ ಪಂಡಿತರೂ ಯತಿಗಳೂ ಬರೆದ ಅನೇಕ ಸ್ವತಂತ್ರಗ್ರಂಥಗಳು. ವ್ಯಾಖ್ಯಾನಪ್ರಸ್ಥಾನದ ಪೂರ್ವದಲ್ಲಿಯೂ ಇಂಥ ಗ್ರಂಥಗಳಿದ್ದವೆಂಬುದಾಗಿ ಕಂಡುಬರುತ್ತದೆ. ಉದಾಹರಣೆಗೆ ಮಂಡನಮಿಶ್ರನೆಂಬ ಪಂಡಿತೋತ್ತಮನೊಬ್ಬನು 'ಬ್ರಹ್ಮಸಿದ್ಧಿ' ಎಂಬ ಗ್ರಂಥವೊಂದನ್ನು ಬರೆದಿದ್ದಾನೆ. ಈ ಗ್ರಂಥದಲ್ಲಿಯ ಅಭಿಪ್ರಾಯಗಳನ್ನು ಸುರೇಶ್ವರರು ಖಂಡಿಸಿರುವದೂ ಭಾಮತೀಕಾರರು ಎತ್ತಿಹಿಡಿದಿರುವದೂ ಸ್ಪಷ್ಟವಾಗಿ ಕಂಡುಬರುತ್ತದೆಯಾದ್ದರಿಂದ ಈ ಗ್ರಂಥವು ವ್ಯಾಖ್ಯಾನಪ್ರಸ್ಥಾನಕ್ಕಿಂತ ಮೊದಲಿನದೆನ್ನಬೇಕಾಗಿದೆ.

**ಪ್ರಶ್ನೆ :– ಭಾಷ್ಯಕಾರರ ಪೂರ್ವದಲ್ಲಿ ಅಥವಾ ಸಮಕಾಲದಲ್ಲಿ ಮತ್ತೆ ಬೇರೆ ಅದ್ವೈತಗ್ರಂಥಗಳು ಇದ್ದವೆ ?**

ಉತ್ತರ :– ಇದ್ದವೆಂಬುದು ಭಾಷ್ಯದ ಆಧಾರದಿಂದಲೇ ಗೊತ್ತಾಗುತ್ತದೆ. ಭಾಷ್ಯಕ್ಕಿಂತ ಹಿಂದನದೂ ಭಾಷ್ಯಕಾರರ ಪರಮಗುರುಗಳಾದ ಗೌಡಪಾದಾಚಾರ್ಯರಿಂದ ವಿರಚಿತವಾದದ್ದೂ ಆದ 'ಮಾಂಡೂಕ್ಯಕಾರಿಕೆ' ಎಂಬ ಗ್ರಂಥವು ಈ ವಿಷಯದಲ್ಲಿ ಸುಪ್ರಸಿದ್ಧವಾಗಿದೆ. ಹೀಗೆಯೇ ಶಂಕರರ ಸಂಪ್ರದಾಯದಲ್ಲಿ ಬಾದರಾಯಣರು, ಕಾಶಕೃತ್ಸ್ನರು, ದ್ರವಿಡಾಚಾರ್ಯರು, ಬ್ರಹ್ಮನಂದಿಗಳು– ಮುಂತಾದ ಪ್ರಾಚೀನಾಚಾರ್ಯರುಗಳಿದ್ದರೆಂದು ಭಾಷ್ಯದಿಂದಲೇ ತಿಳಿದುಬರುತ್ತದೆ.

**ಪ್ರಶ್ನೆ :– ಭಾಷ್ಯಸಂಪ್ರದಾಯಕ್ಕೆ ಭಿನ್ನವಾದ ಅದ್ವೈತಸಂಪ್ರದಾಯಗಳು ಭಾಷ್ಯಕಾರರ ಕಾಲಕ್ಕೆ ಇದ್ದವೆ ?**

ಉತ್ತರ :– ಹೌದು, ಇದ್ದವು. ಅವುಗಳು ಗ್ರಂಥರೂಪದಲ್ಲಿ ನಮಗೀಗ ಉಪಲಬ್ಧವಿಲ್ಲದಿದ್ದರೂ ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಈ ಮತಗಳನ್ನು ವೃತ್ತಿಕಾರರು, ಭರ್ತೃಪ್ರಪಂಚರು – ಮುಂತಾದ ಹೆಸರುಗಳಿಂದ ಸೂಚಿಸಿ ಖಂಡಿಸಿದ್ದಾರೆ. ಇವೆಲ್ಲವೂ ವ್ಯಾಖ್ಯಾನಪ್ರಸ್ಥಾನಕ್ಕಿಂತ ಹಿಂದಿನ ಮತಗಳು.

ಪ್ರಶ್ನೆ :– ವ್ಯಾಖ್ಯಾನಪ್ರಸ್ಥಾನದ ಅನಂತರ ಅದ್ವೈತದಲ್ಲಿ ರಚಿಸಲ್ಪಟ್ಟ ಸ್ವತಂತ್ರ ಗ್ರಂಥಗಳಾವವು ?

ಉತ್ತರ :– ಇಷ್ಟಸಿದ್ಧಿ, ನ್ಯಾಯಮಕರಂದ, ಖಂಡನಖಂಡಖಾದ್ಯ, ಅದ್ವೈತಸಿದ್ಧಿ, ಶಂಕರಾನಂದೀಗೀತೆ, ಪಂಚದಶಿ– ಮುಂತಾದ ಬೇರೆಬೇರೆಯವರು ಬರೆದ ಸ್ವತಂತ್ರಗ್ರಂಥಗಳೂ ಇವುಗಳ ಆಧಾರದಿಂದ ರಚಿಸಲ್ಪಟ್ಟ ಅನೇಕ ಪ್ರಾಕೃತಭಾಷೆಗಳ ಗ್ರಂಥರಾಶಿಯೂ ಸೇರಿ ಒಂದು ದೊಡ್ಡಸಾಹಿತ್ಯವೇ ಆಗಿದೆ.

ಪ್ರಶ್ನೆ :– ಇವುಗಳನ್ನೆಲ್ಲ ಅಭ್ಯಾಸಮಾಡಿ ಶಂಕರರ ಸಿದ್ಧಾಂತದ ಮರ್ಮವನ್ನು ತಿಳಿದುಕೊಳ್ಳುವದು ಸುಲಭಸಾಧ್ಯವಲ್ಲ, ಅಲ್ಲವೆ ?

ಉತ್ತರ :– ಹೌದು. ಇವುಗಳಲ್ಲಿ ಮುಖ್ಯವಾಗಿ ಪ್ರಸ್ಥಾನತ್ರಯಭಾಷ್ಯಗಳನ್ನೇ ಮೊದಲೇ ಅಭ್ಯಸಿಸಿ ತಿಳಿದುಕೊಳ್ಳುವದು ಅಗತ್ಯ. ಮಿಕ್ಕವುಗಳನ್ನು ತುಲನಾತ್ಮಕದೃಷ್ಟಿಯಿಂದ ಅಭ್ಯಸಿಸಬೇಕೆಂದು ಆಗಲೆ ಹೇಳಿದ್ದಾಗಿದೆಯಲ್ಲ!

ಅಂತೂ ಶ್ರೀಶಂಕರಾಚಾರ್ಯರನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದು ಬಯಸುವವರು ಅವರ ಪ್ರತೀಕವಾಗಿರುವ ಭಾಷ್ಯಗಳನ್ನೇ ಮೊದಲು ಅವಲಂಬಿಸ ಬೇಕಾದದ್ದು ಮುಖ್ಯ ಎಂಬುದನ್ನು ಮರೆಯದಿರಬೇಕು. ಈಗ ಕೇವಲ ಭಾಷ್ಯಗ್ರಂಥಗಳ ಆಧಾರದಿಂದಲೇ ಆಚಾರ್ಯರ ದಿವ್ಯಸಂದೇಶಗಳನ್ನೂ ಉಪದೇಶಗಳ ಸಾರವನ್ನೂ ಎಲ್ಲ ಕಾಲದ ಎಲ್ಲ ಜನರಿಗೂ ಉಪಯೋಗವಾಗುವ ಸಾಮಾನ್ಯತತ್ತ್ವಗಳನ್ನೂ ಈ ಮುಂದಿನ ಪ್ರಶ್ನೋತ್ತರರೂಪಗ್ರಂಥಭಾಗದಲ್ಲಿ ತಿಳಿಸಿಕೊಡಲಾಗುತ್ತದೆ.

ಈವರೆಗೆ ಹೇಳಿರುವ ವಿಷಯಗಳ ಬಗ್ಗೆ ವಿವರವಾಗಿ ತಿಳಿಯಬಯಸುವವರು ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪ್ರಸಿದ್ಧವಾದ **'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ', 'ಶುದ್ಧಶಾಂಕರಪ್ರಕ್ರಿಯಾಭಾಸ್ಕರಃ', 'ವಿಶುದ್ಧವೇದಾಂತಸಾರಃ', 'ಮಾಂಡೂಕ್ಯರಹಸ್ಯ ವಿವೃತಿಃ'**– ಮುಂತಾದ ಸಂಸ್ಕೃತಗ್ರಂಥಗಳನ್ನೂ 'ವೇದಾಂತವಿಚಾರದ ಇತಿಹಾಸ', 'ಶಂಕರ ಸಿದ್ಧಾಂತ', 'ಶಂಕರವೇದಾಂತಸಾರ'– ಮುಂತಾದ ಕನ್ನಡಗ್ರಂಥಗಳನ್ನೂ ನೋಡಬಹುದು.

-----

# ವಿಶೇಷಭಾಗ

## ಭಾಷ್ಯರಚನೆಯ ಉದ್ದೇಶ

**ಪ್ರಶ್ನೆ :– ಭಾಷ್ಯಗಳಲ್ಲಿ ಹೇಳಿರುವ ಮುಖ್ಯಸಂದೇಶಗಳಾವವು ?**

ಉತ್ತರ :– ಪರಮಾರ್ಥತತ್ತ್ವವು ಅದ್ವಯವಾಗಿದೆ. ಅದು ಪೂರ್ಣಾನುಭವ ರೂಪವಾಗಿದೆ. ಎಲ್ಲಾ ಕಾಲದ, ಎಲ್ಲಾ ದೇಶದ, ಎಲ್ಲಾ ಜನರೂ ಈ ತತ್ತ್ವವನ್ನು ಕಂಡುಕೊಳ್ಳಬಹುದಾಗಿದೆ. ಇದನ್ನೇ ಉಪನಿಷತ್ತುಗಳು ಮುಖ್ಯವಾಗಿ ತಿಳಿಸುತ್ತವೆ. ಹೀಗೆ ಈಗಲೇ ಅನುಭವಕ್ಕೆ ಬರುವ ತತ್ತ್ವವನ್ನು ಹೇಳುವದರಿಂದಲೇ ಉಪನಿಷತ್ತುಗಳು ಪ್ರಮಾಣವೆನಿಸಿವೆ. ಇದರ ಆಧಾರದಿಂದಲೇ ವೇದದಲ್ಲಿ ಉಕ್ತವಾದ ಕರ್ಮ ಮತ್ತು ಉಪಾಸನೆಗಳಿಗೂ ಅವುಗಳಿಗಾಗುವ ಕಾಲಾಂತರ, ಲೋಕಾಂತರಫಲಗಳಿಗೂ ಬೆಲೆ

ಬಂದಿರುತ್ತದೆ. ವೇದಾಂತಗಳಲ್ಲಿ ಅಂದರೆ ಉಪನಿಷತ್ತುಗಳಲ್ಲಿ ಹೇಳಿರುವ ಸಾಧನಗಳು ನಿತ್ಯಜೀವನಕ್ಕೂ ಅತ್ಯಂತ ಉಪಯುಕ್ತವಾದವುಗಳಾಗಿವೆ, ಪೋಷಕವಾದವುಗಳಾಗಿವೆ– ಎಂಬುದು ಭಾಷ್ಯಗಳ ಸಂದೇಶದ ಸಾರಾಂಶವೆನ್ನಬಹುದು.

***ಪ್ರಶ್ನೆ :– ಅದ್ವಯತತ್ತ್ವದ ಮತವನ್ನು ಶಂಕರಾಚಾರ್ಯರು ಸ್ಥಾಪನೆಮಾಡಿದ್ದರಿಂದಲೇ ಇವರಿಗೆ ಅದ್ವೈತಮತಸ್ಥಾಪಕರು ಎನ್ನುವರಲ್ಲವೆ ?**

ಉತ್ತರ :– ಅಲ್ಲ, ಈ ಅಭಿಪ್ರಾಯವು ತಪ್ಪುತಿಳಿವಳಿಕೆಯಿಂದಾಗಿದೆ. ಮೊದಲನೆಯದಾಗಿ 'ಅದ್ವೈತ' ಎಂಬುದು ಒಂದು ಮತವೇ ಅಲ್ಲ. ಉಪನಿಷತ್ತುಗಳೆಲ್ಲ ಏಕಕಂಠದಿಂದ ಪ್ರತಿಪಾದಿಸಿರುವ ನಿತ್ಯಸಿದ್ಧವಾದ ಪರಮಾರ್ಥಸತ್ಯ ತತ್ತ್ವವೇ ಅದು. ಎಲ್ಲಾ ಮತದವರಿಗೂ ಅದು ಸಮಾನವಾಗಿರುತ್ತದೆ. ಎರಡನೆಯದಾಗಿ ಆಚಾರ್ಯರು ಅದನ್ನು ಹೊಸದಾಗಿ ಸ್ಥಾಪನೆಮಾಡಲಿಲ್ಲ. ಆಚಾರ್ಯರ ಕಾಲಕ್ಕೆ ಎಲ್ಲಾ ವೈದಿಕರೂ ವೇದಗಳನ್ನು ಪ್ರಮಾಣವಾಗಿಟ್ಟುಕೊಂಡವರೆಲ್ಲರೂ ಅದ್ವೈತವೇ ತತ್ತ್ವ ಎಂಬುದರ ಬಗ್ಗೆ ಏಕಾಭಿಪ್ರಾಯವುಳ್ಳವರಾಗಿದ್ದರು.

**ಪ್ರಶ್ನೆ :– ಹಾಗಾದರೆ ಆಗ ದ್ವೈತಿಗಳು, ವಿಶಿಷ್ಟಾದ್ವೈತಿಗಳು, ಶಕ್ತಿವಿಶಿಷ್ಟಾದ್ವೈತಿಗಳು ಮುಂತಾದವರಿರಲಿಲ್ಲವೆ ?**

ಉತ್ತರ :– ಆಗ ವೈದಿಕರಲ್ಲಿ ಮಾತ್ರ ಎಲ್ಲರೂ ಅದ್ವೈತಿಗಳೇ ಆಗಿದ್ದರೇ ಹೊರತು ಈಗಿನಂತೆ ವೇದವನ್ನು ಒಪ್ಪಿಯೂ ದ್ವೈತಾದಿಮತಗಳನ್ನು ಮಂಡಿಸುವವರು ಯಾರೂ ಇರಲಿಲ್ಲ. ಆದರೆ ವೈದಿಕರಲ್ಲದ ಸಾಂಖ್ಯ, ವೈಶೇಷಿಕ, ಪಾತಂಜಲ– ಮುಂತಾದ ಮತದವರು ಮಾತ್ರ ದ್ವೈತಿಗಳಾಗಿದ್ದರು. ವೈದಿಕರೆಲ್ಲರೂ ಅದ್ವೈತಿಗಳೇ ಆಗಿದ್ದರು.

**ಪ್ರಶ್ನೆ :– ಈ ವಿಷಯಕ್ಕೆ ಪ್ರಮಾಣವೇನು ?**

ಉತ್ತರ :– ಶ್ರೀಶಂಕರರೇ ತಮ್ಮ ಭಾಷ್ಯದಲ್ಲಿ **''ಸರ್ವೋಪನಿಷತ್ಸು ಹಿ ವಿಜ್ಞಾನಾತ್ಮನಃ ಪರಮಾತ್ಮನಾ ಏಕತ್ವಪ್ರತ್ಯಯೋ ವಿಧೀಯತೇ ಇತಿ ಅವಿಪ್ರತಿಪತ್ತಿಃ ಸರ್ವೇಷಾಂ ಉಪನಿಷದ್ವಾದಿನಾಮ್ ॥''** (ಬೃ.ಭಾ.೨–೧–೨೦) ಎಂದು ತಿಳಿಸಿದ್ದಾರೆ. ಇದರ ತಾತ್ಪರ್ಯವೇನೆಂದರೆ : 'ಉಪನಿಷದ್ವಾದಿಗಳಲ್ಲಿ ಯಾರಿಗೂ – ಆತ್ಮೈಕತ್ವವನ್ನೇ ಉಪನಿಷತ್ತುಗಳಲ್ಲಿ ಉಪದೇಶಿಸಿದೆ – ಎಂಬ ವಿಷಯಕ್ಕೆ ಭಿನ್ನಾಭಿಪ್ರಾಯವಿರುವದಿಲ್ಲ.' ಈ ವಾಕ್ಯದಿಂದ ವೈದಿಕರೆಲ್ಲರೂ ಅದ್ವೈತಿಗಳೇ ಆಗಿದ್ದರೆಂಬುದು ಏರ್ಪಡುತ್ತದೆ ; ಮತ್ತು ತೈತ್ತಿರೀಯಭಾಷ್ಯದಲ್ಲಿಯೂ (೨–೮) ಈ ಅಭಿಪ್ರಾಯವನ್ನು ಸಮರ್ಥಿಸುವ ವಾಕ್ಯವು ಬಂದಿರುತ್ತದೆ. **''ಏಕತ್ವವಾದೀ ತ್ವಮ್, ವೇದಾರ್ಥಪರತ್ವಾತ್ । ಬಹವೋ ಹಿ ನಾನಾತ್ವವಾದಿನೋ ವೇದಬಾಹ್ಯಾಃ ತ್ವತ್ಪ್ರತಿಪಕ್ಷಾಃ ।''.**

**ಪ್ರಶ್ನೆ : ಹಾಗಾದರೆ ಆಗಿನ ಕಾಲದ ವೈದಿಕರೆಲ್ಲರೂ ಅದ್ವೈತಿಗಳೇ ಆಗಿದ್ದಲ್ಲಿ ಆಚಾರ್ಯರು ಅಷ್ಟೊಂದು ಪ್ರಯತ್ನಪಟ್ಟು ಗ್ರಂಥಗಳನ್ನು ರಚಿಸಿದ್ದೇಕೆ ?**

ಉತ್ತರ :– ಅದ್ವೈತವನ್ನು ತಿಳಿಸುವ ಅನೇಕ ಪಂಗಡಗಳು ಆ ಕಾಲದಲ್ಲಿದ್ದವು. ಅವುಗಳಲ್ಲೆಲ್ಲ ಅತ್ಯಂತಪರಿಶುದ್ಧವಾದ ಅದ್ವೈತಸಂಪ್ರದಾಯಕ್ಕೆ ಸೇರಿದ ಆಚಾರ್ಯರು ಆ ಸಂಪ್ರದಾಯದ ಮಹತ್ತ್ವವನ್ನು ಎತ್ತಿ ತೋರಿಸುವದಕ್ಕಾಗಿಯೇ ಭಾಷ್ಯಗಳನ್ನು ರಚಿಸಿದ ರೆಂಬುದು ನಿಸ್ಸಂಶಯ.

**ಪ್ರಶ್ನೆ :– ವೈದಿಕಧರ್ಮವು ನಶಿಸಿಹೋಗಿ ಬೌದ್ಧರೇ ಮುಂತಾದ ಅವೈದಿಕ ಧರ್ಮಗಳವರ ಪ್ರಾಬಲ್ಯವು ಹೆಚ್ಚಿದಾಗ ವೈದಿಕಧರ್ಮದ ಪುನರುದ್ಧಾರಕ್ಕಾಗಿ ಆಚಾರ್ಯರು ಭಾಷ್ಯಗಳನ್ನು ರಚಿಸಿದರೆಂದು ಕೆಲವರು ಹೇಳುವರಲ್ಲ !**

ಉತ್ತರ :– ಇದು ಸಮಂಜಸವಲ್ಲ. ಏಕೆಂದರೆ ಆಚಾರ್ಯರು ತಮ್ಮ ಭಾಷ್ಯ ರಚನೆಗೆ ಮೇಲೆ ಹೇಳಿದ ಉದ್ದೇಶವುಂಟೆಂದು ಎಲ್ಲಿಯೂ ಹೇಳಿರುವದಿಲ್ಲ. (೧) ಸಾಂಪ್ರದಾಯಿಕರಾದ ಹಿಂದಿನ ಆಚಾರ್ಯರ ಉಪದೇಶದಂತೆ ಉಪನಿಷತ್ತಿನ ವ್ಯಾಖ್ಯಾನ ವನ್ನು ಮಾಡುತ್ತೇನೆ (ತೈ.ಅವ). (೨) ಗೀತೆಗೆ ಈಗಾಗಲೇ ಅನೇಕರು ಅರ್ಥ ವಿವರಣೆಮಾಡಿರುತ್ತಾರಾದರೂ ಲೋಕದ ಜನರು ಅತ್ಯಂತ ವಿರುದ್ಧವಾದ ಅರ್ಥ ಗಳನ್ನೇ ಗೀತಾರ್ಥವೆಂದು ಗ್ರಹಿಸುತ್ತಿರುವದನ್ನು ಕಂಡು ಅದರ ಅರ್ಥವನ್ನು ವಿವೇಕ ಪೂರ್ವಕವಾಗಿ ಗೊತ್ತುಪಡಿಸುವದಕ್ಕಾಗಿ ಸಂಕ್ಷೇಪವಾಗಿ ವಿವರಣವನ್ನು ಮಾಡುವೆನು. (೩) ಮೊದಲಿಲ್ಲದೆ ಕೊನೆಯಿಲ್ಲದೆ ಸ್ವಾಭಾವಿಕವಾಗಿರುವ ತಪ್ಪುತಿಳಿವಿನ ರೂಪವಾಗಿರುವ ಈ ಅಧ್ಯಾಸವು ಕರ್ತೃತ್ವಭೋಕ್ತೃತ್ವಗಳನ್ನು ಉಂಟುಮಾಡುತ್ತಿರುವದು ಎಲ್ಲಾ ಜನರಿಗೂ ಪ್ರತ್ಯಕ್ಷವಾಗಿರುತ್ತದೆ. ಅನರ್ಥಕ್ಕೆ ಕಾರಣವಾಗಿರುವ ಈ ಅಧ್ಯಾಸವನ್ನು ನಾಶಗೊಳಿಸುವದಕ್ಕೆ ಆತ್ಮೈಕತ್ವ ವಿದ್ಯೆಯು ಜನರಿಗೆ ದೊರಕಲೆಂದು ವೇದಾಂತಗಳೆಲ್ಲ ಹೊರಟಿರುತ್ತವೆ. ಸರ್ವವೇದಾಂತ ಗಳಿಗೂ ಇದೇ ಅರ್ಥವೆಂಬುದು ಹೇಗೆಂಬುದನ್ನು ನಾವು ಈ ಶಾರೀರಕಮೀಮಾಂಸೆಯಲ್ಲಿ ತೋರಿಸಿಕೊಡುವೆವು– ಎಂಬೀ ಬಗೆಯ ಪ್ರತಿಜ್ಞಾವಾಕ್ಯಗಳನ್ನು ಆಚಾರ್ಯರು ಬರೆದಿರುತ್ತಾರೆಯೇ ಹೊರತು ವೈದಿಕ ಧರ್ಮೋದ್ಧಾರಕ್ಕಾಗಿ ಭಾಷ್ಯವನ್ನು ರಚಿಸುವೆವೆಂದು ಎಲ್ಲಿಯೂ ಹೇಳಿಕೊಂಡಿಲ್ಲ.

**ಪ್ರಶ್ನೆ :– ಮತ್ತೆ ಭಾಷ್ಯಗಳಲ್ಲಿ ಬೌದ್ಧಾದಿಮತಗಳನ್ನು ಖಂಡಿಸಿರುವದೇಕೆ ?**

ಉತ್ತರ :– ಭಾಷ್ಯಗಳಲ್ಲಿ ಬೌದ್ಧಾದಿಮತಗಳನ್ನು ಖಂಡಿಸಿರುವದೇನೋ ನಿಜವೇ. ಆದರೆ ಭಾಷ್ಯರಚನೆಗೆ ಅದೇ ಉದ್ದೇಶವಲ್ಲ. ಬೌದ್ಧಾದಿಗಳ ಹಾವಳಿಯಿಂದ ವೈದಿಕಧರ್ಮಕ್ಕೆ ಸ್ವಲ್ಪಮಟ್ಟಿಗೆ ಧಕ್ಕೆ ತಗಲಿತ್ತೆಂದು ಊಹಿಸಿದರೂ ಆಚಾರ್ಯರ ಕಾಲಕ್ಕೆ ವೈದಿಕಧರ್ಮವು ಊರ್ಜಿತಸ್ಥಿತಿಯಲ್ಲಿತ್ತೆಂದೇ ಹೇಳಬೇಕಾಗುವದು. ಸೂತ್ರಭಾಷ್ಯಾದಿ

ಗಳಲ್ಲಿ ವಿಷಯನಿರೂಪಣೆಗೆ ಕೊಟ್ಟಿರುವ ದೃಷ್ಟಾಂತಗಳನ್ನೂ ಮೀಮಾಂಸಾನ್ಯಾಯಗಳನ್ನೂ ಅವಲೋಕಿಸಿದಾಗ ಈ ಮಾತು ಸ್ಫುಟವಾಗುವದು.

———————

## ೨. ವೇದಪ್ರಾಮಾಣ್ಯ

**ಪ್ರಶ್ನೆ :– ತರ್ಕಶುದ್ಧವಾದ ಅನುಮಾನಾದಿಗಳಿಂದ ತಮ್ಮ ತಮ್ಮ ಮತಗಳನ್ನು ಪ್ರತಿಪಾದಿಸಿರುವ ಸಾಂಖ್ಯ, ಬೌದ್ಧಾದಿದರ್ಶನಗಳಿಗಿಂತ ಕೇವಲ ವೇದಪ್ರಮಾಣವನ್ನಾಧರಿಸಿದ ಆಚಾರ್ಯರ ತತ್ತ್ವದರ್ಶನದ ಹೆಚ್ಚುಗಾರಿಕೆಯೇನು ? ವೇದವನ್ನೇ ಪ್ರಮಾಣವಾಗಿ ಏಕೆ ಒಪ್ಪಬೇಕು ? ಒಪ್ಪದವರಿಗೆ ಈ ತತ್ತ್ವವು ಉಪಯೋಗಬೀಳುವದಿಲ್ಲವೆ ?**

ಉತ್ತರ :– ಈ ಬಗ್ಗೆ ಸಾವಧಾನವಾಗಿ ಒಂದೊಂದೇ ವಿಷಯವನ್ನು ವಿಚಾರಿಸೋಣ. ಮೊದಲು ವೇದಪ್ರಾಮಾಣ್ಯವನ್ನು ಕುರಿತು ಶ್ರೀಶಂಕರರು ಏನು ಹೇಳಿರುವರೆಂಬುದನ್ನು ಅವರ ಮಾತಿನಲ್ಲೇ ಹೇಳುವದಾದರೆ ''ಪುರುಷಬುದ್ಧಿಯಿಂದ ಕಲ್ಪಿತವಾಗಿರುವ ದರ್ಶನಗಳು ಪರಸ್ಪರವಿರುದ್ಧವಾಗಿರುತ್ತವೆ. ಹಾಗೂ ಇಂದಿನ, ಹಿಂದಿನ, ಮುಂದಿನ – ಎಲ್ಲ ತಾರ್ಕಿಕರನ್ನೂ ಒಕ್ಕಡೆ ಸೇರಿಸಿ ತತ್ತ್ವನಿರ್ಧಾರಣೆ ಮಾಡುವದು ಎಂದಿಗೂ ಸಾಧ್ಯವಿಲ್ಲ. ಆದ್ದರಿಂದ ಕೇವಲ ತರ್ಕಅನುಮಾನಾದಿಪುರುಷ ಬುದ್ಧಿಕಲ್ಪಿತ ದರ್ಶನಗಳಿಂದ ಸರ್ವಸಮ್ಮತವಾದ ಪರಮಾರ್ಥತತ್ತ್ವವು ಸಿಕ್ಕುವ ಸಂಭವವೇ ಇಲ್ಲ. ಅಪೌರುಷೇಯವಾದ ವೇದವಾದರೋ ನಿತ್ಯವಾಗಿದ್ದು ಪರಮಾರ್ಥವಿಜ್ಞಾನವನ್ನುಂಟು ಮಾಡುವದಕ್ಕೆ ಕಾರಣವಾಗಿದೆ. ಈ ವಿಜ್ಞಾನವು ಕಾಲದೇಶಾದಿಗಳನ್ನು ಮೀರಿದ ಸಾರ್ವತ್ರಿಕಪೂರ್ಣಾನುಭವಸ್ವರೂಪವೇ ಆಗಿರುವದರಿಂದ ಯಾವ ತಾರ್ಕಿಕನೂ ಇದನ್ನು ಅಲ್ಲಗಳೆಯುವಂತಿಲ್ಲ. ಇದು ಅಬಾಧಿತವಾದ ತತ್ತ್ವವಾಗಿರುತ್ತದೆ'' (ಸೂ.ಭಾ. ೨–೧–೧೧). ಈ ಮಾತಿನಿಂದ ಈಗಲೇ ಅನುಭವಕ್ಕೆ ಬರುವ ಹಾಗೂ ಅಬಾಧಿತವಾದ ತತ್ತ್ವವನ್ನು ಹೇಳುವದರಿಂದಲೇ ವೇದವು ಪ್ರಮಾಣವೆನಿಸಿದೆ ಎಂಬುದು ಶ್ರೀಶಂಕರರ ಅಭಿಪ್ರಾಯವೆಂತ ತಿಳಿದುಬರುತ್ತದೆ.

**ಪ್ರಶ್ನೆ :– ವೇದದಲ್ಲಿ ಕರ್ಮೋಪಾಸನೆಗಳನ್ನು ಹೇಳಿ ಅವುಗಳ ಫಲವು ಕಾಲಾಂತರಲೋಕಾಂತರಗಳಲ್ಲಿ ಆಗುವದೆಂದು ಹೇಳಿದೆಯಲ್ಲ !**

ಉತ್ತರ :– ಹೌದು, ''ಕರ್ಮೋಪಾಸನೆಗಳ ಫಲವು ಈಗಲೆ ಅನುಭವಕ್ಕೆ ಬರುವದಿಲ್ಲವಾದ್ದರಿಂದ ಅವುಗಳ ಬಗ್ಗೆ ಶಂಕೆಯುಂಟಾದರೂ ಆಗಬಹುದು. ಆದರೆ ವೇದಾಂತವಾಕ್ಯಜನ್ಯವಾದ ಫಲವು ಅನುಭವಾರೂಢವಾಗಿರುವದರಿಂದ ಅದರ ವಿಷಯಕ್ಕೆ ಶಂಕೆಯುಂಟಾಗಲು ಕಾರಣವಿರುವದಿಲ್ಲ'' (ಸೂ.ಭಾ.೩–೩–೩೨) ಎಂದು

ಆಚಾರ್ಯರೇ ಹೇಳಿರುತ್ತಾರೆ ; ಮತ್ತು ಈಗಲೇ ಫಲವನ್ನುಂಟುಮಾಡುವ ಬ್ರಹ್ಮವಿದ್ಯೆಯನ್ನು ಉಪದೇಶಿಸಿರುವದರಿಂದಲೇ ಅದೇ ವೇದದಲ್ಲಿ ಹೇಳಿರುವ ಕರ್ಮೋಪಾಸನೆಗಳಿಗೂ ಲೋಕಾಂತರಗಳಲ್ಲಿ ಫಲವಾಗುವದೆಂದು ನಂಬುವದಕ್ಕೆ ಸಾಧ್ಯವಿದೆಯೆಂದೂ ಮತ್ತೊಂದು ಕಡೆಯಲ್ಲಿ ಹೇಳಿರುತ್ತಾರೆ. (ಸೂ.ಭಾ.೪-೪-೨೨).

**ಪ್ರಶ್ನೆ :– ವೇದವು ನಿತ್ಯವೆಂಬುದು ಹೇಗೆ ?**

ಉತ್ತರ :– ಸ್ವರ, ವರ್ಣ, ಪದ, ವಾಕ್ಯವಿಷಯವಾದ ಸಂಕಲ್ಪವುಳ್ಳ ಮನೋವೃತ್ತಿಗಳು ವಾಗಿಂದ್ರಿಯದ್ವಾರದಿಂದ ಹೊರಬರುತ್ತವೆ. ಕಿವಿಗಳ ಮೂಲಕ ಕೇಳಲ್ಪಡುತ್ತವೆ. ಆ ವೃತ್ತಿಗಳನ್ನು ಚೈತನ್ಯವು ವ್ಯಾಪಿಸಿರುತ್ತದೆ. ಹೀಗೆ ವಾಕ್ಕು ಮತ್ತು ವೃತ್ತಿಗಳ ಉಪಾಧಿಯಿಂದ ಗೋಚರಿಸುವ ಆತ್ಮಚೈತನ್ಯವೇ 'ವೇದ'ಶಬ್ದಕ್ಕೆ ಲಕ್ಷ್ಯಾರ್ಥವಾಗಿರುವದರಿಂದ ಅದು ಆತ್ಮಸ್ವರೂಪದಿಂದ ನಿತ್ಯವಾಗಿದೆ. **''ಮನೋವೃತ್ತ್ಯುಪಾಧಿಪರಿಚ್ಛಿನ್ನಂ ಮನೋವೃತ್ತಿನಿಷ್ಠಮ್ ಆತ್ಮಚೈತನ್ಯಮ್ ಅನಾದಿನಿಧನಂ ಯಜುಃಶಬ್ದವಾಚ್ಯಮ್ ಆತ್ಮವಿಜ್ಞಾನಂ ಮನ್ತ್ರಾಃ ಇತಿ ॥''** (ತೈ.ಭಾ.೨-೩), **''ಆತ್ಮನಃ ಸ್ವರೂಪಂ ಜ್ಞಪ್ತಿರ್ನ ತತೋ ವ್ಯತಿರಿಚ್ಯತೇ । ಅತೋ ನಿತ್ಯೈವ ॥''** (ತೈ.ಭಾ.೨-೧) ಎಂಬೀ ವಾಕ್ಯಗಳನ್ನು ಇಲ್ಲಿ ಉದಾಹರಿಸಬಹುದು. ಮಿಕ್ಕ ಶಬ್ದಗಳೂ ಚೈತನ್ಯದಿಂದ ಆವೃತವಾಗಿವೆಯೇ ಹೊರಬಂದರೂ ಅವು ಆತ್ಮನನ್ನು ತಿಳಿಸಲಾರವು. ವೇದವು ಆತ್ಮನನ್ನು ತಿಳಿಸಿ ಕೊನೆಗೆ ಆತ್ಮನಲ್ಲಿಯೇ ಸೇರಿಹೋಗುವದರಿಂದ ಅದನ್ನು ನಿತ್ಯವೆನ್ನಬೇಕೆಂದು ಆಚಾರ್ಯರು ತಿಳಿಸಿರುತ್ತಾರೆ.

**ಪ್ರಶ್ನೆ :– ಜನಕರಾಜನ ಕಥೆ ಮುಂತಾದವುಗಳಿಂದ ಒಂದಾನೊಂದು ಕಾಲದಲ್ಲಿ ನಡೆದ ಘಟನೆಗಳನ್ನು ವೇದವು ಹೇಳುವದರಿಂದ ಅದಕ್ಕೂ ಕಾಲದ ಎಲ್ಲೆ ಕಟ್ಟು ಉಂಟು ಎಂದು ಆಧುನಿಕರು ಹೇಳುವರಲ್ಲ !**

ಉತ್ತರ :– ಶ್ರೀಶಂಕರರು ಈ ಐತಿಹಾಸಿಕದೃಷ್ಟಿಯನ್ನೊಪ್ಪುವದಿಲ್ಲ. ಶ್ರುತಿಯಲ್ಲಿ ಬರುವ ಕಥೆಗಳು ಆಯಾ ಸಂದರ್ಭದಲ್ಲಿ ಆಯಾ ವಿಷಯಗಳನ್ನು ವಿವರಿಸಲು ಶ್ರುತಿಯೇ ಕಲ್ಪಿಸಿದವುಗಳಾಗಿವೆ ಎಂದು ಅವರು ಹೇಳುವದರಿಂದ ವೇದನಿತ್ಯತ್ವಕ್ಕೆ ಬಾಧೆ ಬರುವದಿಲ್ಲ. **''ಶ್ರುತಿಃ ಸ್ವಯಮೇವ ಆಖ್ಯಾಯಿಕಾವ್ಯಾಜೇನ ಅನುಮಾನ ಮಾರ್ಗಮ್ ಉಪನ್ಯಸ್ಯ ಅಸ್ಮಾನ್ ಬೋಧಯತಿ ಪುರುಷಮತಿಮ್ ಅನುಸರನ್ತೀ ॥''** (ಬೃ.೪-೩-೨).

**ಪ್ರಶ್ನೆ :– ಒಂದರೆಡು ಸಂದರ್ಭಗಳನ್ನು ಹೇಳುವಿರಾ ?**

ಉತ್ತರ :– ಕೇಳಿ. (೧) ಮೈತ್ರೇಯೀಯಾಜ್ಞವಲ್ಕ್ಯರ ಕಥೆಗೆ ಜ್ಞಾನಕ್ಕೆ ಬೇಕಾಗುವ ಅವಶ್ಯಸಾಧನೆಯಾದ ಪಾರಿವ್ರಾಜ್ಯ(ಸಂನ್ಯಾಸ)ವನ್ನು ಹೇಳುವದೇ ಗುರಿ.

**"ಆತ್ಮಜ್ಞಾನಾಙ್ಗತ್ವೇನ ಸಂನ್ಯಾಸವಿಧಿತ್ಸಯೈವ ಆಖ್ಯಾಯಿಕೇಯಮ್ ಆರಭ್ಯತೇ ॥"** (ಬೃ.ಭಾ.೨-೪-೧). (೨) ಭೃಗುವಿನ ಕಥೆಗೆ ಬ್ರಹ್ಮವಿದ್ಯೆಗೆ ಸಾಧನವಾದ ತಪಸ್ಸನ್ನು ಹೇಳುವದೇ ಗುರಿ. **"ಅತಃ ಪರಂ ಬ್ರಹ್ಮವಿದ್ಯಾಸಾಧನಂ ತಪೋ ವಕ್ತವ್ಯಮ್......। ಇತ್ಯತಃ ಇದಮ್ ಆರಭ್ಯತೇ ॥"** (ತೈ.ಭಾ.೩-೧). (೩) ಆತ್ಮಜ್ಞಾನವು ಎಷ್ಟು ದುರ್ಲಭ ! ಅದಕ್ಕಾಗಿ ಬ್ರಹ್ಮಚರ್ಯಾದಿಸಾಧನೆಗಳು ಎಷ್ಟು ಅವಶ್ಯ !– ಎಂಬುದನ್ನರು ಹಲು ಛಾಂದೋಗ್ಯದಲ್ಲಿ ಪ್ರಜಾಪತಿ, ಇಂದ್ರ, ವಿರೋಚನರ ಕಥೆ ಬಂದಿದೆ. **"ಏವಂ ಕಿಲ ಏತದಿನ್ದ್ರತ್ವಾದಪಿ ಗುರುತರಮ್, ಇನ್ದ್ರೇಣಾಪಿ ಮಹತಾ ಯತ್ನೇನ ಏಕೋತ್ತರ ಶತವರ್ಷಕೃತಾಯಾಸೇನ ಪ್ರಾಪ್ತಮಾತ್ಮಜ್ಞಾನಮ್ । ಅತೋ ನಾತಃಪರಂ ಪುರುಷಾರ್ಥಾನ್ತರಮಸ್ತಿ ಇತ್ಯಾತ್ಮಜ್ಞಾನಂ ಸ್ತೌತಿ॥"** (ಛಾಂ.ಭಾ.೮-೧೧-೩) (೪) ದೇವತೆಗಳಿಗೂ ಬ್ರಹ್ಮವಿದ್ಯೆ ದುರ್ಲಭ ಎಂಬುದನ್ನು ಹೇಳಲು ಕೇನೋಪನಿಷತ್ತಿನ ದೇವತೆಗಳ ಗರ್ವಭಂಗದ ಕಥೆ ಬಂದಿದೆ. **"ಯೇನ ಅಗ್ನ್ಯಾದಯೋಽತಿತೇಜಸೋಽಪಿ ಕ್ಲೇಶೇನೈವ ಬ್ರಹ್ಮ ವಿದಿತವನ್ತಃ, ತಥಾ ಇನ್ದ್ರೋ ದೇವಾನಾಮೀಶ್ವರೋಽಪಿ ಸನ್ ಇತಿ ॥"** (೩-೧) ಹೀಗೆಯೇ ಅಶ್ವಿನೀಕುಮಾರರ ಪ್ರವರ್ಗ್ಯಕರ್ಮದ ಕಥೆ (ಬೃ.೨-೫-೧೬) ಇತ್ಯಾದಿ ಕಥೆಗಳು ಉಪನಿಷತ್ತುಗಳಲ್ಲಿ ಬಂದಿವೆ. ಆದ್ದರಿಂದ ಇವುಗಳಿಂದ ವೇದವು ಒಂದು ಕಾಲಕ್ಕೊಳಪಟ್ಟದ್ದೆಂದು ಭ್ರಾಂತರಾಗಬಾರದೆಂದೇ ಆಚಾರ್ಯರು ತಿಳಿಸಿರುತ್ತಾರೆ.

**ಪ್ರಶ್ನೆ :– ವೇದವು ಅಪೌರುಷೇಯವೆಂಬುದು ಹೇಗೆ ?**

ಉತ್ತರ :– ಒಂದು ಗ್ರಂಥವನ್ನು ಒಬ್ಬನು ಬರೆದರೆ ಅದಕ್ಕಿಂತಲೂ ಅವನು ಹೆಚ್ಚಿನ ಜ್ಞಾನವುಳ್ಳವನೆಂದು ಸಹಜವಾಗಿ ಗೊತ್ತಾಗುವದಲ್ಲವೆ ? ಇದರಿಂದ ಸರ್ವವಿಷಯಗಳ ತಿಳಿವಳಿಕೆಯನ್ನೂ ಉಂಟುಮಾಡುವ ಸಕಲ ಶಾಸ್ತ್ರಗಳಿಗೂ ಮೂಲವಾದ ವೇದವು ಯಾವನಿಂದ ಬಂದಿದೆಯೋ ಅವನು ಸರ್ವಜ್ಞನೇ ಆಗಿರಬೇಕೆಂಬುದು ತಾನೇ ಏರ್ಪಡುತ್ತದೆ. ಒಬ್ಬ ಜೀವನಾಗಲಿ ಅನೇಕ ಜೀವರು ಸೇರಿಯಾಗಲಿ ಅದನ್ನು ರಚಿಸಲು ಸಾಧ್ಯವಿಲ್ಲ. ಋಷಿಗಳು ತಪಶ್ಚರ್ಯೆಯಿಂದ ಆ ಮಂತ್ರಗಳನ್ನು ಕಂಡುಹಿಡಿದರೇ ಹೊರತು ಅವುಗಳನ್ನು ರಚಿಸಲಿಲ್ಲ. ಆದ್ದರಿಂದ ವೇದವು ಅಪೌರುಷೇಯವೆಂದು ಆಚಾರ್ಯರು ಹೇಳುತ್ತಾರೆ (ಸೂ.ಭಾ.೧-೧-೩).

**ಪ್ರಶ್ನೆ :– ವೇದಾಧಿಕಾರವಿಲ್ಲದವರಿಗೂ ಪರಮಾರ್ಥತತ್ತ್ವದ ಅನುಭವವು ಬರಬಹುದೆ ?**

ಉತ್ತರ :– ಒಹೋ ! ಅವಶ್ಯವಾಗಿ ಬರುತ್ತದೆ. ವೇದಾಧಿಕಾರವಿಲ್ಲದ ಶೂದ್ರರೇ ಮುಂತಾದವರಿಗೆ ಬ್ರಹ್ಮವಿದ್ಯೆಯೂ ಅದರ ಫಲವಾದ ಮೋಕ್ಷವೂ ಆಗಲಾರದೆಂದು ವಾದಿಸುವ ವೈದಿಕರ ಅಭಿಪ್ರಾಯವನ್ನು ಅಲ್ಲಗಳೆಯುತ್ತ

ಅಪಶೂದ್ರಾಧಿಕರಣದ ಕೊನೆಯಲ್ಲಿ ''ವೇದಪೂರ್ವಕವಾದ ಅಧಿಕಾರವಿಲ್ಲದಿದ್ದರೂ ಇತಿಹಾಸ, ಪುರಾಣಾದಿಗಳಿಂದ ಆತ್ಮಜ್ಞಾನವನ್ನು ಯಾರಾದರೂ ಪಡೆಯಬಹುದು. ಬ್ರಾಹ್ಮಣನನ್ನು ಮುಂದುಮಾಡಿಕೊಂಡು ನಾಲ್ಕು ವರ್ಣದವರೂ ಇತಿಹಾಸಪುರಾಣ ಗಳನ್ನು ಶ್ರವಣಮಾಡಬಹುದು. ಹೀಗೆ ಮಾಡಿದ ಶ್ರವಣದಿಂದ ಆತ್ಮವಿಜ್ಞಾನವುಂಟಾಗಿ ಅದರಿಂದ ಮೋಕ್ಷಫಲವಾಗುವದೆಂಬುದನ್ನು ಅಲ್ಲಗಳೆಯುವದಕ್ಕಾಗುವದಿಲ್ಲ. ಹಿಂದೆ ವಿದುರ, ಧರ್ಮವ್ಯಾಧಾದಿಗಳು ಈ ಫಲವನ್ನು ಪಡೆದಿದ್ದರೆಂಬುದು ಪ್ರಸಿದ್ಧವಿದೆ. ಆದ್ದರಿಂದ ವೇದಾಧಿಕಾರವಿಲ್ಲದವರಿಗೂ ಸಹ ಆತ್ಮಜ್ಞಾನಕ್ಕೆ ಅಧಿಕಾರವಿದೆ ಎಂದಾಯಿತು'' ಎಂದು ಆಚಾರ್ಯರು ಹೇಳಿದ್ದಾರೆ (ಸೂ.ಭಾ.೧–೩–೩೮).

**ಪ್ರಶ್ನೆ :– ಈಗಿನ ಕಾಲದ ಸಾಮಾನ್ಯಮನುಷ್ಯರಿಗೂ ಆತ್ಮಜ್ಞಾನವಾಗುವದು ಸಾಧ್ಯವೆ ?**

ಉತ್ತರ :– ಖಂಡಿತವಾಗಿಯೂ ಸಾಧ್ಯ. ''ಹಿಂದಿನ ಕಾಲದ ಋಷಿಗಳೇ ಮುಂತಾದವರು ಮಹಾವೀರ್ಯರಾಗಿರಬಹುದು ; ಈಗಿನ ಕಾಲದ ಮಾನವರು ಅಲ್ಪವೀರ್ಯರಾಗಿರಬಹುದು. ಆದರೆ ಬ್ರಹ್ಮದಲ್ಲಾಗಲಿ ಅದನ್ನು ಅರಿಯುವ ವಿಜ್ಞಾನ ದಲ್ಲಾಗಲಿ ಯಾವ ಕಾಲಕ್ಕೂ ಮಾರ್ಪಾಡಾಗುವಂತಿಲ್ಲ. ಹೊರನೋಟವನ್ನು ಕೈಬಿಟ್ಟು ಉಪನಿಷತ್ತುಗಳು ಹೇಳುವಂತೆ ತನ್ನೊಳಗಿನ ಅನುಭವಸ್ವರೂಪದ ಕಡೆಗೆ ಹೊರಳಿದರೆ ಸಾಕು, ಯಾರು ಬೇಕಾದರೂ ಆ ಪರತತ್ತ್ವವನ್ನು ಕಂಡುಕೊಳ್ಳಬಹುದಾಗಿದೆ'' ಎಂದು ಬೃಹದಾರಣ್ಯಕಭಾಷ್ಯದಲ್ಲಿ (೧–೪–೧೦) ಆಚಾರ್ಯರು ಸ್ಪಷ್ಟವಾಗಿ ತಿಳಿಸಿದ್ದಾರೆ.

**ಪ್ರಶ್ನೆ :– ವೇದದಲ್ಲಿ ಹೇಳಿರುವ ಕರ್ಮ ಮತ್ತು ಉಪಾಸನೆಗಳು ಜ್ಞಾನಕ್ಕೆ ಯಾವ ರೀತಿಯಲ್ಲಿ ಉಪಕಾರಕಗಳಾಗಿರುತ್ತವೆ ?**

ಉತ್ತರ :– ಸ್ವಾಭಾವಿಕವಾಗಿ ಕಾಮನೆಯಿಂದಲೇ ಕೂಡಿಕೊಂಡಿರುವ ಅಧಿ ಕಾರಿಗಳಿಗೆ ಯುಕ್ತಾಯುಕ್ತವಾದ ಕರ್ಮಗಳನ್ನೂ ಅವುಗಳ ಫಲಗಳನ್ನೂ ತಿಳಿಸಿ ನಿಷಿದ್ಧಕರ್ಮಗಳಿಂದ ಬಿಡಿಸಿ ಶಾಸ್ತ್ರೀಯಸತ್ಕರ್ಮಗಳ ಕಡೆಗೆ ಚಿತ್ತವನ್ನು ಎಳೆಯುವದು ಇವುಗಳ ಮೊದಲನೆಯ ಕೆಲಸ ; ಮತ್ತು ಇವುಗಳನ್ನೇ ನಿಷ್ಕಾಮವಾಗಿ ಆಚರಿಸುವಂತೆ ತಿಳಿಸಿ ಚಿತ್ತಶುದ್ಧಿ, ವೈರಾಗ್ಯಪ್ರಾಪ್ತಿ, ಏಕಾಗ್ರತೆಗಳ ಮೂಲಕ ಆತ್ಮಜ್ಞಾನಕ್ಕೆ ತಕ್ಕ ಅಧಿ ಕಾರಸಂಪತ್ತನ್ನೊದಗಿಸಿ ಕೊಡುವದೇ ಎರಡನೆಯ ಉಪಯೋಗ.

**ಪ್ರಶ್ನೆ :– ಹಾಗಾದರೆ ವೇದೋಕ್ತಕರ್ಮೋಪಾಸನೆಗಳನ್ನು ನಿಷ್ಕಾಮವಾಗಿ ಆಚರಿಸುವದರಿಂದ ಚಿತ್ತಶುದ್ಧಿ ಮುಂತಾದವುಗಳ ಮೂಲಕ ಆತ್ಮಜ್ಞಾನಕ್ಕೆ ಅಧಿಕಾರವು ಬರುವದೆಂದಾಯಿತು ?**

ಉತ್ತರ :– ಹೌದು, ಇದು ಹೀಗೆಯೇ ಸರಿ.

**ಪ್ರಶ್ನೆ :– ಹಾಗಾದರೆ ಆಗ ವೇದೋಕ್ತಕರ್ಮಾಧಿಕಾರವಿಲ್ಲದವರಿಗೆ ಚಿತ್ತ ಶುದ್ಧ್ಯಾದಿಗಳಿಲ್ಲವೆಂದಾಯಿತಲ್ಲ !**

ಉತ್ತರ : ಹಾಗೇನಿಲ್ಲ. ''ಆತ್ಮಜ್ಞಾನಕ್ಕೆ ತಕ್ಕ ಯೋಗ್ಯತೆ ಬರುವದಕ್ಕೆ ಕೇವಲ ವೈದಿಕವರ್ಣಾಶ್ರಮಕರ್ಮಾದಿಗಳೇ ಆಗಬೇಕೆಂದೇನಿಲ್ಲ. ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಧ್ಯಾನ, ಧಾರಣ, ಈಶ್ವರಾನುಗ್ರಹ, ಶಮದಮಾದಿಗಳು – ಮುಂತಾದ ಸಾಮಾನ್ಯಧರ್ಮಗಳೂ ಯೋಗ್ಯತೆಯನ್ನು ತಂದುಕೊಡಬಲ್ಲವು. ಇವು ವೈದಿಕ ಕರ್ಮಾನುಷ್ಠಾನಗಳಿಗಿಂತ ಹೆಚ್ಚಿನ ಮಟ್ಟದವುಗಳೂ ಆಗಿವೆ'' ಎಂದು ಆಚಾರ್ಯರು ತೈತ್ತಿರೀಯಭಾಷ್ಯದಲ್ಲಿ (೧–೧೧) ತಿಳಿಸಿದ್ದಾರೆ. ಮತ್ತು ಜ್ಞಾನಕ್ಕೆ ತಕ್ಕ ಯೋಗ್ಯತೆ ಬರುವದಕ್ಕೋಸ್ಕರ ಮಾಡಬೇಕಾದ ಸಾಧನಗಳನ್ನೆಲ್ಲ ಈಗಲೇ ಮೊದಲಿನಿಂದ ಆರಂಭಿಸಬೇಕಾದದ್ದೇನಿಲ್ಲ. ಜನ್ಮಾಂತರಗಳಲ್ಲಿ ಮಾಡಿದ ಸಾಧನೆಗಳಿಂದಲೂ ಸಹ ಈಗ ಆ ಅಧಿಕಾರವನ್ನು ಹೊಂದಲು ಸಾಧ್ಯವಿದೆ.

ಒಟ್ಟಿನಲ್ಲಿ ಆತ್ಮಜ್ಞಾನಕ್ಕೆ ಹೇಗೆ ಸರ್ವರಿಗೂ ಮುಕ್ತದ್ವಾರವಿದೆಯೋ ಹಾಗೆಯೇ ಜ್ಞಾನಕ್ಕೆ ತಕ್ಕ ಯೋಗ್ಯತೆಯನ್ನು ಪಡೆಯುವದಕ್ಕೂ ಸಹ ಸರ್ವರಿಗೂ ಅವಕಾಶವಿದೆ ಎಂಬುದು ಭಾಷ್ಯಗಳ ದಿವ್ಯಸಂದೇಶಗಳಲ್ಲೊಂದಾಗಿದೆ.

———————

## ೩. ಸಂನ್ಯಾಸ

**ಪ್ರಶ್ನೆ :– ಭಾಷ್ಯಗಳಲ್ಲಿ ಹೇಳಿದ ಸಂನ್ಯಾಸಶಬ್ದದ ವಿವರಣೆ ಏನು ? ಜ್ಞಾನಕ್ಕೂ ಸಂನ್ಯಾಸಕ್ಕೂ ಯಾವ ಸಂಬಂಧವಿದೆ ?**

ಉತ್ತರ :– ಇದೂ ಒಂದು ಮಹತ್ತ್ವದ ಪ್ರಶ್ನೆಯೇ ಆಗಿದೆ. ಆದ್ದರಿಂದ ಸಾವಧಾನದಿಂದಲೇ ಉತ್ತರವನ್ನು ಕಂಡುಕೊಳ್ಳಬೇಕು. (೧) ಭಾಷ್ಯಕಾರರ ಕಾಲಕ್ಕೆ ಸಂನ್ಯಾಸವು ವೇದಸಮ್ಮತವಲ್ಲ, ಅದು ಅನಧಿಕಾರಿಗಳ ವಿಷಯ ಎಂದು ಮುಂತಾಗಿ ಕೆಲವರು ವೈದಿಕರು ವಾದಿಸುತ್ತಿದ್ದರು. ಶ್ರೀಶಂಕರರು ಅದು ವೇದಸಮ್ಮತವಾದದ್ದೆಂದು ಭಾಷ್ಯಗಳಲ್ಲಿ ಪ್ರತಿಪಾದಿಸಿದ್ದಾರೆ. (೨) ಜ್ಞಾನದಿಂದ ಸರ್ವಾತ್ಮಭಾವವು ಪ್ರಾಪ್ತವಾಗಲು ಕಾಮನೆಗೆ ಅವಕಾಶವಿಲ್ಲದ್ದರಿಂದ ಜ್ಞಾನಿಗೆ ಪಾರಮಹಂಸ್ಯವೆಂಬ ಪರಮಾರ್ಥ ಸಂನ್ಯಾಸವು ಸಹಜವೇ ಆಗಿರುತ್ತದೆ. (೩) ಈ ಪರಮಾರ್ಥಸಂನ್ಯಾಸರೂಪವಾದ ಜ್ಞಾನನಿಷ್ಠೆಯನ್ನು ಪಡೆಯುವದಕ್ಕಾಗಿ ವೈರಾಗ್ಯಾತಿಶಯವುಳ್ಳ ಮುಮುಕ್ಷುಗಳು ಏಷಣಾ ತ್ಯಾಗದಿಂದ ಶ್ರೌತ ಸ್ಮಾರ್ತಕರ್ಮಗಳನ್ನೂ ಲೋಕವ್ಯವಹಾರದ ತೊಡಕನ್ನೂ ಬಿಟ್ಟೆದ್ದು ಜ್ಞಾನನಿಷ್ಠೆಗಾಗಿಯೇ ಜೀವನವನ್ನು ಮುಡುಪಿಡುವದಕ್ಕಾಗಿ ಆಶ್ರಮಸಂನ್ಯಾಸವನ್ನೂ

ಶ್ರುತಿಯು ವಿಧಿಸುತ್ತದೆ. ಇದೇ ಮುಮುಕ್ಷುವಿನ ಆಶ್ರಮಸಂನ್ಯಾಸವು. (ಛಾಂ.೨–೨೩–೧, ಸೂ. ೩–೪–೧೭, ೨೦, ಬೃ. ೪–೪–೨೨, ಗೀ. ೪–೨೧, ೨೨ ಮತ್ತು೫ನೇ ಅಧ್ಯಾಯದ ಅವತರಣಿಕೆಯನ್ನು ನೋಡಿ). ಈಗ್ಗೆ ಸಂನ್ಯಾಸಿಗಳಿಗೂ ಕೂಡ ಯತಿಸಂಧ್ಯಾವಂದನೆ, ದಂಡಗ್ರಹಣ, ದಂಡತರ್ಪಣಾದಿವಿಶೇಷಕರ್ಮಗಳಿವೆ– ಎಂಬ ಗ್ರಹಿಕೆಯು ಬಂದಿದೆ. ಆದರೆ ಸರ್ವಕರ್ಮಗಳನ್ನೂ ತ್ಯಾಗಮಾಡಿ ಕರ್ಮಸಾಧನಗಳಾದ ಶಿಖಾಯಜ್ಞೋಪವೀತಗಳೂ ಇಲ್ಲದೆ, ಅಮಾನಿತ್ವಾದಿಗಳನ್ನೂ ಶಮದಮಾದಿಗಳನ್ನೂ ಶೌಚಾಚಾರಗಳನ್ನೂ ಸಾಧಿಸುತ್ತ ಓಂಕಾರಧ್ಯಾನತತ್ಪರನಾಗಿ ಜ್ಞಾನನಿಷ್ಠೆಗಾಗಿಯೇ ಜೀವವನ್ನು ಮುಡುಪಿಡುವದೇ ಶ್ರೌತಸಂನ್ಯಾಸವೆಂಬ ಅಭಿಪ್ರಾಯವನ್ನು ಭಾಷ್ಯಗಳಲ್ಲಿ ಆಚಾರ್ಯರು ಸ್ಪಷ್ಟಗೊಳಿಸಿರುತ್ತಾರೆ. ಇನ್ನು ಶಿಖಾಯಜ್ಞೋಪವೀತಾದಿಗಳೂ ಸಂಧ್ಯಾತರ್ಪಣಾದಿಕರ್ಮಗಳೂ ಉಳ್ಳ ಸ್ಮಾರ್ತಸಂನ್ಯಾಸವೂ ಒಂದುಂಟು. ಆದರೆ ಅದು ಬ್ರಹ್ಮಲೋಕಪ್ರಾಪ್ತಿಗೆ ಮಾತ್ರ ಸಾಧನೆಯಾದ ತಾಪಸಾಶ್ರಮವು ಎಂಬುದನ್ನು ಲಕ್ಷ್ಯದಲ್ಲಿಡಬೇಕು. (ಬೃ.ಭಾ.) (೪) ವೈರಾಗ್ಯದ ತೀವ್ರತೆಯಿಲ್ಲದವರು ಗೃಹಸ್ಥರಾಗಿದ್ದೂ ಸಹ ತಮ್ಮತಮ್ಮ ಕರ್ಮಗಳನ್ನೇ ಫಲತ್ಯಾಗಪೂರ್ವಕವಾಗಿ ಆಚರಿಸಿದರೆ ಅದೂ ಸಹ ಗೌಣಾರ್ಥದಲ್ಲಿ ಸಂನ್ಯಾಸವೆನ್ನಿಸಿಕೊಳ್ಳುತ್ತದೆ. ಅದು ಫಲತ್ಯಾಗರೂಪ ಸಂನ್ಯಾಸವು (ಗೀ.೬–೧).

**ಪ್ರಶ್ನೆ :– ಮುಮುಕ್ಷುಗಳು ಗೃಹಸ್ಥರಾಗಿರುವಂತೆಯೇ ಜ್ಞಾನಿಗಳೂ ಸಹ ಗೃಹಸ್ಥರಾಗಿರುವದಕ್ಕೆ ಸಾಧ್ಯವೆ ?**

ಉತ್ತರ :– ಸಾಧ್ಯವಿದೆ ಎಂದೇ ಆಚಾರ್ಯರು ಸ್ಪಷ್ಟವಾಗಿ ಹೇಳಿದ್ದಾರೆ. ಜ್ಞಾನದಿಂದ ಕಾಮನೆ ಹೋಗಲು ಪಾರಮಹಂಸ್ಯವೇ ಜ್ಞಾನಿಗೆ ಸಹಜವಾಗಿದ್ದರೂ ಪ್ರಾರಬ್ಧಪ್ರತಿಬಂಧಗಳ ಮೂಲಕ ಕೆಲವರು ಗಾರ್ಹಸ್ಥ್ಯದಲ್ಲಿಯೇ ಇರುತ್ತಾರೆ. ಹಾಗಿದ್ದರೂ ಅವರ ಜ್ಞಾನನಿಷ್ಠೆಗೇನೂ ಕೊರತೆಯಿರುವದಿಲ್ಲ. (ಗೀ.೪–೧೯, ೨೦, ೨೩, ೨೪).

**ಪ್ರಶ್ನೆ :– ಬೌದ್ಧರನ್ನು ಜಯಿಸುವದಕ್ಕಾಗಿ ಅವರನ್ನು ಅನುಕರಿಸಿ ಶಂಕರರು ವೈದಿಕಧರ್ಮದಲ್ಲಿ ಸಂನ್ಯಾಸವನ್ನು ಸೇರಿಸಿಕೊಂಡರೆಂದು ಕೆಲವರು ಹೇಳುವರಲ್ಲ! ಇದು ನಿಜವೆ ?**

ಉತ್ತರ :– ಅಲ್ಲ, ವೇದೋಪನಿಷತ್ತುಗಳಲ್ಲಿಯೇ ಪ್ರಸಿದ್ಧವಾಗಿರುವ ಸಂನ್ಯಾಸಧರ್ಮವನ್ನು ಆಚಾರ್ಯರು ಎತ್ತಿಹಿಡಿದರೇ ಹೊರತು ಅವರು ಬೌದ್ಧರನ್ನು ಅನುಕರಿಸಲಿಲ್ಲ. ಬೌದ್ಧ, ಜೈನ– ಮುಂತಾದವರೇ ವೇದೋಕ್ತವಾದ ಸಂನ್ಯಾಸಧರ್ಮಗಳನ್ನು ಕೆಲವು ಮಾರ್ಪಾಡುಗಳೊಂದಿಗೆ ಅನುಕರಣೆಮಾಡಿದ್ದಾರೆಂದು ಬೇಕಾದರೆ ಹೇಳಬಹುದು. ಅದು ನಿಜವೂ ಹೌದು.

**ಪ್ರಶ್ನೆ :– ಹಾಗಾದರೆ ಕರ್ಮಯೋಗ, ಕರ್ಮಸಂನ್ಯಾಸ, ಜ್ಞಾನನಿಷ್ಠೆ – ಎಂಬುದು ಕ್ರಮವಾದಂತಾಯಿತಲ್ಲ!**

ಉತ್ತರ :– ಹೌದು, ಹೀಗೆಯೇ ಸರಿ. ಆದರೆ ಕರ್ಮಯೋಗದಲ್ಲಿರುವಾಗಲೇ ಜ್ಞಾನನಿಷ್ಠೆಯು ಬಂದರೆ ಪ್ರಾರಬ್ಧಶೇಷಪ್ರತಿಬಂಧದಿಂದ ಗೃಹಸ್ಥನಾಗಿಯೇ ಜ್ಞಾನಿಯು ಇದ್ದಿರಬಹುದಾಗಿದೆ. ಒಟ್ಟಿನಲ್ಲಿ ಸಾಮಾನ್ಯರು ಫಲತ್ಯಾಗರೂಪಸಂನ್ಯಾಸವನ್ನೇ ಅವಲಂಬಿಸಬೇಕು. ಮುಂದೆ ಪ್ರಾರಬ್ಧಭೋಗವಿದ್ದಂತೆ ಪಾರಮಹಂಸ್ಯವೋ ಅಥವಾ ಗಾರ್ಹಸ್ಥ್ಯವೋ ಉಳಿದುಕೊಳ್ಳುತ್ತದೆ. ಜ್ಞಾನನಿಷ್ಠೆ ಬಂದಾಗ ನೋಡುವವರಿಗೆ ಎರಡು ವಿಧವಾಗಿ ಕಂಡರೂ ಜ್ಞಾನಿಗಳಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಇರುವದಿಲ್ಲ. ಆದ್ದರಿಂದ ಸಾಧನಗಳಲ್ಲೆಲ್ಲ ಮೊದಲು ಅನುಸರಿಸಬೇಕಾದದ್ದು ಮುಖ್ಯವಾಗಿ ಕರ್ಮಯೋಗ ಅರ್ಥಾತ್ ಫಲತ್ಯಾಗರೂಪಸಂನ್ಯಾಸವಾಗಿದೆ– ಎಂಬುದೊಂದು ಶ್ರೀಶಂಕರರ ದಿವ್ಯಸಂದೇಶವಾಗಿದೆ. (ಗೀ.೪–೧೯, ೧೨–೧೨).

------

## ೪. ಯೋಗ

**ಪ್ರಶ್ನೆ :– ಆಚಾರ್ಯರು ಹೇಳುವ ಆತ್ಮಾನುಭವವನ್ನು ಹೊಂದುವದಕ್ಕೆ ಯೋಗಾಭ್ಯಾಸದ ಅವಶ್ಯಕತೆ ಇದೆಯೆ ?**

ಉತ್ತರ :– ಆಚಾರ್ಯರು ಹೇಳುವ ಆತ್ಮಾನುಭವವು ಹೊಸದಾಗಿ ಹೊಂದುವದಲ್ಲ; ನಿತ್ಯವೂ ನಮ್ಮ ಸ್ವರೂಪವಾಗಿಯೇ ಇರತಕ್ಕದ್ದು. ಯೋಗಾಭ್ಯಾಸಾದಿಸಾಧನಗಳಿಂದ ಸಾಧಿಸತಕ್ಕ ಸಿದ್ಧಿಯಂತಲ್ಲ; ಸ್ವಯಂಸಿದ್ಧವಾಗಿರತಕ್ಕದ್ದು.

**ಪ್ರಶ್ನೆ :– ಆಚಾರ್ಯರು ಭಾಷ್ಯಗಳಲ್ಲಿ ಯೋಗಶಾಸ್ತ್ರದ ಬಗೆಗೆ ಏನೂ ಹೇಳಿಯೇ ಇಲ್ಲವೆ ?**

ಉತ್ತರ :– ಹೇಳಿದ್ದಾರೆ. ''ಯೋಗಿಗಳು ಕಣ್ಣು ಹಾಗೂ ಬೆಳಕುಗಳಿಲ್ಲದೆ ಬರಿಯ ಮನಸ್ಸಿನಿಂದಲೇ ಹೊರಜಗತ್ತಿನ ದೂರದೂರದ ಪದಾರ್ಥಗಳನ್ನು ನೋಡಬಲ್ಲರು'' (ಬೃ.೧–೪–೨), ''ಯೋಗಿಗಳಿಗೆ ಅಣಿಮಾದಿ ಅಷ್ಟಮಹಾಸಿದ್ಧಿಗಳು ಪ್ರಾಪ್ತವಾಗುತ್ತವೆ ಎಂಬುದನ್ನು ಅಲ್ಲಗಳೆಯಲಾಗದು'' (ಸೂ.೧–೩–೩೩) ಎಂದು ಹೇಳಿರುವರಲ್ಲದೆ ನಮ್ಮಂಥ ಸಾಮಾನ್ಯರಿಗೆ ಆ ಸಿದ್ಧಿಗಳಿಲ್ಲದಿದ್ದರೆ ಅವು ಇಲ್ಲವೇಇಲ್ಲವೆಂದು ಅಲ್ಲಗಳೆಯಬಾರದು ಎಂದೂ ಉಪದೇಶಿಸಿದ್ದಾರೆ. ಇದರಿಂದ ಯೋಗಸಿದ್ಧಿಯ ಬಗೆಗೆ ಆಚಾರ್ಯರಿಗಿದ್ದ ಗೌರವಾದರಗಳು ವ್ಯಕ್ತವಾಗುತ್ತವೆಯಲ್ಲದೆ ಸಾಮಾನ್ಯಜನರನ್ನೇ ಅವರು ಪ್ರತಿನಿಧಿಸಿ ಮಾತನಾಡಿರುವರೆಂದೂ ತಿಳಿದುಬರುತ್ತದೆ.

**ಪ್ರಶ್ನೆ :– ಹಾಗಾದರೆ ಯೋಗಾಭ್ಯಾಸಕ್ಕೂ ಆತ್ಮಾನುಭವಕ್ಕೂ ಸಂಬಂಧ ವಿದೆಯೊ, ಇಲ್ಲವೊ, ಎಂಬ ಬಗ್ಗೆ ಆಚಾರ್ಯರ ನಿಲುವು ಏನು ?**

ಉತ್ತರ :– ಪರಮಾರ್ಥತತ್ತ್ವದ ಅನುಭವಕ್ಕೂ ಯೋಗಾಭ್ಯಾಸದಿಂದುಂಟಾಗುವ ಅನುಭವಗಳಿಗೂ ಯಾವ ಸಂಬಂಧವೂ ಇಲ್ಲ. ಯೋಗ ಮಾಹಾತ್ಮ್ಯಗಳು (ಪವಾಡ) ಹಾಗೂ ಅವುಗಳನ್ನು ತೋರಿಸಿರುವ ಸಿದ್ಧಪುರುಷರ ಅನುಭವಗಳಿಂದ ತತ್ತ್ವನಿರ್ಣಯವಾಗಲಾರದೆಂದೇ ಆಚಾರ್ಯರು ಸ್ಪಷ್ಟಪಡಿಸಿದ್ದಾರೆ. (ಸೂ. ೨–೧–೧).

**ಪ್ರಶ್ನೆ :– ಹಾಗಾದರೆ ಆತ್ಮಾನುಭವಕ್ಕೆ ಯೋಗಾಭ್ಯಾಸವಲ್ಲದಿದ್ದರೆ ಇನ್ನೇನು ಸಾಧನ ?**

ಉತ್ತರ :– ''ವೇದಾಂತವಾಕ್ಯಗಳ ಶ್ರವಣಾದಿಗಳಿಂದಲೇ ತತ್ತ್ವಜ್ಞಾನವು ಹುಟ್ಟುತ್ತದೆ'' (ಸೂ.೨–೧–೩) ಎಂದು ಅವರು ನಿಶ್ಚಯವಾಗಿ ಹೇಳಿದ್ದಾರೆ. ಪಾತಂಜಲಯೋಗಶಾಸ್ತ್ರವು ದ್ವೈತಶಾಸ್ತ್ರವಾಗಿದ್ದು ಅವೈದಿಕವಾಗಿದೆಯಾದ್ದರಿಂದ ಅದರಿಂದ ಅದ್ವೈತಾತ್ಮಾನುಭವವು ಉಂಟಾಗುವ ಸಂಭವವೇ ಇಲ್ಲ ಎಂಬುದನ್ನು ಇದೇ ಸಂದರ್ಭದಲ್ಲಿಯೇ ಹೇಳಿದ್ದಾರೆ. ಆದ್ದರಿಂದ ಪಾತಂಜಲಯೋಗಶಾಸ್ತ್ರಕ್ಕೂ ವೇದಾಂತಶಾಸ್ತ್ರಕ್ಕೂ ಯಾವ ಸಂಬಂಧವೂ ಇಲ್ಲ.

**ಪ್ರಶ್ನೆ :– ಉಪನಿಷತ್ತುಗಳಲ್ಲಿ ಹಾಗೂ ಗೀತೆಯಲ್ಲಿ ಯೋಗ, ಸಮಾಧಿ – ಮುಂತಾದ ಶಬ್ದಗಳಿವೆಯಲ್ಲ!**

ಉತ್ತರ :– ಹೌದು ಇವೆ, ಆದರೆ ಅವುಗಳಿಗೆ ಸಂದರ್ಭಾನುಸಾರ ಬೇರೆಬೇರೆಯ ಅರ್ಥಗಳಿರುವವೆಂದು ಆಚಾರ್ಯರು ತಿಳಿಸಿದ್ದಾರೆ.

**ಪ್ರಶ್ನೆ :– ಆ ಸಂದರ್ಭಗಳನ್ನು ಸ್ವಲ್ಪದರಲ್ಲಿ ವಿವರಿಸುತ್ತೀರಾ ?**

ಉತ್ತರ :– ಆಗಲಿ. ಸೂ. ೨–೧–೩ರಲ್ಲಿ ವೈದಿಕಧ್ಯಾನ ಎಂದರೆ ವೇದದಲ್ಲಿ ಹೇಳಿದ ಉಪಾಸನಾರೂಪವಾದ ಧ್ಯಾನ ಅಥವಾ ಆತ್ಮಾನುಭವಕ್ಕೆ ಅಂಗವಾಗಿ ಹೇಳಿರುವ ನಿದಿಧ್ಯಾಸನವನ್ನು 'ಯೋಗ' ಎಂದಿದ್ದಾರೆ. ಇದೇ ನಿದಿಧ್ಯಾಸನವನ್ನು ಅಧ್ಯಾತ್ಮಯೋಗವೆಂದು ಕಠದಲ್ಲಿಯೂ (೩–೧೩), ಮನೋನಿಗ್ರಹಯೋಗವೆಂದು ಮಾಂಡೂಕ್ಯದಲ್ಲಿಯೂ (ಕಾ. ೩–೪೦), ಧ್ಯಾನಯೋಗವೆಂದು ಗೀತೆಯಲ್ಲಿಯೂ (ಅ. ೬) ಕರೆದಿದ್ದಾರೆ. ಇವೆಲ್ಲವುಗಳೂ ಚಿತ್ತವನ್ನು ವಿಷಯಗಳ ಚಿಂತನೆಯಿಂದ ಹಿಂದಿರುಗಿಸಿ ಅನುಭವಸ್ವರೂಪನಾದ ಆತ್ಮನಲ್ಲಿಯೇ ನೆಲೆಗೊಳಿಸುವ ವೈದಿಕ ಯೋಗಗಳೇ ಹೊರತು ಪಾತಂಜಲಯೋಗಗಳಲ್ಲ.

**ಪ್ರಶ್ನೆ :– ಗೀತೆಯ ಆರನೆಯ ಅಧ್ಯಾಯದಲ್ಲಿ ಆಸನಪ್ರಾಣಾಯಾಮಾದಿಗಳನ್ನೂ ಎಂಟನೆಯ ಅಧ್ಯಾಯದಲ್ಲಿ ಪ್ರಾಣನಿರೋಧಕ್ರಮವನ್ನೂ ಹೇಳಿರುವದರಿಂದ ಪಾತಂಜಲಯೋಗವೂ ಶ್ರುತಿಸ್ಮೃತಿಸಮ್ಮತವೆಂದೇ ಆಗುವದಿಲ್ಲವೆ ?**

ಉತ್ತರ :– ನಿಜ. ಆರನೆಯ ಅಧ್ಯಾಯದಲ್ಲಿ ಯಮನಿಯಮ, ಆಸನ ಪ್ರಾಣಾಯಾಮ, ಆಹಾರಾದಿನಿಯಂತ್ರಣ– ಮುಂತಾದ್ದನ್ನು ನಿದಿಧ್ಯಾಸನಕ್ಕೆ ಅಂಗವಾಗಿ ಒಪ್ಪಿರುತ್ತದೆ. ಆದ್ದರಿಂದ ಅಷ್ಟರವರೆಗೆ ಪಾತಂಜಲಯೋಗದ ಅಂಶವನ್ನು ಅವಶ್ಯವಾಗಿ ಆಚಾರ್ಯರೂ ಒಪ್ಪಿಯೇ ಇದಾರೆ. ಆದರೆ ಧಾರಣಾಧ್ಯಾನಸಮಾಧಿ ಎಂಬ ಯೋಗಶಾಸ್ತ್ರದ ಕ್ರಮಕ್ಕೂ ಈ ನಿದಿಧ್ಯಾಸನದಲ್ಲಿ ಆತ್ಮಸ್ವರೂಪಾನುಭವವನ್ನೇ ಏಕಾಗ್ರತಾದೃಷ್ಟಿಯಿಂದ ನಿರೀಕ್ಷಿಸುವ ವಸ್ತುತಂತ್ರದ ಕ್ರಮಕ್ಕೂ ಬಹಳ ವ್ಯತ್ಯಾಸವಿದೆ. ಇನ್ನು ಎಂಟನೆಯ ಅಧ್ಯಾಯದಲ್ಲಿ ಪ್ರಾಣಸಂಯಮನಪೂರ್ವಕವಾಗಿ ನಾಭಿಯಿಂದ ನಡುನೆತ್ತಿಯವರೆಗೆ ಪ್ರಾಣಗಳನ್ನು ಏರಿಸಿ ಓಂಕಾರಚಿಂತನೆ ಮಾಡುವದಕ್ಕಾಗಿ ವಿಧಿಸಿದ ಯೋಗವನ್ನು 'ಧಾರಣಾಯೋಗ' ಎಂದು ಕರೆದಿದ್ದಾರಷ್ಟೆ ! (ಗೀ.೯, ಅವ) ಇಲ್ಲಿಯೂ ಪ್ರಾಣನಿರೋಧ, ಸಂನ್ಯಾಸಾದಿಗಳು ಪಾತಂಜಲಯೋಗಕ್ಕೆ ಸಮಾನವಾಗಿಯೇ ಇವೆ. ಆದರೂ ಶ್ರುತ್ಯುಕ್ತವಾದ ಓಂಕಾರೋಪಾಸನೆಯೇ ಇಲ್ಲಿ ಪ್ರಧಾನವಾಗಿದ್ದು ಪ್ರಾಣಧಾರಣಯೋಗವು ಅದಕ್ಕೆ ಸಹಾಯಕವಾಗಿದೆ. ಆದ್ದರಿಂದ ಪಾತಂಜಲಯೋಗವು ಕೆಲವಂಶಗಳಲ್ಲಿ ವೈದಿಕಯೋಗಕ್ಕೆ ಸಹಕಾರಿಯಾಗಿದ್ದರೂ ಅದು ಪೂರ್ಣವಾಗಿ ಶ್ರುತಿಸ್ಮೃತಿಸಮ್ಮತವೆಂದು ತಿಳಿಯಲಾಗದು.

**ಪ್ರಶ್ನೆ:– ಆಚಾರ್ಯರ ಭಾಷ್ಯದಲ್ಲಿ ಯೋಗ ಎಂಬ ಪದಕ್ಕೆ ಮತ್ತೆ ಯಾವ ಅರ್ಥಗಳಿವೆ ?**

ಉತ್ತರ :– ಯೋಗ ಎಂಬುದಕ್ಕೆ ಆತ್ಮಜ್ಞಾನನಿಷ್ಠೆ ಎಂದು ಗೀತೆಯ ೪–೧ರಲ್ಲಿಯೂ ವಿವೇಕಪ್ರಜ್ಞೆ ಎಂದು ೨–೫೪ರಲ್ಲಿಯೂ ಅರ್ಥಬರೆದಿದ್ದಾರೆ. ಇನ್ನು ನಿಷ್ಕಾಮಕರ್ಮಾನುಷ್ಠಾನವನ್ನು ಕರ್ಮಯೋಗವೆಂದೂ (ಗೀ. ೬–೩) ಭಗವಂತನಲ್ಲಿ – ಆತ್ಮಸ್ವರೂಪದಲ್ಲಿ – ಅತ್ಯಂತಪ್ರೇಮವನ್ನಿಟ್ಟುಕೊಂಡು ಸಾಧನೆಯಲ್ಲಿ ತೊಡಗುವ ಪ್ರೇಮಸ್ಥಿತಿಯನ್ನು ಭಕ್ತಿಯೋಗವೆಂದೂ ಕರೆದಿದ್ದಾರೆ (೬–೪೭). ಇದಲ್ಲದೆ ಭಗವಂತನು ಅದ್ವಿತೀಯನಾಗಿದ್ದು ಜಗದ್ರೂಪದಿಂದ ತೋರಿಕೊಳ್ಳುವ ಅಘಟಿತಘಟನೆಯನ್ನೂ ಯೋಗ ಎಂದು ಕರೆದಿರುವದಾಗಿ ಹೇಳಿದ್ದಾರೆ. (ಗೀ.೯–೫, ೧೦–೭, ೧೦–೧೫, ೧೧–೮).

ಕರ್ಮಯೋಗಧ್ಯಾನಯೋಗಗಳೆರಡೂ ಜ್ಞಾನನಿಷ್ಠೆಗೆ ಉಪಾಯಗಳಾಗಿರುವದರಿಂದ ಯೋಗವೆಂದರೆ ಉಪಾಯವೆಂದೂ ಶ್ರೀಶಂಕರರು ವಿವರಿಸಿದ್ದಾರೆ (ಗೀ.

೨–೨೯). ಮತ್ತು ಅದೇ ಸಂದರ್ಭದಲ್ಲಿ ಆರನೆಯ ಅಧ್ಯಾಯದ ಧ್ಯಾನಯೋಗವನ್ನು ಸಮಾಧಿಯೋಗ ಎಂದರೆ ಆತ್ಮಸ್ವರೂಪಾನುಭವದಲ್ಲಿ ಮನಸ್ಸನ್ನು ಲಯಗೊಳಿಸಿಕೊಳ್ಳು ವದು ಎಂಬರ್ಥದಲ್ಲಿ ಕರೆದಿದ್ದಾರೆ.

**ಪ್ರಶ್ನೆ :– ಸಮಾಧಿಶಬ್ದಕ್ಕೆ ಯಾವಯಾವ ಅರ್ಥಗಳನ್ನು ಹೇಳಿದ್ದಾರೆ ?**

ಉತ್ತರ :– ಸಮಾಧಿ ಎಂದರೆ ಬುದ್ಧಿ ನಿಶ್ಚಯ– ಎಂಬರ್ಥವನ್ನು ಗೀತೆಯ ೨–೪೪ ರಲ್ಲಿ ಹೇಳಿ ಪುನಃ ೨–೫೩ ರಲ್ಲಿ ಸಮಾಧಿ ಎಂದರೆ ಆತ್ಮ ಎಂದೂ ಹೇಳಿದ್ದಾರೆ. 'ಸಮಾಧಿಸ್ಥ' (ಗೀ.೨–೫೪) ಎಂಬಲ್ಲಿ ಆತ್ಮಜ್ಞಾನನಿಷ್ಠೆ ಎಂದೇ ಅರ್ಥ ; ಮತ್ತು ಮಾಂಡೂಕ್ಯಕಾರಿಕೆಯ ೩–೩೭ ರಲ್ಲಿ ಸಮಾಧಿಶಬ್ದಕ್ಕೆ ಆತ್ಮನಲ್ಲಿ ನೆಲೆನಿಂತ ನಿಮಿತ್ತದ ಪ್ರಜ್ಞೆ ಅರ್ಥಾತ್ ಆತ್ಮಜ್ಞಾನನಿಷ್ಠೆಯೆಂತಲೂ ಆತ್ಮಸ್ವರೂಪವೆಂತಲೂ ವಿವರಿಸಿದ್ದಾರೆ.

ಒಟ್ಟಿನಲ್ಲಿ ಪಾತಂಜಲಯೋಗದ ಸಮಾಧಿ, ಯೋಗ – ಮುಂತಾದವುಗಳನ್ನು ಭಾಷ್ಯದಲ್ಲಿ ಬಳಸಿಕೊಂಡಿರುವದಿಲ್ಲ. ಆ ಶಬ್ದಗಳಿವೆ, ಆದರೆ ಅರ್ಥವು ಮಾತ್ರ ಬೇರೆಬೇರೆಯಾಗಿದೆ. ಇದನ್ನು ಲಕ್ಷ್ಯದಲ್ಲಿಟ್ಟರೆ ಅದ್ವೈತಜ್ಞಾನಾನುಭವಕ್ಕೆ ವೇದಾಂತ ವಾಕ್ಯಜನ್ಯಜ್ಞಾನವಲ್ಲದೆ ಪಾತಂಜಲಯೋಗಶಾಸ್ತ್ರಾಭ್ಯಾಸವೂ ಬೇಕೆಂಬ ಭ್ರಾಂತಿಯು ದೂರವಾಗುವದು.

------

## ೫. ಸಾಂಖ್ಯ

**ಪ್ರಶ್ನೆ :– ಸಾಂಖ್ಯ ಎಂಬ ಮಾತಿಗೆ ಆಚಾರ್ಯರು ಯಾವ ಅರ್ಥವನ್ನು ಹೇಳಿದ್ದಾರೆ ?**

ಉತ್ತರ :– ವೇದೋಕ್ತವಾದ ಆತ್ಮವಿಚಾರಪದ್ಧತಿಗೆ ಆಚಾರ್ಯರು ಸಾಂಖ್ಯ ವೆನ್ನುವರು. ಸಾರ್ವತ್ರಿಕಪೂರ್ಣಾನುಭವದ ಆಧಾರದಮೇಲೆ ವಿಚಾರಮಾಡಿ ಆ ಅನುಭವಸ್ವರೂಪದಲ್ಲಿ ನೆಲೆನಿಲ್ಲುವ ಕ್ರಮವೇ ಇದು.

**ಪ್ರಶ್ನೆ :– ಹಾಗಾದರೆ ಕಪಿಲಋಷಿಪ್ರಣೀತಸಾಂಖ್ಯಕ್ಕೂ ಇದಕ್ಕೂ ವ್ಯತ್ಯಾಸವಿದ್ದಂತಾಯಿತಲ್ಲ !**

ಉತ್ತರ :– ಹೌದು, ಕಾಪಿಲಸಾಂಖ್ಯವು ಅವೈದಿಕವಾದ ದ್ವೈತಶಾಸ್ತ್ರ ; ಇದು ವೈದಿಕವಾದ ಅದ್ವೈತಶಾಸ್ತ್ರ ; ಮತ್ತು ವಿಚಾರಸಮಕಾಲದಲ್ಲಿಯೇ ಅನುಭವಕ್ಕೆ ಬರುವ ಶಾಸ್ತ್ರವಿದು.

**ಪ್ರಶ್ನೆ :– ಭಗವದ್ಗೀತೆಯಲ್ಲಿ ಗುಣತ್ರಯಾದಿಗಳನ್ನು ಕಾಪಿಲಸಾಂಖ್ಯ ದಂತೆಯೇ ವಿವರಿಸಿರುವದರಿಂದ ಅದೂ ಶ್ರುತಿಸ್ಮೃತಿಸಮ್ಮತವೆಂದೇ ಆಗುವದಿಲ್ಲವೆ?**

ಉತ್ತರ :– ಇಲ್ಲ, ಇಲ್ಲಿಯೂ ಸಾಂಖ್ಯಶಾಸ್ತ್ರವು ಅವೈದಿಕದ್ವೈತಶಾಸ್ತ್ರವೆಂದು ಹೇಳಿ ಅದರಲ್ಲಿಯೂ ನಮಗೆ ವಿರೋಧವಲ್ಲದ ಅಂಶಗಳನ್ನು ಅವಶ್ಯವಾಗಿ ಸ್ವೀಕರಿಸುವೆವೆಂದೇ ಆಚಾರ್ಯರು ಕಂಠೋಕ್ತವಾಗಿ ಹೇಳಿದ್ದಾರೆ (ಸೂ.೨–೧–೩ ಗೀ.೧೮–೧೯). ಒಟ್ಟಿನಲ್ಲಿ 'ಪರಮತಮಪ್ರತಿಷಿದ್ಧಂ ಅನುಮತಂ ಭವತಿ' (ಸೂ.೨–೪–೧೨). ಎರಡನೆಯವರ ಮತವನ್ನು ಯಾವ ಭಾಗದಲ್ಲಿ ನಾವು ಖಂಡಿಸಿರುವದಿಲ್ಲವೋ ಆ ಭಾಗವು ನಮಗೆ ಒಪ್ಪಿಗೆಯಾಗಿರುವದೆಂದು ತಿಳಿಯಬೇಕು– ಎಂಬುದೇ ಆಚಾರ್ಯರ ದೃಷ್ಟಿಕೋನವಾಗಿದೆ.

**ಪ್ರಶ್ನೆ :– ಅವ್ಯಕ್ತ, ಪ್ರಕೃತಿ– ಮುಂತಾದ ಸಾಂಖ್ಯದರ್ಶನದ ಶಬ್ದಗಳು ವೇದಾಂತದರ್ಶನದಲ್ಲಿಯೂ ಕಂಡುಬರುತ್ತವೆಯಲ್ಲವೆ ?**

ಉತ್ತರ :– ಹೌದು, ಶಬ್ದಗಳು ಒಂದೇ ಬಗೆಯಾಗಿದ್ದರೂ ಅವುಗಳನ್ನು ಬೇರೆಬೇರೆ ಅರ್ಥಗಳಲ್ಲಿ ಉಪಯೋಗಿಸಿದೆ. ಅವಿದ್ಯೆಯಿಂದ ಆತ್ಮನಲ್ಲಿ ಆರೋಪಿಸಲ್ಪಟ್ಟ ಈ ವ್ಯಕ್ತಪ್ರಪಂಚದ ದೃಷ್ಟಿಯಿಂದ ಇದರ ಬೀಜರೂಪವಾದ ಅವ್ಯಕ್ತವೂ ಅವಿದ್ಯೆಯಿಂದಲೇ ಆತ್ಮನಲ್ಲಿ ಆರೋಪಿಸಲ್ಪಟ್ಟಿದೆ (ಅವಿದ್ಯಾಕಲ್ಪಿತ) ; ಇದು ಆತ್ಮನನ್ನು ಳಿದು ಸ್ವತಂತ್ರವಲ್ಲ, ಆತ್ಮನಲ್ಲಿ ನಿಜವಾಗಿ ಇಲ್ಲ (ಅನಿರ್ವಚನೀಯ) ; ಇದರ ಉಪಾಧಿಯಿಂದಲೇ ಆತ್ಮನಿಗೆ ಈಶ್ವರತ್ವವು ಬಂದಿದೆ (ಈಶ್ವರಾಧೀನ, ಈಶ್ವರಶಕ್ತಿ) ; ಇದು ತೋರುತ್ತಲೂ ಅಡಗುತ್ತಲೂ ಇರುವ ಹುಸಿತೋರಿಕೆಯಾಗಿದೆ (ವ್ಯಕ್ತಾವ್ಯಕ್ತಾತ್ಮಕ)– ಎಂದು ಶಾಂಕರವೇದಾಂತದಲ್ಲಿ ಅಂಗೀಕರಿಸಿದೆ (ಸೂ.೧–೪–೧ರಿಂದ ೭ರವರೆಗಿನ ಭಾಷ್ಯಭಾಗವನ್ನು ಈ ಬಗ್ಗೆ ನೋಡಿರಿ). ಆದರೆ ಸಾಂಖ್ಯರಿಗೆ ಈ ಪ್ರಕೃತಿಯು ಸತ್ಯತತ್ತ್ವವಾಗಿದೆ. ಆದ್ದರಿಂದ ಕಾಪಿಲಸಾಂಖ್ಯಶಾಸ್ತ್ರಕ್ಕೂ ಆಚಾರ್ಯರ ಸಿದ್ಧಾಂತಕ್ಕೂ ಯಾವ ಸಂಬಂಧವೂ ಇಲ್ಲ. ಇದನ್ನರಿಯದೆ ಈಚೆಗೆ ವೇದಾಂತದ ಉಪದೇಶದಲ್ಲಿ ಸಾಂಖ್ಯತತ್ತ್ವಗಳನ್ನೇ ಸೇರಿಸಿಕೊಂಡು ಹೇಳುವ ಪದ್ಧತಿಯು ಬಂದುಬಿಟ್ಟಿದೆ.

**ಪ್ರಶ್ನೆ :– ಸಾಂಖ್ಯ (ಕಾಪಿಲ) ಶಾಸ್ತ್ರದಲ್ಲಿ ಸ್ವೀಕರಿಸತಕ್ಕ ಹಾಗೂ ಬಿಡತಕ್ಕ ಅಂಶಗಳು ಯಾವಯಾವವು ?**

ಉತ್ತರ :– (೧) ಆತ್ಮನು ಚಿನ್ಮಾತ್ರನು, ಅಸಂಗನು. (೨) ಆತ್ಮಾನಾತ್ಮರ ಕಲಬೆರಕೆಯಿಂದ ಬಂಧವಾಗಿದೆ. (೩) ವಿವೇಕದಿಂದ ಮೋಕ್ಷವಾಗುತ್ತದೆ– ಇವೇ ಮುಂತಾದವು ಸ್ವೀಕೃತಾಂಶಗಳಾದರೆ, (1) ಪ್ರಕೃತಿ ಸತ್ಯ. (2) ಪುರುಷರು ಅನೇಕರು. (3) ಕರ್ಮಗಳು ಸಂಪೂರ್ಣವಾಗಿ ಸರ್ವಥಾ ತ್ಯಾಜ್ಯ– ಇವುಗಳು ಅಸ್ವೀಕೃತ ಅಂಶಗಳೆಂದು ಸಂಕ್ಷಿಪ್ತವಾಗಿ ಹೇಳಬಹುದು.

———————

## ೬. ಇತರ ದರ್ಶನಗಳು

(ವೈಶೇಷಿಕ, ನೈಯಾಯಿಕ, ಜೈನ, ಚಾರ್ವಾಕ, ಬೌದ್ಧ)

**ಪ್ರಶ್ನೆ :– ವೈಶೇಷಿಕ, ನೈಯಾಯಿಕ, ಜೈನ– ಮುಂತಾದ ದರ್ಶನಗಳ ಬಗ್ಗೆ ಆಚಾರ್ಯರ ನಿಲುವು ಏನು ?**

ಉತ್ತರ :– ವೈಶೇಷಿಕರ (ಕಣಾದರ) ದರ್ಶನವು ಅರ್ಧವೈನಾಶಿಕವಾಗಿದೆ ಎಂದರೆ ಅರ್ಧಶೂನ್ಯವಾದವಿದ್ದಂತಿದೆ. ಅಸತ್ಕಾರ್ಯವಾದವನ್ನು ಒಪ್ಪುವ ಈ ದರ್ಶನವು ಬರಿಯ ಶುಷ್ಕತರ್ಕಪ್ರಧಾನವಾಗಿದೆಯಾದ್ದರಿಂದಲೂ ಶಿಷ್ಟರಾರೂ ಸ್ವೀಕರಿಸಿಲ್ಲವಾದ್ದರಿಂದಲೂ ಇದು ಸರ್ವಥಾ ತ್ಯಾಜ್ಯ ಎಂದು ಶಂಕರರು ನಿರ್ಣಯಿಸಿದ್ದಾರೆ (ಸೂ.೨–೧–೧೨ ಮತ್ತು ೨–೨–೧೮ನ್ನು ನೋಡಿರಿ). ತೈ.೧– ಅವತರಣಿಕೆ ಗೀ.೧೮–೪೮– ಮುಂತಾದ ಸ್ಥಲಗಳಲ್ಲಿ ಶುಷ್ಕತರ್ಕವನ್ನು ತೋರಿಸಲಾಗಿದೆ.

**ಪ್ರಶ್ನೆ :– ನೈಯಾಯಿಕರ ದರ್ಶನದಲ್ಲಿ ಆಚಾರ್ಯರು ಯಾವಯಾವ ಪ್ರಮೇಯಗಳನ್ನೊಪ್ಪಿದ್ದಾರೆ ?**

ಉತ್ತರ :– ನೈಯಾಯಿಕರು ಮಿಥ್ಯಾಜ್ಞಾನವೇ ಬಂಧಕ್ಕೆ ಕಾರಣವೆಂದು ಹೇಳಿರುವದನ್ನು ಮಾತ್ರ ಆಚಾರ್ಯರು ಅನುಮೋದಿಸಿರುತ್ತಾರೆ. ಮಿಕ್ಕನಾದ ಅವರ ಹತ್ತೊಂಬತ್ತು ತತ್ತ್ವಗಳ ಜ್ಞಾನ, ಅದರಿಂದಾಗುವ ಮೋಕ್ಷ– ಮುಂತಾದದ್ದನ್ನು ಒಪ್ಪಿರುವದಿಲ್ಲ. ಇನ್ನು ಜೈನದರ್ಶನವನ್ನು ಸೂತ್ರಭಾಷ್ಯದಲ್ಲಿ ಅನುವಾದಿಸಿಕೊಂಡು ''ಜೈನಸಿದ್ಧಾಂತವು (ಆರ್ಹತಮತವು) ಯಾವದೊಂದನ್ನೂ ನಿರ್ಣಯಿಸಿ ನಿಶ್ಚಯವಾಗಿ ತಿಳಿಸದೆ 'ಹಾಗೂ ಆಗಬಹುದು ಹೀಗೂ ಆಗಬಹುದು' ಎಂದು ಹೇಳುತ್ತಿದೆಯಾದ್ದರಿಂದ ಇದರಲ್ಲಿ ಒಂದೂ ನಿಶ್ಚಿತಾಭಿಪ್ರಾಯವಿಲ್ಲ. ಹಾಗೂ ಪುದ್ಗಲಸಂಜ್ಞಕ ಪರಮಾಣುಗಳಿಂದ ಸಂಘಾತಗಳು ಹುಟ್ಟುವವೆಂದು ಹೇಳುವ ಅವರ ವಾದವನ್ನು ಹಿಂದೆ ವೈಶೇಷಿಕರ ಪರಮಾಣುವಾದಖಂಡನೆಯಿಂದಲೇ ಖಂಡಿಸಿದಂತಾಗಿದೆ'' ಎಂದು ಹೇಳಿ ಅದನ್ನು ಕೈಬಿಟ್ಟಿದ್ದಾರೆ (ಸೂ.೨–೨–೩೩ ರಿಂದ ೩೬).

**ಪ್ರಶ್ನೆ :– ದೇಹವೇ ಆತ್ಮನು ಎನ್ನುವ ಚಾರ್ವಾಕಮತವನ್ನು ಆಚಾರ್ಯರು ಹೇಗೆ ಖಂಡಿಸಿದ್ದಾರೆ ?**

ಉತ್ತರ :– ಚೈತನ್ಯವು ಭೂತಗಳಿಂದ ಉತ್ಪತ್ತಿಯಾಗುವದರಿಂದ (Bye-product) ಅದು ದೇಹದ ಗುಣವೇ ಆಗಿದೆ ಎಂಬುದು ಚಾರ್ವಾಕರ ಮತವು. ಈಗಿನ ಅಲೋಪತಿ ಪದ್ಧತಿಯ ವೈದ್ಯರ ಮತವೂ ಇದೇ ಆಗಿದೆ. ರಕ್ತಚಲನ, ಹೃದಯ, ಪುಪ್ಪುಸಗಳ ಕ್ರಿಯೆ ನಡೆದರೆ ಚೈತನ್ಯವು ಹುಟ್ಟುವದೆಂದೇ ಅವರೂ ತಿಳಿದಿದ್ದಾರೆ. ಆದರೆ ಚೈತನ್ಯಕ್ಕೆ ಭೌತಿಕದೇಹವೂ ಭೂತಗಳೂ ವಿಷಯವಾಗಿವೆ. ಯಾವದು ವಿಷಯ

ವಾಗುವದೋ ಮತ್ತು ಯಾವದಕ್ಕೆ ಅದು ವಿಷಯವಾಗುವದೋ ಆ ಚೈತನ್ಯಕ್ಕಿಂತ ಅದು ಬೇರೆಯಾಗಿಯೇ ಇರುತ್ತದೆ. ಅಗ್ನಿಯು ತನ್ನನ್ನೇ ತಾನು ಸುಟ್ಟುಕೊಳ್ಳಲಾರದಷ್ಟೆ? ನಟನು ಎಂಥ ಶಿಕ್ಷಣವುಳ್ಳವನಾದರೂ ತನ್ನ ಹೆಗಲನ್ನು ತಾನು ಏರಲಾರನಷ್ಟೆ ? ಹೀಗೆಯೇ ಭೂತಗಳಿಂದ ಹುಟ್ಟಿದ ಚೈತನ್ಯವು ಭೂತಗಳನ್ನು (ದೇಹವೇ ಮೊದಲಾದವುಗಳನ್ನು) ವಿಷಯೀಕರಿಸಲಾರದು. ಚೈತನ್ಯಕ್ಕೆ ಭೌತಿಕದೇಹವು ವಿಷಯವೇ ಆಗಿದೆಯಾದ್ದರಿಂದ ಚೈತನ್ಯವು ಭೂತಗಳ ಕಾರ್ಯ ಎಂಬುದು ಯುಕ್ತಿಯುಕ್ತವಲ್ಲ(ಸೂ.ಭಾ. ೩–೩–೫೪). ಇದಲ್ಲದೆ ಸ್ವಪ್ನದಲ್ಲಿ ಈಗಿನ ದೇಹೇಂದ್ರಿಯಾದಿಗಳು ಇಲ್ಲದಿದ್ದರೂ ಜೀವನ ವ್ಯವಹಾರಗಳೆಲ್ಲವೂ ಗೋಚರಿಸುವವೆಂಬ ಸಾರ್ವತ್ರಿಕಾನುಭವಕ್ಕೆ ಈ ವಾದವು ವಿರುದ್ಧವಾಗಿದೆಯಾದ್ದರಿಂದ ಇದು ಸರ್ವಥಾ ಗ್ರಾಹ್ಯವಲ್ಲ ಎಂದು ಹೇಳಿದ್ದಾರೆ. ಸೂ.ಭಾ.೨–೧–೧೪ರಲ್ಲಿ 'ಏತೇನ ಸ್ವಪ್ನದೃಶೋಽವಗತ್ಯಬಾಧನೇನ.... ಎಂಬ ವಾಕ್ಯವನ್ನೂ, ಬೃ.ಭಾ.೧–೪–೧೦ರಲ್ಲಿ 'ಕಿಂ ದ್ವೇ ದೃಷ್ಟೀ...... ಅನುಮಾನಾಚ್ಚ ......' ಎಂಬ ವಾಕ್ಯಗಳನ್ನೂ ನೋಡಿರಿ.

**ಪ್ರಶ್ನೆ :– ಗೌಡಪಾದರು ವಿಜ್ಞಾನವಾದವನ್ನನುಮೋದಿಸಿ ಬೌದ್ಧರ ತತ್ತ್ವಶಾಸ್ತ್ರದಲ್ಲಿಯ ಶಬ್ದಗಳನ್ನೇ ಪ್ರಯೋಗಿಸಿ ಕಾರಿಕೆಗಳನ್ನು ರಚಿಸಿರುವದರಿಂದ ಬೌದ್ಧರ ತತ್ತ್ವಗಳು ವೇದಾಂತಿಗಳಿಗೆ ಸಮ್ಮತವೆಂದು ಹೇಳಬಹುದೆ ?**

ಉತ್ತರ :– ಇಲ್ಲ, ವಿಜ್ಞಾನವಾದವನ್ನು ಒಂದು ಹಂತದವರೆಗೆ – ಬಾಹ್ಯಾಸ್ತಿತ್ವವಾದಿಯನ್ನು ಜಯಿಸುವಮಟ್ಟಿಗೆ – ಅನುಮೋದಿಸಿದರೂ ಮುಂದೆ ಆ ವಿಜ್ಞಾನವಾದವನ್ನೂ ಖಂಡಿಸಿ ಅಜಾದ್ವಯಬ್ರಹ್ಮತತ್ತ್ವವನ್ನೇ ಪ್ರತಿಪಾದಿಸಿರುವದು ಗೌಡಪಾದರ ಗ್ರಂಥದಲ್ಲಿ ಕಂಡುಬರುತ್ತದೆ. ಶ್ರೀಶಂಕರರಂತೂ ಸೂತ್ರಭಾಷ್ಯದಲ್ಲಿ ವಿಜ್ಞಾನವಾದ ಶೂನ್ಯವಾದಗಳನ್ನು ಚೆನ್ನಾಗಿಯೇ ಖಂಡಿಸಿದ್ದಾರೆ. ಉಪನಿಷದ್ಭಾಷ್ಯಗಳಲ್ಲಿಯೂ ಅಲ್ಲಲ್ಲಿ ಶೂನ್ಯವಾದವನ್ನು ಅವರು ಖಂಡಿಸಿದ್ದಾರೆ. ಆದ್ದರಿಂದ ಕೇವಲ ಬೌದ್ಧದರ್ಶನದ ಶಬ್ದಗಳನ್ನು ಪ್ರಯೋಗಿಸಿದ ಮಾತ್ರಕ್ಕೇ ಅವರ ತತ್ತ್ವವನ್ನೇನೂ ವೇದಾಂತಿಗಳು ಒಪ್ಪಿದಂತಾಗಲಿಲ್ಲ. ಈ ಬಗ್ಗೆ ವಿಶದವಾಗಿ ತಿಳಿಯಬೇಕೆನ್ನುವವರು ಕಾರ್ಯಾಲಯದಲ್ಲಿ ಪ್ರಕಟವಾಗಿರುವ ಕನ್ನಡದ 'ಗೌಡಪಾದ ಹೃದಯ', ಮತ್ತು ಸಂಸ್ಕೃತದ 'ಮಾಂಡೂಕ್ಯ ರಹಸ್ಯವಿವೃತಿಃ' ಎಂಬ ಗ್ರಂಥಗಳನ್ನು ನೋಡಬೇಕು.

ಶುದ್ಧವೈದಿಕರಾದ ಆಚಾರ್ಯರು ಅತ್ಯಂತವಾಗಿ ಅವೈದಿಕರಾದ ಬೌದ್ಧರ ತತ್ತ್ವಗಳನ್ನನುಮೋದಿಸುವದು ಸಾಧ್ಯವೇ ಇಲ್ಲ. ಆದರೂ ಅವರು ಹೇಳುವ ವಿಜ್ಞಾನವೇ ವಸ್ತುರೂಪವಾಗಿ ತೋರುವದೆಂಬುದೇ ಮುಂತಾದ ಹಲವು ಅನುಭವ ಸಮ್ಮತ ಸಂಗತಿಗಳನ್ನು ಒಪ್ಪಿರುವದು ಸುಳ್ಳಲ್ಲ. ಯಾವದರಲ್ಲಿಯೇ ಆಗಲಿ ಸಮಂಜಸ

ವಾದದ್ದನ್ನು ತೆಗೆದುಕೊಳ್ಳಲು ಆಚಾರ್ಯರು ಸದಾಸಿದ್ಧರೆಂಬುದನ್ನು ಹಿಂದೆಯೇ ಹೇಳಿದೆಯಷ್ಟೆ. ಅಸಮಂಜಸವಾದುದನ್ನು – ಅದು ವೈದಿಕರ ಅಭಿಪ್ರಾಯವೇ ಆಗಿದ್ದರೂ ಸರಿ – ನಿರ್ದಾಕ್ಷಿಣ್ಯವಾಗಿ ಖಂಡಿಸಲೂ ಅವರು ಹಾಗೆಯೇ ಸಿದ್ಧರಿರುತ್ತಾರೆಂಬುದನ್ನು ಮರೆಯಬಾರದು.

**ಪ್ರಶ್ನೆ:– ಹಾಗಾದರೆ ಬಾಹ್ಯಾಸ್ತಿತ್ವವಾದ (Realism) ಮತ್ತು ವಿಜ್ಞಾನವಾದ (Idealism) – ಇವುಗಳ ಬಗ್ಗೆ ಆಚಾರ್ಯರ ನಿಲುವೇನು ?**

ಉತ್ತರ :– ವ್ಯವಹಾರದೆಸೆಯಲ್ಲಿ ವಿಜ್ಞಾನವನ್ನೊಪ್ಪುವವರು ಬಾಹ್ಯಾಸ್ತಿತ್ವವನ್ನೂ ಒಪ್ಪಬೇಕು. ಬಾಹ್ಯಾಸ್ತಿತ್ವವನ್ನೊಪ್ಪುವವರು ವಿಜ್ಞಾನವನ್ನೂ ಒಪ್ಪಬೇಕು. ಇವು ಒಂದನ್ನು ಬಿಟ್ಟು ಇನ್ನೊಂದು ಸ್ವತಂತ್ರವಾಗಿ ಇರಲಾರವು– ಎಂಬುದೇ ಸಾರ್ವತ್ರಿಕಲೋಕಾನುಭವಕ್ಕೆ ಒಪ್ಪತಕ್ಕ ಮಾತಾಗಿದೆ. ಆದರೆ ಪರಮಾರ್ಥತತ್ತ್ವವನ್ನು ನಿರ್ಣಯಿಸುವಾಗ ಮಾತ್ರ ಹೀಗಲ್ಲ ಎಂಬುದೇ ಅವರ ಅಭಿಪ್ರಾಯ.

**ಪ್ರಶ್ನೆ :– ಹಾಗಾದರೆ ಪರಮಾರ್ಥತತ್ತ್ವನಿರ್ಣಯದಲ್ಲಿ ಇದನ್ನು ಹೇಗೆ ಬಿಡಿಸಬೇಕು ?**

ಉತ್ತರ :– ವಿಜ್ಞಾನವನ್ನುಳಿದು ವಸ್ತುವನ್ನು ಕಲ್ಪಿಸುವದಕ್ಕೂ ಆಗಲಾರದಾದ್ದರಿಂದ ವಿಜ್ಞಾನವೇ ಪರಮಾರ್ಥತತ್ತ್ವ, ಹೊರಗೆ ವಸ್ತುಗಳಿವೆ ಎಂಬುದು ಬರಿಯ ಭ್ರಮೆ ಮಾತ್ರ ಎಂದಲ್ಲವೆ ವಿಜ್ಞಾನವಾದಿಗಳ ಮತ ? ಇದರಂತೆ ಈ ವಿಜ್ಞಾನದ ಪರಮಾರ್ಥತತ್ತ್ವವಾದ – ವಿಜ್ಞಾನದ ಇರುವಿಕೆ, ಹುಟ್ಟುವಿಕೆ, ಇಲ್ಲದಿರುವಿಕೆಗಳನ್ನು ಬೆಳಗುವ – ಸಾಕ್ಷ್ಯನುಭವಸ್ವರೂಪನಾದ ಅದ್ವಯಾತ್ಮನೇ ಒಳಗಿನ ವಿಜ್ಞಾನದಂತೆಯೂ ಹೊರಗಿನ ವಸ್ತುಗಳಂತೆಯೂ ಅವಿಚಾರದೆಶೆಯಲ್ಲಿ ಕಾಣುತ್ತಾನೆ ಎಂದು ಗೊತ್ತಾಗುವದರಿಂದ ಇವೆರಡೂ ಅಪರಮಾರ್ಥಗಳೇ ಆಗಿವೆ, ಪರಮಾರ್ಥವು ಕೇವಲ ಅದ್ವಯ ಸ್ವರೂಪಮಾತ್ರವಾಗಿದೆ – ಎಂಬುದೇ ಸರಿಯಾದದ್ದು. ಇದೇ ಪರಮಾರ್ಥ ತತ್ತ್ವ ನಿರ್ಣಯದ ಕೊನೆಯ ಮಾತು ಎಂಬುದಾಗಿ ತಿಳಿಯಬೇಕು. (ಈ ಬಗ್ಗೆ ಮಾಂ.ಗೌ.ಕಾ. ೪–೨೪ರಿಂದ ೨೮ರವರೆಗೆ ಭಾಷ್ಯಸಮೇತವಾಗಿ ನೋಡಬೇಕು).

––––––

## ೭. ಪೂರ್ವಮೀಮಾಂಸೆ

**ಪ್ರಶ್ನೆ :– ವೈದಿಕರಾದ ಪೂರ್ವಮೀಮಾಂಸಕರಿಗೂ ಆಚಾರ್ಯರಿಗೂ ಏನು ವ್ಯತ್ಯಾಸ ?**

ಉತ್ತರ :– ಇಬ್ಬರೂ ವೈದಿಕರೇ ಆಗಿದ್ದು ಕೆಲವು ವಿಷಯಗಳಲ್ಲಿ ಒಮ್ಮತ ದಿಂದಿದ್ದರೂ ಮತ್ತೆಕೆಲವು ವಿಷಯಗಳಲ್ಲಿ ಪರಸ್ಪರವಿರೋಧವುಂಟು.

**ಪ್ರಶ್ನೆ :– ಸಂಕ್ಷಿಪ್ತವಾಗಿ ಅವುಗಳಾವುವೆಂಬುದನ್ನು ತಿಳಿಸುವಿರಾ ?**

ಉತ್ತರ :– ಒಳ್ಳೆಯದು. (೧) ವೇದವನ್ನೇ ಪ್ರಮಾಣವಾಗಿಟ್ಟುಕೊಳ್ಳಬೇಕು. (೨) ವೇದವಾಕ್ಯಕ್ಕೆ ಅರ್ಥಮಾಡುವಾಗ ಪದ, ವಾಕ್ಯ– ಪ್ರಮಾಣಗಳಿಂದ ಎಂದರೆ ವ್ಯಾಕರಣ, ತರ್ಕ, ಮತ್ತು ಉಪಕ್ರಮೋಪಸಂಹಾರಾದಿಲಿಂಗಗಳಿಗನುಗುಣವಾಗಿಯೂ ಶ್ರುತಿ, ಲಿಂಗ, ಪ್ರಕರಣ, ಸ್ಥಾನ, ಸನ್ನಿಧಿಯನ್ನನುಸರಿಸಬೇಕೆಂಬ ನ್ಯಾಯಗಳಿಗನುಗುಣ ವಾಗಿಯೂ ಅರ್ಥಮಾಡಬೇಕು. ಈ ಅಂಶಗಳಲ್ಲಿ ಇಬ್ಬರೂ ಸಮಾನರು. ಇನ್ನು (1) ವೇದಾಂತ ವಾಕ್ಯದಲ್ಲಿ ಹೇಳಿದ ಬ್ರಹ್ಮತತ್ತ್ವವು ಈಗಲೇ ಅನುಭವಕ್ಕೆ ಬರುವದಾದ್ದ ರಿಂದ ಆ ವಾಕ್ಯಗಳಿಗೆ ಅರ್ಥಮಾಡುವಾಗ ಮೀಮಾಂಸಾನ್ಯಾಯಾದಿಗಳೇ ಅಲ್ಲದೆ ಅನುಭವಸಮ್ಮತವಾಗಿಯೂ ಅರ್ಥನಿರ್ಧಾರಣೆಮಾಡಬೇಕು. (2) ವಾಕ್ಯಶ್ರವಣ ಮಾತ್ರದಿಂದಲೇ ಆತ್ಮಾನುಭವವು ಪ್ರಾಪ್ತವಾಗುವದರಿಂದ ಜ್ಞಾನವಾಕ್ಯಗಳನ್ನು ಕರ್ಮ ಅಥವಾ ಉಪಾಸನೆಗೆ ಅಂಗವಾಗಿ ಅರ್ಥಮಾಡಬಾರದು. (3) ಕರ್ಮಾದಿಗಳಿಗೆ ಬೇಕಾಗಿರುವ ಕಾರಕಾದಿಬುದ್ಧಿಗಳನ್ನು ತೊಡೆದುಹಾಕುವ, ಎಂದರೆ ಬಾಧಿಸಿಬಿಡುವ ಈ ಜ್ಞಾನಕ್ಕೂ ಕರ್ಮಾದಿಗಳಿಗೂ ಯಾವ ಸಂಬಂಧವೂ ಇಲ್ಲ. (4) ಇವೆರಡೂ ಪರಸ್ಪರ ವಿರುದ್ಧವಾದವುಗಳಾಗಿವೆ. (5) ಹೀಗಿದ್ದರೂ ವೇದೋಕ್ತವಾದ ಕರ್ಮೋಪಾಸನೆಗಳನ್ನು ನಿಷ್ಕಾಮವಾಗಿ ಆಚರಿಸಿದರೆ ಚಿತ್ತಶುದ್ಧಿ ಹಾಗೂ ಚಿತ್ತೈಕಾಗ್ರತೆಗಳ ಮೂಲಕ ಜ್ಞಾನಕ್ಕೆ ತಕ್ಕ ಯೋಗ್ಯತೆಯು ಬರುತ್ತದೆಯಾದ್ದರಿಂದ ಕರ್ಮಾದಿಗಳು ಸಾಂಖ್ಯರು ಹೇಳುವಂತೆ ಸರ್ವಥಾ ತ್ಯಾಜ್ಯವಲ್ಲ. (6) ಬರೀ ಕರ್ಮದಿಂದ ಎಂದಿಗೂ ಮೋಕ್ಷವಿಲ್ಲ. (7) ಜ್ಞಾನಕರ್ಮಸಮುಚ್ಚಯವು ಸಾಧ್ಯವೇ ಇಲ್ಲ. (8) ಕೇವಲ ಜ್ಞಾನದಿಂದಲೇ ಮೋಕ್ಷ. (9) ಇಂದ್ರನೇ ಮುಂತಾದ ದೇವತೆಗಳು ವಿಗ್ರಹವಂತರಾದ ಚೇತನರಾಗಿದ್ದಾರೆ. (10) ಕರ್ಮಕ್ಕೆ ಫಲವು ಈಶ್ವರನಿಂದ ಆಗುತ್ತದೆ. (11) ಸಂನ್ಯಾಸವು ಶ್ರುತಿವಿಹಿತ ವಾದದ್ದು; ಅದು ಕರ್ಮಾನಧಿಕಾರಿಗಳ ವಿಷಯವಲ್ಲ. (12) ಸರ್ವಕರ್ಮಸಂನ್ಯಾಸವು ಜ್ಞಾನಿಗೆ ಅರ್ಥಪ್ರಾಪ್ತ; ಅವನು ನಿಷ್ಕರ್ಮನಾದ ಸಂನ್ಯಾಸಿಯೇ – ಇವೇ ಮುಂತಾದ ಅಭಿಪ್ರಾಯಗಳಲ್ಲಿ ಪೂರ್ವಮೀಮಾಂಸಾ ಶಾಸ್ತ್ರಕ್ಕೂ ಆಚಾರ್ಯರಿಗೂ ವ್ಯತ್ಯಾಸ ವುಂಟು. ಈಶ್ವರ, ದೇವತೆಗಳ ಅಸ್ತಿತ್ವವನ್ನೇ ಪೂರ್ವಮೀಮಾಂಸಕರು ಒಪ್ಪುವದಿಲ್ಲ. ಬರಿಯ ಜ್ಞಾನದಿಂದ ಮೋಕ್ಷವೆಂಬುದಂತೂ ಎಂದೂ ಅವರಿಗೆ ಇಷ್ಟವಿಲ್ಲ. ಪ್ರಸ್ಥಾನ ತ್ರಯಭಾಷ್ಯಗಳನ್ನು ಚೆನ್ನಾಗಿ ಅಭ್ಯಸಿಸಿದರೆ ಈ ವಿಷಯವು ನಿಚ್ಚಳವಾಗಿ ತಿಳಿಯುವದು.

——————

## ೮. ಪಾಶುಪತಭಾಗವತಮತಗಳು

**ಪ್ರಶ್ನೆ :– ಪಾಶುಪತ ಹಾಗೂ ಭಾಗವತಮತಗಳ ಬಗ್ಗೆ ಆಚಾರ್ಯರ ಅಭಿಪ್ರಾಯವೇನು ?**

ಉತ್ತರ :– ಪಾಶುಪತಮತವನ್ನೂ ಸೂ.೨–೨–೩೭ ರಲ್ಲಿ ಅನುವಾದಿಸಿಕೊಂಡು 'ಈಶ್ವರನು ಜಗತ್ತಿಗೆ ಕೇವಲ ನಿಮಿತ್ತಕಾರಣನು ಮತ್ತು ಪ್ರಕೃತಿಯು ಅವನನ್ನವಲಂಬಿಸಿರುವ ಕೇವಲ ಉಪಾದಾನಕಾರಣವು' ಎಂಬಿದನ್ನು ಬರೀ ಯುಕ್ತಿ ಹಾಗೂ ದೃಷ್ಟಾಂತಗಳ ಬಲದಿಂದಲೇ ಸಿದ್ಧಪಡಿಸಲೆತ್ನಿಸುವ ಇವರ ಮತದಲ್ಲಿ ಈಶ್ವರನು ಪರಿಚ್ಛಿನ್ನನೂ ಸಶರೀರಿಯೂ ಆಗುವನು. ಬ್ರಹ್ಮಕಾರಣವಾದದಲ್ಲಿಯಾದರೋ ಬ್ರಹ್ಮವೇ ಜಗತ್ತಿಗೆ ಉಪಾದಾನ ಮತ್ತು ನಿಮಿತ್ತಕಾರಣವಾಗಿರುವದನ್ನು ಶ್ರುತಿ ಹಾಗೂ ಪೂರ್ಣಾನುಭವದ ಬಲದಿಂದ ಸಾಧಿಸಿರುವದರಿಂದಲೂ ಕಾರ್ಯಕಾರಣಭಾವದ ಅಧ್ಯಾರೋಪದಿಂದ ಅದ್ವಿತೀಯಬ್ರಹ್ಮತತ್ತ್ವವನ್ನು ತಿಳಿಸಿಕೊಡುವ ಉದ್ದೇಶವಿರುವದರಿಂದಲೂ ವೇದಾಂತ ಸಿದ್ಧಾಂತಕ್ಕೆ ಬಾಧೆ ಇಲ್ಲ. ಆದರೆ ಕೇವಲ ತರ್ಕಬಲದಿಂದಲೇ ಹೇಳುವವರು ಲೋಕಾನುಭವವನ್ನು ಮೀರಲು ಸಾಧ್ಯವಿಲ್ಲ. ಆದ್ದರಿಂದಲೇ ಈ ಮತವು ಸಮಂಜಸವಲ್ಲ – ಎಂದು ಮುಂದೆ ನಿರ್ಣಯಿಸಿದ್ದಾರೆ.

**ಪ್ರಶ್ನೆ :– ಸರಿ. ಭಾಗವತಮತದ ಬಗ್ಗೆ ಶಂಕರರ ಅಭಿಪ್ರಾಯವೇನು ?**

ಉತ್ತರ :– ಪಾಂಚರಾತ್ರಶಾಸ್ತ್ರಪರಂಪರೆಯ ಭಾಗವತಮತದವರು ಆಗ ಅದ್ವೈತಿಗಳೇ ಆಗಿದ್ದರೆಂಬುದು ಭಾಷ್ಯಾವಲೋಕನದಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆ ಮತದಲ್ಲಿ ಭಗವಂತನಾದ ನಾರಾಯಣನನ್ನು ಅಭಿಗಮನಾದಿವಿಧಿಗಳಿಂದ ಭಕ್ತಿಪೂರ್ವಕವಾಗಿ ಅರ್ಚನೆಮಾಡಿ ಆತನ ಅನುಗ್ರಹದಿಂದ ಮೋಕ್ಷವನ್ನು ಹೊಂದಬೇಕೆಂದು ಹೇಳಿರುವದನ್ನು ಆಚಾರ್ಯರು ಅಲ್ಲಗಳೆದಿರುವದಿಲ್ಲ. ಈಶ್ವರಪ್ರಣಿಧಾನವು ಶ್ರುತಿಸ್ಮೃತಿಗಳಲ್ಲಿ ಪ್ರಸಿದ್ಧವಾಗಿರುವದರಿಂದ ಈ ಭಕ್ತಿಮಾರ್ಗವನ್ನು ನಾವು ಒಪ್ಪುತ್ತೇವೆ ಎಂದೇ ಬರೆದಿದ್ದಾರೆ. ಇದಲ್ಲದೆ ಅದ್ವಿತೀಯನಾದ ವಾಸುದೇವಭಗವಂತನೇ ಎಲ್ಲರಿಗೂ ಆತ್ಮನು ಎಂಬುದೂ ಸರಿಯಾಗಿಯೇ ಇದೆ. ಆದರೆ ವಾಸುದೇವನಿಂದ ಸಂಕರ್ಷಣ (ಜೀವ), ಅವನಿಂದ ಪ್ರದ್ಯುಮ್ನ (ಮನಸ್ಸು), ಅವನಿಂದ ಅನಿರುದ್ಧ (ಅಹಂಕಾರ)– ಇವರು ಹುಟ್ಟುವರೆಂಬ ಗ್ರಹಿಕೆಯು ಸರಿಯಲ್ಲ. ವಾಸುದೇವಪರಬ್ರಹ್ಮತತ್ತ್ವವು ಅಜ, ಅಮರವಾಗಿದೆ– ಎಂದು ಒಪ್ಪಿರುವ ಇವರು ಅದರಿಂದ ಜೀವನು ಹುಟ್ಟುವನು ಎಂದು ಹೇಳುವದು ಸಮಂಜಸವಲ್ಲ. ಮಾಯೆಯಿಂದ ಹುಟ್ಟಿದಂತೆ ಕಾಣುತ್ತಾನೆಂದು ಬೇಕಾದರೆ ಹೇಳಲಿ. ಇದಲ್ಲದೆ ಅಹಂಕಾರದಿಂದ ಮನಸ್ಸು ಹೊರಬರುವದು ಅನುಭವದಲ್ಲಿರುವಾಗ ಮನಸ್ಸಿನಿಂದ ಅಹಂಕಾರವು ಹುಟ್ಟುವದೆಂದು

ಹೇಳುವ ಇವರ ಅಭಿಪ್ರಾಯವು ಅನುಭವವಿರುದ್ಧವಾಗಿದೆ. ಅಂತೂ ಈ ವ್ಯೂಹರಚನೆ, ಜೀವೋತ್ಪತ್ತಿ ಮುಂತಾದ ಅಭ್ಯುಪಗಮಗಳನ್ನು ಬಿಟ್ಟರೆ ಮಿಕ್ಕೆಲ್ಲವೂ ನಮಗೆ ಒಪ್ಪಿಗೆಯಾಗಿದೆ ಎಂದು ಭಾಗವತಮತದ[1] ಬಗ್ಗೆ ಆಚಾರ್ಯರು ಅಭಿಪ್ರಾಯ ಪಟ್ಟಿದ್ದಾರೆ. (ಸೂ.೨–೨–೪೨ ರಿಂದ ೪೫).

**ಪ್ರಶ್ನೆ :– ವೈದಿಕರಲ್ಲಿಯ ಇನ್ನಾವ ಪಂಗಡಗಳನ್ನು ಆಚಾರ್ಯರು ಖಂಡಿಸಿರು ವದು ಕಂಡುಬರುತ್ತದೆ ?**

ಉತ್ತರ :– (೧) ಪ್ರಪಂಚಪ್ರವಿಲಯ (೨) ವಾಸನಾಕ್ಷಯ (೩) ಪ್ರಸಂಖ್ಯಾನ (೪) ಸಾಕ್ಷಾತ್ಕಾರ (೫) ಆತ್ಮಜ್ಞಾನಾಸಂಭವ (೬) ಚಿತ್ತನಿರೋಧ (೭) ಜ್ಞಾನಕರ್ಮ ಸಮುಚ್ಚಯ–ಮುಂತಾದ ಅನೇಕ ಪ್ರಾಚೀನಾದ್ವೈತಿಗಳ ಮತಗಳನ್ನು ಅವರು ಖಂಡಿಸಿರುತ್ತಾರೆ.

**ಪ್ರಶ್ನೆ :– ಇವುಗಳ ಬಗ್ಗೆ ಸಂಕ್ಷಿಪ್ತವಾಗಿ ಕೆಲವು ವಿಷಯಗಳನ್ನು ತಿಳಿಯ ಬಹುದೆ ?**

ಉತ್ತರ :– ಅಗತ್ಯವಾಗಿ ತಿಳಿಯಬಹುದು. ಮೊದಲು ಪ್ರಪಂಚಪ್ರವಿಲಯ ವಾದವನ್ನು ನೋಡೋಣ. ಈ ವಾದಿಗಳು 'ಬ್ರಹ್ಮವಿಜ್ಞಾನದ ಅನಂತರ ದ್ವೈತ ಪ್ರಪಂಚವನ್ನು ಲಯಗೊಳಿಸುವ ಕಾರ್ಯಕ್ಕೆ ಶಾಸ್ತ್ರವು ಕಟ್ಟುಮಾಡುವದು' ಎಂದು ಹೇಳುತ್ತಾರೆ. ಇದು ಸಾಧ್ಯವಿಲ್ಲ. ಪ್ರಪಂಚವು ನಿಜವಾಗಿ ಇದ್ದದ್ದಾದರೆ ಅದನ್ನು ಲಯಗೊಳಿಸುವದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಲಯಗೊಳಿಸುವ ಜೀವನು ಪ್ರಪಂಚ ದೊಳಗೇ ಸೇರಿರುವದರಿಂದ ಅವನೂ ಪೂರ್ಣವಾಗಿ ನಾಶವಾಗಬೇಕಾಗುವದು. ಆಗ ಸ್ವರೂಪವೇ ಇಲ್ಲದಂತಾಗುವದು. ಮೊಟ್ಟಮೊದಲು ಮುಕ್ತನಾದ ಒಬ್ಬನು ಪ್ರಪಂಚ ವನ್ನು ಲಯಗೊಳಿಸಿಯೇಬಿಟ್ಟಿದ್ದರೆ ಇಂದಿನವರೆಗೂ ಪೃಥಿವ್ಯಾದಿಪ್ರಪಂಚವಿರಬಾರ ದಾಗಿತ್ತು. ಇನ್ನು ಪ್ರಪಂಚವು ಅವಿದ್ಯಾಕಲ್ಪಿತ, ಜೀವತ್ವವೂ ಅವಿದ್ಯಾಕಲ್ಪಿತ– ಎನ್ನುವ ದಾದರೆ ಜ್ಞಾನಮಾತ್ರದಿಂದಲೇ ಇವೆರಡೂ ಲಯವಾಗಿ ಅದ್ವಯತತ್ತ್ವವೇ ಉಳಿದಿರು ತ್ತದೆಯಾದ್ದರಿಂದ ಪುನಃ ಲಯಗೊಳಿಸುವ ಕಾರ್ಯಕ್ಕೆ ಶಾಸ್ತ್ರವು ಕಟ್ಟುಮಾಡಲಾರದು. ಆದ್ದರಿಂದ ಜ್ಞಾನೋತ್ತರದಲ್ಲಿ ಯಾವ ನಿಯೋಗವೂ (ಕಟ್ಟೂ) ಉಳಿಯಲಾರ ದೆಂಬುದೇ ಸಿದ್ಧಾಂತವಾದ್ದರಿಂದ ಈ ಪ್ರಪಂಚಪ್ರವಿಲಯವಾದವು ವೇದಬಾಹಿರವಾದ ದ್ದಾಗಿದೆ– ಎಂದು ಆಚಾರ್ಯರು ತಿಳಿಸಿದ್ದಾರೆ. (ಸೂ.೩–೨–೨೧).

---

1. ಈಚೆಗೆ ಶ್ರೀಶ್ರೀಗಳವರು ಕನ್ನಡಭಾಷೆಯಲ್ಲಿ ಬರೆದಿರುವ 'ಭಾಗವತಸಂಪ್ರದಾಯ' ಎಂಬ ಗ್ರಂಥದಲ್ಲಿ ಭಾಗವತಮತದ ಸಾಧನಸಿದ್ಧಾಂತಗಳನ್ನು ವಿಮರ್ಶಾತ್ಮಕವಾಗಿ ವಿವರಿಸಿದ್ದಾರೆ. ಈ ಪುಸ್ತಕವು ಕಾರ್ಯಾಲಯದಲ್ಲಿ ದೊರೆಯುತ್ತದೆ.

ಪ್ರಶ್ನೆ :— ವಾಸನಾಕ್ಷಯವಾದದ ಸಾರಾಂಶವೇನು ?

ಉತ್ತರ :— ವಾಸನೆಗಳಿಗೆ ಹೃದಯವೇ ಎಂದರೆ ಬುದ್ಧಿಯೇ ಆಶ್ರಯ. ಆತ್ಮಸ್ವರೂಪವನ್ನು ಕಂಡುಕೊಂಡಾಗ ಈ ಬುದ್ಧಿ ಎಂಬುದು ಪ್ರತ್ಯೇಕವಾಗಿ ಉಳಿಯಲಾರದು. ಆಗ — ಅವಿದ್ಯಾಕಲ್ಪಿತವಾದ ಬುದ್ಧಿ ಎಂಬುದೇ ತೋಲಗಿಹೋದಾಗ— ಅದರಲ್ಲಿ ತೋರಿದ ವಾಸನೆಗಳೂ ಬಾಧಿತವಾಗಿಬಿಡುವವು. ವಾಸನೆಗಳು ಆತ್ಮನಲ್ಲಿರುವದೇ ಇಲ್ಲ. ಆತ್ಮನನ್ನರಿಯದಿದ್ದಾಗ ಆತ್ಮನಲ್ಲಿ ಹುಟ್ಟುಹಾಕಿಕೊಂಡ ಬುದ್ಧಿಯಲ್ಲೇ ಅವು ಇರುವಂತೆ ತೋರುತ್ತಿದ್ದವು. ಆತ್ಮವಿದ್ಯೆಯುಂಟಾದಾಗ ಆ ಮೊದಲು ಹುಟ್ಟುಹಾಕಿಕೊಂಡಿದ್ದ ಬುದ್ಧಿ (ಹೃದಯ—ಅಂತಃಕರಣ—ಮನಸ್ಸು) ಎಂಬುದು ಬಾಧಿಸಿ ಅದ್ವಿತೀಯನಾದ ಆತ್ಮನೇ ಆಗಿ ನಿಲ್ಲಲು ಈ ವಾಸನೆಗಳು ಇರಲಾರವು. ಆದ್ದರಿಂದ ಆತ್ಮಜ್ಞಾನವೇ ವಾಸನಾನಾಶಕ್ಕೆ ಮದ್ದು ಎಂಬುದು ಆಚಾರ್ಯರ ಅಭಿಪ್ರಾಯ. ಇದರಿಂದ ಜ್ಞಾನದ ಅನಂತರವೂ ಮನೋನಾಶ, ವಾಸನಾಕ್ಷಯಗಳಾಗುವದಕ್ಕೆ ಸಾಧನಾಂತರಗಳನ್ನು ಮಾಡಬೇಕೆಂದು ಹೇಳುವ ಈಚಿನ ವೇದಾಂತಿಗಳ ಪಕ್ಷವು ಭಾಷ್ಯವಿರುದ್ಧವಾದುದೆಂದು ತಾನೇ ಏರ್ಪಡುತ್ತದೆ. (ಬೃ.೪—೩—೨೨).

ಪ್ರಶ್ನೆ :— ಪ್ರಸಂಖ್ಯಾನ ಎಂದರೇನು ?

ಉತ್ತರ :— ಶಾಸ್ತ್ರದಿಂದ ಗೊತ್ತುಮಾಡಿಕೊಂಡ ವಿಷಯವನ್ನು ಮತ್ತೆ ಮತ್ತೆ ಎಡೆಬಿಡದೆ ಆವರ್ತನೆಮಾಡುತ್ತಿರುವದಕ್ಕೆ 'ಪ್ರಸಂಖ್ಯಾನ' ಎನ್ನುತ್ತಾರೆ.

ಪ್ರಶ್ನೆ:— ಆತ್ಮಜ್ಞಾನದ ವಿಷಯದಲ್ಲಿ ಪ್ರಸಂಖ್ಯಾನವಾದಿಗಳ ನಿಲುವು ಏನು ?

ಉತ್ತರ :— ಆತ್ಮತತ್ತ್ವವನ್ನು ವಿವೇಕದಿಂದ ಕಂಡುಕೊಂಡರೆ ಸಾಲದು. ಅದನ್ನೇ ಮತ್ತೆಮತ್ತೆ ಆವರ್ತನೆಮಾಡುತ್ತಾ ಇದ್ದರೆ ಕೊನೆಗೆ ಅದನ್ನೇ ಪಡೆಯಬಹುದು — ಎಂಬುದು ಈ ವಾದಿಗಳ ಮತವು. ಸೂತ್ರಭಾಷ್ಯಕ್ಕೆ ಬರೆದಿರುವ 'ಭಾಮತೀ' ಎಂಬ ವ್ಯಾಖ್ಯಾನದಲ್ಲಿ ಈ ವಾದವನ್ನು ಒಪ್ಪಿ ಆತ್ಮನೇ ನಾನೆಂದು ಮತ್ತೆಮತ್ತೆ ಆವರ್ತನೆ ಮಾಡುವದರಿಂದ ಸಾಕ್ಷಾತ್ಕಾರರೂಪವಾದ ಜ್ಞಾನವು ಕೊನೆಗೆ ಹುಟ್ಟುವದೆಂಬ ಅಭಿಪ್ರಾಯವನ್ನು ನಿರೂಪಿಸಿದೆ.

ಪ್ರಶ್ನೆ :— ಆಚಾರ್ಯರ ಅಭಿಪ್ರಾಯವು ಹಾಗಲ್ಲವೇನು ?

ಉತ್ತರ : ಇಲ್ಲ, ಅವರ ನಿಲುವು ಹಾಗಿಲ್ಲ. ಆತ್ಮನನ್ನು ಕಂಡೊಡನೆಯೇ ಅನಾತ್ಮವೆಲ್ಲವೂ ತೊಲಗಿ ಅದು ಇಲ್ಲವೇ ಇಲ್ಲವೆಂದು ಗೊತ್ತಾಗುವದರಿಂದ ಜ್ಞಾನಿಯ ಅಂತಃಕರಣದಲ್ಲಿ ಸ್ವಾಭಾವಿಕವಾಗಿಯೇ ಆತ್ಮಪ್ರತ್ಯಯಸಂತಾನವು ಉಂಟಾಗುವದರಿಂದ ಅದನ್ನು ವಿಧಿಸಬೇಕಾದದ್ದಿರುವದಿಲ್ಲ. ಮತ್ತು ಆತ್ಮಸ್ವರೂಪದ ಜ್ಞಾನವು

ಬಂದೊಡನೆಯೇ ಕರ್ತೃತ್ವವೇ ಇರುವದಿಲ್ಲವಾದ್ದರಿಂದ ಪ್ರಸಂಖ್ಯಾನ ಎಂಬ ಕ್ರಿಯೆಯು ಇರಲು ಸಾಧ್ಯವೇ ಇಲ್ಲ. ಇದಲ್ಲದೆ ಆತ್ಮವಿಷಯದ ಮೊದಲನೆಯ ಪ್ರತ್ಯಯವು ಅವಿದ್ಯೆಯನ್ನು ಕಳೆಯುವದಿಲ್ಲವಾದರೆ ಕೊನೆಯ ಪ್ರತ್ಯಯವು ತಾನೆ ಹೇಗೆ ಕಳೆದೀತು? ಕೊನೆಯದು ಕಳೆಯಬಹುದಾದರೆ ಮೊದಲನೆಯದೇಕೆ ಕಳೆಯಬಾರದು ? ಆದ್ದರಿಂದಲೂ ಈ ವಾದವು ಸಮಂಜಸವಲ್ಲ ಎಂದು ಭಾಷ್ಯಗಳಲ್ಲಿ ಈ ವಾದವನ್ನು ತಳ್ಳಿಹಾಕಿದ್ದಾರೆ. (ಬೃ. ೧–೪–೭, ೧–೪–೧೦, ಸೂ.ಭಾ. ೧–೧–೪ ಇವುಗಳನ್ನು ನೋಡಿ.)

**ಪ್ರಶ್ನೆ :– ಹಾಗಾದರೆ 'ಆವೃತ್ತಿರಸಕೃದುಪದೇಶಾತ್' ಎಂಬ ಸೂತ್ರಕ್ಕೆ ಗತಿಯೇನು ?**

ಉತ್ತರ :– ಉತ್ತಮಾಧಿಕಾರಿಗೆ ಶ್ರವಣಮಾತ್ರದಿಂದಲೇ ಎಂದರೆ ಶ್ರವಣಸಮಕಾಲದಲ್ಲಿಯೇ ಮನನನಿದಿಧ್ಯಾಸನಗಳೂ ಮುಗಿದು ತತ್ತ್ವನಿಶ್ಚಯವುಂಟಾಗುತ್ತದೆ. ಅಂಥವರಿಗೆ ಆವೃತ್ತಿಯು ಬೇಕಾಗಿರುವದಿಲ್ಲ. ಉತ್ತಮಾಧಿಕಾರಿಗಳಲ್ಲದವರಿಗೆ ಅದೇ ವಿಷಯವನ್ನೇ ಮತ್ತೆಮತ್ತೆ ಉಪದೇಶಿಸಬೇಕಾಗುವದು. ಆಗ ಮತ್ತೆಮತ್ತೆ ಅನುಭವಪೂರ್ವಕಯುಕ್ತಿಗಳಿಂದ ಶಾಸ್ತ್ರತಾತ್ಪರ್ಯವನ್ನು ಕಂಡುಕೊಂಡು ನಿಶ್ಚಯಿಸಬೇಕಾಗುವದು. ಇದನ್ನೇ ಆವೃತ್ತಿ ಎಂದು ಅಲ್ಲಿ ಕರೆದಿದ್ದಾರೆ. ಇದಾದರೂ ಪ್ರತಿಸಲವೂ ವಸ್ತುಸ್ವರೂಪವನ್ನು ಗುರ್ತಿಸಿ ಕಂಡುಹಿಡಿಯಬೇಕಾದ ವಸ್ತುತಂತ್ರಜ್ಞಾನಸಂಪಾದನೆಯ ಪ್ರಯತ್ನವೇ ಹೊರತು ಬರೀ ಭಾವನೆಯಿಂದ ಅಥವಾ ಕರ್ತೃತ್ವಬುದ್ಧಿಯಿಂದ ಮಾಡಬೇಕಾದ ಆವರ್ತನಾರೂಪಸಾಧನವಲ್ಲ ಎಂದು ಆಚಾರ್ಯರು ಅಲ್ಲಿ ವಿವರಿಸಿದ್ದಾರೆ (ಸೂ. ಭಾ. ೪–೧–೨)

ಭಾಷ್ಯದ ಈ ಅಭಿಪ್ರಾಯವನ್ನು ತಿಳಿಯದ್ದರಿಂದಲೇ ಮಹಾವಾಕ್ಯಗಳ ಉಪದೇಶ, ಜಪ, ಆವರ್ತನಾದಿಗಳೂ ಬ್ರಹ್ಮಾಭ್ಯಾಸ, ಸಾಕ್ಷಾತ್ಕಾರಾದಿವಾದಗಳೂ ತಲೆದೋರಿವೆ– ಎಂದು ಹೇಳಬಹುದು.

**ಪ್ರಶ್ನೆ :– ಸಾಕ್ಷಾತ್ಕಾರವೆಂದರೇನು ?**

ಉತ್ತರ :– ಶಾಸ್ತ್ರದಲ್ಲಿ ಉಪಾಸಿಸಬೇಕೆಂದು ಹೇಳಿರುವ ಪರೋಕ್ಷವಿಷಯವನ್ನೂ ಉಪಾಸನೆಮಾಡುವ ಕ್ರಮವನ್ನೂ ಚೆನ್ನಾಗಿ ತಿಳಿದುಕೊಂಡು ಅದೇ ಭಾವನೆಯಿಂದ ಸದಾಕಾಲವೂ ಒಡಗೂಡಿ ಚಿಂತನೆಮಾಡಿಮಾಡಿ ಕೊನೆಗೆ ಆ ವಸ್ತುವು ಪ್ರತ್ಯಕ್ಷವಾಗುವದಕ್ಕೆ ಅಥವಾ ದೇಹಪಾತಾನಂತರ ಆ ವಸ್ತುವಿನ ಸ್ವರೂಪವನ್ನೇ ಪಡೆಯುವದಕ್ಕೆ 'ಸಾಕ್ಷಾತ್ಕಾರ' ಎನ್ನುತ್ತಾರೆ.

**ಪ್ರಶ್ನೆ :– ಆತ್ಮತತ್ತ್ವದ ವಿಷಯದಲ್ಲಿ ಇದು ಹೇಗೆ ಹೊಂದುತ್ತದೆ ?**

ಉತ್ತರ :— ಆತ್ಮತತ್ತ್ವದ ವಿಷಯದಲ್ಲಿ ಇದು ಹೊಂದುವದೇ ಇಲ್ಲ. ಏಕೆಂದರೆ ಆತ್ಮಸ್ವರೂಪವು ನಿತ್ಯಸಾಕ್ಷಾತ್, ಅಪರೋಕ್ಷವಾಗಿಯೇ ಇದೆ. ಅದನ್ನು ಸಾಕ್ಷಾತ್ಕರಿಸಿಕೊಳ್ಳುವದು ಎಂದಿಗೂ ಸಾಧ್ಯವಿಲ್ಲ. ಆದ್ದರಿಂದ ಜ್ಞಾನದಲ್ಲಿ ಸಾಕ್ಷಾತ್ಕಾರ ಎಂಬುದಿಲ್ಲವೇ ಇಲ್ಲ. ಎಂದೆಂದಿಗೂ ಸಾಕ್ಷಾತ್ತಾಗಿರುವ ಈ ತತ್ತ್ವದಲ್ಲಿ ಆರೋಪಿಸಲ್ಪಟ್ಟ (ಹುಟ್ಟುಹಾಕಿದ) ಅನಾತ್ಮಗಳಲ್ಲಿ ಆತ್ಮಭಾವನೆಯನ್ನು ಬಿಟ್ಟರಾಯಿತು. ತಾನು ಆತ್ಮನಾಗಿಯೇ ಇದ್ದಾನೆ, ಹೊಸದಾಗಿ ಆಗಬೇಕಾದದ್ದಿಲ್ಲ, ಇದು ವಸ್ತುತಂತ್ರ ಜ್ಞಾನವು. ಕರ್ತೃತಂತ್ರವಾದ ಉಪಾಸನೆಯಲ್ಲಿ ಸಾಕ್ಷಾತ್ಕಾರವು ಉಂಟು. ಇಲ್ಲಿ ಎಂದರೆ ಸಾಕ್ಷಾತ್ತಾಗಿಯೇ ಇರುವ ಈ ವಸ್ತುತಂತ್ರಜ್ಞಾನದಲ್ಲಿ ಸಾಕ್ಷಾತ್ಕಾರ ಎಂಬ ಮಾತು ಇಲ್ಲ. ಈ ವಿಷಯವನ್ನು ಭಾಷ್ಯದಲ್ಲಿ (ಗೀ. ೧೮–೫೦, ೧೩–೨) ಆಚಾರ್ಯರು ಅತ್ಯಂತ ಸ್ಪಷ್ಟವಾಗಿ ಹೇಳಿದ್ದಾರೆ.

ಪ್ರಶ್ನೆ :— ಆತ್ಮಜ್ಞಾನಾಸಂಭವವಾದ ಎಂದರೇನು ?

ಉತ್ತರ :— ಆತ್ಮವಿಜ್ಞಾನ ಎಂಬುದು ಆಗಲೇ ಆರದು ಎಂದು ಗ್ರಹಿಸಿರುವವರ ವಾದ ಎಂದರ್ಥ. ಭಾಷ್ಯಗಳಲ್ಲಿ ಅಲ್ಲಲ್ಲಿ ಈ ಬಗ್ಗೆ ಆಚಾರ್ಯರು ಬರೆದಿದ್ದಾರೆ. ಅದರಿಂದ ಆಗ್ಗೆ ವೈದಿಕರಲ್ಲಿಯೇ ಕೆಲವರು ಈ ಅಭಿಪ್ರಾಯವುಳ್ಳವರಾಗಿದ್ದರೆಂದು ಗೊತ್ತಾಗುತ್ತದೆ.

**ಪ್ರಶ್ನೆ :— ಹೀಗೆ ಆತ್ಮಜ್ಞಾನವು ಆಗಲಾರದೆನ್ನುವದಕ್ಕೆ ಅವರು ಹೂಡಿದ್ದ ಯುಕ್ತಿಗಳಾವವು ?**

ಉತ್ತರ :— (೧) ಆತ್ಮನಿಗೆ ಆಕಾರವಿಲ್ಲ. ಯಾವ ವಿಷಯದ ಜ್ಞಾನವಾಗಬೇಕೋ ಆ ವಿಷಯದ ಆಕಾರವನ್ನು ನಮ್ಮ ಬುದ್ಧಿಯು ತಾಳಬೇಕಾಗುತ್ತದೆ. ಆತ್ಮನಿಗೆ ಆಕಾರವೇ ಇಲ್ಲದ್ದರಿಂದ ಆತ್ಮನಜ್ಞಾನವೆಂಬುದು ಅಸಂಭವನೀಯ (೨) ವೇದವೆಲ್ಲವೂ ಕ್ರಿಯೆಯನ್ನೇ ಹೇಳುತ್ತದೆ. ಆದ್ದರಿಂದ ಕ್ರಿಯಾಕಾರಕಫಲರಹಿತನಾದ ಆತ್ಮನಿರುವನೆಂಬ ಜ್ಞಾನವು ವೇದಸಮ್ಮತವಲ್ಲ. (೩) ಮಾತುಮನಸ್ಸುಗಳು ಆತ್ಮನನ್ನು ಮುಟ್ಟದೆ ಹಿಂದಿರುಗುವವು ಎಂದು ಶ್ರುತಿಯು ಹೇಳುವದರಿಂದ ಜ್ಞಾನಕ್ಕೆ ಸಾಧನವೇ ಇಲ್ಲವೆಂದಾಗಿ ಆತ್ಮಜ್ಞಾನವು ಹುಟ್ಟುವದು ಅಸಂಭವ. (೪) ಒಂದುವೇಳೆ ಈ ಬಗೆಯ ಜ್ಞಾನವಾಗುವದೆಂದಿಟ್ಟುಕೊಂಡರೂ ಅದು ಒಂದು ಪ್ರಕಾರದ ಭ್ರಾಂತಿ ಎನ್ನಬಹುದು. ಅಥವಾ ಹೀಗೆ ಉಂಟಾದ ಜ್ಞಾನವು ಇದಕ್ಕಿಂತಲೂ ಪ್ರಬಲಪ್ರಮಾಣವು ಬಂದಾಗ ತೊಲಗಿಯೂ ಹೋಗಬಹುದು. ಆದ್ದರಿಂದ ಈ ಜ್ಞಾನವು ಸಂಭವನೀಯವಲ್ಲ (೫) ಈ ಜ್ಞಾನವಾದಾಗ ಯಾವ ದ್ವೈತವೂ ಇರುವದಿಲ್ಲವೆಂದು ಶ್ರುತಿಯೇ ಹೇಳುವದರಿಂದ ಇದೊಂದು ವ್ಯವಹಾರಾಭಾವದ ಅವಸ್ಥೆಯಾಗಿರಬಹುದು. ಆಗ ಜ್ಞಾನಿಯು ವ್ಯವಹಾರಕ್ಕೆ ಬಂದರೆ ಜ್ಞಾನವು ಹೋಯಿತು ; ಜ್ಞಾನದಲ್ಲಿದ್ದರೆ ವ್ಯವಹಾರವಿರುವದಿಲ್ಲವಾಗಿ

ಈ ಜ್ಞಾನದ ಉಪದೇಶಗ್ರಹಣಾದಿಗಳು ಅಸಂಭವನೀಯವೆನಿಸುವವು. ಆದ್ದರಿಂದಲೂ ಈ ಜ್ಞಾನವು ಹುಟ್ಟಲು ಸಾಧ್ಯವಿಲ್ಲ. (೬) ಒಂದುವೇಳೆ ಹಿಂದಿನ ಮಹಾವೀರ್ಯರಾದ ಋಷಿಗಳಿಗೆ ಇಂಥ ವಿಲಕ್ಷಣಜ್ಞಾನವು ಆಗುತ್ತಿತ್ತೆಂದು ಒಪ್ಪಿದರೂ ಈಗಿನ ಕಾಲದ ಹೀನ ವೀರ್ಯರಾದ ಸಾಮಾನ್ಯಮನುಷ್ಯರಿಗೆ ಇದು ಆಗಲಾರದೆಂದೇ ತೋರುತ್ತದೆ. (೭) ಈ ಜ್ಞಾನದಿಂದ ಶಾಸ್ತ್ರವೂ ವ್ಯರ್ಥವಾಗುತ್ತದೆಯಾದ್ದರಿಂದ ಇದು ಸಮಂಜಸವಲ್ಲ. (೮) ಮಿಥ್ಯವಾದ ಜ್ಞಾನೋಪದೇಶದಿಂದ ಸತ್ಯನಾದ ಆತ್ಮನ ಪ್ರಾಪ್ತಿಯಾಗಲಾರದಾದ್ದರಿಂದಲೂ ಈ ಜ್ಞಾನವು ಪ್ರಮಾಣವಲ್ಲ.

ಈ ಪ್ರಕಾರದ ಗ್ರಹಿಕೆಗಳನ್ನಿಟ್ಟುಕೊಂಡು ವೈದಿಕರಲ್ಲಿ ಕೆಲವರು ವಾದಿಸುತ್ತಿದ್ದರೆಂದು ಭಾಷ್ಯಾವಲೋಕನದಿಂದಲೇ ಕಂಡುಬರುತ್ತದೆ.

**ಪ್ರಶ್ನೆ :– ಇವುಗಳಿಗೆ ಆಚಾರ್ಯರು ಉತ್ತರವನ್ನು ಹೇಳಿದ್ದಾರೆಯೆ ?**

ಉತ್ತರ : ಓಹೊ ! ಅವಶ್ಯವಾಗಿ ಹೇಳಿದ್ದಾರೆ. ಕೇಳಿ. ಸಂಕ್ಷೇಪವಾಗಿ ವಿವರಿಸಲಾಗುವದು.

(೧) ಆತ್ಮನನ್ನರಿಯುವದೆಂದರೆ ಆತ್ಮನನ್ನು ವಿಷಯೀಕರಿಸುವದಲ್ಲ. ಆತ್ಮನಲ್ಲಿ ಹುಟ್ಟುಹಾಕಿದ ಅನಾತ್ಮದಲ್ಲಿರುವ ಆತ್ಮಭಾವನೆಯನ್ನು ತೊಲಗಿಸಿಕೊಳ್ಳುವದು. ಆದ್ದರಿಂದ ಬುದ್ಧಿಯು ಅನಾತ್ಮಗಳನ್ನು ಬಿಟ್ಟು ಹಿಂದಿರುಗಿದರೆ ಸಾಕು, ಆತ್ಮನಾಗಿಯೇ ನಿಲ್ಲುತ್ತದೆ. ಆತ್ಮನ ಆಕಾರವಾಗಬೇಕಾದದ್ದಿಲ್ಲ. (ಗೀ. ೧೮–೫೦, ಬೃ. ೪–೪–೨೦, ಬೃ, ೨–೪–೧೦ ಇವುಗಳನ್ನು ನೋಡಿ). (೨) ಜನ್ಮಾಂತರಲೋಕಾಂತರಗಳನ್ನು ಹೇಳುವ ವೇದದ ಉಪದೇಶದಿಂದ ಅವುಗಳ ಜ್ಞಾನವು ಹುಟ್ಟುವದೆಂದೊಪ್ಪುವವರು ಅದೇ ವೇದವು ಉಪದೇಶಿಸುವ ಅದ್ವಿತೀಯನಾದ ಆತ್ಮನ ಜ್ಞಾನವು ಹುಟ್ಟಲಾರದೆಂದು ವಾದಿಸುವದು ವಿಹಿತವಲ್ಲ. ಆ ಜ್ಞಾನದಂತೆ ಈ ಜ್ಞಾನವೂ ಹುಟ್ಟುತ್ತದೆ. ವೇದವಾಕ್ಯಗಳು ಕರ್ಮಪರವಿರಲಿ, ಜ್ಞಾನಪರವಿರಲಿ ಎರಡಕ್ಕೂ ಸಮಾನವಾದ ಪ್ರಾಮಾಣ್ಯವಿದೆ ಎಂಬುದನ್ನು ಮರೆಯಬಾರದು. (ಗೀ. ೨–೨೧, ಬೃ ೧–೩–೧). (೩) 'ಮನಸೈವೇದಮಾಪ್ತವ್ಯಮ್' (ಮನಸ್ಸಿನಿಂದಲೇ ತಿಳಿಯಬೇಕು) ಎಂದೂ ಶ್ರುತಿವಾಕ್ಯವಿರುವದರಿಂದ ಆತ್ಮಜ್ಞಾನಕ್ಕೆ ಕರಣವಿರುವದೆಂದಾಯಿತು. ಅರ್ಥಾತ್ ಶಾಸ್ತ್ರ ಆಚಾರ್ಯರ ಉಪದೇಶ ಹಾಗೂ ಶಮಾದಿಸಾಧನಸಂಪತ್ತುಗಳಿಂದ ಸಂಸ್ಕಾರಹೊಂದಿದ ಮನಸ್ಸೇ ಆತ್ಮನನ್ನರಿಯಲು ಸಾಧನವೆಂದು ತಿಳಿಯಬೇಕು. (ಗೀ. ೨–೨೧). (೪) ಶಾಸ್ತ್ರವೆಂಬ ಪ್ರಮಾಣದಿಂದಲೂ, ಸಾರ್ವತ್ರಿಕವಾದ, ಪೂರ್ಣವಾದ ದೇಶಕಾಲಕಾರ್ಯಕಾರಣಭಾವಾತೀತವಾದ ಅನುಭವದ ಆಧಾರದಿಂದಲೂ ಉತ್ಪನ್ನವಾಗುವ ಈ ಜ್ಞಾನವು ಭ್ರಾಂತಿ ಎನ್ನಲು ಸಾಧ್ಯವಿಲ್ಲ. ಹಾಗೂ ಇದು ಬಾಧ್ಯಬಾಧಕ ಎಂಬ ದ್ವೈತವನ್ನೇ ಬಾಧಿಸಿ ಉತ್ಪನ್ನವಾಗುವದರಿಂದ ಒಂದಾನೊಂದು ಕಾಲಕ್ಕೆ ಈ ಜ್ಞಾನವೂ ಬಾಧಿಸಲ್ಪಡಬಹುದೆಂದು

ಶಂಕಿಸುವ ಹಾಗಿಲ್ಲ. ಮತ್ತು ಈ ಅರಿವು ಹುಟ್ಟಲಾರದೆಂಬುದೂ ಸರಿಯಲ್ಲ. (ಸೂ. ೨–೧–೧೪ರಲ್ಲಿ 'ನ ಚ ಇಯಮ್ ಅವಗತಿರ್ನೋತ್ಪದ್ಯತೇ ......' ಇತ್ಯಾದಿವಾಕ್ಯಗಳನ್ನು ನೋಡಿ). (೫) ಇದು ವ್ಯವಹಾರಾಭಾವದ ಒಂದಾನೊಂದು ಅವಸ್ಥೆಗೆ ಸೇರಿದ್ದಲ್ಲ. ವ್ಯವಹಾರವನ್ನೆಲ್ಲ ವ್ಯಾಪಿಸಿರುವ ಆತ್ಮತತ್ತ್ವವನ್ನು ಲಕ್ಷಿಸಿದಾಗ ವ್ಯವಹಾರವು ಬಾಧಿತಾನುವೃತ್ತಿಯಿಂದ ತೋರುತ್ತಿರುತ್ತದೆ, ಸತ್ಯವಾಗಿರುವದಿಲ್ಲವೆಂಬುದೇ ಇಲ್ಲಿ ತಾತ್ಪರ್ಯ. ಈ ಬಾಧಿತಾನುವೃತ್ತಿಯಲ್ಲಿಯೇ ಬೋಧ್ಯಬೋಧಕವ್ಯವಹಾರವು ನಡೆಯಬಹುದಾಗಿದೆ. ಈಗಲೂ ತಿಳಿದವರು ಬೋಧಿಸುತ್ತಲೂ ಮುಮುಕ್ಷುಗಳು ಅರಿಯುತ್ತಲೂ ಇದ್ದಾರೆ. ಹೀಗಿರುವಾಗ ಈ ಜ್ಞಾನವು ಅಸಂಭವವಲ್ಲ, ಅಸಂಗತವಲ್ಲ. (ಸೂ. ೨–೧–೧೪ರಲ್ಲಿ '**ನ ಚ ಅಯಂ ವ್ಯವಹಾರಾಭಾವಃ ಅವಸ್ಥಾವಿಶೇಷನಿಬದ್ಧೋಽಭಿಧೀಯತೇ**.......' ಎಂಬ ವಾಕ್ಯವನ್ನೂ, ತೈ. ೨–೮ರಲ್ಲಿ 'ಉಪದಿಶನ್ತಿ ಚ ಅನ್ಯೇಭ್ಯಃ ......' ಎಂಬ ವಾಕ್ಯವನ್ನೂ ನೋಡಿ). (೬) ಹಿಂದಿನ ಮಹಾವೀರ್ಯರಲ್ಲಾಗಲಿ ಇಂದಿನ ಹೀನವೀರ್ಯರಲ್ಲಾಗಲಿ ತೋರಿಕೊಂಡಿದ್ದರಿಂದ ಬ್ರಹ್ಮಕ್ಕೆ ಅಥವಾ ಅದರ ವಿಜ್ಞಾನಕ್ಕೆ ಯಾವ ವ್ಯತ್ಯಾಸವೂ ಆಗುವಂತಿಲ್ಲ. ಏಕೆಂದರೆ ಅದು ದೇಶಕಾಲಾತೀತವಾದದ್ದು; ಎಲ್ಲರಿಗೂ ಆತ್ಮನಾದದ್ದು. ಆದ್ದರಿಂದ ಈ ಕಾಲದಲ್ಲಿಯೂ ಸಾಧಕನು ಮನಸ್ಸನ್ನು ವಿಷಯಚಿಂತನೆಯಿಂದ ಹಿಮ್ಮೆಟ್ಟಿಸಿಕೊಂಡು ತನ್ನಲ್ಲಿಯೇ ತನ್ನ ಸ್ವರೂಪವನ್ನು ಕಂಡುಕೊಳ್ಳಲು ಸಾಧ್ಯವಿದೆ. ಹಾಗೆ ಕಂಡುಕೊಂಡರೆ ಸರ್ವಾತ್ಮಭಾವದ ಫಲವು ಅವನಿಗೆ ಬರುತ್ತದೆ. ಆದ್ದರಿಂದ ಜ್ಞಾನವು ಈ ಕಾಲದಲ್ಲಾಗಲಾರದೆಂಬುದು ಸರಿಯಲ್ಲ. (ಬೃ. ೧–೪–೧೦ 'ಏತಸ್ಮಿನ್ನಪಿ ವರ್ತಮಾನಕಾಲೇ.....') (೭) ಆತ್ಮವಿಜ್ಞಾನವು ಬಂದಾಗ ಶಾಸ್ತ್ರವು ವ್ಯರ್ಥವಾದರೂ ಚಿಂತೆಯಿಲ್ಲ. ಅದೇ ಅದರ ಪ್ರಯೋಜನ. ಪ್ರಯೋಜನವನ್ನು ಹೊಂದಿದಮೇಲೆ ಪ್ರಮಾಣದ ವ್ಯಾಪಾರವಿಲ್ಲವಷ್ಟೆ. ಈ ಮಾತನ್ನು ವೇದವೇ 'ಅತ್ರ ವೇದಾ ಅವೇದಾ ಭವನ್ತಿ' ಎಂದು ಹೇಳಿರುತ್ತದೆ. (ಗೀ. ೧೩–೨ರಲ್ಲಿ 'ತಥಾ ನಃ ಕ್ಷೇತ್ರಜ್ಞಾನಾಮ್.......' ಎಂಬೀ ವಾಕ್ಯವನ್ನು ನೋಡಿ). (೮) ಗುರು, ಶಾಸ್ತ್ರ, ಶಿಷ್ಯ – ಎಂಬೀ ಭೇದವು ಮಿಥ್ಯೆಯಾಗಿರುವಂತೆಯೇ ಉಪದೇಶವೂ ಮಿಥ್ಯೆಯಾಗಿದ್ದರೂ ಸಹ ಇದರಿಂದಲೇ ಸತ್ಯವಾದ ಬ್ರಹ್ಮಜ್ಞಾನವಾಗಬಹುದು. ಉದಾರಹಣೆಗೆ ಕನಸಿನಲ್ಲಿ ಹಾವು ಕಡಿದಂತಾಗಿ ಹೆದರಿದಾಗ ಬೆಚ್ಚಿಬಿದ್ದು ಎಚ್ಚರಾಗುವದು ಕಂಡಿದೆ. ಕನಸಿನ ಹಾವು ಅದರ ಕಡಿಯುವಿಕೆಗಳು ಮಿಥ್ಯೆಯೇ ಆದರೂ ಅದರಿಂದಲೇ ಸತ್ಯವಾದ ಎಚ್ಚರದಲ್ಲಿ ಹೇಗೆ ನೆಲೆನಿಲ್ಲುವಿಕೆಯು ಬರುವದೋ ಹಾಗೆಯೇ ಇಲ್ಲಿಯೂ ಸತ್ಯಬ್ರಹ್ಮದಲ್ಲಿ ನೆಲೆನಿಲ್ಲುವಿಕೆಯು ಬರಬಹುದಾಗಿದೆ. (ಸೂ. ೨–೧–೧೪ರಲ್ಲಿ 'ನೈಷ ದೋಷಃ ..... ಸ್ವಪ್ನದರ್ಶನಾವಸ್ಥಸ್ಯ....' ಇತ್ಯಾದಿ ವಾಕ್ಯಗಳನ್ನು ನೋಡಿ.)

ಅಂತೂ ಆತ್ಮಜ್ಞಾನವು ಸಂಭವನೀಯವಾಗಿದೆ. ಅದಕ್ಕಾಗಿ ಎಲ್ಲರೂ ಅವಶ್ಯವಾಗಿ ಪ್ರಯತ್ನಿಸಬೇಕು ಎಂಬುದು **ಶ್ರೀ**ಶಂಕರರ ಆಶಯವಾಗಿದೆ.

**ಪ್ರಶ್ನೆ : – ಚಿತ್ತನಿರೋಧದ ಬಗ್ಗೆ ಅವರು ಏನು ಹೇಳಿದ್ದಾರೆ ?**

ಉತ್ತರ :– ಆತ್ಮಜ್ಞಾನಿಗೆ ಚಿತ್ತನಿರೋಧವು ಕರ್ತವ್ಯ ; ಪಾತಂಜಲಯೋಗದಲ್ಲಿ ಅದು ಉಕ್ತವಾಗಿದೆ ; ಆದ್ದರಿಂದ ಅದನ್ನು ವಿಧಿಸಬೇಕು ಎಂದು ಕೆಲವರು ಆಚಾರ್ಯರ ಕಾಲದಲ್ಲಿ ಹೇಳುತ್ತಿದ್ದರು. ಅದನ್ನು ಆಚಾರ್ಯರು ಅಲ್ಲಗಳೆದಿದ್ದಾರೆ.

**ಪ್ರಶ್ನೆ :– ಹೇಗೆ ಅಲ್ಲಗಳೆದಿದ್ದಾರೆ ?**

ಉತ್ತರ :– ವೇದದಲ್ಲಿ ಆತ್ಮಜ್ಞಾನಮಾತ್ರವೇ ಮೋಕ್ಷಕ್ಕೆ ಸಾಧನವೆಂದು ಹೇಳಿದೆಯೇ ಹೊರತು ಚಿತ್ತನಿರೋಧವನ್ನು ಸಾಧನೆಯಾಗಿ ಹೇಳಿಲ್ಲ. ಅಲ್ಲದೆ ಇದೆಲ್ಲವೂ **ಆತ್ಮ**ನೇ – ಎಂದು ಕಂಡುಕೊಂಡಾಗ ಸಹಜವಾಗಿಯೇ ಆತ್ಮವಿಜ್ಞಾನಸ್ಮೃತಿ ಸಂತಾನವು ಜ್ಞಾನಿಯ ಅಂತಃಕರಣದಲ್ಲಿ ಉಂಟಾಗುತ್ತಿದ್ದು 'ಚಿತ್ತ' ಎಂಬ ಪ್ರತ್ಯೇಕ ವಸ್ತುವೇ ಸತ್ಯವಾಗಲಾರದಾದ್ದರಿಂದ ಆತ್ಮವಿಜ್ಞಾನವೇ ಸಂಪೂರ್ಣವಾದ ಚಿತ್ತ ನಿರೋಧವೆಂದಂತಾಯಿತು. ಇದು ಚಿತ್ತನಿರೋಧವನ್ನೊಪ್ಪಿ ಆಡಿದ ಮಾತು. ಆದರೆ ನಿಜವಾಗಿಯೂ ಆತ್ಮಜ್ಞಾನದ ವಿನಾ ಬೇರೆ ಸಾಧನವನ್ನು ಶಾಸ್ತ್ರದಲ್ಲಿ ಹೇಳಿಲ್ಲ. ಆದ್ದರಿಂದ ಚಿತ್ತನಿರೋಧವನ್ನು ಜ್ಞಾನಿಗೆ ವಿಧಿಸಲು ಬರುವದಿಲ್ಲ. ಅವನಲ್ಲಿ ಚಿತ್ತ ಎಂಬುದಿರುವದೇ ಇಲ್ಲ, ಅವನ ಮನಸ್ಸು ಅಮನಸ್ಸಾಗಿರುತ್ತದೆ (ಬೃ. ೧–೪–೭, ಮಾಂ.ಕಾ. ೩–೩೨) ಎಂದೀ ರೀತಿಯಲ್ಲಿ ಅವರು ಚಿತ್ತನಿರೋಧವನ್ನು ಅಲ್ಲಗಳೆದಿದ್ದಾರೆ.

**ಪ್ರಶ್ನೆ :– ಕೇವಲ ಕರ್ಮವಾದದ ಹಾಗೂ ಜ್ಞಾನಕರ್ಮಸಮುಚ್ಚಯವಾದದ ಸಾರವೇನು ?**

ಉತ್ತರ :– ವೈದಿಕರಲ್ಲಿ ಕೆಲವರು ಕೇವಲ ಕರ್ಮದಿಂದಲೇ ಮೋಕ್ಷ ಎನ್ನುವವರಿದ್ದರು. ಇವರು ವೀರಮೀಮಾಂಸಕರು. ನಿಷಿದ್ಧಕರ್ಮವನ್ನು ಬಿಡುವದರಿಂದ ಕೆಟ್ಟ ಜನ್ಮಕ್ಕೆ ಕಾರಣವಾದ ಪಾಪವು ಬರುವದಿಲ್ಲ. ಕಾಮ್ಯಕರ್ಮಗಳನ್ನು ಮಾಡದೆ ಇರುವದರಿಂದ ಒಳ್ಳೆಯ ಜನ್ಮಕ್ಕೆ ಕಾರಣವಾದ ಪುಣ್ಯವೂ ಬರುವದಿಲ್ಲ. ನಿತ್ಯಕರ್ಮಗಳನ್ನು ತಪ್ಪದೆ ಮಾಡುವದರಿಂದ ಪ್ರತ್ಯವಾಯದೋಷವೂ ಬರುವದಿಲ್ಲ. ಪ್ರಾರಬ್ಧಕರ್ಮವು ಅನುಭವದಿಂದ ನಶಿಸಿಹೋಗುತ್ತದೆ. ಮುಂದೆ ಹುಟ್ಟಲು ಕರ್ಮವೇ ಇಲ್ಲದ್ದರಿಂದ ಕೇವಲ ಕರ್ಮದಿಂದಲೇ ಮೋಕ್ಷ ಎಂಬುದು ಈ ವಾದಿಗಳ ಅಭಿಪ್ರಾಯವಾಗಿತ್ತು. ಆದರೆ ಹಿಂದೆ ಮಾಡಿದ ಇನ್ನೂ ಫಲಕೊಡಲು ಆರಂಭಿಸದೆ ಇರುವ ಸಂಚಿತಕರ್ಮಗಳ ನಾಶವು ಏತರಿಂದಾಗುವದು ? – ಎಂಬ ಪ್ರಶ್ನೆಗೆ ಇವರಲ್ಲಿ

ಉತ್ತರವಿಲ್ಲವಾದ್ದರಿಂದ ಈ ವಾದವು ಸರ್ವಥಾ ತ್ಯಾಜ್ಯವು (ತೈ.ಅವ) ಎಂದು ಆಚಾರ್ಯರಿಂದ ನಿಂದಿಸಲ್ಪಟ್ಟಿದೆ.

**ಪ್ರಶ್ನೆ :– ಸರಿ, ಇನ್ನು ಸಮುಚ್ಚಯವಾದಿಗಳ ಮತವೇನು ?**

ಉತ್ತರ : –ವೇದದಲ್ಲಿ ಕರ್ಮವನ್ನು ವಿಧಿಸಿರುವಂತೆ ಜ್ಞಾನವನ್ನೂ ವಿಧಿಸಿರುವದರಿಂದ ಜ್ಞಾನವೂ ಕರ್ಮವೂ ಸೇರಿ ಮೋಕ್ಷಕ್ಕೆ ಕಾರಣವು ಎಂಬುದು ಈ ವಾದಿಗಳ ಮತವು. ಇವರ ಮತದಂತೆ ಜ್ಞಾನ ಎಂಬುದು ಒಂದು ಪ್ರಕಾರದ ಉಪಾಸನಾವಿಧಿಯಾಗಿದೆ. ಆದರೆ (೧) ಜ್ಞಾನಕ್ಕೆ ಅಕರ್ತೃತ್ವಬುದ್ಧಿಯೇ ಲಕ್ಷಣ. ಕರ್ಮಕ್ಕೆ ಕರ್ತೃತ್ವಬುದ್ಧಿಯೇ ಮೂಲ. (೨) ಜ್ಞಾನವು ಏಕತ್ವ, ಕರ್ಮವು ಅನೇಕತ್ವಗಳನ್ನು ಆಶ್ರಯಿಸಿದೆ. (೩) ಜ್ಞಾನದ ಫಲವು ನಿತ್ಯಸಿದ್ಧವಾದ ಬ್ರಹ್ಮವೇ ಆಗಿದ್ದು ತತ್ಕಾಲದಲ್ಲಿಯೇ ಆಗುತ್ತದೆ ; ಕರ್ಮದ ಫಲವು ಹೊಸದಾಗಿ ಕಾಲಾಂತರ ಲೋಕಾಂತರಗಳಲ್ಲಿ ಹುಟ್ಟುತ್ತಿದ್ದು ಅನಿತ್ಯವಾದ ಸಂಸಾರವನ್ನು ಕೊಡುತ್ತದೆ. (೪) ಅವಿದ್ಯಾಕಲ್ಪಿತವಾದ ಕ್ರಿಯೆ, ಕಾರಕ, ಫಲ ಮುಂತಾದವುಗಳು ಸತ್ಯವೆಂದು ತಿಳಿದವನಿಗೇ ಕರ್ಮವನ್ನು ಶಾಸ್ತ್ರವು ಬೋಧಿಸುತ್ತದೆ ; ಕ್ರಿಯಾಕಾರಕಫಲಾದಿ ಭೇದಗಳಿಲ್ಲದ ಕೇವಲ ಅದ್ವಯಾತ್ಮನಲ್ಲಿ ನೆಲೆನಿಲ್ಲುವ ಜ್ಞಾನದಿಂದ ಇದೆಲ್ಲವೂ ಬಾಧಿಸಿ ಹೋಗುತ್ತದೆ. ಆದ್ದರಿಂದ ಜ್ಞಾನಕರ್ಮಸಮುಚ್ಚಯವು ಎಂದಿಗೂ ಆಗದು ; ಜ್ಞಾನೋತ್ತರಕಾಲದಲ್ಲಿ ಅದ್ವಯಾತ್ಮನೇ ಹೊರತು ಮಿಕ್ಕದ್ದಾವದೂ ಸತ್ಯವಾಗಿರಲಾರದು ಎಂಬುದು ಆಚಾರ್ಯರ ಅಭಿಪ್ರಾಯ. ಇದನ್ನು ಭಾಷ್ಯಗಳಲ್ಲಿ ಅವರು ಮತ್ತೆಮತ್ತೆ ಪ್ರತಿಪಾದಿಸಿದ್ದಾರೆ.

------

## ೮. ತರ್ಕ

**ಪ್ರಶ್ನೆ : – ತರ್ಕಶಾಸ್ತ್ರದ ಬಗ್ಗೆ ಆಚಾರ್ಯರ ನಿಲುವು ಏನು ?**

ಉತ್ತರ :– (೧) ತಾರ್ಕಿಕರು ಪರಿಗ್ರಹಿಸಿರುವ ತರ್ಕಶಾಸ್ತ್ರದಿಂದ ಪರಮಾರ್ಥತತ್ತ್ವವು ನಿರ್ಣಯವಾಗಲಾರದು. ಪುರುಷಬುದ್ಧಿಗೆ ಅನೇಕ ಮಾರ್ಪಾಡುಗಳುಂಟು. ಈ ಬುದ್ಧಿಯಿಂದಲೇ ಕಲ್ಪಿಸಿದ ದರ್ಶನಗಳು ಪರಿಪೂರ್ಣತತ್ತ್ವದರ್ಶನಗಳಾಗಲಾರವು. ಮುಂದಿನ ಬುದ್ಧಿವಂತನು ಇದನ್ನೂ ತಳ್ಳಿಹಾಕುವ ಸಂಭವವುಂಟು. (೨) ತಾರ್ಕಿಕರೊಡನೆ ವಾದಮಾಡುವ ಚಟವು ನಮಗಿಲ್ಲ, ಅದು ಅವಶ್ಯವೂ ಅಲ್ಲ. ಆದರೆ ಮುಮುಕ್ಷುಗಳು ಅವರು ಹೇಳುವ ಮಾತುಗಳಿಗೆ ಮರುಳಾಗಿ ಪರಮಾರ್ಥಮಾರ್ಗದಿಂದ ತಪ್ಪಿಹೋಗಬಾರದೆಂಬ ಉದ್ದೇಶದಿಂದ ಅಲ್ಲಲ್ಲಿ ತಾರ್ಕಿಕರ ಮತಗಳನ್ನು ಅನುವಾದಮಾಡಿಕೊಂಡು ಅವರ ಉಕ್ತಿಗಳಲ್ಲಿಯೇ ಅಸಮಂಜಸತ್ವವನ್ನು

ತೋರಿಸಿಕೊಡುತ್ತಿರುತ್ತೇವೆ. ಪರಮಾರ್ಥತತ್ತ್ವವು ತರ್ಕಕ್ಕೆ ನಿಲುಕತಕ್ಕದ್ದಲ್ಲವೆಂದು ಶ್ರುತಿಯು ಹೇಳುತ್ತದೆ – ಎಂಬುದಾಗಿ ಆಚಾರ್ಯರು ಬರೆದಿರುತ್ತಾರೆ (ಸೂ. ೨–೧–೧೧, ಪ್ರ. ೬–೩, ಮುಂ. ೧.೨.೧೨, ಸೂ. ೨–೧–೬, ಮಾಂ. ಕಾ. ४–೨)

**ಪ್ರಶ್ನೆ :–'ತರ್ಕದಿಂದ ಮನನಮಾಡಬೇಕು' (ಬೃ. ೨–४–೫) ಎಂದು ಆಚಾರ್ಯರೂ ಬರೆದಿರುವರಲ್ಲ!**

ಉತ್ತರ :– ಹೌದು. 'ಶ್ರುತಿಯು ಹೇಳುವ ಬ್ರಹ್ಮವಿಷಯವು ಈಗಲೇ ಅನುಭವಕ್ಕೆ ಬರುವದಾದ್ದರಿಂದ ಅನುಭವಾಂಗವಾದ ಅನುಮಾನವನ್ನೂ ಸಹ (ತರ್ಕವನ್ನೂ) ನಾವು ಅಲ್ಲಗಳೆಯುವದಿಲ್ಲ' ಎಂದು ಸೂತ್ರಭಾಷ್ಯದಲ್ಲಿ (ಸೂ.೧–೧–೨) ಬರೆದಿದ್ದಾರೆ. ಆದರೆ ಈ ಅನುಮಾನ, ತರ್ಕ– ಎಂಬುದು ತರ್ಕಶಾಸ್ತ್ರಕ್ಕೆ ಸೇರಿದ್ದಲ್ಲ.

**ಪ್ರಶ್ನೆ :– ಹಾಗಾದರೆ ಇದರ ಸ್ವರೂಪವೇನು ?**

ಉತ್ತರ : ಸಾರ್ವತ್ರಿಕಪೂರ್ಣ (ದೇಶಕಾಲಾತೀತ)ವಾದ ಅನುಭವದ ಆಧಾರದಿಂದ ಶ್ರುತಿಯು ತೋರಿಸಿಕೊಟ್ಟಿರುವ ಅನುಭವಾಂಗತರ್ಕಗಳೇ ಇಲ್ಲಿ ತರ್ಕ ಅಥವಾ ಅನುಮಾನವೆಂಬ ಮಾತಿಗೆ ಅರ್ಥ. ಇದನ್ನು ಶ್ರೌತತರ್ಕ ಎನ್ನುತ್ತಾರೆ. ಈ ಬಗೆಯ ತರ್ಕವನ್ನೇ ಆಚಾರ್ಯರ ಸಿದ್ಧಾಂತವನ್ನು ತಿಳಿಯಲು ಉಪಯೋಗಿಸಬೇಕು.

**ಪ್ರಶ್ನೆ :– ಆಚಾರ್ಯರು ಈ ಬಗೆಯ ತರ್ಕಗಳನ್ನು ಎಲ್ಲಿಯಾದರೂ ಉಲ್ಲೇಖಿಸಿದ್ದಾರೆಯೆ ?**

ಉತ್ತರ :– ಓಹೋ ! ಇದೋ ನೋಡಿ (೧) ಜಾಗ್ರತ್ತಿರುವಾಗ ಸ್ವಪ್ನವಿಲ್ಲ, ಸ್ವಪ್ನವಿರುವಾಗ ಜಾಗ್ರತ್ತಿಲ್ಲ, ತಾನು ಯಾವಾಗಲೂ ಇದ್ದಾನೆ ; ಇವೆರಡಕ್ಕೂ ತಾನೇ ಆಧಾರನಾಗಿದ್ದಾನೆ. ಇಂಥ ಆಧಾರರೂಪನಾದ 'ತಾನು ' (ಆತ್ಮ) ಜಾಗ್ರತ್ತಿಗಾಗಲಿ ಸ್ವಪ್ನಕ್ಕಾಗಲಿ ಒಳಪಟ್ಟಿಲ್ಲ, ಕೇವಲ ಅಸಂಗನಾಗಿದ್ದಾನೆ (೨) ಗಾಢನಿದ್ರೆಯಲ್ಲಿ ಜಾಗ್ರತ್ಸ್ವಪ್ನಗಳೆರಡೂ ಇರದೆ ತಾನೇ ಇರುತ್ತಾನಾದ್ದರಿಂದ ತನ್ನ ಸ್ವರೂಪವು ನಿಷ್ಪ್ರಪಂಚಸದ್ರೂಪವಾದ ಆತ್ಮನಾಗಿದೆ. (೩) ಲೋಕದಲ್ಲಿ ಕಾರ್ಯವು ಕಾರಣವನ್ನು ಬಿಟ್ಟು ಮೂರುಕಾಲದಲ್ಲೂ ಇರಲಾರದು. ಮಡಕೆ ಎಂಬ ಕಾರ್ಯವು ಮಣ್ಣನ್ನುಳಿದು ಯಾವಾಗಲೂ ಇರಲಾರದು. ಬ್ರಹ್ಮವು ಕಾರಣ, ಜಗತ್ತು ಕಾರ್ಯ – ಎಂದು ಶ್ರುತಿಯು ಹೇಳುತ್ತಿರುವದರಿಂದ ತೋರುವ ಈ ಜಗತ್ತು ಈಗಲೂ ಬ್ರಹ್ಮಕ್ಕಿಂತ ಬೇರೆಯಲ್ಲ– ಎಂಬೀ ಬಗೆಯ ತರ್ಕದ ನಮೂನೆಗಳನ್ನು ಸೂ.ಭಾ. ೨–೧–೬ ರಲ್ಲಿ ಉದಾಹರಿಸಿದ್ದಾರೆ.

**ಪ್ರಶ್ನೆ : – ಹಾಗಾದರೆ ತರ್ಕಶಾಸ್ತ್ರವನ್ನಭ್ಯಸಿಸಿದವರಿಗೇ ಭಾಷ್ಯಗಳ ರಹಸ್ಯವು ತಿಳಿಯುವದೆಂಬ ಗ್ರಹಿಕೆ ತಪ್ಪೆಂದಾಯಿತಲ್ಲ !**

ಉತ್ತರ :– ಅಹುದು, ಭಾಷ್ಯವು ತರ್ಕದಿಂದ ವಾದಮಾಡುವ ಪಂಡಿತರ ಸ್ವತ್ತಲ್ಲ. ಅದು ಪರಮತತ್ತ್ವವನ್ನು ಕಂಡುಕೊಳ್ಳಬೇಕೆಂಬ ಮುಮುಕ್ಷುಗಳ ಸ್ವತ್ತಾಗಿದೆ. ಈ ಮಾತನ್ನು ಮರೆಯಬಾರದು.

ಪ್ರಶ್ನೆ :– ಹಾಗಾದರೆ ಈ ಗ್ರಹಿಕೆಗೆ ಕಾರಣವೇನು ?

ಉತ್ತರ :– ಸುರೇಶ್ವರರ ಅನಂತರ ಬಂದ ವ್ಯಾಖ್ಯಾನಕಾರರು ಆಚಾರ್ಯರ ಸಂಪ್ರದಾಯದ ಮುಖ್ಯ ಜೀವಾಳವಾದ ಪೂರ್ಣಾನುಭವದ ದೃಷ್ಟಿಯನ್ನು ಕಡೆಗಣಿಸಿ ತರ್ಕಬುದ್ಧಿಯಿಂದ ಕಲುಷಿತರಾಗಿ ತರ್ಕಕರ್ಕಶವಾದ ಉದ್ಗ್ರಂಥಗಳನ್ನು ಸಾವಿರಾರು ವರ್ಷಗಳ ಹಿಂದೆಯೇ ರಚಿಸಿ ಆಚಾರ್ಯರ ಭಾಷ್ಯದ್ವಾರವನ್ನು ಸಾಮಾನ್ಯರು ಪ್ರವೇಶಿಸದಂತೆ ಪ್ರತಿಬಂಧಿಸಿರುವದೇ ಈ ಗ್ರಹಿಕೆಗೆ ಕಾರಣವಾಗಿದೆ.

ಪ್ರಶ್ನೆ :– ಇದರ ನಿವಾರಣೆಗೆ ಮುಮುಕ್ಷುಗಳು ಏನು ಮಾಡಬೇಕು ?

ಉತ್ತರ : – ಸಕಲವ್ಯಾಖ್ಯಾನಗಳನ್ನೂ ಅತ್ತಸರಿಸಿ ಮೊಟ್ಟಮೊದಲು ಕೇವಲ ಭಾಷ್ಯಗಳ ಅಭ್ಯಾಸಕ್ಕೇ ಸೊಂಟಕಟ್ಟಬೇಕು: ಅದಾದನಂತರ ತುಲನಾತ್ಮಕದೃಷ್ಟಿಯಿಂದ ಮಿಕ್ಕವುಗಳನ್ನು ಅಭ್ಯಸಿಸುವ ಪದ್ಧತಿಯನ್ನಿಟ್ಟುಕೊಳ್ಳಬೇಕು.

ಪ್ರಶ್ನೆ :– ಕೆಲವು ದೇಶಭಾಷೆಗಳಲ್ಲಿ ಆಚಾರ್ಯರ ಭಾಷ್ಯಗಳು ಪ್ರಕಟವಾಗಿವೆಯಷ್ಟೆ. ಅವುಗಳನ್ನನುಸರಿಸಬಹುದೆ ?

ಉತ್ತರ :– ಯಾವದೊಂದು ವ್ಯಾಖ್ಯಾನದ ಜಾಡನ್ನೂ ಹಿಡಿಯದೆ ಆಚಾರ್ಯರ ಭಾಷ್ಯದ ಅಭಿಪ್ರಾಯವನ್ನೇ ಅನುಸರಿಸುತ್ತ ಅನುಭವಸಮ್ಮತವಾಗುವಂತೆ ತತ್ತ್ವವನ್ನು ತಿಳಿಸುವ ಅನುವಾದಗಳನ್ನು ಅವಶ್ಯವಾಗಿ ಅನುಸರಿಸಬಹುದು. ಅದಕ್ಕೆ ಹೊರತಾಗಿ ಯಾವದಾದರೊಂದು ವ್ಯಾಖ್ಯಾನಪ್ರಸ್ಥಾನವನ್ನು ಬೆಂಬಿಡಿದು ಬರೆದಿರುವ ಅನುವಾದಗಳಲ್ಲಿ ಆಚಾರ್ಯರ ಭಾಷ್ಯಾಭಿಪ್ರಾಯವು ತಲೆಕೆಳಗಾಗಿ ನಿರೂಪಿತವಾಗಿರುವ ಸಂಭವವೇ ಹೆಚ್ಚಾಗಿದೆ. ಆದ್ದರಿಂದ ಬಹಳ ಎಚ್ಚರದಿಂದ ಭಾಷ್ಯಾಭ್ಯಾಸವನ್ನು ಮಾಡಬೇಕು.

ಪ್ರಶ್ನೆ :– ಅಂಥ ಶುದ್ಧಸಂಪ್ರದಾಯದ ದೇಶಭಾಷೆಯ ಅನುವಾದಗಳಿವೆಯೆ?

ಉತ್ತರ :– ಇವೆ. ಹಿಂದೆಯೇ ಹೇಳಿದ ಹೊಳೆನರಸೀಪುರದ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಶ್ರೀಶ್ರೀಗಳವರಿಂದ ರಚಿತವಾದ ಭಾಷ್ಯಾನುವಾದ ಗ್ರಂಥಗಳು ಪರಿಶುದ್ಧ ಸಂಪ್ರದಾಯವನ್ನೇ ಅವಲಂಬಿಸಿರುತ್ತವೆ. ಅವುಗಳನ್ನು ಅವಲೋಕಿಸಿದರೆ ಸಂಶಯವು ಇನ್ನಿಲ್ಲದಂತೆ ತೊಲಗುವದು.

——————

## ೧೦. ಭಕ್ತಿ

**ಪ್ರಶ್ನೆ :– ಅದ್ವೈತ ಸಿದ್ಧಾಂತದಲ್ಲಿ ಭಕ್ತಿಗೆ ಯಾವ ಸ್ಥಾನವಿದೆ ?**

ಉತ್ತರ : – ಸಾಮಾನ್ಯವಾಗಿ 'ಭಕ್ತಿ' ಎಂದರೆ ಪೂಜ್ಯವಸ್ತುವಿನ ವಿಷಯಕವಾದ ಪ್ರೇಮ ಎಂದರ್ಥ. ಹೀಗೆಂದಾಗ ಪ್ರೇಮಿಸುವ ವಸ್ತು, ಪ್ರೇಮಮಾಡುವವನು, ಪ್ರೇಮವೆಂಬ ಭಾವ – ಇವು ಇರಬೇಕಾದ್ದರಿಂದ ಇದು ದ್ವೈತಕ್ಕೇ ಸೇರಿದ್ದೆಂದು ಅನಿಸುತ್ತದೆ, ಅಲ್ಲವೆ ? ಆದರೆ ಆಚಾರ್ಯರು ಇದನ್ನು ನಿರೂಪಿಸಿರುವ ಪ್ರಕಾರವೇ ಬೇರೆಯಿದೆ.

**ಪ್ರಶ್ನೆ : ಅದೇನು ಪ್ರಕಾರ ? ಈ ಭೇದವಿಲ್ಲದ ಭಕ್ತಿಯೂ ಒಂದುಂಟೆ ?**

ಉತ್ತರ : – ಉಂಟೆದೇ ಆಚಾರ್ಯರು ಹೇಳುತ್ತಾರೆ. ಏಕೆಂದರೆ ಭಕ್ತಿಎಂದರೆ ಪ್ರೇಮ ಹಾಗೂ ಆನಂದರೂಪವಾದ ಭಾವವಲ್ಲವೆ ?

**ಪ್ರಶ್ನೆ : ಅಹುದು, ಆದ್ದರಿಂದಲೇ ಅದು ದ್ವೈತವಲ್ಲವೆ ?**

ಉತ್ತರ : – ಮನಸ್ಸಿನಲ್ಲಿ ಅದು ಆವಿರ್ಭವಿಸಿದಾಗ ದ್ವೈತವೇ ಸರಿ. ಆದರೆ ಈ ಆನಂದದ ಮೂಲವನ್ನು ಹುಡುಕಿದರೆ ಆನಂದ, ಆನಂದಿ – ಎಂಬ ದ್ವೈತವಿರದ ಸ್ವರೂಪವೇ ಬ್ರಹ್ಮಾನಂದವು. ಇದು ಅದ್ವಯವಾಗಿದೆ, ಇದೇ ಪ್ರೇಮಸ್ವರೂಪವು ಎಂದರೆ ನಮ್ಮ ನಿಜಸ್ವರೂಪವು ಎಂದು ಆಚಾರ್ಯರು ವಿವರಿಸಿದ್ದಾರೆ (ತೈ. ೨–೭ರಲ್ಲಿ **'ನಿರಸ್ತೇ ತು ಅವಿದ್ಯಾಕೃತೇ ವಿಷಯವಿಷಯಿವಿಭಾಗೇ ವಿದ್ಯಯಾ ಸ್ವಾಭಾವಿಕಃ ಪರಿಪೂರ್ಣಃ ಏಕ ಆನನ್ದೋऽದ್ವೈತೋ ಭವತಿ ಇತ್ಯೇತಮರ್ಥಂ ವಿಭಾವಯಿಷ್ಯನ್ ಆಹ'** ಎಂಬ ವಾಕ್ಯವನ್ನೂ ಮತ್ತು ಇದೇ ಆನಂದಮೀಮಾಂಸೆಯ ಕೊನೆಯಲ್ಲಿ **'ಸ ಏಷ ಆನನ್ದಃ, ಯಸ್ಯ ಮಾತ್ರಾಃ.... ಯತ್ರೈಕತಾಂ ಗತಾಃ ಸ ಏಷ ಪರಮಾನನ್ದಃ ಸ್ವಾಭಾವಿಕಃ। ಅದ್ವೈತತ್ವಾತ್। ಆನನ್ದಾನನ್ದಿನೋಶ್ಚ ಅವಿಭಾಗೋऽತ್ರ ॥ '** ಎಂಬ ವಾಕ್ಯವನ್ನೂ ನೋಡಿ.)

**ಪ್ರಶ್ನೆ : – ಹಾಗಾದರೆ ಅದ್ವಯಸ್ವರೂಪವೇ ಬ್ರಹ್ಮಾನಂದವೆಂದಹಾಗಾಯಿತಲ್ಲ !**

ಉತ್ತರ : – ಹೌದು, ಅದ್ವಯಸ್ವರೂಪವೇ ಪ್ರೇಮಸ್ವರೂಪವು, ಬ್ರಹ್ಮಾನಂದವು.

**ಪ್ರಶ್ನೆ : – ಅಂದರೆ ಮನಸ್ಸಿನಲ್ಲಿ ಹೊರಹೊಮ್ಮುವ ಭಕ್ತಿರೂಪಪ್ರೇಮದ ಸೆಲೆಯೇ – ಮೂಲಸ್ಥಾನವೇ – ಅದ್ವಯಾತ್ಮಸ್ವರೂಪವೇನು ?**

ಉತ್ತರ :– ಹೌದು, ಮನಸ್ಸು ಭಾವನೆ, ಶ್ರದ್ಧೆಗಳಿಂದ ಕೂಡಿಕೊಂಡು

ಶಾಸ್ತ್ರೀಯವಾದ ಪೂಜ್ಯವಾದ ವಿಷಯಗಳ ಚಿಂತನೆಯಲ್ಲಿ ಏಕಾಗ್ರವಾದಾಗ ಸ್ವಾಭಾವಿಕವಾದ ಅದ್ವಯಾನಂದವು – ಸ್ವರೂಪಾನಂದವು – ಅದಕ್ಕೆ ಮಾರುಹೋಳೆಯುವದು. ಇದನ್ನೇ 'ಭಕ್ತಿ' ಎನ್ನುವರು.

**ಪ್ರಶ್ನೆ :– ಸರಿ, ಭಾವನಾರೂಪವಾದ ಉಪಾಸನೆಯಲ್ಲೇನೋ ಇದು ಮಾರುಹೊಳೆದೀತು ; ಆದರೆ ವಸ್ತುದರ್ಶನರೂಪವಾದ ಜ್ಞಾನದಲ್ಲಿ ಈ ಭಕ್ತಿಯು ಹೇಗೆ ಹೊಂದುವದು ? ಉಪಾಸನೆಗೂ ಜ್ಞಾನಕ್ಕೂ ಅಂತರವಿಲ್ಲವೆ ?**

ಉತ್ತರ : – ಅತ್ಯುತ್ತಮವಾದ ಪ್ರಶ್ನೆ ; ನಿಧಾನವಾಗಿ ಕೇಳಿ. (೧) ಭಾವನಾತ್ಮಕವಾದ ಉಪಾಸನೆಯನ್ನು ಶ್ರದ್ಧೆಯಿಂದಲೂ ಭಕ್ತಿಯಿಂದಲೂ ಆಚರಿಸಿದರೆ ಶಾಸ್ತ್ರಕ್ಕನುಸಾರವಾಗಿ ಚಿತ್ತಶುದ್ಧಿ, ಏಕಾಗ್ರತಾಲಾಭವೂ ಬ್ರಹ್ಮವಿದ್ಯೆಗೆ ಬೇಕಾದ ದೈವೀಸಂಪತ್ತೂ ಈಗ ಲಭಿಸುವವಲ್ಲದೆ ಬ್ರಹ್ಮಜ್ಞಾನವಾಗದಿದ್ದರೂ ಮುಂದೆ ಆಯಾ ದೇವತಾ ಸಾಕ್ಷಾತ್ಕಾರ ಹಾಗೂ ಸಾಲೋಕ್ಯಾದಿ ಫಲಗಳಾಗುವವು. ಹೀಗೆ ಉಪಾಸನೆಗೆ ಕಾಲಾಂತರದ ಫಲವೂ ಲೋಕಾಂತರದ ಫಲವೂ ಕಟ್ಟಿಟ್ಟಬುತ್ತಿಯಾಗಿವೆ ಎಂಬುದು ಭಾಷ್ಯಕಾರರ ಅಭಿಪ್ರಾಯವು. (ಛಾಂ. ಅವ.) (೨) ಆತ್ಮಜ್ಞಾನವು ವಸ್ತುತಂತ್ರವಾಗಿದ್ದು ಈಗಲೇ ಫಲಕೊಡುವದಾಗಿದೆ. ಮತ್ತು ಇದು ಭಾವನಾರೂಪವಲ್ಲ, ವಸ್ತುದರ್ಶನ ರೂಪವಾಗಿದೆ. ಆದ್ದರಿಂದ ಉಪಾಸನೆಗೂ ಜ್ಞಾನಕ್ಕೂ ಮಹದಂತರವುಂಟು ಎಂದೇ ಆಚಾರ್ಯರು ನಿರೂಪಿಸಿದ್ದಾರೆ. (ಛಾಂ. ಅವ. ಸೂ. ೧–೧–೪)

**ಪ್ರಶ್ನೆ :– ಅಂದಮೇಲೆ ಭಕ್ತಿಯೇ ಬೇರೆ, ಜ್ಞಾನವೇ ಬೇರೆ – ಎಂದಾಯಿತಲ್ಲ!**

ಉತ್ತರ :– ಹಾಗಲ್ಲ, 'ವಸ್ತುಸ್ವರೂಪಜ್ಞಾನ ಎಂಬುದಿಲ್ಲವೇ ಇಲ್ಲ, ಎಲ್ಲವೂ ಭಾವನಾರೂಪವಾದ ಉಪಾಸನೆಯೇ' ಎಂದು ಹೇಳುವ ವೈದಿಕರನ್ನು ಕುರಿತು 'ಉಪಾಸನೆಗೆ ವಿಲಕ್ಷಣವಾದ ವಸ್ತುದರ್ಶನರೂಪಜ್ಞಾನವು ಸ್ವತಂತ್ರವಾಗಿದ್ದು ಈಗಲೇ ಫಲಕೊಡತಕ್ಕದ್ದಾಗಿದೆ' ಎಂದು ಆಚಾರ್ಯರು ಹೇಳಿದ್ದು ನಿಜವೇ ಅಹುದು. ಆದರೆ ಅದೇ ಆಚಾರ್ಯರೇ ಈ ವಸ್ತುದರ್ಶನರೂಪಜ್ಞಾನವೇ 'ಪರಭಕ್ತಿ'ಯಾಗಿದೆ ಎಂದು ಹೇಳಿ ಭಕ್ತಿಯ ಪರಮಾವಧಿಯೇ ಜ್ಞಾನ ಎಂದು ಪ್ರತಿಪಾದಿಸಿದ್ದಾರೆ (ಸೂ. ೧–೧–೪, ಗೀ. ೧೮–೫೫, ೭–೧೭)

**ಪ್ರಶ್ನೆ :– ಉಪಾಸನೆಯಿಂದ ಭಿನ್ನವೇ ಆಗಿರುವ ಜ್ಞಾನವು ಭಕ್ತಿ ಎಂಬುದು ಹೇಗೆ ?**

ಉತ್ತರ : – ಕೇಳಿ. ಪ್ರೇಮಸ್ವರೂಪವಾದ ನಮ್ಮ ಆತ್ಮಸ್ವರೂಪವನ್ನೇ ಲಕ್ಷಿಸಿದಾಗ ಎಂದರೆ ಮನಸ್ಸು ವಿಷಯೇಂದ್ರಿಯಗಳಿಂದ ಹಿಂದಿರುಗಿ, ಬುದ್ಧಿಯ ತರ್ಕಕ್ಷೇತ್ರವನ್ನೂ ಹಿಮ್ಮೆಟ್ಟಿ, 'ನಾನು' ಎಂಬುದಕ್ಕೆ ಸಂಬಂಧಿಸಿದ ಸುಖದುಃಖಾದಿಗಳ

ಯೋಚನೆಯನ್ನೂ ಕೈಬಿಟ್ಟು ಈ ನಾನಿಗೂ ಹಿಂದಿರುವ ಇದರ ತಿರುಳಾದ ಸಾಕ್ಷಿಸ್ವರೂಪದ ಕಡೆಗೆ ತಿರುಗಿದಾಗ ತನ್ನ 'ಮನಸ್ತ್ವವನ್ನು (ನಾನು, ಇದು ಎಂಬ ವಿಷಯವಿಷಯಿಭಾವವನ್ನು) ಕಳಚಿಕೊಂಡು ಅದ್ವಯಸ್ವರೂಪವೇ ಆಗಿ ನಿಲ್ಲುತ್ತದೆ. (ಮಾಂ. ಕಾ. ೩–೩೨) ಹೀಗೆ ನಿಂತಿರುವ – ಆತ್ಮನಲ್ಲಿ ಕರಗಿರುವ –ಮನಸ್ಸು ಪ್ರೇಮಸ್ವರೂಪವೇ ಆಗಿರುವದು. ಈ ಜ್ಞಾನನಿಷ್ಠಾರೂಪವಾದ ಆತ್ಮಪ್ರತ್ಯಯದ ನೆಲೆನಿಲ್ಲುವಿಕೆಯನ್ನು – ವಿವೇಕಪ್ರಜ್ಞೆಯನ್ನು – (ಗೀ. ೨–೫೩, ೪, ಅವ.) ಪರಭಕ್ತಿ ಎನ್ನುತ್ತಾರೆ.

**ಪ್ರಶ್ನೆ :– ಓಹೊ, ಪರಭಕ್ತಿ ಎಂದರೆ ಜ್ಞಾನದಿಂದ ದ್ವೈತವೆಲ್ಲವೂ ಬಾಧಿತವಾಗಲು ಎಲ್ಲವೂ ತಾನೇ ಆಗಿ ನಿಂತ ಅನುಭವರೂಪವಾದದ್ದೆಂದು ತಾನೆ ನೀವು ಹೇಳಿದ್ದು ?**

ಉತ್ತರ : ಹೌದು, ಸರಿಯಾಗಿ ತಿಳಿದುಕೊಂಡಿರುವಿರಿ. ಜ್ಞಾನರೂಪನಾದ ಆತ್ಮನನ್ನನುಸರಿಸಿದ ಮನಸ್ಸು ಆತ್ಮಾಭಿನ್ನವಾಗಿದೆ ಎಂದು ಹೇಳುವಂತೆಯೇ (ಮಾಂ. ಕಾ.೩–೩೩) ಇಲ್ಲಿ ಪ್ರೇಮಸ್ವರೂಪನಾದ ಆತ್ಮನಲ್ಲಿ ನೆಲೆನಿಂತ ಅಂತಃಕರಣವು ಆನಂದಾಭಿನ್ನವಾಗಿರುವದರಿಂದ ಇದು ಪರಾನಂದ, ಪರಭಕ್ತಿ– ಎನಿಸಿರುತ್ತದೆ.

**ಪ್ರಶ್ನೆ : – ಅಂತೂ ಕರ್ತೃತಂತ್ರವಾದ ಉಪಾಸನೆ ಬೇರೆ, ವಸ್ತುತಂತ್ರಜ್ಞಾನವು ಬೇರೆ ಎಂದು ಹೇಳಿದ ಆಚಾರ್ಯರೇ ವಸ್ತುತಂತ್ರಜ್ಞಾನವು ನಿಜವಾದ ಪರಭಕ್ತಿಯಾಗಿದೆ ಎಂದು ಹೇಳಿದಾರೆಂದಾಯಿತಲ್ಲ !**

ಉತ್ತರ : – ಹೌದು, ಇವೆರಡನ್ನೂ ಇವರೊಬ್ಬರೇ ಮೊದಲು ವಿಶದಪಡಿಸಿ ಬರೆದವರು. ಆದ್ದರಿಂದಲೇ 'ಆತ್ಮೇತ್ಯೇವೋಪಾಸೀತ' (ಬೃ. ೧–೪–೭) 'ಯೇ ತ್ವಕ್ಷರಮನಿರ್ದೇಶ್ಯಂ ಅವ್ಯಕ್ತಂ ಪರ್ಯುಪಾಸತೇ' (ಗೀ. ೧೨–೩) ಎಂಬಲ್ಲಿ ಹೇಳಿರುವ ಉಪಾಸನೆ ಎಂಬ ಶಬ್ದಕ್ಕೆ ವಸ್ತುತಂತ್ರಜ್ಞಾನವೆಂದೇ ಅರ್ಥವೆಂದು ಭಾಷ್ಯದಲ್ಲಿ ವಿವರಿಸಿದ್ದಾರೆ.

**ಪ್ರಶ್ನೆ ;– ಈ ಜ್ಞಾನರೂಪವಾದ ಪರಭಕ್ತಿಯಲ್ಲಿಯೂ ಭಾವನೆ ಶ್ರದ್ಧೆಗಳಿರುವವೆ ?**

ಉತ್ತರ ;– ಅವಶ್ಯವಾಗಿ ಇರುತ್ತವೆ. ಶ್ರದ್ಧೆ ಇರದಿದ್ದರೆ ವಿಷಯದ ಜ್ಞಾನವಾದೀತೆ ? ವಸ್ತುವಿನ ಜ್ಞಾನವಿರದೆ ಅದರ ಮೇಲೆ ಶ್ರದ್ಧೆ ಬಂದೀತೆ ? ಸಾಧ್ಯವಿಲ್ಲ. ಆದ್ದರಿಂದ ಇಲ್ಲಿಯೂ ಶ್ರದ್ಧಾಭಾವನಾದಿಗಳಿದ್ದೇ ಇವೆ.

**ಪ್ರಶ್ನೆ : – ಹಾಗಾದರೆ ಕರ್ತೃತಂತ್ರಕ್ಕೂ ಇದಕ್ಕೂ ಏನು ವ್ಯತ್ಯಾಸ ?**

ಉತ್ತರ : – ಕರ್ತೃತಂತ್ರದಲ್ಲಿ ವಸ್ತುವು ಪರೋಕ್ಷವಾಗಿದ್ದು ಶಾಸ್ತ್ರವಚನದ

ಬಲದಿಂದ ಶ್ರದ್ಧಾಭಾವನಾದಿಗಳಿರುತ್ತವೆ. ಇಲ್ಲಿ ವಸ್ತುವು ಅಪರೋಕ್ಷವಾಗಿದ್ದು ಶಾಸ್ತ್ರಾಚಾರ್ಯರ ಉಪದೇಶದಂತೆ ಅನುಭವದಿಂದ ಕಂಡುಕೊಂಡಿದ್ದರ ಫಲವಾಗಿ ಶ್ರದ್ಧಾಭಕ್ತಿಗಳುದ್ಭವಿಸಿರುತ್ತವೆ. ಇದೇ ಇವುಗಳಲ್ಲಿಯ ವ್ಯತ್ಯಾಸವು. ನಿತ್ಯಯುಕ್ತನಾದ ಜ್ಞಾನಿಯಲ್ಲಿರುವ ಪರಭಕ್ತಿಯೂ ಇದೇ ಆಗಿದೆ. (ಗೀ. ೯–೨೨ ; ೭–೧೬, ೧೯; ೧೨–೨, ೩, ೧೩ರಿಂದ ೨೦ ; ೧೩–೧೮ ; ೧೪–೨೨ರಿಂದ ೨೬ ; ೧೦–೭ ಇತ್ಯಾದಿ ಸ್ಥಳಗಳನ್ನು ನೋಡಿ).

**ಪ್ರಶ್ನೆ :– ಜಿಜ್ಞಾಸಾಭಕ್ತಿ ಎಂದರೇನು ?**

ಉತ್ತರ : ಮೇಲೆ ಹೇಳಿದ ಪರಭಕ್ತಿಯನ್ನು ಪಡೆಯುವದಕ್ಕಾಗಿಯೇ ಜೀವನವನ್ನು ಮುಡುಪಿಡುವ ಭಕ್ತಿಗೆ ಜಿಜ್ಞಾಸಾಭಕ್ತಿ ಎಂದು ಹೆಸರು. ವಿತ್ತ ಪುತ್ರ, ಪ್ರಾಣಾದಿಗಳಿಗಿಂತ ಪ್ರಿಯತಮವಾದ ತನ್ನ ಸ್ವರೂಪದಲ್ಲಿ ನಿರತಿಶಯಪ್ರೇಮವಿರದಿದ್ದರೆ ಅದರ ಜ್ಞಾನವೇ ಅವನಿಗಾಗಲಾರದು. (ಬೃ. ೧–೪–೮) ಗೀತೆಯಲ್ಲಿ ೬–೪೭ ; ೭–೧; ೭–೧೬; ೯–೧೩, ೧೪ ; ೧೦–೯, ೧೦, ೧೧; ೧೩–೧೦; ೧೫–೫ – ಇತ್ಯಾದಿ ಸ್ಥಳಗಳಲ್ಲಿ ಹೇಳಿದ್ದೆಲ್ಲವೂ ಜಿಜ್ಞಾಸಾಭಕ್ತಿಯೇ ಆಗಿದೆ.

**ಪ್ರಶ್ನೆ :– ಭಕ್ತಿಯ ಮಹಿಮೆಯಮ್ನು ಆಚಾರ್ಯರು ಹೇಗೆ ತಿಳಿಸಿದ್ದಾರೆ ?**

ಉತ್ತರ : – ೧) ಕರ್ಮಧ್ಯಾನಾದಿಸಾಧನಗಳು ಯೋಗವೆನಿಸಬೇಕಾದರೆ ಅವುಗಳಲ್ಲಿ ಭಗವದ್ಭಕ್ತಿಯು ಸೇರಿದರೇ ಯೋಗಗಳೆನಿಸುತ್ತವೆ. (೨) ಭಕ್ತಿಯ ಮಹಿಮೆಯಿಂದ ದುರಾಚಾರಿಯೂ ಸಹ ಸದಾಚಾರಿಯಾಗಿ ಪರಿಣಮಿಸಿ ಅಧ್ಯಾತ್ಮಜ್ಞಾನಕ್ಕೆ ತಕ್ಕವನಾಗುತ್ತಾನೆ (ಗೀ. ೯–೩೦ ರಿಂದ ೩೪ರವರೆಗೆ). (೩) ಸ್ತ್ರೀಯರೂ ಶೂದ್ರರೂ ಎಲ್ಲರೂ ಭಕ್ತಿಯಿಂದಲೇ ಉದ್ಧಾರವಾಗುತ್ತಾರೆ. (೪) ಗೀತೆಯ ಕೊನೆಯಲ್ಲಿ ಮತ್ತೆ ಭಕ್ತಿಯನ್ನೇ ಹೇಳಿದುದರ ಅಭಿಪ್ರಾಯವೇನೆಂದರೆ : ಭಕ್ತಿಮಾತ್ರದಿಂದಲೇ ಶಾಸ್ತ್ರದಲ್ಲಿ ಹೇಳಿದ ಆತ್ಮಜ್ಞಾನಕ್ಕೆ ಅಧಿಕಾರಿಯಾದವನು ಪಾತ್ರನಾಗುತ್ತಾನೆ. (೧೮–೬೮)

ಹೀಗೆ ಭಗವದ್ಭಕ್ತಿಯನ್ನು ಬಹಳ ಶ್ಲಾಘಿಸಿ ಬರೆದ ಹಾಗೂ ಅದರ ನಿಜಸ್ವರೂಪವನ್ನು ತೋರಿಸಿದ ವಿಶಾಲಹೃದಯದ ಆಚಾರ್ಯರೇ ಶಂಕರರು – ಎಂಬುದನ್ನು ಮರೆಯಬಾರದು.

**ಪ್ರಶ್ನೆ : – ಕಾಮ್ಯ (ಅರ್ಥಾರ್ಥಿ) ಹಾಗೂ ಆರ್ತಭಕ್ತಿಗಳ ಬಗ್ಗೆ ಹೇಗೆ ತಿಳಿಯಬೇಕು ?**

ಉತ್ತರ : – ಅನುಭವಪೂರ್ಣವೂ ಶಾಸ್ತ್ರೀಯವೂ ಆದ ಪರಭಕ್ತಿ ಮತ್ತು ಜಿಜ್ಞಾಸಾಭಕ್ತಿಗಳ ಆಧಾರದಿಂದ ಕಾಮ್ಯಭಕ್ತಿ ಹಾಗೂ ಆರ್ತಭಕ್ತಿಗಳಿಗೆ ಅವಶ್ಯವಾಗಿ ಫಲವಾಗುವದೆಂದು ನಂಬಬಹುದಾಗಿದೆ. (ಸೂ. ೪–೪ –೨೨)

**ಪ್ರಶ್ನೆ :– ಅಲ್ಪಕಾಮನೆಗಳಿಗೂ ಸಂಕಟನಿವಾರಣೆಗೂ ಪರಮಾತ್ಮನನ್ನೇ ಭಕ್ತಿಯಿಂದ ಭಜಿಸಬಹುದೆ ?**

ಉತ್ತರ : – ಓಹೋ ! ಅವಶ್ಯವಾಗಿ ಭಜಿಸಿ ಫಲಗಳನ್ನು ಪಡೆಯಬಹುದು. 'ನ ಹಿ ಇಯತೇ ಫಲಾಯ ಬ್ರಹ್ಮ ಆಶ್ರಯಣೀಯಮ್, ಇಯತೇ ನ ಇತಿ ನಿಯಮ ಹೇತುರಸ್ತಿ' (ಸೂ. ೧.೧–೨೪) ಎಂಬ ವಾಕ್ಯವೇ ಇದಕ್ಕೆ ಪ್ರಮಾಣವು.

**ಪ್ರಶ್ನೆ : ಹಾಗಾದರೆ ಅದ್ವೈತಜ್ಞಾನವನ್ನು ಹೇಳುವ ನೆಪದಲ್ಲಿ ಭಕ್ತಿ ಉಪಾಸನೆ, ಸತ್ಕರ್ಮಾದಿಗಳನ್ನು ತೆಗಳುವ ವೇದಾಂತಿಗಳ ಅಭಿಪ್ರಾಯವು ತಪ್ಪೆಂದಾಯಿತಲ್ಲ !**

ಉತ್ತರ : ಅಹುದು. (1) ಆತ್ಮಜ್ಞಾನವು ಒಣ ಮಾತಿನ ಮಾಲೆಯಲ್ಲ. (2) ಬುದ್ಧಿ ಕಲ್ಪಿತತರ್ಕಗಳ ಬಾಯಿಚಳಕವಲ್ಲ. (3) ಬುದ್ಧಿಯನ್ನು ಹೃದಯವಾಗಿಸಿಕೊಂಡು ಬುದ್ಧಿಗೆ ಮೀರಿದ ಅನುಭವಸ್ವರೂಪವನ್ನನುಸರಿಸಿ ಬುದ್ಧಿಯನ್ನು ಅದರಲ್ಲಿ ಕರಗಿಸು ವದೇ ಆತ್ಮಜ್ಞಾನವಾಗಿದೆ. 'ಜ್ಞಾನ' ಎಂದೊಡನೆ ಯೋಚನೆ, ತರ್ಕ – ಎಂಬ ತಪ್ಪುಭಾವನೆ ನಮ್ಮಲ್ಲುದಿಸುವದೇ ಜ್ಞಾನಭಕ್ತಿಗಳು ಬೇರೆಬೇರೆ ಎಂಬುದಕ್ಕೆ ಕಾರಣ. ನಿಜವಾಗಿ ಹೃದಯಸಂಪಾದನೆಯೇ ಇಲ್ಲಿ ಮುಖ್ಯ. ಈ ಬಗ್ಗೆ ಗೀತೆಯ ೧೦ನೆಯ ಅಧ್ಯಾಯದ ೧೧ನೆಯ ಶ್ಲೋಕಕ್ಕೆ ಆಚಾರ್ಯರು ಬರೆದಿರುವ ಜ್ಞಾನದೀಪದ ವರ್ಣನೆಯನ್ನು ನೋಡಿರಿ. ಆಗ ಈ ಶುಷ್ಕತರ್ಕಪಂಡಿತರ ಹಾಗೂ ಒಣವೇದಾಂತದ ಮಾತುಗಳನ್ನಾಡುವವರ ಭಾಷಣಗಳಿಗೆ ಮೋಸಹೋಗಲಾರಿರಿ. ಹಾಗೆಯೇ ಗೀ. ೧೮–೫೫ರಲ್ಲಿ ಜ್ಞಾನನಿಷ್ಠೆಗೆ ಏನೇನು ಬೇಕೆಂದು ಬರೆದಿರುವದನ್ನೂ ೧೮–೫೧ ರಿಂದ ೫೪ರವರೆಗಿನ ವಿಷಯಗಳನ್ನೂ ಚೆನ್ನಾಗಿ ಮನಮಾಡಿದರೆ ಆತ್ಮಜ್ಞಾನಕ್ಕೆಬೇಕಾದ ಹೃದಯವು ಎಂಥದ್ದೆಂಬುದೂ ಅರ್ಥವಾಗುತ್ತದೆ.

---

## ೧೧. ದೇವತೆಗಳು

**ಪ್ರಶ್ನೆ :– ದೇವತೆಗಳ ಅಸ್ತಿತ್ವದ ಬಗ್ಗೆ ಆಚಾರ್ಯರು ಏನು ಹೇಳಿದ್ದಾರೆ ?**

ಉತ್ತರ :– ದೇವತೆಗಳು ಸೂಕ್ಷ್ಮಕಾರ್ಯಕರಣಗಳುಳ್ಳ ಜೀವರುಗಳು ; ಅವರು ವಿಗ್ರಹವಂತಾಗಿರುವರು. ಈ ದೇವತೆಗಳಲ್ಲಿ ಇಂದ್ರ, ಅಗ್ನಿ, ವರುಣ, ವಾಯು, ಪ್ರಜಾಪತಿ – ಮುಂತಾದ ಕೆಲವು ಅಧಿಕಾರಸ್ಥಾನಗಳಿರುವವು ; ಪುಣ್ಯಮಾಡಿದವರು ಆ ಸ್ಥಾನಗಳಿಗೆ ಏರುವರು – ಎಂದು ಆಚಾರ್ಯರು ವ್ಯವಹಾರದೃಷ್ಟಿಯಿಂದ ದೇವತೆಗಳ ಅಸ್ತಿತ್ವವನ್ನು ಸಿದ್ಧಪಡಿಸಿದ್ದಾರೆ. (ಬೃ. ೧–೪–೧೦, ತೈ. ೨–೮, ಸೂ. ೧–೩–೩೩).

ಪ್ರಶ್ನೆ : – ಹಾಗಾದರೆ ದೇವತೆಗಳನ್ನು ಅವಶ್ಯವಾಗಿ ಆರಾಧಿಸ ಬೇಕೆಂದಾಯಿತಲ್ಲ!

ಉತ್ತರ : – ಹೌದು, ಕಾಮನೆಯುಳ್ಳವರಂತೂ ಅವಶ್ಯವಾಗಿ ದೇವತೆಗಳ ನ್ನಾರಾಧಿಸಿ ಶಾಸ್ತ್ರ ಪ್ರಮಾಣದಂತೆ ಆಯಾ ದೃಷ್ಟಾದೃಷ್ಟಫಲಗಳನ್ನು ಪಡೆಯಬಹುದು. ಇದರಂತೆ ಮುಮುಕ್ಷುಗಳೂ ಕೂಡ ದೇವತಾರಾಧನಪರರಾಗಿ ಎಚ್ಚರತಪ್ಪದೆ ನಡೆದರೆ ಆ ಮುಮುಕ್ಷುಗಳಿಗೆ ಮೋಕ್ಷವನ್ನು ಹೊಂದುವದಕ್ಕೆ ಬೇಕಾಗಿರುವ ಶ್ರದ್ಧಾದಿಗಳನ್ನೂ ಗುರುಬೋಧಪ್ರಾಪ್ತಿಯೇ ಮುಂತಾದದ್ದನ್ನೂ ದೇವತೆಗಳು ಒದಗಿಸಿಕೊಡುವರು – ಎಂಬುದಾಗಿಯೂ ಆಚಾರ್ಯರು ಬರೆದಿದ್ದಾರೆ. ಈ ಬಗ್ಗೆ ಬೃ. ೧–೪–೧೦ರಲ್ಲಿ 'ತಸ್ಮಾನ್ಮುಮುಕ್ಷುಃ'..... ಇತ್ಯಾದಿ ವಾಕ್ಯಗಳನ್ನು ಮನನಮಾಡಬೇಕು.

ಒಟ್ಟಿನಲ್ಲಿ ವ್ಯಾವಹಾರಿಕದೃಷ್ಟಿಯಿಂದ ದೇವತೆಗಳ ಅಸ್ತಿತ್ವ, ಸ್ವರ್ಗನರಕಾದಿಗಳ ಅಸ್ತಿತ್ವ, ವರ್ಣಾಶ್ರಮಧರ್ಮಾದಿಗಳ ಅಸ್ತಿತ್ವ – ಇವುಗಳನ್ನು ಶ್ರೀಶಂಕರರು ಒಪ್ಪಿಯೇ ಇದ್ದಾರೆ. ವ್ಯವಹಾರವನ್ನು ಅಪಲಾಪಮಾಡದೆ ಪಾಪಪುಣ್ಯ – ಮುಂತಾದವು ಗಳೆಲ್ಲವನ್ನೂ ಶಾಸ್ತ್ರಪ್ರಮಾಣದಿಂದ ಯಥಾವತ್ತಾಗಿಯೇ ಒಪ್ಪಿ ಸನ್ಮಾರ್ಗದಲ್ಲಿ ನಡೆಯಬೇಕೆಂಬುದು ಆಚಾರ್ಯರ ಉಪದೇಶ. ಪರಮಾರ್ಥದೃಷ್ಟಿಯಿಂದ ಇದೆಲ್ಲವೂ ಇಲ್ಲವೇ ಇಲ್ಲವಾದರೂ ವ್ಯಾವಹಾರಿಕದೃಷ್ಟಿಯಿಂದ ಅಲ್ಲಗಳೆಯಲಾಗದು ಎಂದೇ ಶ್ರೀಶಂಕರರು ಈ ಬಗ್ಗೆ ಎಚ್ಚರಿಕೆಯನ್ನಿತ್ತಿದ್ದಾರೆ. ಇದನ್ನು ಗಮನಿಸದೆಯೇ ಅದ್ವೈತದ ಹೆಸರಿನಲ್ಲಿ ನಾಸ್ತಿಕತೆಯನ್ನು ಹರಡುವದಕ್ಕೆ ಅನೇಕರು ಹೊರಟಿರುತ್ತಾರೆ. ಇದು ಸರ್ವಥಾ ತಪ್ಪು. ಭಾಷ್ಯಗಳನ್ನು ಅವಲೋಕಿಸದಿರುವದೇ ಈ ತಪ್ಪುಭಾವನೆಗಳಿಗೆ ಕಾರಣವಾಗಿದೆ. ತೈ. ೨–೬ರಲ್ಲಿ 'ಅಸನ್ನೇವ ಸ ಭವತಿ ' ಎಂಬುದರ ವ್ಯಾಖ್ಯಾನದ 'ಅಥವಾ ಯಃ ನಾಸ್ತಿ ಬ್ರಹ್ಮ.... ' ಇತ್ಯಾದಿ ವಾಕ್ಯಗಳನ್ನು ಅವಶ್ಯವಾಗಿ ನೋಡಿ.

---------

## ೧೨. ದೈವವಾದ, ಪೌರುಷವಾದ

ಪ್ರಶ್ನೆ :– 'ಲೋಕದಲ್ಲಿ ಪುರುಷಪ್ರಯತ್ನವೇ ಹೆಚ್ಚು, ಪರಮಾರ್ಥಕ್ಕೂ ಪೌರುಷವೇ ಬೇಕು ' ಎಂದು ಕೆಲವರೂ 'ದೈವಬಲ, ಕಾಲ, ದೇವತೆಗಳು ಹಾಗೂ ಈಶ್ವರನೇ ಮುಂತಾದ ಮಾನವನ ಶಕ್ತಿಸಾಮರ್ಥ್ಯಗಳನ್ನು ಮೀರಿದ ಬಲದಮುಂದೆ ನಮ್ಮ ಪ್ರಯತ್ನ ಎಂಬುದು ಏನೊಂದೂ ಕೆಲಸಕ್ಕೆ ಬರುವದಿಲ್ಲ. ಆದ್ದರಿಂದ ದೈವವಾದವೇ ಹೆಚ್ಚಿನದು ' ಎಂದು ಕೆಲವರೂ ಹೇಳುತ್ತಾರೆ. ಆಯಾ ಸಿದ್ಧಾಂತಪ್ರತಿಪಾದನೆಗೆ ತಕ್ಕ ಯುಕ್ತಿಗಳನ್ನೂ ಪ್ರಮಾಣವಾಕ್ಯ ಹಾಗೂ

ಉದಾಹರಣೆಗಳನ್ನೂ ಸಹ ಅವರವರು ಉದಾಹರಿಸುತ್ತಾರೆ. ಈ ಮುಗಿಯಲಾರದ ವಾದಕ್ಕೆ ಭಾಷ್ಯದಲ್ಲಿ ಎಲ್ಲಿಯಾದರೂ ಪರಿಹಾರವನ್ನು ಆಚಾರ್ಯರು ಹೇಳಿದ್ದಾರೆಯೆ ?

ಉತ್ತರ : – ಬೃಹದಾರಣ್ಯಕಭಾಷ್ಯದಲ್ಲಿ ೧–೪–೧೦ನೆಯ ಮಂತ್ರದ ವಿವರಣೆಯ ಸಂದರ್ಭದಲ್ಲಿ ಈ ವಾದದ ವಿಚಾರವನ್ನು ಆಚಾರ್ಯರು ನಿರೂಪಿಸಿದ್ದಾರೆ.

**ಪ್ರಶ್ನೆ :– ಅದನ್ನು ಹೇಗೆ ನಿರೂಪಿಸಿದ್ದಾರೆ ?**

ಉತ್ತರ : – ಕೇಳಿ. ಮೊದಲು ಅಲ್ಲಿ ಬಂದಿರುವ ಸಂದರ್ಭವನ್ನು ಸ್ವಲ್ಪ ತಿಳಿದು ಕೊಳ್ಳುವದು ಅವಶ್ಯ. 'ಈಗಲಾದರೂ ಯಾವಾತನು 'ನಾನೇ ಬ್ರಹ್ಮವು ' ಎಂದು ಅನುಭವದಲ್ಲಿ ಕಂಡುಕೊಳ್ಳುವನೋ ಅವನು ಸರ್ವಾತ್ಮಭಾವವನ್ನು ಈ ಜ್ಞಾನಸಮ ಕಾಲದಲ್ಲಿಯೇ ಪಡೆಯುತ್ತಾನೆ. ಅವನಿಗೆ ಈ ಸರ್ವಾತ್ಮಭಾವಪ್ರಾಪ್ತಿರೂಪವಾದ ಫಲವು ಆಗದಂತೆ ವಿಘ್ನಮಾಡಲು ದೇವತೆಗಳಿಗೂ ಸಾಧ್ಯವಿಲ್ಲ. ಏಕೆಂದರೆ ಅವನು ಆ ದೇವತೆಗಳಿಗೂ ಆತ್ಮನಾಗಿರುತ್ತಾನೆ. ಆದರೆ ಅಜ್ಞನು ಮಾತ್ರ ಮನುಷ್ಯರಿಗೆ ಪಶುಗಳು ಹೇಗೆ ಅಧೀನವಾಗಿರುವವೋ ಹಾಗೆ ದೇವತೆಗಳಿಗೆ ಅಧೀನನಾಗಿರುತ್ತಾನೆ. ಅವನಿಗೆ ಆತ್ಮಜ್ಞಾನಪ್ರಾಪ್ತಿಯಾಗುವದು ದೇವತೆಗಳಿಗೆ ಇಷ್ಟವಾದದ್ದಲ್ಲ. ಆದ್ದರಿಂದ ಅವನಿಗೆ ಆತ್ಮವಿದ್ಯೆಯು ಅಂಟದಂತೆ ದೇವತೆಗಳು ಪ್ರತಿಬಂಧಮಾಡುತ್ತಾರೆ. ಆದರೆ ಯಾರು ಮುಮುಕ್ಷುಗಳಾಗಿ ದೇವತೆಗಳನ್ನು ಆರಾಧಿಸಿ ಅವರ ಅನುಗ್ರಹವನ್ನು ಪಡೆದವರಾಗಿರು ವರೋ ಅಂಥವರಿಗೆ ದೇವತೆಗಳು ಆತ್ಮಜ್ಞಾನವುಂಟಾಗುವದಕ್ಕೆ ಬೇಕಾಗುವ ಸಹಾಯವನ್ನು ಒದಗಿಸಿಕೊಟ್ಟು ಮುಕ್ತರಾಗುವದಕ್ಕೆ ಸಹಾಯಮಾಡುತ್ತಾರೆ' ಎಂಬೀ ಅಭಿಪ್ರಾಯವನ್ನು ಭಾಷ್ಯದಲ್ಲಿ ಅಲ್ಲಿ ಬರೆದಿದ್ದಾರೆ.

**ಪ್ರಶ್ನೆ :– ಆಗಲಿ. ಈ ಅಭಿಪ್ರಾಯಕ್ಕೂ ಮೇಲಿನ ದೈವವಾದ ಪೌರುಷ ವಾದದ ಪ್ರಶ್ನೆಗೂ ಏನು ಸಂಬಂಧ ?**

ಉತ್ತರ : – ಸಂಬಂಧವಿದೆ. ಅಲ್ಲಿ ಪೂರ್ವಪಕ್ಷಿಯು ಎಂದರೆ ಪ್ರಶ್ನೆಯನ್ನು ಕೇಳುವಾತನು 'ದೇವತೆಗಳು ಬ್ರಹ್ಮವಿದ್ಯಾಫಲಕ್ಕೆ ವಿಘ್ನವನ್ನು ಮಾಡಬಹುದೆಂಬ ಸಂಶಯವಾದರೂ ಏಕೆ ಬಂದಿದೆ ?' ಎಂದು ಕೇಳಿದ್ದಕ್ಕೆ ಉತ್ತರವಾಗಿ ಕೆಲವು ಮಾತುಗಳನ್ನು ಬರೆದಿದ್ದಾರೆ. ಅವುಗಳನ್ನು ತಿಳಿದುಕೊಳ್ಳಬೇಕು.

**ಪ್ರಶ್ನೆ : – ಆ ಮಾತುಗಳಾವವು ?**

ಉತ್ತರ : – ಶಾಸ್ತ್ರದೃಷ್ಟಿಯಿಂದ ಮನುಷ್ಯನು ದೇವತೆಗಳಿಗೆ ಋಣಿಯಾಗಿರು ತ್ತಾನೆ. ಸಾಲಗಾರನು ಸಾಹುಕಾರನಿಗೆ ಋಣಿಯಾಗಿರುವಂತೆ ದೇವತೆಗಳಿಗೆ

ಅಧೀನನಾಗಿರುತ್ತಾನೆ. ಇವನು ಬ್ರಹ್ಮವಿದ್ಯೆಯನ್ನು ಪಡೆದುಕೊಂಡುಬಿಟ್ಟರೆ ಸರ್ವಾತ್ಮನಾಗಿಬಿಡುವನು. ಈ ಕಾರಣಕ್ಕಾಗಿ ಮನುಷ್ಯನಿಗೆ ಬ್ರಹ್ಮವಿದ್ಯೆಯ ಪ್ರಾಪ್ತಿಯಾಗದಂತೆ ದೇವತೆಗಳು ವಿಘ್ನವನ್ನುಂಟು ಮಾಡುತ್ತಾರೆ. ದೇವತೆಗಳು ಹೆಚ್ಚಿನ ಸಾಮರ್ಥ್ಯವಂತರಾದ್ದರಿಂದ ಅಲ್ಪವೀರ್ಯರಾದ ಮನುಷ್ಯರಿಗೆ ಸುಲಭವಾಗಿ ವಿಘ್ನಮಾಡಬಹು ದಾಗಿದೆ– ಎಂಬುದು ಈ ಮಾತುಗಳ ಸಾರಾಂಶ.

**ಪ್ರಶ್ನೆ : – ಆಗಲಿ, ಇದರಿಂದಲೂ ಪ್ರಕೃತವಿಷಯಕ್ಕೆ ಅನುಕೂಲ ವೇನಾಯಿತು ?**

ಉತ್ತರ : – ನಿಧಾನವಾಗಿ ಕೇಳಿ. ಮೇಲಿನ ಉತ್ತರವನ್ನು ಹೇಳಿದೊಡನೆಯೇ ಪೂರ್ವಪಕ್ಷಿಯು ಒಂದು ಸಂಶಯವನ್ನು ತೆಗೆಯುತ್ತಾನೆ.

**ಪ್ರಶ್ನೆ : – ಅದೇನು ?**

ಉತ್ತರ : – ದೇವತೆಗಳು ಹೆಚ್ಚಿನ ಸಾಮರ್ಥ್ಯವುಳ್ಳವರಾಗಿ ಮನುಷ್ಯರಿಗೆ ಅಡ್ಡಿಯನ್ನೊಡ್ಡುವರೆಂದಾದರೆ ಎಲ್ಲಾ ಪ್ರಯತ್ನಗಳಿಗೂ ಮನಬಂದಂತೆ ವಿಘ್ನಮಾಡು ವದು ಅವರಿಗೆ ನೀರು ಕುಡಿದಷ್ಟು ಸುಲಭವೆಂದಾಯಿತು. ಇದರಂತೆ ಈಶ್ವರನೂ ಅಚಿಂತ್ಯಶಕ್ತಿಯುಳ್ಳವನಾದ್ದರಿಂದ ಅವನೂ ವಿಘ್ನಮಾಡಲು ಸಮರ್ಥನೆಂದಾಗುವದು. ಹೀಗೆಯೇ ಕಾಲ, ಕರ್ಮ (ಪೂರ್ವಕರ್ಮ), ಮಂತ್ರ, ಔಷಧಿ, ತಪಸ್ಸು – ಮುಂತಾ ದವುಗಳಿಂದಲೂ ಮನುಷ್ಯಪ್ರಯತ್ನಕ್ಕೆ ಅಡ್ಡಿಯಾಗಬಹುದೆಂದು ಏರ್ಪಡುತ್ತದೆ. ಏಕೆಂದರೆ ಇವೆಲ್ಲವೂ ಬಲಿಷ್ಠವಾಗಿವೆಯಾದ್ದರಿಂದ ಸಹಜವಾಗಿ ಇವುಗಳಿಂದಲೂ ವಿಘ್ನವು ಒದಗಬಹುದು. ಆಗ 'ಶಾಸ್ತ್ರಾನುಷ್ಠಾನಮಾಡಬೇಕು. ಪುರುಷಾರ್ಥಕ್ಕಾಗಿ ಪ್ರಯತ್ನಿಸಬೇಕು' ಮುಂತಾದ ಮಾತುಗಳೇ ವ್ಯರ್ಥವಾಗಿಬಿಡುವವಲ್ಲ! – ಎಂಬ ಸಂಶಯವನ್ನು ಅಲ್ಲಿ ತೆಗೆದಿದ್ದಾನೆ.

**ಪ್ರಶ್ನೆ :– ಅಂತೂ ಈ ಮಾತುಗಳಿಂದ ಈಗ ಪ್ರಯತ್ನವಾದ (ಪೌರುಷ)ವನ್ನು ಖಂಡಿಸಿ ದೈವವಾದವನ್ನೇ ಹೇಳಿದಂತಾಯಿತಲ್ಲ! ಎಂಬುದೇ ಸಂಶಯಮಾಡುವವನ ಅಭಿಪ್ರಾಯವೆಂದಾಯಿತಲ್ಲವೆ ?**

ಉತ್ತರ : – ಹೌದು, ಇಲ್ಲಿ ಅವಾಂತರಪೂರ್ವಪಕ್ಷಿಯು ದೈವವಾದವನ್ನೇ ಮಂಡಿಸಿದ್ದಾನೆ. ಇದಕ್ಕೆ ಆಚಾರ್ಯರು ಮುಖ್ಯ ಆಕ್ಷೇಪಕನ ಬಾಯಿಂದ ಉತ್ತರರೂಪ ವಾಗಿ ಕೆಲವು ಮಾತುಗಳನ್ನು ಆಡಿಸಿದ್ದಾರೆ. ಅವೇ ಪ್ರಕೃತವಿಚಾರಕ್ಕೆ ಸಹಾಯಕವಾದ ಮಾತುಗಳಾಗಿವೆ.

**ಪ್ರಶ್ನೆ :– ಅವುಗಳ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ಹೇಳುವಿರಾ ?**

ಉತ್ತರ : – ಓಹೊ ! ಹೇಳದಿದ್ದರೆ ಆದೀತೆ ? ಕೇಳಿ.

(1) ದೇವತೆಗಳು ಈಶ್ವರ, ಕಾಲ, ಪೂರ್ವಕರ್ಮ – ಮುಂತಾದವುಗಳು ಮನುಷ್ಯನು ಮಾಡಿದ ಅಥವಾ ಮಾಡುವ ಕರ್ಮಗಳಿಗೆ ಫಲಕೊಡುವ ವಿಷಯದಲ್ಲಾಗಲಿ, ಫಲವಾಗದಂತೆ ವಿಘ್ನಮಾಡುವ ವಿಷಯದಲ್ಲಾಗಲಿ ಸಾಮರ್ಥ್ಯವುಳ್ಳವುಗಳೇ ಆಗಿದ್ದರೂ ಯಾವಾಗಲೂ ಒಂದು ನಿಯಮಕ್ಕೊಳಪಟ್ಟೇ ವರ್ತಿಸುತ್ತವೆ.

(2) ಜೀವರಿಗೆ ತಮ್ಮತಮ್ಮ ಯೋಗ್ಯತೆ, ಶಕ್ತಿಗಳಿಗನುಸರಿಸಿ ಪ್ರಯತ್ನ ಮಾಡುವ ಒಂದಾನೊಂದು ಕರ್ತೃಸ್ವಾತಂತ್ರ್ಯ ಎಂದರೆ ಅಧಿಕಾರವು ವ್ಯಾವಹಾರಿಕದೃಷ್ಟಿಯಿಂದ ಇದ್ದೇಇದೆ.

(3) ಕರ್ಮದಲ್ಲಿ ತೊಡಗುವದು ಜೀವನ ಅಧಿಕಾರ. ಕರ್ಮವು ಪೂರ್ತಿಯಾಗುವದಕ್ಕೂ ಅದರ ಫಲವು ಉಂಟಾಗುವದಕ್ಕೂ ಕಾಲ, ಈಶ್ವರ, ದೇವತೆಗಳು– ಮುಂತಾದವರ ಸಹಾಯವು ಅತ್ಯವಶ್ಯಕ.

(4) ಕರ್ಮಕ್ಕೆ ತಕ್ಕ ಫಲವು ತಕ್ಕ ಕಾಲದೇಶದಲ್ಲಿ ಉಂಟಾಗುವದೆಂಬುದು ಶಾಸ್ತ್ರಗಳಲ್ಲಿಯೂ ಉಕ್ತವಾಗಿದೆ. ಲೋಕಾನುಭವದಲ್ಲಿಯೂ ಪ್ರತ್ಯಕ್ಷವಾಗಿದೆ. ಇದು ಸಿದ್ಧಾಂತವಾಗಿ ನಿಂತುಬಿಟ್ಟಿದೆ. ಆದ್ದರಿಂದ ನಿಯತಕಾಲಾದಿಗಳಲ್ಲಿ ನಿಯತಫಲವಾಗಲು ಈಶ್ವರ, ದೇವತೆ, ಕಾಲ – ಮುಂತಾದದ್ದರ ಆಪೇಕ್ಷೆಯು ಇದ್ದೇ ಇದೆ ಎಂದಾಯಿತು.

(5) ಕರ್ಮಕ್ಕೆ ಫಲವು (ಇಷ್ಟ ಅಥವಾ ಅನಿಷ್ಟ) ಆಗುವಾಗ ಪೂರ್ವಕರ್ಮ, ಕಾಲ, ದೈವ, ಕರ್ಮಕ್ಕೆ ಉಪಯೋಗಿಸಿದ ದ್ರವ್ಯಾದಿಗಳು– ಇವುಗಳಲ್ಲಿ ಗುಣಪ್ರಧಾನಭಾವವು ಯಾವದಕ್ಕೆ ಬರುವದೋ ಆ ಪ್ರಕಾರದ ಫಲವಾಗುತ್ತದೆ.

(6) ಈ ಗುಣಪ್ರಧಾನಭಾವವು ಮೇಲಿನವುಗಳಲ್ಲಿ ಯಾವದಕ್ಕೆ ಇದೆ ಎಂಬುದನ್ನು ಗೊತ್ತುಪಡಿಸುವದು ಸಾಮಾನ್ಯರಿಗೆ ಸಾಧ್ಯವಿರುವದಿಲ್ಲ. ಹೀಗಾಗಿ ಒಮ್ಮೊಮ್ಮೆ ವೀಪರೀತಫಲವು ಉಂಟಾಗುವದೂ ಕಂಡುಬರುತ್ತದೆ.

(7) ಶಾಸ್ತ್ರಗಳಲ್ಲಿ ಮಾತ್ರ ಕರ್ಮಕ್ಕೆ ಪ್ರಾಧಾನ್ಯವನ್ನೊಪ್ಪಿ 'ಪುಣ್ಯ ಕರ್ಮದಿಂದ ಒಳ್ಳೆಯವನೇ ಆಗುತ್ತಾನೆ. ಪಾಪಕರ್ಮದಿಂದ ಕೆಟ್ಟವನೇ ಆಗುತ್ತಾನೆ ' – ಎಂದು ಮುಂತಾಗಿ ಪುರುಷಪ್ರಯತ್ನವನ್ನೇ ಸಮರ್ಥಿಸಿದೆ.

(8) ಕರ್ಮವು ಫಲರೂಪವನ್ನು ತಾಳಲು ಮೇಲೆ ಹೇಳಿದ ಕಾಲ, ದೈವಾದಿಗಳಂತೂ ಬೇಕೇಬೇಕು. ಅವುಗಳಲ್ಲಿ ಯಾವದೋ ಒಂದಕ್ಕೆ ಗುಣಪ್ರಾಧಾನ್ಯವು (ಬಲವು) ಹೆಚ್ಚಾಗಿರುವಾಗ ಮಿಕ್ಕವುಗಳ ಬಲವು ನಿಂತುಹೋಗುತ್ತದೆ. ಆದರೂ ಕರ್ಮಕ್ಕೆ ತಕ್ಕ ಫಲವೆಂಬುದು ನಿಶ್ಚಿತವೇ ಆಗಿದೆ. ಆದ್ದರಿಂದ ಪುರುಷನು ಶಾಸ್ತ್ರವನ್ನವಲಂಬಿಸಿ ಸನ್ಮಾರ್ಗದಲ್ಲಿ ನಡೆಯಬೇಕೆಂಬುದೇ ಇಲ್ಲಿ ಸಿದ್ಧಾಂತ.

**ಪ್ರಶ್ನೆ :– ಹಾಗಾದರೆ ಪ್ರಯತ್ನವಾದವೇ ಹೆಚ್ಚಿನದೆಂದಾಯಿತಲ್ಲ!**

ಉತ್ತರ :– ಹಾಗೇನೂ ಅಲ್ಲ, ವ್ಯಾವಹಾರಿಕದೃಷ್ಟಿಯಿಂದ ಪ್ರಯತ್ನವನ್ನು ಶಾಸ್ತ್ರಕ್ಕನುಗುಣವಾಗಿ ಮಾಡಬೇಕೆಂಬುದೇನೋ ನಿಜವೇ ಆದರೂ ಪ್ರಯತ್ನವನ್ನು ಮಾಡುವದಕ್ಕೂ ತನ್ನ ತನ್ನ ಯೋಗ್ಯತೆ, ಶಕ್ತಿಗಳ ಜೊತೆಗೆ ಕಾಲದೈವಾದಿಗಳ ಸಹಾಯವೂ ಬೇಕೇಬೇಕಾಗುತ್ತದೆ. ಆದ್ದರಿಂದಲೇ ಎಲ್ಲರೂ ಎಲ್ಲ ವಿಷಯಗಳಲ್ಲಿಯೂ ಒಂದೇ ರೀತಿಯಾಗಿ ಪ್ರಯತ್ನಮಾಡಲಾಗುವದಿಲ್ಲವೆಂಬುದು ಲೋಕದಲ್ಲಿ ಪ್ರತ್ಯಕ್ಷವೇ ಆಗಿದೆ.

**ಪ್ರಶ್ನೆ : – ಹಾಗಾದರೆ ಪ್ರಯತ್ನಕ್ಕೂ ಕಾಲ, ಈಶ್ವರ, ದೈವಾದಿಗಳ ನೆರವು ಬೇಕು; ಅದು ಫಲಕಾರಿಯಾಗುವದಕ್ಕೂ ಅವುಗಳ ನೆರವು ಬೇಕು ಎಂದಾಯಿತಲ್ಲವೆ?**

ಉತ್ತರ : – ಹೌದು, ಶಾಸ್ತ್ರದಂತೆ ಪ್ರಯತ್ನವೂ ಬೇಕು. ಆ ಪ್ರಯತ್ನ ನಡೆಯುವದಕ್ಕೂ ಅದು ಫಲಕಾರಿಯಾಗುವದಕ್ಕೂ ದೈವಾದಿಗಳ ಪ್ರೇರಣೆಯೂ ಅತ್ಯವಶ್ಯವಾಗಿ ಬೇಕೇಬೇಕು.

**ಪ್ರಶ್ನೆ : – ಹೀಗಿದ್ದಲ್ಲಿ ಯೋಗವಾಸಿಷ್ಠವೇ ಮುಂತಾದ ಗ್ರಂಥಗಳಲ್ಲಿ ಪ್ರಯತ್ನವೇ ಹೆಚ್ಚಿನದೆಂದು ಒತ್ತಿ ಹೇಳಿದ್ದಕ್ಕೆ ಏನು ಗತಿ ?**

ಉತ್ತರ : – ಅದೆಲ್ಲವೂ ಅರ್ಥವಾದ ಎಂದರೆ ಪ್ರಯತ್ನವನ್ನು ಹೊಗಳಲು ಹೇಳಿದ್ದೆಂದೇ ತಿಳಿಯಬೇಕು.

ಒಟ್ಟಿನಲ್ಲಿ ದೇಶಕಾಲನಿಮಿತ್ತಗಳ ವ್ಯವಧಾನವುಳ್ಳ, ಸಾಧಕನ ಆತ್ಮಸ್ವರೂಪಕ್ಕೆ ಸೇರಿರದೆ ಬೇರೆಯಾಗಿ ಉಳ್ಳ ಫಲಗಳನ್ನು ಪಡೆಯುವ ವಿಷಯದಲ್ಲಿ ಪುರುಷ ಪ್ರಯತ್ನವೂ ದೈವಾದಿಗಳೂ ಸಮಾನವಾಗಿ ಪಾಲುದಾರರೇ ಹೊರತು ಯಾವ ದೊಂದಕ್ಕೂ ಅತಿ ಪ್ರಾಶಸ್ತ್ಯವಿಲ್ಲ ಎಂಬುದನ್ನು ಇಲ್ಲಿ ಮುಖ್ಯವಾಗಿ ತಿಳಿದುಕೊಳ್ಳಬೇಕು.

**ಪ್ರಶ್ನೆ : – ಹಾಗಾದರೆ ಬ್ರಹ್ಮವಿದ್ಯಾಫಲಪ್ರಾಪ್ತಿಯಲ್ಲೂ ಹೀಗೆಯೇ ಇರುವದೆ?**

ಉತ್ತರ :– ಇಲ್ಲ, ಬ್ರಹ್ಮವು ಸಾಧಕನ ಆತ್ಮವಾಗಿದೆ. ಅದರ ಅರಿವು ಮಾತ್ರವೇ ಆದರ ಪ್ರಾಪ್ತಿ ಎಂದು ಹೇಳಿರುತ್ತದೆ. ಬ್ರಹ್ಮವಿದ್ಯೆಯ ಫಲವೆಂದರೆ ಬ್ರಹ್ಮವೇ ಆಗಿರುವದು. ಇದಕ್ಕೆ ದೇಶಕಾಲಾದಿಗಳ ವ್ಯವಧಾನವೇ ಇಲ್ಲ, ಹೀಗಾಗಿ ಬ್ರಹ್ಮವಿದ್ಯಾಫಲವೆಂಬುದು ಕರ್ಮಫಲದಂತಲ್ಲ. ಆದ್ದರಿಂದ ಇಲ್ಲಿ ದೇವತೆಗಳು ವಿಘ್ನಮಾಡಲು ಸಾಧ್ಯವೇ ಇಲ್ಲ ಎಂಬುದೇ ಪರಮಸಿದ್ಧಾಂತ.

**ಪ್ರಶ್ನೆ :– ಬ್ರಹ್ಮವಿದ್ಯೆಯ ಫಲವೇನೋ ಬ್ರಹ್ಮಸ್ವರೂಪವೇ ಆಗಿರುವದರಿಂದ ಅಲ್ಲಿ ಈ ಸಂಶಯಕ್ಕೆಡೆಯಿಲ್ಲವೆಂದು ಒಪ್ಪಬಹುದು. ಆದರೆ ಅಜ್ಞನು ಬ್ರಹ್ಮವಿದ್ಯೆಗೆ ತಕ್ಕವನಾಗುವದಕ್ಕೆ ದೇವಾದಿಗಳ ಸಹಾಯವು ಬೇಕೇಬೇಕಲ್ಲವೆ ?**

ಉತ್ತರ : – ಹೌದು, ಆದ್ದರಿಂದಲೇ 'ಮುಮುಕ್ಷುವಾದವನು ದೇವತೆಗಳ ಆರಾಧನೆಯಲ್ಲಿ ತತ್ಪರನಾಗಿ ಶ್ರದ್ಧಾಭಕ್ತಿಪರನಾಗಿಯೂ ದೇವತೆಗಳಿಗೆ ವಿಧೇಯ ನಾಗಿಯೂ ಇದ್ದುಕೊಂಡು ವಿದ್ಯಾಪ್ರಾಪ್ತಿಯ ವಿಷಯಕ್ಕೆ ಎಚ್ಚರಿಕೆಯಿಂದಿರಬೇಕು – ಎಂಬುದನ್ನು ಶ್ರುತಿಯು ಆರ್ಥಿಕವಾಗಿ (ಅರ್ಥಾತ್ ಧ್ವನಿಯಿಂದ) ಇಲ್ಲಿ ಹೇಳಿದಂತಾ ಗಿದೆ ' ಎಂದು ಶ್ರೀಶಂಕರರು ಭಾಷ್ಯದಲ್ಲಿ ಸ್ಪಷ್ಟಪಡಿಸಿದ್ದಾರೆ.

**ಪ್ರಶ್ನೆ : – ಅಂತೂ ಚೆನ್ನಾಗಿದೆ. (೧) ಪೂರ್ವಪಕ್ಷ ಹಾಗೂ ಅವಾಂತರ ಪೂರ್ವಪಕ್ಷಗಳ ಮೂಲಕ ಕರ್ಮ, ಫಲ, ಪ್ರಯತ್ನ, ದೈವಾದಿಗಳ ಸ್ಥಾನವನ್ನು ಲೌಕಿಕ ವೈದಿಕವ್ಯವಹಾರದೃಷ್ಟಿಯಿಂದ ಯುಕ್ತಿಯುಕ್ತವಾಗಿ ತೋರಿಸಿಕೊಟ್ಟದ್ದೂ (೨) ಪರಮಾರ್ಥತತ್ತ್ವದ ಅರಿವಾದೊಡನೆಯೇ ಬ್ರಹ್ಮವೇ ಫಲರೂಪವಾಗಿರುವದ ರಿಂದ ಬ್ರಹ್ಮವಿದ್ಯಾಫಲಕ್ಕೆ ದೇಶಕಾಲಾದಿವ್ಯವಧಾನವಿಲ್ಲದಿರುವದರಿಂದ ಆ ವಿಷಯದಲ್ಲಿ ಸಂಶಯಪಡಬೇಕಾಗಿಲ್ಲ ಎಂದು ತಿಳಿಸಿದ್ದೂ (೩) ಬ್ರಹ್ಮವಿದ್ಯೆಗೆ ಅಧಿ ಕಾರಿಯಾಗಬೇಕಾದಲ್ಲಿ ಪ್ರಯತ್ನವೂ ಅದಕ್ಕೆ ತಕ್ಕಂತೆ ದೈವಾದಿಗಳ ಅನುಗ್ರಹವೂ ಬೇಕೆಂಬುದನ್ನು ತಿಳಿಸಿದ್ದೂ ಅತ್ಯಂತಸಮಂಜಸವಾಗಿದೆ. ಈ ಮೂರು ಅಂಶಗಳನ್ನೂ ಆಚಾರ್ಯರು ಇಲ್ಲಿ ಹೇಳಿದಂತಾಯಿತಲ್ಲವೆ ?**

ಉತ್ತರ : – ಹೌದು, ಸರಿಯಾಗಿ ಗ್ರಹಿಸಿದಿರಿ. ಬೃಹದಾರಣ್ಯಕ ೧–೪–೧೦ರ ಭಾಷ್ಯವನ್ನು ಭಾ. ಭಾ. ೧೬೭, ೧೬೮, ೧೬೯, ೧೭೦, ೧೭೬, ೧೭೮ ಈ ಬಗ್ಗೆ ಚೆನ್ನಾಗಿ ಮನನಮಾಡಬೇಕು.

--------

## ೧೩. ಭೌತಿಕವಿಜ್ಞಾನ

**ಪ್ರಶ್ನೆ : – ಆಧುನಿಕಭೌತಿಕಶೋಧಗಳು ಆಚಾರ್ಯರ ಕಾಲಕ್ಕೆ ಇದ್ದಿರಬಹುದೆ?**

ಉತ್ತರ :– ಇಲ್ಲ, ಭಾಷ್ಯದಲ್ಲಿ ಅಂಥ ಯಾವ ಉದಾಹರಣೆಗಳೂ ಬಂದಿಲ್ಲ. ಆದರೆ ಈಗಿನ ಭೌತಿಕವಿಜ್ಞಾನಿಗಳ ಒಂದೆರಡು ಅಭಿಪ್ರಾಯಗಳು ವೇದದಲ್ಲಿಯೂ ಸಹ ಸೂಚಿತವಾಗಿದ್ದವೆಂಬುದು ಭಾಷ್ಯದಿಂದ ತಿಳಿದುಬರುತ್ತದೆ.

**ಪ್ರಶ್ನೆ : – ಅಂಥ ಒಂದು ದೃಷ್ಟಾಂತವನ್ನು ತೋರಿಸಿರಿ !**

ಉತ್ತರ : – ತೈತ್ತಿರೀಯದ ಆನಂದವಲ್ಲಿಯಲ್ಲಿ ಪ್ರಾಣಮಯಕೋಶದ ವಿಚಾರವು ಬಂದಾಗ '**ಪೃಥಿವೀ ಪುಚ್ಛಂ ಪ್ರತಿಷ್ಠಾ**' ಎಂಬಲ್ಲಿ '**ಪೃಥಿವೀ ದೇವತಾ ಆಧ್ಯಾತ್ಮಿಕಸ್ಯ ಪ್ರಾಣಸ್ಯ ಧಾರಯಿತ್ರೀ। ಸ್ಥಿತಿಹೇತುತ್ವಾತ್।..... ಅನ್ಯಥಾ ಉದಾನವೃತ್ತ್ಯಾ**

**ಊರ್ಧ್ವಗಮನಂ ಗುರುತ್ವಾತ್ ಪತನಂ ವಾ ಸ್ಯಾತ್ ಶರೀರಸ್ಯ । ತಸ್ಮಾತ್ ಪೃಥಿವೀ ದೇವತಾ ಪುಚ್ಛಂ ಪತಿಷ್ಠಾ ಪ್ರಾಣಮಯಸ್ಯ ಆತ್ಮನಃ ॥'** (ತೈ. ೨–೨) ಎಂದು ಬರೆದಿದ್ದಾರೆ. ಇದರ ತಾತ್ಪರ್ಯ ವೇನೆಂದರೆ: ಶರೀರದೊಳಗಿರುವ ಉದಾನವಾಯು ವಿನ ವ್ಯಾಪಾರದಿಂದ ಶರೀರವು ಆಕಾಶದಲ್ಲಿ ಹಾರಿಹೋಗಬೇಕಾಗಿದ್ದರೂ ಸಹ ಈ ಭೂಮಿಯು ಅದನ್ನು ಜಗ್ಗಿ ಹಿಡಿದಿರುತ್ತದೆ. ಆದ್ದರಿಂದಲೇ ಶರೀರವು ಭೂಮಿಯಮೇಲೆ ನಿಂತಿರುತ್ತದೆ. ಶರೀರವು ಹಾರಿ ಹೋಗದೆ, ಕೆಳಗೆ ಬೀಳದೆ ನಿಂತಿರುವದಕ್ಕೆ ಪೃಥ್ವಿಯ ಧಾರಣಾಶಕ್ತಿಯೇ ಕಾರಣವು. ಹೀಗೆ ಬರೆದದ್ದರಿಂದ ಗುರುತ್ವಾಕರ್ಷಣಶಕ್ತಿಯು ಭೂಮಿಯಲ್ಲಿರುವದೆಂದು ಸೂಚಿಸಿದಂತಾಯಿತು, ಅಲ್ಲವೆ ? ಹೀಗೆ ಸೂಚ್ಯವಾಗಿ ಅಲ್ಲಲ್ಲಿ ಭೌತಿಕತತ್ತ್ವಗಳ ನಿರೂಪಣೆಯು ಇರಬಹುದೇ ಹೊರತು ಈ ಭೌತಿಕವಿಜ್ಞಾನ ಶಾಸ್ತ್ರಕ್ಕೂ ಆಚಾರ್ಯರು ಹೇಳುವ ಬ್ರಹ್ಮತತ್ತ್ವಕ್ಕೂ ಯಾವ ಸಂಬಂಧವೂ ಇಲ್ಲ.

**ಪ್ರಶ್ನೆ : – ಭೌತಿಕವಿಜ್ಞಾನವೂ ಸಹ ಒಂದೇ ಎಲೆಕ್ಟ್ರಾನ್, ಅಟಾಮಿಕ್ ಶಕ್ತಿಗೆ ಸಮಗ್ರವಿಶ್ವವೂ ಒಳಪಟ್ಟಿದೆ ಎಂಬುದನ್ನು ಕಂಡುಹಿಡಿದದ್ದರಿಂದ ವೇದಾಂತದಲ್ಲಿ ಹೇಳಿರುವ ಅದ್ವಿತೀಯಬ್ರಹ್ಮತತ್ತ್ವವನ್ನೇ ವಿಜ್ಞಾನಿಗಳೂ ಮುಟ್ಟಿದಂತಾಯಿತು – ಎಂದು ಕೆಲವರು ಹೇಳುವರಲ್ಲ! ಅದು ಸರಿಯೆ ?**

ಉತ್ತರ :– ಅಲ್ಲ. ವೇದಾಂತೋಕ್ತವಾದ ಬ್ರಹ್ಮವು ವಿಷಯಿಯ ಪರಮಾರ್ಥ ಸ್ವರೂಪವು. ಭೌತಿಕಶಾಸ್ತ್ರದಿಂದ ಕಂಡುಹಿಡಿದ ತತ್ತ್ವವು ವಿಷಯ ಪ್ರಪಂಚಕ್ಕೆ ಸೇರಿದ ಹೊರಗಿನ ಪದಾರ್ಥವು. ಜಡವು, ಜಾಗ್ರದವಸ್ಥೆಗೆ ಮಾತ್ರ ಒಳಪಟ್ಟದ್ದು. ಬ್ರಹ್ಮವು ಅವಸ್ಥಾತೀತವು, ಎಂದಿಗೂ ಏತಕ್ಕೂ ವಿಷಯವಾಗದ ನಿತ್ಯಚಿನ್ಮಾತ್ರಸ್ವರೂಪವು. ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ. ಬ್ರಹ್ಮವು ಒಳದೃಷ್ಟಿಗೆ ಮಾತ್ರವೇ ಗೋಚರ ವಾಗುವದು. ಭೌತಿಕತತ್ತ್ವವು ನಿರೀಕ್ಷಣೆ, ಪರೀಕ್ಷಣೆ, ಸಂವಾದೀಕರಣಗಳಿಗೆ ಸಿಲುಕಿದ್ದು. ಆದ್ದರಿಂದ ಇವುಗಳ ದಿಕ್ಕೇ ಬೇರೆಬೇರೆಯಾಗಿದೆಯೆಂದು ತಿಳಿಯಬೇಕು.

——————

## ೧೪. ಮನೋವಿಶ್ಲೇಷಣೆ

**ಪ್ರಶ್ನೆ : – ಶಂಕರಾಚಾರ್ಯರ ಭಾಷ್ಯಗಳಲ್ಲಿ ಮನೋವಿಶ್ಲೇಷಣೆಯ ಬಗ್ಗೆ ಏನಾದರೂ ಇದೆಯೆ ?**

ಉತ್ತರ : – ಬಹಳ ಇದೆ. ಮಾನಸಶಾಸ್ತ್ರವನ್ನಧ್ಯಯನಮಾಡಬೇಕೆನ್ನುವವರು ಶಾಂಕರಭಾಷ್ಯವನ್ನು ಅವಶ್ಯವಾಗಿ ನೋಡಬೇಕು.

**ಪ್ರಶ್ನೆ : – ಈ ಬಗ್ಗೆ ಅವರು ಹೇಳಿರುವದನ್ನು ಸಂಕ್ಷೇಪವಾಗಿ ತಿಳಿಯಲು ಸಾಧ್ಯವೆ ?**

ಉತ್ತರ : – ಸಾಧ್ಯ. ಇದರಲ್ಲಿ ಎರಡು ಮುಖ್ಯಭಾಗಗಳನ್ನು ಮಾಡಬಹುದು. (೧) ಮನಸ್ಸಿನ – ಅಂತಃಕರಣದ – ವಿವಿಧಶಕ್ತಿಗಳು (Faculties) ; ಮತ್ತು (೨) ಹೊರಗಿನ ವಿಷಯಗಳ ಮೂಲಕವೂ ಒಳಗಿನ ವಿಷಯಚಿಂತನೆಯ ಮೂಲಕವೂ ಉತ್ಪನ್ನವಾಗುವ ವಿವಿಧವೇದನೆಗಳು"; ಇವೇ ಆ ಎರಡು ಭಾಗಗಳು. ಭಾಷ್ಯದಲ್ಲೆಲ್ಲ ಈ ವಿಷಯಗಳನ್ನು ಬಹಳ ಸುಂದರವಾಗಿ ವಿವರಿಸಿದ್ದಾರೆ.

**ಪ್ರಶ್ನೆ : – ಒಂದೊಂದು ಭಾಗದ ಬಗ್ಗೆಯೂ ಕೆಲವು ವಿಷಯಗಳನ್ನು ತಿಳಿಸುವಿರಾ ?**

ಉತ್ತರ : – ಆಗಲಿ ಕೇಳಿ. ಮೊದಲು ಅಂತಃಕರಣದ ಶಕ್ತಿಗಳನ್ನು ಆಚಾರ್ಯರು ಸಾಮಾನ್ಯವಾಗಿ ಮೂರು ಭಾಗವಾಗಿ ವಿಂಗಡಿಸುತ್ತಾರೆ. (೧) ದೇಹೇಂದ್ರಿಯಗಳನ್ನು ಸ್ವಾಧೀನಪಡಿಸಿಕೊಂಡು ಕರ್ಮವನ್ನು ಮಾಡುವದು **ಕ್ರಿಯಾಶಕ್ತಿ** ಎನಿಸಿಕೊಳ್ಳುತ್ತದೆ. (೨) ಒಂದಾನೊಂದು ವಿಷಯವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಒಂದೇ ಸಮನೆ ಅದನ್ನು ಚಿಂತಿಸುವದು **ಉಪಾಸನಾಶಕ್ತಿ** ಅಥವಾ **ಚಿಂತನಶಕ್ತಿ** ಎನಿಸಿಕೊಳ್ಳುತ್ತದೆ. (೩) ಸರಿಯಾದ ಪ್ರಮಾಣಗಳನ್ನುಪಯೋಗಿಸಿ ವಿಚಾರಿಸಿ ವಸ್ತುತತ್ತ್ವವನ್ನು ಗೊತ್ತುಪಡಿಸಿಕೊಳ್ಳುವದು **ಜ್ಞಾನಶಕ್ತಿ** ಎನಿಸಿಕೊಳ್ಳುತ್ತದೆ. ಇವು ಮೂರೂ ಅಂತಃಕರಣದ ಎಂದರೆ ನಮ್ಮೆಲ್ಲರ ಮನಸ್ಸಿನಲ್ಲಿರುವ ಶಕ್ತಿವಿಶೇಷಗಳು ಎಂದು ಹೇಳಬಹುದು.

**ಪ್ರಶ್ನೆ :– ಇವುಗಳೊಂದೊಂದಕ್ಕೂ ಇರುವ ವ್ಯತ್ಯಾಸವೇನು ?**

ಉತ್ತರ : – ಇವುಗಳಲ್ಲಿ ಮೊದಲಿನ ಎರಡು (ಕ್ರಿಯೆ ಹಾಗೂ ಚಿಂತನೆಗಳು) ಕರ್ತೃತಂತ್ರ ಎಂದರೆ ಮಾಡುವವನ ಅಧೀನ ; ಮಾಡಬಹುದು, ಬಿಡಬಹುದು, ಬೇರೆ ವಿಧವಾಗಿಯೂ ಮಾಡಬಹುದು. ಫಲವನ್ನು ಬಯಸುವವರು ಇವುಗಳ ಬಗ್ಗೆ ಬರೀ ತಿಳಿವಳಿಕೆ ಮಾಡಿಕೊಂಡರೆ ಸಾಲದು. ತಿಳಿದನಂತರ ಆ ರೀತಿಯ ಚಿಂತನಕರ್ಮವನ್ನೋ ಬಾಹ್ಯ (ದೇಹಪ್ರಧಾನ) ಕರ್ಮವನ್ನೋ ಮಾಡಬೇಕು. ಮಾಡಿದ್ದಾದನಂತರ ಕಾಲಾಂತರ, ದೇಶಾಂತರ, ಲೋಕಾಂತರದಲ್ಲಿ ಫಲವಾಗುತ್ತದೆ. ಆದ್ದರಿಂದ ಇವೆರಡೂ ಪ್ರಕಾರಗಳನ್ನೂ 'ಕ್ರಿಯೆ' ಎಂಬ ಒಂದೇ ಮಾತಿನಿಂದ ಹೇಳಬಹುದು. ಒಂದು ದೈಹಿಕ, ಇನ್ನೊಂದು ಮಾನಸಿಕ, ಇಷ್ಟೇ ವ್ಯತ್ಯಾಸ.

**ಪ್ರಶ್ನೆ :– ಹಾಗಾದರೆ ವಸ್ತುತತ್ತ್ವವನ್ನು ಗೊತ್ತುಪಡಿಸಿಕೊಳ್ಳುವ ಜ್ಞಾನದ ಸ್ವರೂಪವೇನು ?**

ಉತ್ತರ :– ಜ್ಞಾನವು ತಿಳಿಯುವವನ ಅಧೀನವಲ್ಲ, ಅದು ವಸ್ತುವಿನ ಅಧೀನ,

ವಸ್ತುವು ಹೇಗಿದೆಯೋ ಹಾಗೆ, ಅದನ್ನು ತಿಳಿಸುವ ಪ್ರಮಾಣದಿಂದ ಹೇಗೆ ಗೊತ್ತಾಗುವದೋ ಹಾಗೆ ಅದರ ಅರಿವು ಉಂಟಾಗುತ್ತದೆ. ತಿಳಿಯುವವನ ಇಷ್ಟಕ್ಕೆ ಅನುಸಾರವಾಗಿ ಆ ಅರಿವು ಹುಟ್ಟುವದಿಲ್ಲ. ಇದೇ ವಸ್ತುತಂತ್ರವೆಂಬುದರ ಅರ್ಥ.

**ಪ್ರಶ್ನೆ :– ಇದಕ್ಕೊಂದು ಉದಾಹರಣೆಯನ್ನು ಹೇಳಿ.**

ಉತ್ತರ : –'ಬೆಂಕಿಯು ಬಿಸಿಯಾಗಿದೆ ಹಾಗೂ ಪ್ರಕಾಶರೂಪವಾಗಿದೆ' ಎಂಬುದೊಂದು ಜ್ಞಾನ. ಇದು ಕಣ್ಣು ಹಾಗೂ ಸ್ಪರ್ಶೇಂದ್ರಿಯಗಳೆಂಬ ಪ್ರಮಾಣದಿಂದ ಗೊತ್ತಾದ ಜ್ಞಾನವು. ಇಲ್ಲಿ ಅರಿಯುವಾತನು 'ಹೇಗಾದರೂ ಮಾಡಿ ಬೆಂಕಿ ತಣ್ಣಗಿದೆ, ಅಪ್ರಕಾಶವಾಗಿದೆ ಎಂದು ಜ್ಞಾನವಾಗಲಿ ' ಎಂದು ಅಪೇಕ್ಷಿಸಿದರೆ ಹಾಗೆ ಜ್ಞಾನವಾಗಲು ಎಂದಿಗೂ ಶಕ್ಯವಿಲ್ಲ. ನಮ್ಮ ಅಪೇಕ್ಷೆಯನ್ನವಲಂಬಿಸಿ ವಸ್ತುವು ಇರುವದಿಲ್ಲ. ಅದು ಇದ್ದಂತೆ ನಾವು ಸರಿಯಾದ ಪ್ರಮಾಣದಿಂದ ನಿಶ್ಚಯಿಸಬೇಕು. ಇದೇ ವಸ್ತುತಂತ್ರ ಎಂಬ ಮಾತಿಗೆ ಅರ್ಥ. (ಸೂ. ಭಾ. ೧–೧–೪ರಲ್ಲಿ 'ನನು ಜ್ಞಾನಂ ನಾಮ ಮಾನಸೀ ಕ್ರಿಯಾ। ನ। ವೈಲಕ್ಷಣ್ಯಾತ್ ......' ಇತ್ಯಾದಿ ವಾಕ್ಯಗಳನ್ನು ನೋಡಿ).

**ಪ್ರಶ್ನೆ : – ಈ ಜ್ಞಾನದ ಸ್ವರೂಪ ಹಾಗೂ ಕಾರ್ಯವೇನು ?**

ಉತ್ತರ :– ವಸ್ತುವನ್ನರಿಯದಿರುವ ಅಗ್ರಹಣ, ವಸ್ತುವಿನ ವಿಷಯಕವಾದ ತಪ್ಪುತಿಳಿವಳಿಕೆ (ವಿಪರೀತಪ್ರತ್ಯಯ), ವಸ್ತುವಿನ ವಿಷಯಕವಾದ ಸಂಶಯ – ಇವುಗಳನ್ನು ಈ ಜ್ಞಾನವು ಕಳೆಯುತ್ತದೆ. ಆದರೆ ವಸ್ತುವನ್ನು ಉಂಟುಮಾಡುವ, ಬದಲಾಯಿಸುವ (ಮಾರ್ಪಡಿಸುವ) ಅಥವಾ ನಾಶಮಾಡುವ ಯೋಗ್ಯತೆಯು ಜ್ಞಾನಕ್ಕಿಲ್ಲ. ಮತ್ತು ವಸ್ತುವಿನ ವಿಷಯದ ಅಜ್ಞಾನವು (ಅಗ್ರಹಣ, ವಿಪರೀತ, ಸಂಶಯ) ಸರಿಯಾದ ಜ್ಞಾನವು ಬಂದ ಸಮಕಾಲದಲ್ಲಿಯೇ ನಿವಾರಣೆಯಾಗುತ್ತದೆ. ಇದೇ ಜ್ಞಾನದ ಫಲವು. ಕರ್ಮ ಅಥವಾ ಉಪಾಸನೆಯ ಫಲವನ್ನುಂಟುಮಾಡಲು ಕಾಲಾಂತರವನ್ನು ಇದು ಅಪೇಕ್ಷಿಸುವದಿಲ್ಲ. ಅಂತೂ ಜ್ಞಾನಕ್ಕೆ ಫಲವು ಅವಿದ್ಯಾನಿವೃತ್ತಿ ಅದು ಜ್ಞಾನಸಮಕಾಲದಲ್ಲಿಯೇ ಆಗುವದು ಎಂಬುದೇ ವಿಶೇಷ.

**ಪ್ರಶ್ನೆ :– ಇದನ್ನು ಒಂದು ಉದಾಹರಣೆಯಿಂದ ವಿವರಿಸುವಿರಾ ?**

ಉತ್ತರ :– ಕೇಳಿ, ಕತ್ತಲಕೋಣೆಯಲ್ಲಿ ಪದಾರ್ಥಗಳಿವೆ. ಆದರೆ ನಾವು ಅಲ್ಲಿ ಎಷ್ಟೇ ಕಣ್ಣು ಬಿಟ್ಟು ನೋಡಿದರೂ ನಮಗೇನೂ ತಿಳಿಯುವದಿಲ್ಲ. ಆದರೆ ಬೆಳಕು ಬಂದುಬಿಟ್ಟರೆ ಕೂಡಲೇ ಅಲ್ಲಿದ್ದ ಎಲ್ಲಾ ವಸ್ತುಗಳೂ ಸ್ಪಷ್ಟವಾಗಿ ಕಾಣತೊಡಗುತ್ತವೆ. ಈಗ ಬೆಳಕೆಂಬುದು ಅಲ್ಲಿಯ ವಸ್ತುಗಳನ್ನು ಹೊಸದಾಗಿ ಹುಟ್ಟಿಸಲಿಲ್ಲ, ಬದಲಾಯಿಸಲಿಲ್ಲ, ನಾಶಪಡಿಸಲಿಲ್ಲ. ಆದರೆ ಕಾಣದಂತಾಗಿದ್ದ ವಸ್ತುಗಳನ್ನು ಕಾಣುವಂತೆ ಮಾಡಿತು. ಹಾಗೆಯೇ ತಪ್ಪುತಿಳಿವಳಿಕೆಯನ್ನೂ ಸಂಶಯವನ್ನೂ ಏಕಕಾಲದಲ್ಲಿ ನಿವಾರಿಸಿ ಇದ್ದ

ವಸ್ತುಗಳನ್ನಿದ್ದಂತೆಯೇ ತಿಳಿಸಿಕೊಟ್ಟಿತು. ಹೀಗೆಯೇ ಜ್ಞಾನ ಎಂಬ ಬೆಳಕು ವಸ್ತುವಿನ ವಿಷಯದ ಅವಿದ್ಯೆಯನ್ನು ಆಗಲೇ ಕಳೆದು, ಇದ್ದುದನ್ನು ಇದ್ದಂತೆಯೇ ತಿಳಿಸಿಕೊಡುತ್ತದೆ. ಇದೆಲ್ಲವನ್ನೂ ಶ್ರೀಶಂಕರಾಚಾರ್ಯರು ಲೋಕಾನುಭವದ ದೃಷ್ಟಿಯಿಂದಲೇ ವಿಮರ್ಶೆಮಾಡಿರುತ್ತಾರೆ. (ಬೃ.ಭಾ.೧–೪–೧೦ರಲ್ಲಿ) 'ನ । ಅವಿದ್ಯಾ..... ಯಥಾ ಲೋಕೇ ದ್ರಷ್ಟುಃ' ಎಂಬ ವಾಕ್ಯವನ್ನು ನೋಡಿ.)

ಇದರಂತೆಯೇ ವೇದೋಕ್ತವಾದ ಅದ್ವಯಾತ್ಮಜ್ಞಾನವು ಉಪನಿಷತ್ತುಗಳ ಹಾಗೂ ಬ್ರಹ್ಮನಿಷ್ಠರ ಉಪದೇಶದಿಂದ ಹುಟ್ಟಿದೊಡನೆಯೇ ದ್ವೈತವನ್ನೆಲ್ಲ ಬಾಧಿಸಿ ವೃತ್ತಿರೂಪವಾದ ತಾನೂ ಬಾಧಿತವಾಗಿಬಿಡುವದರಿಂದ ಅದರ ಫಲವಾದ ಅದ್ವಯಾತ್ಮನಿಷ್ಠಾರೂಪವಾದ ಮೋಕ್ಷವು ಕಾಲಾಂತರಾದಿಗಳನ್ನು ಅಪೇಕ್ಷಿಸದೆ ಕೂಡಲೆ ಆಗುತ್ತದೆ. ಆದರೆ ಈ ಜ್ಞಾನವು ಅವಿದ್ಯೆ ಇದ್ದಾಗಲೇ ಇರುವ ಕರ್ಮ ಮತ್ತು ಉಪಾಸನೆಗಳಿಗೆ ಅಂಗವಾಗಲು ಸಾಧ್ಯವೇಇಲ್ಲ. ಏಕೆಂದರೆ ಕರ್ತೃತ್ವಜ್ಞಾತೃತ್ವಗಳೇ ಬಾಧಿಸಲ್ಪಡುತ್ತವೆಯಾದ್ದರಿಂದ ಕ್ರಿಯೆಯೆಂಬುದಿರಲೇ ಆರದು ಎಂದು ಶ್ರೀಶಂಕರಾ–ಚಾರ್ಯರು ಹಾಗೂ ಅವರ ಪರಂಪರೆಯವರಾದ ಸುರೇಶ್ವರಾಚಾರ್ಯರು ಈ ಜ್ಞಾನದ ವೈಶಿಷ್ಟ್ಯವನ್ನು ಎತ್ತಿತ್ತೋರಿಸಿದ್ದಾರೆ. ಮಿಕ್ಕ ಪರಂಪರೆಯ ಆಚಾರ್ಯರುಗಳು ಈ ವೈದಿಕಜ್ಞಾನದ ಅನಂತರ ಕರ್ಮ, ಉಪಾಸನೆ, ಪ್ರಸಂಖ್ಯಾನ, ಚಿತ್ತನಿರೋಧ, ವಾಸನಾಕ್ಷಯ, ಪ್ರಪಂಚಪ್ರವಿಲಯ – ಮುಂತಾದ ಯಾವದೋ ಒಂದು ಕ್ರಿಯೆಯು ಉಳಿದಿರುತ್ತದೆಯೆಂದೇ ಭಾವಿಸಿರುತ್ತಾರೆ.

**ಪ್ರಶ್ನೆ :– ಜ್ಞಾನವು ಮನಸ್ಸಿನಲ್ಲೇ ಉಂಟಾಗುವದರಿಂದ ಜ್ಞಾನಕ್ಕೆ ಮೊದಲು ಅಗ್ರಹಣ, ವಿಪರೀತ, ಸಂಶಯಗಳೆಂಬ ರೂಪದ ಅಜ್ಞಾನವೂ ಅಂತಃಕರಣದಲ್ಲಿಯೇ ಇರುವದೆಂತಾಯಿತಲ್ಲ!**

ಉತ್ತರ :– ಹೌದು, ನೀವು ಹೇಳಿದಂತೆ ಅಜ್ಞಾನವು ಅಂತಃಕರಣದಲ್ಲಿಯೇ ಇರುತ್ತದೆ. ಆದರೆ ಇಲ್ಲಿ ಒಂದು ವಿಶೇಷವಿದೆ. ಅದೇನೆಂದರೆ ಅಜ್ಞಾನವು ಸಹಜ, ಸ್ವಾಭಾವಿಕ. ಜ್ಞಾನವು ಮಾತ್ರ ಪ್ರಯತ್ನದಿಂದಲೇ ಬರುತ್ತದೆ. ಅದು ಸಹಜ ಸ್ವಾಭಾವಿಕವಲ್ಲ (ಗೀ.೧೩–೨).

**ಪ್ರಶ್ನೆ :– ಅದು ಹೇಗೆ ?**

ಉತ್ತರ :– ಚಿಕ್ಕಮಗುವಿಗೆ ವಸ್ತುಗಳ ವಿಷಯಕ್ಕೆ ತಿಳಿವಳಿಕೆಯಿಲ್ಲದಿರುವದು ಸ್ವಾಭಾವಿಕ. ಅನಂತರ ಪ್ರಮಾಣಗಳ ಉಪಯೋಗ, ತಿಳಿದವರ ಉಪದೇಶ, ತನ್ನ ಪ್ರಯತ್ನ– ಮುಂತಾದವುಗಳಿಂದ ಒಂದೊಂದು ವಸ್ತುವಿನ ವಿಷಯಕ್ಕೂ ಆ ಮಗುವು ಜ್ಞಾನಸಂಪಾದನೆಮಾಡುತ್ತದೆ. ಯಾವಯಾವದರ ಬಗ್ಗೆ ತಿಳಿವಳಿಕೆಯಾಗುತ್ತದೆಯೋ

ಆಯಾ ವಸ್ತುವಿನ ಅವಿದ್ಯೆಯು ನಿವಾರಣೆಯಾಗುತ್ತದೆ. ಚಿಕ್ಕಮಗುವೊಂದು ಕಲ್ಲುಮಣ್ಣುಗಳನ್ನು ಬಾಯಿಗೆ ಹಾಕಿಕೊಳ್ಳುತ್ತದೆ. ಅದೇ ಸ್ವಲ್ಪ ದೊಡ್ಡದಾದಾಗ ಪೆಪ್ಪರ್‌ಮೆಂಟ್, ಬಿಸ್ಕತ್ತುಗಳನ್ನು ಮಾತ್ರ ತಿನ್ನುತ್ತದೆ, ಕಲ್ಲುಮಣ್ಣುಗಳನ್ನು ತಿನ್ನಲಾರದು. ಇಲ್ಲಿ ಇವು ತಿನ್ನುವ ಪದಾರ್ಥಗಳು, ಇವು ಅಲ್ಲ ಎಂಬ ಜ್ಞಾನವು ಪ್ರಮಾಣಾದಿಗಳಿಂದ ಹುಟ್ಟಿರುತ್ತದೆ. ಈ ಕಾರಣದಿಂದಲೇ ಆಚಾರ್ಯರು ಅಂತಃಕರಣಕ್ಕೆ ಅವಿದ್ಯೆ ಸ್ವಾಭಾವಿಕ, ನೈಸರ್ಗಿಕ ಎಂದು ಲೋಕಾನುಭವವನ್ನನುಸರಿಸಿ ಬರೆದಿದ್ದಾರೆ. (ಅ.ಭಾ. 'ನೈಸರ್ಗಿಕೋಽಯಂ ಲೋಕವ್ಯವಹಾರಃ' ಎಂಬ ವಾಕ್ಯವನ್ನು ನೋಡಿ).

**ಪ್ರಶ್ನೆ :– ಅಜ್ಞಾನದಲ್ಲಿ, ಎಂದರೆ ನೀವು ಹೇಳಿದ ಅಗ್ರಹಣ, ವಿಪರೀತ, ಸಂಶಯಗಳಲ್ಲಿ ಮುಖ್ಯವಾದುದು ಯಾವದು ? ಈ ಮೂರಕ್ಕೂ ಇರುವ ಸಂಬಂಧವು ಯಾವ ಬಗೆಯದು ?**

ಉತ್ತರ :– ಇದನ್ನು ಎರಡು ವಿಧವಾಗಿ ನೋಡಿ ನಿರ್ಣಯಿಸಬೇಕಾಗಿರುತ್ತದೆ. ಒಂದು ಶಾಸ್ತ್ರೀಯವಿವೇಚನಾದೃಷ್ಟಿ, ಇನ್ನೊಂದು ಲೋಕಾನುಭವದೃಷ್ಟಿ.

**ಪ್ರಶ್ನೆ :– ಶಾಸ್ತ್ರೀಯವಿವೇಚನೆಯ ದೃಷ್ಟಿಯು ಯಾವದು ?**

ಉತ್ತರ :– ವಸ್ತುವಿನ ಬಗ್ಗೆ ತಪ್ಪುತಿಳಿಯಲು ಹಾಗೂ ಸಂಶಯಪಡಲು ವಸ್ತುವಿನ ಅರಿವಿಲ್ಲದುದೇ ಕಾರಣ. ಈ ದೃಷ್ಟಿಯಿಂದ ಅಗ್ರಹಣ ಎಂಬುದು ಕಾರಣ, ವಿಪರೀತಪ್ರತ್ಯಯ ಮತ್ತು ಸಂಶಯಗಳು ಕಾರ್ಯಗಳು ಎಂದು ವಿಂಗಡಿಸಬಹುದು. ಶ್ರೀಶಂಕರರ ಪರಮಗುರುಗಳಾದ ಶ್ರೀಗೌಡಪಾದರು ಇವುಗಳನ್ನೇ ಕಾರಣಾವಿದ್ಯೆ, ಕಾರ್ಯಾವಿದ್ಯೆಗಳೆಂದು ಕರೆದಿದ್ದಾರೆ. ಆಚಾರ್ಯರೂ ಶಾಸ್ತ್ರೀಯದೃಷ್ಟಿಯಿಂದ ಹೀಗೆಯೇ ವರ್ಣಿಸಿದ್ದಾರೆ. ಶ್ರೀಸುರೇಶ್ವರರಂತೂ ಅವಿದ್ಯೆಯ ಸ್ವರೂಪವೆಂದರೆ ಅಗ್ರಹಣವೇ ಆಗಿದೆ ಎಂದು ಘಂಟಾಘೋಷವಾಗಿ ಸಾರಿ ಈ ಶಾಸ್ತ್ರೀಯ ವಿವೇಚನೆಯ ಕ್ರಮವನ್ನೇ ದೃಢಪಡಿಸಿದ್ದಾರೆ.

**ಪ್ರಶ್ನೆ :– ಈ ವಿವೇಚನೆ ಸರಿಯಾಗಿಯೇ ಇದೆಯಲ್ಲ ! ಇನ್ನು ಲೋಕಾನುಭವದ ದೃಷ್ಟಿಯ ಅವಶ್ಯಕತೆಯೇನು ?**

ಉತ್ತರ :– ಅದೂ ಅವಶ್ಯವಿದೆ, ಕೇಳಿ. ಯಾವದಾದರೊಂದು ಸಂಗತಿಯನ್ನು ತಪ್ಪಾಗಿ ತಿಳಿದಾಗ ಅದು ತಪ್ಪುತಿಳಿವಳಿಕೆ ಎಂದು ಗೊತ್ತಾಗುವದೇ ಇಲ್ಲ. ಸರಿಯಾದ ಜ್ಞಾನವೆಂದೇ ತೋರುತ್ತಿರುತ್ತದೆ. ಆ (ಅ)ಜ್ಞಾನಕ್ಕನುಸರಿಸಿಯೇ ನಮ್ಮ ಅಂತಃಕರಣದಲ್ಲಿ ಭಾವಗಳ ಉತ್ಪತ್ತಿಯೂ ಕ್ರಿಯೆಯೂ ನಡೆದಿರುತ್ತದೆ. ಹೀಗೆ ಸಾಗಿದ್ದಾಗ ಆ ವಸ್ತುವಿನ ಬಗ್ಗೆ ಸರಿಯಾದ ಜ್ಞಾನವು ಸಮ್ಯಕ್‌ಪ್ರಮಾಣದಿಂದ ಹುಟ್ಟಿದನಂತರವೇ ಇಷ್ಟು ಹೊತ್ತಿನವರೆಗೆ ತಿಳಿದದ್ದು ತಪ್ಪೆಂತಲೂ ಆದ್ದರಿಂದಲೇ ಆಗಾಗ ಸಂಶಯ

ಬರುತ್ತಿತ್ತೆಂತಲೂ ಗೊತ್ತಾಗುವದಲ್ಲದೆ ಹೀಗೆಲ್ಲ ಆಗಲು ವಸ್ತುವಿನ ಜ್ಞಾನವಿಲ್ಲದುದೇ ಕಾರಣವೆಂತಲೂ ಗೊತ್ತಾಗುತ್ತದೆ.

**ಪ್ರಶ್ನೆ :– ಹಾಗೇ ಆಗಲಿ. ಈಗ ಮೇಲೆ ಹೇಳಿದ ಶಾಸ್ತ್ರೀಯ ವಿವೇಚನೆಗಿಂತ ಈ ವಿವರಣೆಯಲ್ಲಿಯ ವಿಶೇಷವೇನು ?**

ಉತ್ತರ :– ಈ ಲೋಕಾನುಭವದ ವಿವರಣೆಯಿಂದ ಅವಿದ್ಯೆ ಎಂಬ ಶಬ್ದದಲ್ಲಿ ಅಗ್ರಹಣ, ವಿಪರೀತ, ಸಂಶಯಗಳೆಲ್ಲವೂ ಸೇರಿದ್ದರೂ ಅವಿದ್ಯೆಯ ಮುಖ್ಯಭಾಗವು ವಿಪರೀತಪ್ರತ್ಯಯ ಅಥವಾ ತಪ್ಪುತಿಳಿವೇ ಆಗಿದೆ ಎಂಬುದು ಸಾರ್ವತ್ರಿಕಾನುಭವದಿಂದ ನಿರ್ಣಯವಾಗುತ್ತದೆ. ಸರಿಯಾದ ಜ್ಞಾನವು ಬಂದನಂತರ ತಿಳಿಯದಿರುವದೇ ತಪ್ಪು ತಿಳಿಯಲು ಅಥವಾ ಸಂಶಯಪಡಲು ಕಾರಣ ಎಂದು ಕ್ರಮಪಡಿಸಿಕೊಳ್ಳುತ್ತೇವೆ. ಆದರೆ ಇದಕ್ಕೆ ಮೊದಲು ಜರುಗುವ ಕಾರ್ಯಗಳು ಹಾಗೂ ಎದ್ದುಕೊಳ್ಳುವ ಭಾವನಾದಿಗಳು ಎಲ್ಲವೂ ತಪ್ಪು ತಿಳಿವಳಿಕೆಯ ಮೂಲಕವೇ ನಡೆಯುತ್ತದೆಯಾದ್ದರಿಂದ ಅವಿದ್ಯೆ ಎಂದರೆ ತಪ್ಪುತಿಳಿಯುವಿಕೆ ಎಂದೇ ಆಚಾರ್ಯರು ಲೋಕಾನುಭವ ದೃಷ್ಟಿಯಿಂದ ನಿರ್ಣಯಿಸಿ ರುತ್ತಾರೆ. ಇದನ್ನು ಅಧ್ಯಾಸ, ಮಿಥ್ಯಾಜ್ಞಾನ, ಮಿಥ್ಯಾಪ್ರತ್ಯಯ, ವಿಪರೀತಪ್ರತ್ಯಯ– ಎಂದು ಕರೆದು (ಅ.ಭಾ.) ಸರಿಯಾದ ಜ್ಞಾನದಿಂದ ಇದು ತೊಲಗುವದು ಎಂದೂ ವಿವರಿಸಿದ್ದಾರೆ.

**ಪ್ರಶ್ನೆ :– ಅಂತಃಕರಣದ ಈ ಜ್ಞಾನ ಅಜ್ಞಾನಗಳ ವಿವೇಚನೆಯು ಬಹಳ ಚೆನ್ನಾಗಿದೆ. ಈ ಸಂಬಂಧದಲ್ಲಿ ಇನ್ನೂ ಯಾವದಾದರೂ ಬಗೆಯ ವಿಶ್ಲೇಷಣೆ ಮಾಡಿದ್ದಾರೆಯೆ ?**

ಉತ್ತರ :– ಮಾಡಿದ್ದಾರೆ. ಈವರೆಗೆ ಹೇಳಿದ್ದು ಅರಿಯುವಾತನ ಅಂತಃಕರಣಕ್ಕೆ ಸಂಬಂಧಪಟ್ಟ ವಿಷಯಿಯ ದೃಷ್ಟಿಯಿಂದ (Subjective View) ವಿವೇಚಿಸಿದ್ದಾಯಿತಷ್ಟೆ. ಈಗ ಈ ವಿಷಯಿಯಲ್ಲಿಯ ಅವಿದ್ಯಾದಿದೋಷಗಳ ಪರಿಣಾಮವು ಹೊರಗೆ ವಸ್ತುವಿನಲ್ಲಿ ಏನೇನು ಕೆಲಸಮಾಡುತ್ತದೆ ? ಎಂಬ ಬಗ್ಗೆ ವಿಷಯದ ದೃಷ್ಟಿಯನ್ನವಲಂಬಿಸಿ (Objective View) ಕೆಲವು ಮಾತುಗಳನ್ನು ತಿಳಿಸಿರುತ್ತಾರೆ.

**ಪ್ರಶ್ನೆ :– ಹಾಗಾದರೆ ಅದರ ಸಾರಾಂಶವೇನು ?**

ಉತ್ತರ :– ಕೇಳಿ. ನಮ್ಮಲ್ಲಿ ಅವಿದ್ಯೆಯಿದ್ದಾಗ ಎಂದರೆ ತಪ್ಪು ತಿಳಿವಳಿಕೆಯಿದ್ದಾಗ ಎದುರಿಗಿರುವ ವಸ್ತುವಿನಲ್ಲಿ ನಿಜವಾಗಿ ಇಲ್ಲದಿರುವದೆಲ್ಲವೂ ಇದ್ದಂತೆ ಕಾಣತೊಡಗುತ್ತದೆ. ಇದನ್ನು 'ಹುಸಿತೋರಿಕೆ' ಎನ್ನುತ್ತಾರೆ.

**ಪ್ರಶ್ನೆ :– ಹೀಗೆ ಕಾಣುವಾಗ ಆ ಹುಸಿತೋರಿಕೆಯ ವಸ್ತು ನಿಜವಾಗಿಯೂ ಹುಟ್ಟುತ್ತದೆಯೆ ?**

ಉತ್ತರ :— ಇಲ್ಲ, ಹುಟ್ಟುವದಿಲ್ಲ. ಇದ್ದಂತೆ ಕಾಣುವಾಗಲೂ ಸಹಾ ನಿಜವಾಗಿರುವದಿಲ್ಲ. ಸರಿಯಾದ ಜ್ಞಾನಬಂದಾಗ ಅದು ನಾಶವೂ ಆಗುವದಿಲ್ಲ. ಆದರೂ ಸರಿಯಾದ ಜ್ಞಾನಬಂದಾಗ ಅದು ಇಲ್ಲವೆಂದು ಗೊತ್ತಾಗಿಬಿಡುವದರಿಂದ ತಪ್ಪು ತಿಳಿವಳಿಕೆಯಿಂದ ಬಂದದ್ದು ಜ್ಞಾನದಿಂದ ತೊಲಗಿತು ಎಂದು ವ್ಯವಹಾರವಾಗುತ್ತದೆ.

**ಪ್ರಶ್ನೆ :— ಇಂಥ ಹುಸಿತೋರಿಕೆಗೆ ಶಂಕರರು ಏನೆನ್ನುವರು ?**

ಉತ್ತರ :— ಇದನ್ನು 'ಮಾಯೆ' ಎಂದು ಕರೆಯುವರು (ಸೂ.೨—೧—೧೪).

**ಪ್ರಶ್ನೆ :— ಇದರ ಬಗ್ಗೆ ಇನ್ನೂ ಯಾವಯಾವ ರೀತಿಯ ವಿಶ್ಲೇಷಣೆಮಾಡಿದ್ದಾರೆ ?**

ಉತ್ತರ :— ಕೇಳಿ. ಅಂತಃಕರಣದಲ್ಲಿ ಅವಿದ್ಯೆ ಇದ್ದಾಗಲೇ ಈ ಹುಸಿತೋರಿಕೆಯು ವಸ್ತುವಿನಲ್ಲಿ ಇರುವಂತೆ ತೋರುವದರಿಂದ ಇದು 'ಅವಿದ್ಯಾಕಲ್ಪಿತ' ಎಂದು ತಿಳಿಯಬೇಕು. ಈ ಹುಸಿತೋರಿಕೆಯು ಒಮ್ಮೆ ತೋರುತ್ತಲೂ ಒಮ್ಮೆ ಅಡಗುತ್ತಲೂ ಇರುತ್ತದೆ. ಇದು ಅಡಗಿದಾಗ ಬೀಜರೂಪದಿಂದಿರುವದೆಂದು ಕಲ್ಪಿಸುತ್ತೇವೆ. ಆದರೆ ನಿಜವಾದ ವಸ್ತುಜ್ಞಾನವು ಬಂದಾಗ ಹೀಗೆ ತೋರಿ ಅಡಗಿದ ತತ್ತ್ವವು ಬರೀ ಹುಸಿ ಎಂದು ಗೊತ್ತಾಗುತ್ತದೆ. ಆದ್ದರಿಂದ ಹುಸಿ ತೋರಿಕೆಯು ಅಡಗಿದಮಾತ್ರದಿಂದಲೇ ಅದರ ಅಸ್ತಿತ್ವಭಾವನೆಯು ತೊಲಗುವದಿಲ್ಲ. ಮತ್ತೇನೆಂದರೆ ವಸ್ತುವಿನ ನಿಜಸ್ವರೂಪದ ಜ್ಞಾನವಾದಾಗಲೇ ಅದು ಹುಸಿಯೆಂದು ನಿಶ್ಚಯವಾಗುತ್ತದೆ. (ಸೂ.೨—೧—೧೪, ೨—೧—೨೨).

**ಪ್ರಶ್ನೆ :— ಅವಿದ್ಯೆಯಿಂದ ಕಲ್ಪಿತವಾದ ಮಾಯೆಯು ತೋರಿ ಅಡಗುವ ಸ್ವಭಾವದ್ದಾಗಿದೆ ಎಂದಾಯಿತಲ್ಲವೆ ?**

ಉತ್ತರ :— ಹೌದು. ಇದನ್ನೇ ಆಚಾರ್ಯರು 'ವ್ಯಕ್ತಾವ್ಯಕ್ತಾತ್ಮಕ' ಎನ್ನುತ್ತಾರೆ. ಹೀಗೆಯೇ ಈ ಮಾಯೆಯ ಇನ್ನೊಂದು ಬಗೆಯ ವರ್ಣನೆಯನ್ನು ಕೇಳಿ. ವಸ್ತುವಿನ ನಿಜವನ್ನರಿಯದಿರುವಾಗ ವಸ್ತುವಿನಲ್ಲಿ ಇರುವಂತೆ ತೋರುವ ಈ ವ್ಯಕ್ತಾವ್ಯಕ್ತರೂಪವಾದ ಮಾಯೆಯು ಅನಿರ್ವಚನೀಯವಾಗಿದೆಯೆಂದು ಆಚಾರ್ಯರು ಹೇಳುತ್ತಾರೆ.

**ಪ್ರಶ್ನೆ :— ಅನಿರ್ವಚನೀಯ ಎಂದರೇನು ?**

ಉತ್ತರ :— ತತ್ತ್ವವೂ ಅಲ್ಲ, ತತ್ತ್ವಕ್ಕಿಂತ ಬೇರಾಗಿ ಸ್ವತಂತ್ರವಾಗಿ ಇರುವದೂ ಅಲ್ಲ. ಇದೇ ಅನಿರ್ವಚನೀಯ ಎಂಬುದಕ್ಕೆ ಅರ್ಥ.

**ಪ್ರಶ್ನೆ :— ಒಂದು ಉದಾಹರಣೆಯಿಂದ ಇದನ್ನು ವಿವರಿಸುವಿರಾ ?**

ಉತ್ತರ :— ಕೇಳಿ. ಮಬ್ಬುಗತ್ತಲಲ್ಲಿ ಬಿದ್ದಿರುವ ಒಂದು ಹಗ್ಗವನ್ನು ದೂರದಲ್ಲಿರುವವನೊಬ್ಬನು ಹಾವು ಎಂದು ತಪ್ಪಾಗಿ ತಿಳಿದು ಭಯಗ್ರಸ್ತನಾಗುತ್ತಾನೆ.

ಆಗ ಹಗ್ಗದಲ್ಲಿ ನಿಜವಾಗಿಲ್ಲದ ಹಾವು ಇರುವಂತೆ ಕಾಣತೊಡಗುತ್ತದೆ. ಹೀಗೆ ಕಾಣಲು ಆ ಮನುಷ್ಯನಲ್ಲಿ ಹಗ್ಗದ ವಿಷಯಕ್ಕೆ ಇರುವ ಅಜ್ಞಾನ ಹಾಗೂ ತಪ್ಪುತಿಳಿವಳಿಕೆಗಳು (Subjective) ಹೊಣೆಯೇ ಹೊರತು ಹಗ್ಗದಲ್ಲಿ ಹಾವಾಗಿ ಕಾಣಿಸಿಕೊಳ್ಳುವಂಥ ಯಾವ ದೋಷವೂ ಇಲ್ಲ. ಈ ಕಲ್ಪಿತಹಾವೇ ಅವಿದ್ಯಾಕಲ್ಪಿತವಾದ ಮಾಯೆ (Objective). ಇದು ಒಮ್ಮೆ ತೋರುತ್ತಲೂ ಮತ್ತೊಮ್ಮೆ ತೋರದೆ ಅಡಗಿರುವಂತೆಯೂ ಕತ್ತಲಲ್ಲಿ ಭಾಸವಾಗುವದು. ತೋರದಿರುವಾಗ ಹಾವು ಕಾಣದಿದ್ದರೂ ಅದರ ಅಸ್ತಿತ್ವಭಾವನೆಯೂ ಭಯಾದಿದೋಷಗಳೂ ತೊಲಗಿರುವದಿಲ್ಲ. ಆದ್ದರಿಂದಲೇ ಪುನಃ ತೋರುವಾಗ 'ಅದೋ ಹಾವು!' ಎಂದೇ ತೋರುತ್ತದೆ. ಇದೇ ಅವಿದ್ಯಾಕಲ್ಪಿತಹಾವಿನ ವ್ಯಕ್ತಾವ್ಯಕ್ತತೆ.

**ಪ್ರಶ್ನೆ :– ಅರ್ಥವಾಯಿತು. ಮಾಯೆಯು ಹುಸಿತೋರಿಕೆ, ಅವಿದ್ಯಾಕಲ್ಪಿತ, ವ್ಯಕ್ತಾವ್ಯಕ್ತಾತ್ಮಕ– ಎಂಬುದೀಗ ಸ್ಪಷ್ಟವಾಯಿತು. ಆದರೆ ಅನಿರ್ವಚನೀಯದ ಬಗ್ಗೆ ತಿಳಿಸಲಿಲ್ಲವಲ್ಲ !**

ಉತ್ತರ :– ಅದನ್ನೇ ಈಗ ತಿಳಿಸುತ್ತೇನೆ, ಕೇಳಿ. ಹಗ್ಗದಲ್ಲಿ ತೋರಿದ ಹಾವು ಹಗ್ಗಕ್ಕೆ ಸೇರಿದ್ದಲ್ಲ. ಅದರಂತೆ ಹಗ್ಗವನ್ನು ಬಿಟ್ಟು ಅದಕ್ಕೆ ಸ್ವತಂತ್ರವಾದ ಅಸ್ತಿತ್ವವೂ ಇಲ್ಲ; ಎಂದರೆ ನಿಜವಾದ ಹಗ್ಗವೇ ಎಂದೂ ಆ ಹುಸಿತೋರಿಕೆಯ ಹಾವನ್ನು ಹೇಳುವಂತಿವಲ್ಲ, ಹಗ್ಗಕ್ಕಿಂತ ಬೇರೆ ಸ್ವತಂತ್ರಪದಾರ್ಥವೆಂದೂ ಹೇಳುವಂತಿಲ್ಲ. ಹೀಗಿದೆ, ಈ ಹುಸಿತೋರಿಕೆ. ಇದೇ ಅನಿರ್ವಚನೀಯ ಎಂಬುದು (ಸೂ.ಭಾ.೨–೧–೧೪ 'ತತ್ತ್ವಾನ್ಯತ್ವಾಭ್ಯಾಮ್ ಅನಿರ್ವಚನೀಯೇ...')

**ಪ್ರಶ್ನೆ :– ಸರಿ, ಚೆನ್ನಾಗಿದೆ ವಿಶ್ಲೇಷಣೆ. ಹುಸಿತೋರಿಕೆಯನ್ನು ವರ್ಣಿಸುವದಕ್ಕೆ ಅವಿದ್ಯಾಕಲ್ಪಿತ, ವ್ಯಕ್ತಾವ್ಯಕ್ತಾತ್ಮಕ, ಅನಿರ್ವಚನೀಯ– ಎಂಬ ಪದಗಳನ್ನು ಉಪಯೋಗಿಸಿರುವರೆಂದಾಯಿತು.**

ಉತ್ತರ :– ಅಹುದು. ಇಷ್ಟೆಲ್ಲಾ ವರ್ಣಿಸಿದಂತೆ ಈ ಹುಸಿತೋರಿಕೆಯಾದ ಮಾಯೆಯು ಅವಿದ್ಯಾಕಲ್ಪಿತವಾದ್ದರಿಂದ ವಿದ್ಯೆ ಅಥವಾ ಜ್ಞಾನದಿಂದ ತೊಲಗುತ್ತದೆ– ಎಂದು ಆಚಾರ್ಯರು ನಿರೂಪಿಸಿದ್ದಾರೆ.

**ಪ್ರಶ್ನೆ :– ಸರಿಯಾಗಿದೆ. ಹಗ್ಗದ ಅರಿವು ಬಂದಾಗ ಅವಿದ್ಯಾಕಲ್ಪಿತವೇ ಮುಂತಾದ ವಿಶೇಷಣಗಳಿಂದ ವರ್ಣಿಸಿದ ಹುಸಿತೋರಿಕೆಯಾದ ಹಾವು ಇಲ್ಲವೆಂದೇ ಗೊತ್ತಾಗುತ್ತದೆ, ಅಲ್ಲವೆ ? ಅಂತೂ ಅವಿದ್ಯೆ ಇದ್ದರೆ ಮಾಯೆ ಇದೆ. ವಿದ್ಯೆಯಿಂದ ಅವಿದ್ಯೆಯು ತೊಲಗಿದರೆ ಮಾಯೆಯಿಲ್ಲ ಎಂದಾಯಿತಲ್ಲ !**

ಉತ್ತರ :– ಚೆನ್ನಾಗಿ ತಿಳಿದಿರಿ, ಇದು ಹೀಗೆಯೇ ಇರುವದು.

**ಪ್ರಶ್ನೆ :– ಹೊರಗಿನ ವಸ್ತುವಿನ ಬಗ್ಗೆ ನಮ್ಮ ಅಂತಃಕರಣದಲ್ಲಿರುವ ಅವಿದ್ಯೆ,**

**ಆದರಿಂದ ಕಲ್ಪಿಸಲ್ಪಡುವ ಮಾಯೆ ಎಂಬ ಹುಸಿತೋರಿಕೆ, ವಸ್ತುವಿನ ನಿಜವಾದ ಅರಿವು ಅಂತಃಕರಣದಲ್ಲಿ ಬರುವದು, ಆಗ ಅವಿದ್ಯೆಯೂ ಅದರಿಂದ ಕಲ್ಪಿತವಾದ ಮಾಯೆಯೂ ತೊಲಗಿ ಹೋಗುವದು— ಇದೆಲ್ಲವೂ ಲೋಕಾನುಭವಕ್ಕನುಸರಿಸಿಯೇ ಇದೆ. ಆದರೆ ಅದ್ವಿತೀಯಾತ್ಮನ ವಿಷಯದಲ್ಲಿ ಇದೆಲ್ಲ ಹೇಗೆ ಹೊಂದುತ್ತದೆ ? ಇದಕ್ಕೆ ಆಚಾರ್ಯರು ಏನು ಹೇಳುತ್ತಾರೆ ?**

ಉತ್ತರ :— ಒಳ್ಳೆಯ ಪ್ರಶ್ನೆಮಾಡಿದಿರಿ. ಇದನ್ನು ಮುಂದೆ 'ಶಂಕರ ಸಿದ್ಧಾಂತ ಸಂಸ್ಮರಣ'ದಲ್ಲಿ ವಿಶದವಾಗಿ ವಿವರಿಸುತ್ತೇನೆ. ಸದ್ಯಕ್ಕೆ ಇಲ್ಲಿ ಒಂದೇ ಮಾತನ್ನು ಹೇಳುತ್ತೇನೆ. 'ಅದ್ವಿತೀಯತತ್ತ್ವವನ್ನರಿತು ನೆಲೆನಿಲ್ಲುವವರೆಗೆ ಲೋಕದೃಷ್ಟಿಯಿಂದ ಅದ್ವಿತೀಯನಾದ ಆತ್ಮನ ವಿಷಯದಲ್ಲಿಯೂ ಅವಿದ್ಯೆ, ಮಾಯೆ, ವಿದ್ಯೆ— ಮುಂತಾದವುಗಳನ್ನು ಇಲ್ಲದಿದ್ದರೂ ಇರುವಂತೆ ಆರೋಪಿಸಿ ಶಾಸ್ತ್ರವು ಬೋಧಮಾಡುತ್ತದೆ. ಇದಕ್ಕೆ 'ಅಧ್ಯಾರೋಪ' ಎಂದು ಹೆಸರು. ಉಪದೇಶದ ಕೊನೆಯಲ್ಲಿ ಅದ್ವಿತೀಯತತ್ತ್ವಮಾತ್ರವೇ ಉಳಿದಿರುವಾಗ ಇದೊಂದೂ ಇಲ್ಲವೆಂದೇ ಆಗುತ್ತದೆ. ಇದನ್ನೇ 'ಅಪವಾದ' ಎನ್ನುವರು. ಆದ್ದರಿಂದ ಅದ್ವಿತೀಯ ಎಂದಾಗ ಪ್ರಶ್ನೆಯಿಲ್ಲ; ಪ್ರಶ್ನೆಯಿರುವಾಗ ಅದ್ವಿತೀಯತ್ವ ಗೊತ್ತಿಲ್ಲ. ಅದನ್ನು ಗೊತ್ತುಪಡಿಸಿ ದ್ವೈತ ವನ್ನು ಕಳೆಯುವದಕ್ಕೇ ಇದೆಲ್ಲವನ್ನೂ ಆರೋಪಿಸಿರುತ್ತದೆ. 'ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ' (ಮಾಂ.ಕಾ.೧–೧೮), 'ಅಧ್ಯಾರೋಪಾಪ–ವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ' (ಗೀ.೧೩–೧೩) ಎಂಬುದೇ ಇಲ್ಲಿ ಪ್ರಕ್ರಿಯೆಯು.

**ಪ್ರಶ್ನೆ :— ಸರಿ, ಇನ್ನು ಮನೋವಿಶ್ಲೇಷಣೆಯ ಎರಡನೆಯ ಭಾಗವಾದ ವಿವಿಧವೇದನೆಗಳ ವಿಶ್ಲೇಷಣೆಯನ್ನು ಆಚಾರ್ಯರು ಹೇಗೆ ಮಾಡಿದ್ದಾರೆ ?**

ಉತ್ತರ :— ಈ ವಿಷಯವನ್ನು ಕುರಿತು ಎಲ್ಲವನ್ನೂ ವಿವರಿಸಲು ಇಲ್ಲಿ ಸಾಧ್ಯವಿಲ್ಲ, ಮುಖ್ಯವಾಗಿ ಭಗವದ್ಗೀತಾಭಾಷ್ಯವನ್ನು ಪೂರ್ಣವಾಗಿ ಅಧ್ಯಯನಮಾಡಿದರೆ ಮನಸ್ಸಿನಲ್ಲಿ ಹುಟ್ಟುವ ವಿವಿಧವೇದನೆಗಳನ್ನು ಕುರಿತ ವಿಶ್ಲೇಷಣೆಯು ಚೆನ್ನಾಗಿ ಗೊತ್ತಾಗುತ್ತದೆ. ಅದರಂತೆ ಉಪನಿಷದ್ಭಾಷ್ಯ, ಸೂತ್ರಭಾಷ್ಯದಲ್ಲಿಯೂ ಸಹ ಈ ಬಗೆಯ ವಿಶ್ಲೇಷಣೆಗಳುಂಟು.

**ಪ್ರಶ್ನೆ :— ಒಂದೆರಡು ಉದಾಹರಣೆಗಳನ್ನಾದರೂ ಕೊಟ್ಟು ವಿಶ್ಲೇಷಣೆಯ ಪ್ರಕಾರಗಳನ್ನು ತೋರಿಸುವಿರಾ ?**

ಉತ್ತರ :— ಆಗಲಿ, ಇದೋ ನೋಡಿ. ಛಾಂದೋಗ್ಯದ (೭–೫–೧) ನಾರದ ಸನತ್ಕುಮಾರರ ಸಂವಾದದಲ್ಲಿ ನಾಮ, ವಾಕ್ಕು, ಮನಸ್ಸು, ಸಂಕಲ್ಪಾದಿಗಳನ್ನು

ವರ್ಣಿಸುವಾಗ 'ಚಿತ್ತ' ಎಂಬುದಕ್ಕೆ ಆಚಾರ್ಯರು ಬರೆದಿರುವ ವಿಶೇಷಾರ್ಥದಲ್ಲಿ ಅಂತಃಕರಣದ ಒಂದಾನೊಂದು ವಿಶೇಷಧರ್ಮವನ್ನು ವಿಶ್ಲೇಷಣೆಮಾಡಿದ್ದಾರೆ. **''ಚಿತ್ತಂ ಚೇತಯಿತೃತ್ವಂ ಪ್ರಾಪ್ತಕಾಲಾನುರೂಪಬೋಧವತ್ತ್ವಂ ಅತೀತಾನಾಗತವಿಷಯ ಪ್ರಯೋಜನನಿರೂಪಣಸಾಮರ್ಥ್ಯಂ ಚ ।''** ಎಂದು ಅಲ್ಲಿ ಬರೆದಿದ್ದಾರೆ. ಚಿತ್ತವೆಂದರೆ ಅರಿಯುವದು, ಬಂದೊದಗಿದ್ದನ್ನು ಕಾಲಾನುರೂಪವಾಗಿರುವದನ್ನು ಅರಿತುಕೊಳ್ಳ ಬೇಕು, ಎಂದರೆ ಈಗ ಇದು ಹೀಗೆ ಪ್ರಾಪ್ತವಾಗಿದೆ ಎಂಬುದನ್ನರಿತು ಅದರ ಹಿಂದು ಮುಂದಿನ ಸಂದರ್ಭಗಳನ್ನೂಹಿಸಿ ಅದಕ್ಕೆ ತಕ್ಕಂತೆ ಆ ವಿಷಯದ ಪ್ರಯೋಜನವನ್ನು ಗೊತ್ತುಪಡಿಸಿ ಅದರಂತೆ ನಡೆಯಲು ನಿಶ್ಚಯಿಸುವ ಅಂತಃಕರಣದ ಧರ್ಮವೇ ಚಿತ್ತವು– ಎಂದು ಆ ವಾಕ್ಯಕ್ಕೆ ಅರ್ಥ. ಇದನ್ನು ವಿವರಿಸುವಾಗ 'ಒಬ್ಬಾತನು ಬಹಳ ಜ್ಞಾನಸಂಪನ್ನನಾಗಿದ್ದರೂ ಈ ಚಿತ್ತವೆಂಬ ಧರ್ಮವು ಅಂತಃಕರಣದಲ್ಲಿಲ್ಲದೆ ಹೋದರೆ ಸಮಯಕ್ಕೆ ಸರಿಯಾಗಿ ಮಾಡಬೇಕಾದ್ದನ್ನು ಮಾಡದೆಹೋಗುವದರಿಂದ ಆತನು ನಿರುಪಯೋಗಿಯಾಗುತ್ತಾನೆ. ಆತನ ಸಂಕಲ್ಪಗಳು ವ್ಯರ್ಥವಾಗುತ್ತವೆ. ಆದರೆ ಅತಿಕಡಿಮೆ ತಿಳಿದವನಾದರೂ ಸಮಯಾನುಸಾರವಾಗಿ ಉಚಿತವಾದ ಕರ್ತವ್ಯವನ್ನು ನೆರವೇರಿಸುವ ರೂಪದ ಚಿತ್ತವುಳ್ಳವನಾಗಿದ್ದರೆ ಲೋಕದಲ್ಲಿ ಅವನು ಉಪಯುಕ್ತನೂ ತಿಳಿದವನೂ ಆಗಿದ್ದಾನೆ– ಎಂದು ಅನ್ನಿಸಿಕೊಳ್ಳುತ್ತಾನೆ. ಆದ್ದರಿಂದ ಈ ಚಿತ್ತಬ್ರಹ್ಮವನ್ನು ಉಪಾಸನೆಮಾಡಬೇಕು. ಅರ್ಥಾತ್ ಈ ಗುಣವೇ ಪರಮಾತ್ಮನೆಂದು ಚಿಂತಿಸುವವನಿಗೆ ಆ ಗುಣವೂ ಅದರ ಫಲವೂ ಉಂಟಾಗುವವು– ಎಂದು ಹೇಳಿರುತ್ತಾರೆ.

ಇಲ್ಲಿ ಚಿತ್ತದ ವ್ಯಾಖ್ಯೆಯಿಂದ ಪ್ರಸಂಗಾವಧಾನ, ಕರ್ತವ್ಯಜಾಗ್ರತಿ– ಮುಂತಾದ ಸದ್ಗುಣಗಳ ವರ್ಣನೆಯನ್ನು ಆಚಾರ್ಯರು ಮಾಡಿದಂತಾಗಿದ್ದು ಚಿತ್ತ ಎಂಬ ಪದಕ್ಕೆ ಸಾಮಾನ್ಯವಾಗಿ 'ಚಿಂತನೆಮಾಡುವ ಅಂತಃಕರಣಧರ್ಮ' ಎಂದರ್ಥವಿದ್ದರೂ ಈ ವಿಶೇಷಾರ್ಥವನ್ನೂ ಆ ಬಗೆಯ ಭಾವನಾವಿಶೇಷವನ್ನೂ ಚೆನ್ನಾಗಿ ವಿಶ್ಲೇಷಣೆಮಾಡಿದ್ದಾರೆ.

**ಪ್ರಶ್ನೆ :– ಚಿತ್ತದ ವಿಶ್ಲೇಷಣೆಯಲ್ಲದೆ ಅಂತಃಕರಣದ ಇನ್ನೂ ಯಾವಯಾವ ಧರ್ಮಗಳನ್ನು ಹೇಗೆಹೇಗೆ ವಿವರಿಸಿದ್ದಾರೆ ?**

ಉತ್ತರ :– ಅದನ್ನೆಲ್ಲಾ ತಿಳಿಯಬೇಕಾದರೆ ಪೂರ್ತಿಪ್ರಸ್ಥಾನತ್ರಯವನ್ನೇ ಈ ದೃಷ್ಟಿಕೋಣದಿಂದ ಅಭ್ಯಸಿಸಬೇಕು. ಆಗ 'ಶಂಕರರೂ ಮನೋವಿಶ್ಲೇಷಣಶಾಸ್ತ್ರವೂ' ಎಂಬ ಒಂದು ಸ್ವತಂತ್ರವಾದ ಉದ್ಗ್ರಂಥವನ್ನೇ ಬರೆಯಬಹುದಾಗಿದೆ.[1] ಅದನ್ನೆಲ್ಲಾ ಈ ಚಿಕ್ಕಗ್ರಂಥದಲ್ಲಿ ವಿವರಿಸಲು ಸಾಧ್ಯವಿಲ್ಲ.

---

1. ಮೈಸೂರು ವಿಶ್ವವಿದ್ಯಾನಿಲಯದ ಪುಸ್ತಕಭಂಡಾರದಲ್ಲಿ 'Shankara and Psychology' ಎಂಬ ಚಿಕ್ಕ ಪುಸ್ತಕವೊಂದು ಇರುವದಾಗಿ ಈಗತಾನೆ ತಿಳಿದಿದೆ. ಇದರ ವಿವರ ಗೊತ್ತಾಗಿಲ್ಲ.

**ಪ್ರಶ್ನೆ :– ಹೋಗಲಿ, ಗೀತಾಭಾಷ್ಯದ ಒಂದೆರಡು ಸ್ವಾರಸ್ಯಪ್ರಸಂಗಗಳನ್ನಾದರೂ ಉದಾಹರಿಸಿ ತಿಳಿಸುವಿರಾ ?**

ಉತ್ತರ :– ಒಳ್ಳೆಯದು. ವೇದನೆಗಳ ವಿಂಗಡಣೆ, ಸ್ವಭಾವ, ಪರಿಣಾಮ, ಅವುಗಳನ್ನು ಜಯಿಸಲು ಅನುಸರಿಸಬೇಕಾದ ಉಪಾಯ– ಮುಂತಾದವುಗಳ ವಿಶ್ಲೇಷಣೆಗೆ ಗೀತಾಭಾಷ್ಯವು ಅದ್ಭುತಗ್ರಂಥವೆಂದೇ ಹೇಳಬಹುದು. ತನ್ನಲ್ಲಿದ್ದ ದುರ್ಗುಣಗಳನ್ನು ಗುರುತಿಸಿ, ಅವುಗಳಿಂದ ಬಿಡುಗಡೆಹೊಂದಿ, ಸದ್ಗುಣಗಳನ್ನು ಸಂಪಾದಿಸಿ ಜೀವನದಲ್ಲಿ ಸಂಪೂರ್ಣವಾಗಿ ಶಾಂತಿಸಮಾಧಾನಗಳನ್ನು ಎಲ್ಲ ಪರಿಸ್ಥಿತಿಗಳಲ್ಲಿಯೂ ಕಾಯ್ದುಕೊಳ್ಳಲು ಬೇಕಾಗುವ ಉಪಾಯಗಳೆಂಬ ರತ್ನಗಳ ಗಣಿಯೇ ಈ ಗೀತಾಭಾಷ್ಯವಾಗಿದೆ. ಕಾಮಾದಿಭಾವನೆಗಳನ್ನು ಹತೋಟಿಗೊಳಿಸುವ, ಅವುಗಳಿಗೆ ವಿರುದ್ಧವಾದ ಸದ್ಭಾವನೆಗಳನ್ನು ಬೆಳೆಸಿಕೊಳ್ಳುವ ಕಲೆಯನ್ನು ಕಲಿಸುವ ಅದ್ವಿತೀಯಗ್ರಂಥವೆಂದರೆ ಗೀತಾಭಾಷ್ಯವೇ ಆಗಿದೆ.

**ಪ್ರಶ್ನೆ :– ಹಾ, ಹಾ, ನಿಲ್ಲಿ ನಿಲ್ಲಿ! ಇಲ್ಲಿ ತಾವೇ ಭಾವನೆಗೆ ವಶರಾಗಿ ಗೀತೆಯ ಹಾಗೂ ಭಾಷ್ಯದ ವರ್ಣನೆಗೆ ತೊಡಗಿ ಆ ಭರದಲ್ಲಿ ನಾನು ಕೇಳಿದ ಒಂದೆರಡು ದೃಷ್ಟಾಂತಗಳನ್ನು ತೋರಿಸುವ ಕೆಲಸವನ್ನೇ ಮರೆತಿರಲ್ಲ!**

ಉತ್ತರ :– ಹೌದು, ಹೌದು. ಗೀತಾಭಾಷ್ಯವೆಂದೊಡನೆ ಮೈಮನಗಳೆರಡೂ ಮರೆತುಹೋಗುವವು. ಆ ಭಾಷ್ಯದ ನೆನಪು ಬಂದೊಡನೆಯೇ ಹೀಗಾಗುವದು ಸಹಜ. ಆದ್ದರಿಂದ ನೀವಿಲ್ಲಿ ಎಚ್ಚರಿಸಿದ್ದು ಒಳ್ಳೆಯದಾಯಿತು. ಈಗ ಕೇಳಿ, ಮೊದಲು ಭಾವನೆಗಳ ವಿಶ್ಲೇಷಣೆಗೆ ಒಂದು ಉದಾಹರಣೆಯನ್ನು ಹೇಳುತ್ತೇವೆ.

ಗೀತೆಯ ೫–೨೩ರಲ್ಲಿ ''ಬದುಕಿರುವಾಗಲೇ ಕಾಮಕ್ರೋಧಗಳಿಂದಾಗುವ ವೇಗಗಳನ್ನು ಯಾವನು ಜಯಿಸಬಲ್ಲನೋ ಅವನೇ ಯೋಗಿಯು, ಅವನೇ ಸುಖಿಯು'' ಎಂದು ಹೇಳಲಾಗಿದೆ. ಇಲ್ಲಿ ಕಾಮ ಎಂದರೇನು ? ಕ್ರೋಧ ಎಂದರೇನು ? ಅವುಗಳ ವೇಗ ಎಂದರೇನು ?– ಎಂಬುದರ ವಿಶ್ಲೇಷಣೆಯು ಮನನೀಯವಾಗಿದೆ.

**ಪ್ರಶ್ನೆ :– ಕಾಮ ಎಂದರೆ ಇಚ್ಛೆ, ಕ್ರೋಧ ಎಂದರೆ ಕೋಪ ಅಥವಾ ಸಿಟ್ಟು. ಇದರಲ್ಲೇನು ವಿಶ್ಲೇಷಣೆ ?**

ಉತ್ತರ :– ನೀವು ಹೇಳಿದ್ದು ಸಾಮಾನ್ಯವಾದ ಅರ್ಥ, ವಿಶ್ಲೇಷಣವಲ್ಲ. ಕಾಮವೆಂದರೆ ''ತನಗೆ ಇಷ್ಟವಾದ ಸುಖಕ್ಕೆ ಕಾರಣವಾಗಿ ಹಿಂದೆ ಅನುಭವಿಸಿರುವ ವಿಷಯವು ಇಂದ್ರಿಯಕ್ಕೆ ಗೋಚರವಾದರೆ, ಅಥವಾ ಅದರ ವಿಷಯವು ಕಿವಿಗೆ ಬಿದ್ದರೆ, ಅಥವಾ ಅದು ನೆನಪಿಗೆ ಬಂದರೆ, ಯಾವ ಬಯಕೆಗೆ ಹಂಬಲಿಕೆಯು ಉಂಟಾಗುವದೋ ಅದು ಕಾಮವು.'' ಕ್ರೋಧವೆಂದರೆ– ''ತನಗೆ ಬೇಡದ ದುಃಖಕ್ಕೆ ಕಾರಣವಾದ ವಸ್ತುಗಳು ಕಣ್ಣಿಗೆ ಬಿದ್ದರೆ, ಕಿವಿಗೆ ಕೇಳಿದರೆ, ಅಥವಾ ನೆನಪಿಗೆ ಬಂದರೆ

ಅವುಗಳಲ್ಲಿ ಯಾವ ಹಗೆತನವುಂಟಾಗುವದೋ ಅದು ಕ್ರೋಧವು.'' ಇದು ಆ ವೇದನೆಗಳ ವಿಶ್ಲೇಷಣೆ. ಇನ್ನು ಅವುಗಳ ಪರಿಣಾಮವು ದೇಹದ ಮೇಲಾಗುವದನ್ನೇ 'ವೇಗ' ಎಂದು ಕರೆಯುತ್ತಾರೆ. ಕಾಮೋದ್ಭವವೇಗ, ಕ್ರೋಧೋದ್ಭವವೇಗ, ಎಂದು ಅವುಗಳಿಗೆ ಹೆಸರು.

**ಪ್ರಶ್ನೆ :– ಸರಿ, ಈ ಎರಡು ವಿಧದ ವೇಗಗಳನ್ನು ಹೇಗೆ ವರ್ಣಿಸಿದ್ದಾರೆ ?**

ಉತ್ತರ :– ಮೈಕೂದಲು ನಿಮಿರುವದು, ಕಣ್ಣುಗಳು ಅರಳಿಕೊಳ್ಳುವದು, ಮುಖವು ಹಿಗ್ಗುವದು – ಮುಂತಾದ ಗುರುತುಗಳಿಂದ ಗೊತ್ತಾಗುವ ಅಂತಃಕರಣದ ಹೊಯ್ದಾಟವೇ ಕಾಮೋದ್ಭವವೇಗವು. (೨) ಮೈನಡುಗುವದು, ಬೆವರುವದು, ಹಲ್ಲುಕಡಿಯುವದು, ಔಡುಕಚ್ಚುವದು, ಕಣ್ಣುಗಳನ್ನು ಕೆಂಪಗೆ ಮಾಡಿಕೊಳ್ಳುವದು– ಮುಂತಾದ ವಿಕಾರಗಳು ತೋರಿಕೊಳ್ಳುವದೇ ಕ್ರೋಧೋದ್ಭವವೇಗವು– ಎಂದರೆ ಸಿಟ್ಟಿನಿಂದ ಹುಟ್ಟಿದ ವಿಕಾರಗಳು ಎಂದರ್ಥ. ನೋಡಿ ಹೇಗಿದೆ ಭಾವವಿಶ್ಲೇಷಣಾಶೈಲಿ!

**ಪ್ರಶ್ನೆ :– ಬಹಳ ಚೆನ್ನಾಗಿದೆ. ಗೀತಾಭಾಷ್ಯದಲ್ಲಿ ಇನ್ನೂ ಏನೇನು ಸ್ವಾರಸ್ಯಕರವಾದ ಮನೋವಿಶ್ಲೇಷಣೆಗಳಿವೆ ?**

ಉತ್ತರ :– ಅದೇ ಹೇಳಿದೆನಲ್ಲ! ಎಲ್ಲವನ್ನೂ ಹೇಳಲು ಇಲ್ಲಿ ಸಾಧ್ಯವಿಲ್ಲ. ಸ್ಥಿತಪ್ರಜ್ಞನ ಲಕ್ಷಣ (ಅ.೨), ಭಕ್ತನ ಲಕ್ಷಣ (ಅ.೧೨), ಅಮಾನಿತ್ವಾದಿಗುಣಗಳ ವಿವರಣೆ (ಅ.೧೩), ದೈವಾಸುರಸಂಪತ್ತು (ಅ.೧೬), ಸಾತ್ತ್ವಿಕ ರಾಜಸತಾಮಸ ಕರ್ತೃ, ಬುದ್ಧಿ, ಸುಖ– ಮುಂತಾದವುಗಳ ವಿವರ..... ಒಂದೇ ? ಎರಡೆ ? ಗೀತಾಭಾಷ್ಯದ ತುಂಬೆಲ್ಲ ಈ ವಿಷಯಗಳು ವಿಸ್ತಾರವಾಗಿ ಎಲ್ಲೆಂದರಲ್ಲಿ ವಿವರಿಸಲ್ಪಟ್ಟಿವೆ.

ಒಟ್ಟಿನಲ್ಲಿ ಇಹಜೀವನದಲ್ಲಿ ನೆಮ್ಮದಿಯಾಗಿ ಬಾಳಲು ಹಾಗೂ ಪರಮಾರ್ಥ ತತ್ತ್ವದಲ್ಲಿ ನೆಲೆನಿಲ್ಲುವ ಯೋಗ್ಯತೆಯನ್ನು ಪಡೆದು ಜೀವನ್ಮುಕ್ತಿಸುಖವನ್ನನುಭವಿಸಲು ಬೇಕಾಗಿರುವ ಸರ್ವಸಾಧನಗಳನ್ನೂ ಈ ಒಂದೇ ಭಗವದ್ಗೀತೆಯು ತಿಳಿಸಿಕೊಡುತ್ತದೆ. ಆದ್ದರಿಂದ ಗೀತೆ ಮತ್ತು ಗೀತೆಗೆ ಬರೆದಿರುವ ಶ್ರೀಶಂಕರಾಚಾರ್ಯರ ದಿವ್ಯಭಾಷ್ಯದ ಅಧ್ಯಯನ, ಅನುಸರಣೆಗಳು ಎಲ್ಲಾ ಕಾಲದ ಎಲ್ಲಾ ದೇಶದ ಪ್ರತಿಯೊಬ್ಬ ಮಾನವನಿಗೂ ಅತ್ಯಂತಅವಶ್ಯವಾಗಿವೆ.

——————

## ೧೫. ಶ್ರೀಶಂಕರರೂ ಪಾಶ್ಚಾತ್ತ್ಯದರ್ಶನಗಳೂ

ಪ್ರಶ್ನೆ :– ಆಧುನಿಕಪಾಶ್ಚಾತ್ತ್ಯತತ್ತ್ವಜಿಜ್ಞಾಸುಗಳಲ್ಲಿ ಕ್ಯಾಂಟ್ (Kant) ಎಂಬಾತನು ''ಕಾಲದೇಶಗಳೆಂಬ ಭಾವಗಳಿಂದೊಡಗೂಡಿಯೇ ವಸ್ತುಗಳು ಕಂಡು ಬರುವವು. ಮನಸ್ಸಿಗೆ ಈ ಕಾಲದೇಶಭಾವನೆಗಳನ್ನು ಬಿಟ್ಟು ವಿಚಾರಿಸಲು

ಆಗುವದೇ ಇಲ್ಲ. ಇವೆರಡೂ ಮನಸ್ಸಿನ ಪ್ರತ್ಯಯಗಳು. ಇವುಗಳನ್ನು ಬಿಟ್ಟರೆ ಹೊರಗಿನ ವಸ್ತುಗಳು ತಾವೇ ಹೇಗಿವೆಯೋ ಹಾಗೆ ಹೇಳುವದಕ್ಕೆ ಬರುವದಿಲ್ಲ'' ಎಂದಿದ್ದಾನೆ. ಶ್ರೀಶಂಕರರ ಭಾಷ್ಯದಲ್ಲಿ ಕಾಲದೇಶಭಾವಗಳ ವಿಚಾರವು ಎಲ್ಲಿಯಾದರೂ ಬಂದಿದೆಯೆ ? ಬಂದಿದ್ದರೆ ಅವುಗಳ ಬಗ್ಗೆ ಅವರ ವಿಚಾರಸರಣಿಯೇನು ?

ಉತ್ತರ :– ಒಳ್ಳೆಯ ಪ್ರಶ್ನೆಮಾಡಿದಿರಿ. ಆಚಾರ್ಯರು ಅಥವಾ ವೇದಾಂತಿಗಳ ಪ್ರಕಾರ ದೇಶಕಾಲಗಳು ಆತ್ಮನಿಂದಲೇ ಹುಟ್ಟುತ್ತವೆ. ''ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಮ್ಭೂತಃ।'' (ತೈ.೨) ಮುಂತಾದ ವಾಕ್ಯಗಳಿಂದ ನಮ್ಮೆಲ್ಲರ ಸ್ವರೂಪವೇ ಆದ ಪರಮಾರ್ಥತತ್ತ್ವವು ದೇಶಕಾಲಾದಿಭಾವಗಳನ್ನು ಮೀರಿದ್ದೆಂದೇ ಉಪನಿಷತ್ತುಗಳಲ್ಲಿ ಉಪದೇಶಿಸಿದೆ. ಅನೇಕತ್ವ, ದ್ವಯ– ಎಂಬುದಕ್ಕೆ ದೇಶಕಾಲಗಳ ಅಪೇಕ್ಷೆ ಇದ್ದೇ ಇರಬೇಕು. ಆದ್ದರಿಂದಲೇ ಕಾಲದೇಶಾದಿಭಾವಗಳನ್ನು ಮೀರಿದ ಆತ್ಮತತ್ತ್ವವು ಅದ್ವಯವು ಎಂದು ಉಪನಿಷತ್ತುಗಳು ಯುಕ್ತಿಯುಕ್ತವಾಗಿಯೇ ಪ್ರತಿಪಾದಿಸಿರುತ್ತವೆ. (ತೈ.೨–೧ರಲ್ಲಿ 'ಅನಂತ' ಶಬ್ದದ ವಿವರಣೆಯನ್ನು ನೋಡಿ) ಸೂ.ಭಾ. ೨–೩–೬ರಲ್ಲಿ ಆಕಾಶಕ್ಕೂ ಉತ್ಪತ್ತಿಯುಂಟೆಂಬುದನ್ನು ವಿವರಿಸಿದ್ದಾರೆ. ೨–೩–೭ರಲ್ಲಿ 'ಏತೇನ ದಿಕ್ಕಾಲಮನಃಪರಮಾಣ್ವಾದೀನಾಂ ಕಾರ್ಯತ್ವಂ ವ್ಯಾಖ್ಯಾತಮ್' ಎಂಬ ವಾಕ್ಯದಿಂದ ದೇಶ, ಕಾಲ, ಮನಸ್ಸು, ಪರಮಾಣು– ಮುಂತಾದವುಗಳೆಲ್ಲವೂ ಕಾರ್ಯಗಳೇ ಎಂದೂ ಸ್ಪಷ್ಟಪಡಿಸಿದ್ದಾರೆ.

**ಪ್ರಶ್ನೆ :– ಇಲ್ಲಿ ಕಾಲಾಕಾಶಾದಿಗಳು ಕಾರ್ಯ, ಬ್ರಹ್ಮವು ಕಾರಣ ಎಂದಂತಾಗಿದೆ. ಕಾಲವೇ ಇಲ್ಲದಾಗ ಬ್ರಹ್ಮಕ್ಕೂ ಆಕಾಶಾದಿಗಳಿಗೂ ಕಾರ್ಯಕಾರಣಭಾವವು ಹೇಗೆ ಬಂದಿತು ?**

ಉತ್ತರ :– ಶಾಂಕರವೇದಾಂತದಲ್ಲಿ 'ಕಾರಣ' ಎಂದರೆ ತೋರುವವದರ ಪರಮಾರ್ಥ ಎಂದರ್ಥ. 'ಕಾರ್ಯ' ಎಂದರೆ ಪರಮಾರ್ಥವನ್ನರಿಯದಿರುವಾಗ ಅಜ್ಞರಿಗೆ ಇದೆ ಎಂದು ತೋರುವ ಹುಸಿತೋರಿಕೆ ಎಂದರ್ಥ. ಇದನ್ನು ಸೂ.ಭಾ.೨–೧–೧೪ರಲ್ಲಿ ಚೆನ್ನಾಗಿ ಪ್ರತಿಪಾದಿಸಿದ್ದಾರೆ. ನೋಡಿ ತಿಳಿದುಕೊಳ್ಳಬಹುದು.

ಲೋಕದಲ್ಲಿ ಕಾರಣವೆಂಬುದು ನಿಯತವಾಗಿ ಪೂರ್ವಕಾಲದಲ್ಲಿದ್ದು ಕಾರ್ಯವು ಉತ್ತರಕಾಲದಲ್ಲಿ ಇರುತ್ತದೆ. ಉದಾಹರಣೆಗೆ ಮೊದಲು ತಂದೆ, ಆಮೇಲೆ ಮಗ ; ಮೊದಲು ಮಣ್ಣು ಅನಂತರ ಗಡಿಗೆ ಹೀಗಿರುತ್ತದೆ. ಆದರೆ ಇಲ್ಲಿ ಅಂಥ ಕಾರ್ಯಕಾರಣಭಾವವೇನೂ (Causation-Casuality) ಇರುವದಿಲ್ಲ. ಕಾರ್ಯಕಾರಣ ಎಂಬ ಶಬ್ದ ಮಾತ್ರ ಉಂಟು.

ಒಟ್ಟಿನಲ್ಲಿ ಪರಮಾರ್ಥತತ್ತ್ವವು ಕಾಲದೇಶಾದಿದ್ವೈತವನ್ನೆಲ್ಲ ಮೀರಿರುತ್ತದೆ. ಕಾಲದೇಶಾದಿದ್ವೈತವು ಪರಮಾರ್ಥವನ್ನರಿಯದ್ದರಿಂದಲೇ ನಿಜವಾಗಿ ಇರುವಂತೆ ಭಾಸವಾಗುತ್ತದೆ. ಹೀಗೆ ಭಾಸವಾಗುವ ಕಾಲದೇಶಾದಿಭಾವಸಮೇತವಾದ ಈ ವಿಶ್ವದ ಸಾರವೇ ಪರಮಾರ್ಥವಾದ ಅದ್ವಯತತ್ತ್ವವಾಗಿದೆ– ಎಂಬುದು ಆಚಾರ್ಯರ ಉಪದೇಶವು. ''ಹೊರಗಿನ ವಸ್ತುಗಳು ಕಾಲದೇಶಾದಿಕಲ್ಪನೆಗಳನ್ನು ಬಿಟ್ಟು ಹೇಗಿವೆಯೋ ತಿಳಿಯದು'' ಎಂಬ ಕ್ಯಾಂಟನ ಅಶಕ್ತಿಸೂಚಕಸಿದ್ಧಾಂತಕ್ಕೂ ''ಅದ್ವಯವಾದ ಪರಮಾರ್ಥತತ್ತ್ವವೇ ಇದೆಲ್ಲವೂ ಆಗಿದೆ, ಇದೇ ಕೇವಲ ಹುಸಿತೋರಿಕೆ, ಅದ್ವಯ ತತ್ತ್ವವೇ ಪರಮಾರ್ಥಸತ್ಯ'' ಎಂದು ಖಂಡಿತವಾಗಿ ತಿಳಿಸುವ ಆಚಾರ್ಯರ ಈ ಉಪದೇಶಕ್ಕೂ ಅಜಗಜಾಂತರವ್ಯತ್ಯಾಸವಿದೆ ಎಂಬುದು ಮೇಲೆಯೇ ತೋರುತ್ತದೆ.

**ಪ್ರಶ್ನೆ :– ಈ ಅದ್ವಯಪರಮಾರ್ಥತತ್ತ್ವವನ್ನು ಕೇವಲ ಅಂಥದೊಂದು ತತ್ತ್ವವಿರಬೇಕೆಂಬ ಅನುಮಾನ ಹಾಗೂ ಸಂಭಾವನಾಯುಕ್ತಿಗಳ ಬಲದಿಂದ ಮತ್ತು ಶ್ರುತಿಗಳಲ್ಲಿ ಹಾಗೆ ಹೇಳಿದೆ ಎಂಬ ನಂಬಿಕೆಯ ಬಲದಿಂದ ಮಾತ್ರವೇ ಆಚಾರ್ಯರು ಸಿದ್ಧಪಡಿಸಿರುವರೇನು ?**

ಉತ್ತರ :– ಇಲ್ಲ. ಹಿಂದೆ ತರ್ಕಪ್ರಕರಣದಲ್ಲಿ ಹೇಳಿದಂತೆ ಶ್ರೌತತರ್ಕವನ್ನೇ ಆಚಾರ್ಯರು ತಮ್ಮ ಉಪದೇಶಕ್ಕೆ ಸಾಧನವಾಗಿಟ್ಟುಕೊಂಡಿರುವದರಿಂದ ಈ ಸಿದ್ಧಾಂತವನ್ನು ಸಾರ್ವತ್ರಿಕಪೂರ್ಣಾನುಭವದ ಆಧಾರದಿಂದ ಯೋಗ್ಯತೆಯುಳ್ಳ ಯಾರಾದರೂ ಮನಗಾಣಬಹುದಾಗಿದೆ.

**ಪ್ರಶ್ನೆ :– ಹಾಗಾದರೆ ಸ್ವಲ್ಪದರಲ್ಲಿಯೇ ಸಾರ್ವತ್ರಿಕಪೂರ್ಣಾನುಭವದ ಆಧಾರದಿಂದ ನಡೆಸಿದ ವಿವೇಚನೆಯ ಝಳುಕೊಂದನ್ನು ತೋರಿಸುವಿರಾ ?**

ಉತ್ತರ :– ಆಗಲಿ. ''ಎಚ್ಚರದ ಕಾಲದೇಶಾದಿಗಳು ಎಚ್ಚರಕ್ಕೇ ಸೇರಿವೆ ; ಕನಸಿನಲ್ಲಿ ಕಾಣುವ ಕಾಲದೇಶಾದಿಗಳು ಕನಸಿನ ಅವಸ್ಥೆಗೇ ಸೇರಿವೆ. ಎಚ್ಚರದ ದೃಶ್ಯರಾಶಿಯು ಇರುವಾಗ ಕನಸಿನ ದೃಶ್ಯಗಳಿರುವದಿಲ್ಲ ; ಕನಸಿನ ದೃಶ್ಯವಿರುವಾಗ ಎಚ್ಚರದ ದೃಶ್ಯಗಳಿಲ್ಲ. ಗಾಢನಿದ್ರೆಯಲ್ಲಿ ಇವೆರಡೂ ದೃಶ್ಯರಾಶಿಗಳಿಲ್ಲದಿರುವದು ನಮ್ಮೆಲ್ಲರ ಅನುಭವವಾಗಿದೆ. ಆದ್ದರಿಂದ ಕಾಲದೇಶಾದಿಭಾವಗಳು ತೋರಿ ಅಡಗುವವುಗಳೂ ಅನುಭವಸ್ವರೂಪವು ಮಾತ್ರ ಇವು ತೋರಿದರೂ ತೋರದಿದ್ದರೂ ಒಂದೇ ಬಗೆಯಾಗಿರತಕ್ಕದ್ದೂ ಆಗಿದೆ.''

ಮೇಲಿನ ಮಾತುಗಳನ್ನು ನಮ್ಮೊಳಗೇ ನಾವು ವಿಚಾರಿಸಿ ಒಳಸರಿದು ನೋಡಿ– ಅಹುದು ಎನ್ನುವಾಗ ಕಾಲ, ದೇಶ, ಮನ, ಬುದ್ಧಿ ಹಾಗೂ ಈಗಿನ 'ನಾನು' ಎಂಬ ಅನಿಸುವಿಕೆಗೂ ಹಿಂದಿರುವ ಅನುಭವಸ್ವರೂಪದ ಬಲದಿಂದಲೇ ಹಾಗೆ ಹೇಳುತ್ತೇವೆ. ''ನೇತಿ ನೇತಿ'' ಎಂಬ ಉಪನಿಷತ್ತಿನ ಬೋಧೆಯನ್ನನುಸರಿಸಿ ಜಿಜ್ಞಾಸುವಿನ ಅಂತಃ

ಕರಣವು ಕಾಲ, ದೇಶ, ಕಾರ್ಯಕಾರಣಾದಿ ಅಪೇಕ್ಷೆಗಳನ್ನು ಹಿಮ್ಮೆಟ್ಟಿ ಯಾವಾಗ ಒಳಸರಿಯುವದೋ ಆಗ ಅದು ಅಖಂಡವಾದ ಆತ್ಮಸ್ವರೂಪದಲ್ಲಿಯೇ ನಿಲುಗಡೆಯನ್ನು ಹೊಂದಿರುವದರಿಂದ ತಿಳಿಯಬೇಕಾದ ಇನ್ನೊಂದಿರದ ಬ್ರಹ್ಮವೇ ತಾನಾಗಿರುವದು ಸಾಧಕನ ಅನುಭವಕ್ಕೆ ಗೋಚರವಾಗುತ್ತದೆ'' ಎಂಬ ಅಭಿಪ್ರಾಯವನ್ನು ಬೃ.೨-೩-೬ರಲ್ಲಿ ಆಚಾರ್ಯರು ಬರೆದಿರುವದನ್ನು ನೋಡಿದರೆ ಈ ಮಾತಿನ ಸತ್ಯತೆಯು ಗೊತ್ತಾಗುತ್ತದೆ. ಹೀಗಿರುವದರಿಂದ ಆಚಾರ್ಯರು ಹೇಳುವ ತತ್ತ್ವವು ಪೂರ್ವಾಪರವಿರೋಧವಿಲ್ಲದಂತೆ ಯುಕ್ತಿಯುಕ್ತವಾಗಿ ಬುದ್ಧಿಯಿಂದ ಕಲ್ಪಿಸಿರುವ ಬರಿಯ ತರ್ಕಪ್ರಧಾನತತ್ತ್ವವಲ್ಲ. ಮತ್ತೇನೆಂದರೆ ಕೇವಲ ಶ್ರುತಿಯ ಉಪದೇಶದ ಬಲದಿಂದ ಮಾತ್ರವೇ ಗೊತ್ತಾಗುವ, ಸಾರ್ವತ್ರಿಕಪೂರ್ಣಾನುಭವದ ಆಧಾರದಿಂದ ನಿರ್ಣಯಿಸಿದ ಸಮಯದಲ್ಲಿಯೇ ಅನುಭವದಲ್ಲಿ ನೆಲೆನಿಲ್ಲುವಂತೆ ಮಾಡುವ ನಿಃಸಂಶಯವಾದ ತತ್ತ್ವವಿಚಾರವದು.

**ಪ್ರಶ್ನೆ :– ಸರಿ, ಸರಿ. ಅಂತೂ ತುಂಬಾ ಗಂಭೀರವಾಗಿದೆ ಈ ತತ್ತ್ವವಿಚಾರದ ಪದ್ಧತಿ. ಇದನ್ನು ವಿಸ್ತರಿಸಿ ತಿಳಿಸಿದರೆ ಉತ್ತಮವಲ್ಲವೆ ?**

ಉತ್ತರ :– ಅಹುದು, ಅದಕ್ಕಾಗಿಯೇ 'ಶಂಕರಸಿದ್ಧಾಂತಸಂಸ್ಮರಣ' ಎಂಬ ಇನ್ನೊಂದು ಗ್ರಂಥದಲ್ಲಿ ಇದನ್ನೆಲ್ಲಾ ವಿಸ್ತರಿಸಿ ಹೇಳಬೇಕೆಂದಿದ್ದೇವೆ. ಇಲ್ಲಿ ಕೇವಲ ದಿಗ್ದರ್ಶನಕ್ಕಾಗಿಯೂ ಶ್ರೀಶಂಕರರ ಮಹತ್ತ್ವವನ್ನು ಮನಗಾಣಿಸುವದಕ್ಕಾಗಿಯೂ ಸಿದ್ಧಾಂತವಿಚಾರಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದೇವೆ.

--------

## ೧೬. ಸಾಪೇಕ್ಷವಾದ

**ಪ್ರಶ್ನೆ :– ಐನ್‌ಸ್ಟೀನ್ (Einstein) ಎಂಬಾತನು ಸಾಪೇಕ್ಷವಾದ (Theory of Relativity)ವನ್ನು ಹೊಸದಾಗಿ ಕಂಡುಹಿಡಿದನೆಂದು ಹೇಳುತ್ತಾರೆ. ಭಾಷ್ಯದಲ್ಲಿ ಇಂಥ ವಿಚಾರವು ಎಲ್ಲಿಯಾದರೂ ಬಂದಿದೆಯೆ ?**

ಉತ್ತರ :– ಬಂದಿದೆ, ಈ ವಿಚಾರಸರಣಿಯು ಹೊಸದೇನಲ್ಲ. ಶ್ರೀಶಂಕರರ ಪರಮಗುರುಗಳಾದ ಗೌಡಪಾದರು 'ದ್ವೈತಪ್ರಪಂಚವು ತೋರುವಾಗ ಚಿತ್ತಕಾಲ, ದ್ವಯಕಾಲ ಎಂದು ಎರಡು ಬಗೆಯಲ್ಲಿ ತೋರಿಕೊಳ್ಳುತ್ತದೆ. ಎಂದು ಈ ಸಾಪೇಕ್ಷವಾದವನ್ನು ವಿವರಿಸಿದ್ದಾರೆ. ಇದನ್ನು ಶ್ರೀಶಂಕರರು ತಮ್ಮ ಭಾಷ್ಯದಲ್ಲಿ ಚೆನ್ನಾಗಿ ವಿವರಿಸಿದ್ದಾರೆ.

**ಪ್ರಶ್ನೆ :– ಚಿತ್ತಕಾಲ ಎಂದರೇನು ?**

ಉತ್ತರ :– ಕನಸಿನಲ್ಲಾಗಲಿ ಎಚ್ಚರದಲ್ಲಾಗಲಿ ದ್ವೈತಪ್ರಪಂಚವು ಕಾಣುವ

ದಷ್ಟೆ ? ಹೀಗೆ ಕಾಣುವಾಗ ನಮ್ಮ ಮನಸ್ಸಿನೊಳಗೆ ಕಲ್ಪನೆಗಳು ಏಳುತ್ತಿದ್ದು ಆಯಾ ಕಲ್ಪನೆಗೆ ತಕ್ಕಂತೆ ಆಯಾ ವಸ್ತುಗಳನ್ನು ಭಾವಿಸಿಕೊಳ್ಳುತ್ತಿರುತ್ತೇವೆ. ಹೀಗೆ ಒಳಗೆ ಭಾವನೆಯ ಕಾಲದಲ್ಲಿ ಮಾತ್ರವೇ ಇರುವಂತೆ ತೋರುವ ವಸ್ತುಗಳಿಗೆ ಚಿತ್ತಕಾಲಗಳೆಂದು ಹೆಸರು.

**ಪ್ರಶ್ನೆ :– ದ್ವಯಕಾಲ ಎಂದರೇನು ?**

ಉತ್ತರ :– ಹೊರಗಡೆ ನಿಜವಾಗಿರುವಂತೆ ಆಯಾ ಅವಸ್ಥೆಯಲ್ಲಿ ತೋರುವ ಹಾಗೂ ಅರಿಯುವ ಜೀವರುಗಳಿಗೆಲ್ಲರಿಗೂ ಸಮಾನವಾಗಿ ಇದೆ ಎಂದು ಕಾಲದೇಶಾದಿ ಭಾವಗಳಿಂದ ಗೊತ್ತಾಗಿ ತೋರುವ ವಸ್ತುಗಳಿಗೆ ದ್ವಯಕಾಲಗಳೆಂದು ಹೆಸರು.

**ಪ್ರಶ್ನೆ :– ಆಗಲಿ, ಇದರಲ್ಲಿ ಸಾಪೇಕ್ಷವಾದವೆಲ್ಲಿ ಬಂತು ?**

ಉತ್ತರ :– ಆಚಾರ್ಯರು ಈ ದ್ವಯಕಾಲಗಳನ್ನು ವಿವರಿಸುವಾಗ 'ಒಂದರ ಅಪೇಕ್ಷೆಯಿಂದ ಇನ್ನೊಂದು ಹೀಗಿದೆಯೆಂದು ತೋರುವ ವಸ್ತುಗಳಿವು' ಎಂದು ಅಲ್ಲಿ ಸಾಪೇಕ್ಷವಾದವನ್ನು ಮಂಡಿಸಿದ್ದಾರೆ.

**ಪ್ರಶ್ನೆ :– ಅವರು ಹೇಳಿರುವ ವಾಕ್ಯಗಳನ್ನೇ ಸ್ವಲ್ಪದರಲ್ಲಿ ವಿವರಿಸಬಾರದೆ ?**

ಉತ್ತರ :– ಕೇಳಿ. ಗೌ.ಕಾ.೨–೧೪ರ ಭಾಷ್ಯದಲ್ಲಿ "**ದ್ವಯಕಾಲಾಶ್ಚ ಭೇದಕಾಲಾಃ ಅನ್ಯೋನ್ಯಪರಿಚ್ಛೇದ್ಯಾಃ ।**" ದ್ವಯಕಾಲಗಳೆಂದರೆ ಭೇದಕಾಲದಲ್ಲಿ ಕಾಣುವ ಪರಸ್ಪರಕಾಲ, ದೇಶಪರಿಚ್ಛಿನ್ನತೆಯ ಅಪೇಕ್ಷೆಯಿಂದ ಕೂಡಿರುವ ಭಾವಗಳು– ಎಂದು ಬರೆದು "ಹಸುವನ್ನು ಕರೆಯುವವರೆಗೆ ಕುಳಿತಿರುತ್ತಾನೆ ; ಕುಳಿತಿರುವವರೆಗೆ ಹಸುವನ್ನು ಕರೆಯುತ್ತಿರುತ್ತಾನೆ" ಎಂಬ ಉದಾಹರಣೆಯಿಂದ ಪರಸ್ಪರಕಾಲ ಪರಿಚ್ಛೇದದ ಸಾಪೇಕ್ಷೆಯನ್ನೂ 'ಅದರಷ್ಟು ಇದು, ಇದರಷ್ಟು ಅದು' ಎಂಬ ಉದಾಹರಣೆಯಿಂದ ಒಂದಕ್ಕೊಂದು ದೇಶಪರಿಚ್ಛೇದದ ಸಾಪೇಕ್ಷೆಯನ್ನೂ ಮನಗಾಣಿಸಿಕೊಟ್ಟಿರುತ್ತಾರೆ.

**ಪ್ರಶ್ನೆ :– ಹಾಗಾದರೆ ಐನ್‌ಸ್ಟೀನನ ವಾದಕ್ಕೂ ಇದಕ್ಕೂ ಹೆಚ್ಚುಕಡಿಮೆಯೇನು ?**

ಉತ್ತರ :– ವ್ಯವಹಾರವೆಲ್ಲವೂ ಸಾಪೇಕ್ಷವಾಗಿದೆ. ನಿರಪೇಕ್ಷವಾದ ವಸ್ತುವನ್ನಾಗಲಿ ಭಾವನೆಗಳನ್ನಾಗಲಿ ಕಲ್ಪಿಸಿಕೊಳ್ಳುವದಕ್ಕೇ ಆಗುವದಿಲ್ಲ. ಆದ್ದರಿಂದ ನಿರಪೇಕ್ಷವಾದ ಪರಮಾರ್ಥವು ಇಂಥದೇ ಎಂದು ಹೇಳಲು ಬರುವದಿಲ್ಲ; ಅದು ಇರುವದೆಂದು ಊಹಿಸುವದಕ್ಕೂ ಆಗುವದಿಲ್ಲ ಎಂಬುದು ಐನ್‌ಸ್ಟೀನನ ವಾದದ ಒಟ್ಟುಸಾರಾಂಶ.

**ಪ್ರಶ್ನೆ :– ಮತ್ತೆ ಶಂಕರರ ಉಪದೇಶದ ಸಾರವೇನು ?**

ಉತ್ತರ :– ದ್ವೈತವು ಹೊರತೋರಿಕೊಳ್ಳುವಾಗ ಚಿತ್ತಕಾಲದ ವಸ್ತುಗಳು

ಭಾವನಾಮಾತ್ರವಾಗಿಯೂ ದ್ವಯಕಾಲದ ವಸ್ತುಗಳು ಸಾಪೇಕ್ಷಭಾವದಿಂದಲೂ ತೋರಿ ಅಡಗುತ್ತಿರುತ್ತವೆ. ಆದರೆ ಅನುಭವರೂಪವಾದ ಪರಮಾರ್ಥವು ನಿತ್ಯನಿರಪೇಕ್ಷವಾದ ಅದ್ವಯತತ್ತ್ವವಾಗಿದ್ದು ನಮ್ಮೆಲ್ಲರ ಸ್ವರೂಪವೇ ಆಗಿದೆ. ಶ್ರುತಿ ಹಾಗೂ ಶ್ರೋತ್ರಿಯರ ಉಪದೇಶಗಳ ನೆರವಿನಿಂದ ಅಧಿಕಾರಿಯಾದವನು ಈ ಸಾಪೇಕ್ಷಭಾವವನ್ನು ಮೀರಿರುವ, ಇದಕ್ಕಾಧಾರವಾದ, ಇದರ ಲೇಪವೇ ಇಲ್ಲದ ನಿತ್ಯನಿರಪೇಕ್ಷವಾದ ಸ್ವರೂಪದಲ್ಲಿ ನೆಲೆನಿಲ್ಲಬಹುದಾಗಿದೆ– ಎಂಬ ಸಾರ್ವತ್ರಿಕಪೂರ್ಣಾನುಭವದ ಆಧಾರದಿಂದ ತಿಳಿಸಿದ ನಿಃಸಂಶಯವಾದ ಉಪದೇಶವೇ ಶ್ರೀಶಂಕರರ ಬೋಧದ ಸಾರ ವಾಗಿದೆ.

ಒಟ್ಟಿನಲ್ಲಿ ಅನುಭವಪೂರ್ಣವಾದ ಶ್ರೀಶಂಕರರ ಉಪದೇಶದಲ್ಲಿ ಈಗಿನ ತರ್ಕಪ್ರಧಾನವಾದ ಸಿದ್ಧಾಂತಗಳೆಲ್ಲವೂ ಅಡಕವಾಗಿರುವವಲ್ಲದೆ ಅದನ್ನೆಲ್ಲ ಮೀರಿದ ಪರಮಾರ್ಥವನ್ನು ತಿಳಿಸಿಕೊಡುವದೇ ಆ ಉಪದೇಶದ ವೈಶಿಷ್ಟ್ಯವಾಗಿದೆ.

**ಪ್ರಶ್ನೆ :– ಆನೆಯ ಹೆಜ್ಜೆಯಲ್ಲಿ ಎಲ್ಲಾ ಪ್ರಾಣಿಗಳ ಹೆಜ್ಜೆಗಳೂ ಮುಚ್ಚಿ ಹೋಗುವಂತೆ ಆಚಾರ್ಯರ ಉಪದೇಶದಲ್ಲಿ ಮಿಕ್ಕೆಲ್ಲ ಉಪದೇಶಗಳೂ ಸೇರಿಹೋಗುವವೆಂದಾಯಿತಲ್ಲವೆ ?**

ಉತ್ತರ :– ಹೌದು, ಶ್ರೀಶಂಕರರ ದಿವ್ಯೋಪದೇಶವು ಅದ್ವಯವಾದ ಬ್ರಹ್ಮತತ್ತ್ವದಂತೆ ಅದ್ವಿತೀಯವಾಗಿದೆ. ಹಾಗೂ ಮಿಕ್ಕೆಲ್ಲವನ್ನೂ ವ್ಯಾಪಿಸಿ ಅವುಗಳನ್ನೂ ಮೀರಿ ನಿಲ್ಲುತ್ತದೆ. ಆದ್ದರಿಂದ ಅವರೊಬ್ಬರೇ ಅದ್ವಿತೀಯರಾದ ಆಚಾರ್ಯರು, ಜಗದ್ಗುರುಗಳು ಎನ್ನಬಹುದು.

**ಪ್ರಶ್ನೆ :– ನಿಲ್ಲಿ, ನಿಲ್ಲಿ–ಸ್ವಾಮಿ. ಶಂಕರರೊಬ್ಬರೇ ಈ ರೀತಿಯ ಪರಮಾರ್ಥತತ್ತ್ವವನ್ನು ಹೇಳುವವರೆಂದಿರಲ್ಲ ! ಆ ಮಾತು ಸಮಂಜಸವಲ್ಲ. ಏಕೆಂದರೆ ಸ್ಪೈನೋಸಾ (Spinoza) ಎಂಬ ಪಾಶ್ಚಾತ್ಯತತ್ತ್ವಶಾಸ್ತ್ರಜ್ಞನೂ ಇದೇ ರೀತಿಯಲ್ಲಿ ಹೇಳುವನೆಂದು ಕೇಳಬರುತ್ತದೆಯಲ್ಲ !**

ಉತ್ತರ :– ಹೌದು, ಹೌದು. ಪರಮಾರ್ಥವು ಅದ್ವಿತೀಯವಾಗಿದೆ. ಅದೇ ಸಮಗ್ರವಿಶ್ವರೂಪದಿಂದಲೂ ತೋರುತ್ತಿದೆ, ಅದು ಮನಸ್ಸಿನಲ್ಲಿ ಮಾರು ಹೊಳೆಯುತ್ತದೆ– ಮುಂತಾದ ಮಾತುಗಳನ್ನು ಸ್ಪೈನೋಸನೂ ಹೇಳಿದ್ದಾನೆ ಎಂಬುದು ನಿಜವೇ.

**ಪ್ರಶ್ನೆ :– ಹಾಗಾದರೆ ಆಚಾರ್ಯರೇ ತತ್ತ್ವನಿರೂಪಣೆಯಲ್ಲಿ ಅದ್ವಿತೀಯರು ಎಂಬ ಮಾತಿಗೆ ಬೆಲೆಯೆಲ್ಲಿ ಬಂತು ?**

ಉತ್ತರ :– ಶ್ರೀಶಂಕರರ ಉಪದೇಶಕ್ಕೆ ಒಂದು ಅದ್ವಿತೀಯಸ್ಥಾನವಿದ್ದೇ ಇದೆ. ಏಕೆಂದರೆ ಸ್ಪೈನೋಸನು ಹೇಗೋ ಈ ತತ್ತ್ವವನ್ನು ಮನಗಂಡು ನಿರೂಪಿಸಿರುವನಾದರೂ ಅದ್ವಿತೀಯತತ್ತ್ವವೇ ನಾನಾಬಗೆಯಾಗಿ ತೋರುವದೆಂಬುದಕ್ಕೆ ಆಧಾರ

ವೇನು ? ಪರಮಾರ್ಥವು ಅದ್ವಯವೆಂಬುದನ್ನು ಹೇಗೆ ನಂಬಬೇಕು ? ಎಂಬುದಕ್ಕೆ ಸಾರ್ವತ್ರಿಕಾನುಭವದ ಆಧಾರವನ್ನಾಗಲಿ ಅನುಭವಾಂಗವಾದ ಯುಕ್ತಿಗಳನ್ನಾಗಲಿ ಸ್ಫುಟಗೊಳಿಸಿರುವದಿಲ್ಲ. ಈ ಕಾರಣದಿಂದಲೇ ''ಇದೂ ಒಂದು ಸ್ಪೈನೋಸನ ವೈಯುಕ್ತಿಕಅಭಿಪ್ರಾಯ'' ಎಂದು ಅನೇಕರು ಎಣಿಸುವಂತಾಗಿದೆ. ಹೀಗೆ ತತ್ತ್ವನಿರೂಪಣೆಗೆ ಅವಶ್ಯವಾಗಿ ಬೇಕಾಗಿರುವ ಸಾರ್ವತ್ರಿಕಾನುಭವದ ಬೆಂಬಲ ಹಾಗೂ ಅನುಭವಾಂಗವಾದ ಯುಕ್ತಿಗಳ ಕೊರತೆಯೇ ಇವನಲ್ಲಿಯ ಮುಖ್ಯದೋಷ ವಾಗಿದೆ.

***ಪ್ರಶ್ನೆ :– ಶ್ರೀಶಂಕರರ ನಿರೂಪಣೆಯಲ್ಲಿಯೂ ಈ ಕೊರತೆ ಇಲ್ಲವೆ ?**

ಉತ್ತರ :– ಇಲ್ಲ. ನಿತ್ಯವೂ ಏಕರೂಪದಿಂದಲೇ ಹೇಳುವ ವೇದವಾಕ್ಯ, ಕಾಲದೇಶಾತೀತವಾದ ಸಾರ್ವತ್ರಿಕಪೂರ್ಣಾನುಭವ, ಅದಕ್ಕೆ ಹೊಂದುಗೆಯಾಗುವ ಶ್ರೌತತರ್ಕರೂಪದ ಯುಕ್ತಿಗಳು, ಸಾಂಪ್ರದಾಯಿಕರ ಉಪದೇಶದ ಆಸರೆ, ವ್ಯಾಕರಣ, ಮೀಮಾಂಸೆ, ನ್ಯಾಯಗಳಿಗೆ ಹೊಂದಿಕೆಯಾಗುವ ನಿರೂಪಣೆ – ಮುಂತಾದ ಶ್ರೇಷ್ಠ ಸಾಮಗ್ರಿಗಳು ಶ್ರೀಶಂಕರರ ಬೋಧದಲ್ಲಿ ತುಂಬಿತುಳುಕುತ್ತಿವೆ. ಲೋಕಾನುಭವವನ್ನು ಅನುವಾದಮಾಡಿಕೊಂಡು, ಸಾಕ್ಷ್ಯನುಭವದಲ್ಲಿ ನಿಲ್ಲಿಸಿ, ಅದ್ವಿತೀಯಾತ್ಮಾನುಭವದಲ್ಲಿ ಸೇರಿಸಿಬಿಡುವ ''ಅಧ್ಯಾರೋಪಾಪವಾದ'' ಎಂಬ ಸಾಂಪ್ರದಾಯಿಕಪ್ರಕ್ರಿಯೆಯೇ ಶ್ರೀಶಂಕರರ ಭಾಷ್ಯದಲ್ಲಿಯ ಅತಿಮುಖ್ಯಪ್ರಕ್ರಿಯೆಯಾಗಿದೆ. ಆದ್ದರಿಂದ ಇವರೇ ಅದ್ವಿತೀಯರಾದ ಆಚಾರ್ಯರೆಂದು ಖಂಡಿತವಾಗಿ ಹೇಳಬಹುದು.

**ಪ್ರಶ್ನೆ :– ಸರಿ, ಸರಿ. ಪಾಶ್ಚಾತ್ಯರಲ್ಲಿ ಮುಖ್ಯರಾದ ಕ್ಯಾಂಟ್, ಐನ್‌ಸ್ಟೀನ್, ಸ್ಪೈನೋಸಾ– ಇವರೇ ಶಂಕರರಿಗಿಂತ ಹಿಂದೆಬಿದ್ದ ಮೇಲೆ ಡೆಕಾರ್ಟೆ, ಹೆಗಲ್– ಮುಂತಾದ ಇನ್ನಿತರರನ್ನು ವಿಮರ್ಶಿಸಬೇಕಾದದ್ದೇ ಇಲ್ಲವೆಂದಾಯಿತಲ್ಲ!**

ಉತ್ತರ :– ಹೌದು. ಸಾಮಾನ್ಯವಾಗಿ ಹೊರಗಣ್ಣಿನ ವ್ಯಾವಹಾರಿಕ ದೃಷ್ಟಿಯನ್ನೇ ಪ್ರಧಾನವಾಗಿಟ್ಟುಕೊಂಡು ವಿಚಾರಮಾಡುವ ಪಾಶ್ಚಾತ್ಯರ ಪದ್ಧತಿಗೂ ವೇದಾಂತಗಳು ತಿಳಿಸುವ ಒಳನೋಟದ ಸಾಕ್ಷ್ಯನುಭವದ ದೃಷ್ಟಿಯನ್ನಿಟ್ಟುಕೊಂಡು ಅನುಭವಪರ್ಯಂತವಾಗಿ ನಿರ್ಣಯಿಸುವ ಶ್ರೀಶಂಕರಾಚಾರ್ಯರ ಪದ್ಧತಿಗೂ ಪೂರ್ವಪಶ್ಚಿಮಗಳಂತೆಯೇ ದಿಕ್ಕೇ ಬೇರಾಗುತ್ತದೆ. ಈ ಕಾರಣದಿಂದಲೇ ಪಾಶ್ಚಾತ್ಯ ತತ್ತ್ವಜ್ಞರು ಹಾಗೂ ಭೌತಿಕಶಾಸ್ತ್ರತಜ್ಞರು ಇವರುಗಳಿಗೆ ಎಂದೂ ನಿರ್ವಿವಾದವಾದ ಪರಮಾರ್ಥತತ್ತ್ವವು ತಿಳಿಯಲಾರದಾಗಿರುತ್ತದೆ. ಈ ಬಗ್ಗೆ ಸಂಕ್ಷಿಪ್ತವಾಗಿ ತಿಳಿಯಬೇಕೆನ್ನುವವರು ಹೊಳೆನರಸೀಪುರದ ಕಾರ್ಯಾಲಯದಲ್ಲಿ ಪ್ರಕಟವಾಗಿರುವ 'ಪರಿಪೂರ್ಣದರ್ಶನ' ಎಂಬ ಚಿಕ್ಕ ಪುಸ್ತಕವನ್ನೂ 'ಜೀವಂತವೇದಾಂತ' ಎಂಬ ಗ್ರಂಥವನ್ನೂ ನೋಡಬೇಕು.

## ೧೭. ವ್ಯಕ್ತಿಚಿತ್ರಣ

**ಪ್ರಶ್ನೆ :– ಆಚಾರ್ಯರ ಕಾಲವು ಯಾವದು ?**

ಉತ್ತರ :– ಭಾಷ್ಯಗಳಲ್ಲಿ ಜಯಸಿಂಹ, ಪೂರ್ಣವರ್ಮ, ಕೃಷ್ಣಗುಪ್ತ-ಮುಂತಾದ ರಾಜರುಗಳ ಹೆಸರುಗಳನ್ನೂ ಸ್ರುಘ್ನ, ಮಥುರಾ, ಪಾಟಲಿಪುತ್ರ-ಮುಂತಾದ ಊರುಗಳ ಹೆಸರನ್ನೂ ಆಚಾರ್ಯರು ಉಲ್ಲೇಖಿಸಿದ್ದಾರೆ. ಇವುಗಳಿಂದ ಊಹಿಸಲಾಗಿ ಚಂದ್ರಗುಪ್ತಮೌರ್ಯರ ಅನಂತರ ಆಚಾರ್ಯರು ಆಗಿ ಹೋಗಿರಬೇಕೆಂದು ತೋರುತ್ತದೆ. ಅಂತೂ ಕ್ರಿಸ್ತಶಕ ೫ ರಿಂದ ೮ನೆಯ ಶತಮಾನದೊಳಗಾಗಿ ಇವರ ಕಾಲವನ್ನಿಟ್ಟುಕೊಳ್ಳಬಹುದಾಗಿದೆ. ಖಚಿತವಾಗಿ ತಮ್ಮ ಕಾಲದ ಬಗ್ಗೆ ಅವರು ಎಲ್ಲಿಯೂ ಹೇಳಿಕೊಂಡಿಲ್ಲವಾದ್ದರಿಂದ ಕೇವಲ ಭಾಷ್ಯಾಧಾರದಿಂದಲೇ ಆಚಾರ್ಯರ ಕಾಲವನ್ನು ನಿರ್ಣಯಿಸುವದು ಕಷ್ಟವಾಗಿದೆ.

**ಪ್ರಶ್ನೆ :– ಆಚಾರ್ಯರು ಶಿವಾರಾಧಕರೆ ?**

ಉತ್ತರ :– (೧) ಭಾಷ್ಯದಲ್ಲಿ "**ಯಥಾ ಸಾಲಗ್ರಾಮೇ ವಿಷ್ಣುಬುದ್ಧಿಃ**" ಎಂಬ ದೃಷ್ಟಾಂತವನ್ನು ಸುಮಾರು ಇಪ್ಪತ್ತುಸಲ ಕೊಟ್ಟಿದ್ದಾರೆ. ಆದರೆ ಎಲ್ಲೂ "**ಬಾಣೇ** ಶಿವದೃಷ್ಟಿಃ" ಎಂಬ ದೃಷ್ಟಾಂತವು ಕಂಡುಬರುವದಿಲ್ಲ. (೨) "**ನ ತು ಇದಂ ವೈಷ್ಣವಂ ಮತಂ, ನ ತು ಇದಂ ಭಾಗವತಂ ಮತಂ**" ಎಂದು ಪರಮತವನ್ನು ದೂಷಣೆ ಮಾಡುವಾಗ ತಮ್ಮ ಮತವನ್ನು ವೈಷ್ಣವ, ಭಾಗವತಾದಿವಿಶೇಷಣಗಳಿಂದ ಅಲ್ಲಲ್ಲಿ ಉಲ್ಲೇಖಿಸಿದ್ದಾರೆ. (೩) "**ಸ ಆದಿಕರ್ತಾ ನಾರಾಯಣಃ ಭಗವಾನ್ ವಾಸುದೇವಃ**" ಎಂದು ಭಕ್ತಿಯಿಂದ ಬರೆದಿರುವರಲ್ಲದೆ ಭಾರತದಲ್ಲಿಯ ನಾರಾಯಣೀಯದ ಶ್ಲೋಕಗಳನ್ನೂ ಅಲ್ಲಲ್ಲಿ ಉದಾಹರಿಸಿದ್ದಾರೆ. ಆದ್ದರಿಂದ ಆಚಾರ್ಯರು ಶುದ್ಧವಿಷ್ಣುಭಕ್ತರು, ನಾರಾಯಣನ ಆರಾಧಕರು. ಇಂದಿಗೂ ಅವರ ಸಂಪ್ರದಾಯದ ಯತಿಗಳಿಗೆ ಯಾರಾದರೂ ನಮಸ್ಕರಿಸಿದರೆ 'ನಾರಾಯಣ' ಎಂದೇ ಪ್ರತಿವಚನವನ್ನು ಹೇಳುವ ಪದ್ಧತಿಯನ್ನು ನೋಡಿದರೆ ಆಚಾರ್ಯರು ವಿಷ್ಣುಭಕ್ತರೇ ಆಗಿದ್ದರೆಂಬುದರಲ್ಲಿ ಸಂಶಯವಿರುವದಿಲ್ಲ. "ಯಾನ್ತಿ ಮದ್ಯಾಜಿನಃ ಮದ್ಯಜನಶೀಲಾಃ ವೈಷ್ಣವಾ ಅಪಿ ಮಾಮೇವ" (ಗೀ.೯–೨೫) ಎಂಬಲ್ಲಿಯೂ 'ವೈಷ್ಣವಾಃ' ಎಂದು ಬರೆದಿದ್ದಾರೆ.

**ಪ್ರಶ್ನೆ :– ಹಾಗಾದರೆ ಶಿವದ್ವೇಷಿಗಳೆ ?**

ಉತ್ತರ :– ಅಲ್ಲ. ಕೇನೋಪನಿಷತ್ತಿನ ಪದಭಾಷ್ಯದಲ್ಲಿ "**ಹೈಮವತೀಂ ಹೇಮಕೃತಾಭರಣವತೀಮಿವ ಬಹುಶೋಭಮಾನಾಮಿತ್ಯರ್ಥಃ । ಅಥವಾ ಉಮೈವ ಹಿಮವತೋ ದುಹಿತಾ ಹೈಮವತೀ ನಿತ್ಯಮೇವ ಸರ್ವಜ್ಞೇನೇಶ್ವರೇಣ ಸಹ ವರ್ತತ ಇತಿ ಜ್ಞಾತುಂ ಸಮರ್ಥಾ ಇತಿ ಕೃತ್ವಾ ತಾಮ್ ಉಪಜಗಾಮ** ।" ಎಂದು ಬರೆದು "ಹಿಮವಂತನ ಮಗಳಾದ ಉಮೆಯೇ ಸರ್ವಜ್ಞನಾದ ಈಶ್ವರನೊಡನೆ ಯಾವಾಗಲೂ

ಇರುವಳಾದ್ದರಿಂದ ಆತನ ಸ್ವರೂಪವನ್ನು ಆಕೆಯೇ ಬಲ್ಲಳು– ಎಂದು ಇಂದ್ರನು ಆಕೆಯ ಬಳಿಗೆ ಬಂದನು'' ಎಂಬ ಅಭಿಪ್ರಾಯವನ್ನು ಹೊರಗೆಡಹಿದ್ದಾರೆ. ಆದ್ದರಿಂದ ಆಚಾರ್ಯರು ಹರಿಹರಭೇದವಿಲ್ಲದ ಅದ್ವೈತಿಗಳು, ಅವರ ಆರಾಧ್ಯದೇವತೆ ವಿಷ್ಣು– ಎಂಬುದಾಗಿ ಭಾಷ್ಯಗಳಿಂದ ತಿಳಿದುಬರುತ್ತದೆ.

**ಪ್ರಶ್ನೆ :– ಹಾಗಾದರೆ ಆಚಾರ್ಯರ ಪರಂಪರೆಯಲ್ಲಿ ಚಂದ್ರಮೌಳೀಶ್ವರ ಲಿಂಗಪೂಜಾದಿಗಳು ಹೇಗೆ ಬಂದವು ?**

ಉತ್ತರ :– ಆಚಾರ್ಯರ ಅನಂತರ ಪೀಠಕ್ಕೆ ಬಂದ ಅನೇಕ 'ಶಂಕರಾ ಚಾರ್ಯ'ರುಗಳಲ್ಲಿ ಯಾರೋ ಒಬ್ಬರು ಶೈವಪಂಥದವರಾಗಿದ್ದು ಅದರಲ್ಲಿಯ ಕಾಪಾಲಿಕಾದಿ ತಾಮಸ ಉಪಾಸನೆಗಳನ್ನು ಕಿತ್ತುಹಾಕಿ ಶಿವಪೂಜಾಕ್ರಮವನ್ನು ವೇದೋಕ್ತ ವಾಗಿ ಪರಿಷ್ಕರಿಸಿ ಪುನರುದ್ಧರಿಸಿರಬೇಕು. ಇನ್ನಿತರ ಅನೇಕ ಕಾರ್ಯಗಳಂತೆ ಈ ಕಾರ್ಯವೂ ಆದಿಶಂಕರರ ಹೆಸರಿನಲ್ಲಿಯೇ ಪ್ರಸಿದ್ಧವಾಗಿರಬೇಕು. ಹೀಗಾಗಿ ಶೈವೋಪಾಸನೆಯು ಆಚರಣೆಯಲ್ಲಿ ಬಂದಿರಬೇಕೆಂದು ತೋರುತ್ತದೆ.

**ಪ್ರಶ್ನೆ :– ಶಕ್ತಿಯ ಉಪಾಸನೆಯ ಬಗ್ಗೆ ಆಚಾರ್ಯರ ನಿಲುವೇನು ?**

ಉತ್ತರ :– ಗೀತಾಭಾಷ್ಯದಲ್ಲಿ 'ಭೂತಾನಿ ವಿನಾಯಕಮಾತೃಗಣಚತುರ್ಭ ಗಿನ್ಯಾದೀನಿ ಯಾನ್ತಿ ಭೂತೇಜ್ಯಾಃ' (೯–೨೫) ಎಂದೂ 'ಭೂತಗಣಾಂಶ್ಚ ಸಪ್ತಮಾತೃ ಕಾದೀಂಶ್ಚ ಅನ್ಯೇ ಯಜನ್ತೇ ತಾಮಸಾ ಜನಾಃ' (೧೭–೪) ಎಂದೂ ಬರೆದಿರುವದ ರಿಂದ ಆಚಾರ್ಯರು ಗಾಣಾಪತ್ಯಶಾಕ್ತಮತಗಳನ್ನು ತಾಮಸವೆಂದು ಎಣಿಸಿದ್ದರೆಂದು ಊಹಿಸುವದಕ್ಕೆ ಅವಕಾಶವಿದೆ.

**ಪ್ರಶ್ನೆ :– ಹಾಗಾದರೆ ಆಚಾರ್ಯರ ಪರಂಪರೆಯಲ್ಲಿ ಶ್ರೀವಿದ್ಯೆ, ಶ್ರೀಚಕ್ರಪೂಜೆ– ಮುಂತಾದದ್ದು ಹೇಗೆ ಬಂದಿತು ?**

ಉತ್ತರ :– ಹಿಂದೆಯೇ ಹೇಳಿದಂತೆ ಶಾಕ್ತಪಂಥದ ವಾಮಾಚಾರಾದಿ ತಾಮಸಾಚರಣೆಗಳನ್ನು ಕಿತ್ತುಹಾಕಿ ಯಾರೋ ಒಬ್ಬ ಪೀಠಸ್ಥಶಂಕರರು ಅದಕ್ಕೆ ವೈದಿಕ ಸ್ವರೂಪವನ್ನಿತ್ತು ಈ ಪರಂಪರೆಯಲ್ಲಿ ತಂದಿರಬಹುದಾಗಿದೆ.

**ಪ್ರಶ್ನೆ :– ಆಚಾರ್ಯರು ಷಣ್ಮತಸ್ಥಾಪಕರು ಎಂಬ ನಂಬಿಕೆಯು ಅನೇಕ ರಲ್ಲಿದೆಯಲ್ಲ! ಆ ಮತಗಳ ಬಗ್ಗೆ ಭಾಷ್ಯಗಳಲ್ಲಿ ಏನಾದರೂ ಉಲ್ಲೇಖವಿದೆಯೆ?**

ಉತ್ತರ :– ಇಲ್ಲ. ಭಾಷ್ಯಗಳಲ್ಲೆಲ್ಲ ವೇದೋಕ್ತ ಉಪಾಸನೆ, ಯಜ್ಞಾದಿಕರ್ಮ ಗಳು, ಪರಬ್ರಹ್ಮತತ್ತ್ವದ ನಿರೂಪಣೆಯೇ ಕಂಡುಬರುತ್ತದೆ. ವಿಗ್ರಹ (ಪ್ರತಿಮೆ) ಹಾಗೂ ಸಾಲಗ್ರಾಮಗಳಲ್ಲಿ ವಿಷ್ಣುಭಾವನೆಯ ದೃಷ್ಟಾಂತಗಳು ಮಾತ್ರ ಇವೆ. ಶೈವ, ವೈಷ್ಣವ, ಶಾಕ್ತ, ಸೌರ, ಗಾಣಾಪತ್ಯಾದಿ ಯಾವ ಮತಗಳ ಬಗ್ಗೆಯೂ ಯಾವ ನಕಾರಚಕಾರಗಳನ್ನೂ ಆಚಾರ್ಯರು ಬರೆದಿರುವದಿಲ್ಲ.

**ಪ್ರಶ್ನೆ :– ಶಂಕರರು ಅದ್ಭುತಪವಾಡಶಕ್ತಿಯುಳ್ಳವರೆಂದು ಶಂಕರವಿಜಯಗಳಲ್ಲಿ ಹೇಳಿರುವದಕ್ಕೆ ಭಾಷ್ಯದಲ್ಲಿ ಏನಾದರೂ ಆಧಾರವಿದೆಯೆ ?**

ಉತ್ತರ :– ಭಾಷ್ಯದಲ್ಲಿ ಯೋಗಸಿದ್ಧಿಗಳ ಬಗೆಗೆ ಆಚಾರ್ಯರು ಗೌರವದಿಂದಲೇ ಬರೆದಿರುತ್ತಾರಲ್ಲದೆ ಸಾಮಾನ್ಯಜನರನ್ನೇ ಅವರು ಪ್ರತಿನಿಧಿಸಿ ''ನಮ್ಮಂಥವರಿಗೆ ಅವು ಇಲ್ಲವಾದ್ದರಿಂದ ಅಂಥ ಶಕ್ತಿಗಳೇ ಇಲ್ಲವೆನ್ನಬಾರದು'' (ಸೂ.೧–೩–೩೩) ಎಂದೂ ಉಲ್ಲೇಖಿಸಿರುತ್ತಾರೆ. ಆದ್ದರಿಂದ ಪರಮಾರ್ಥ ತತ್ತ್ವವನ್ನು ಸಾರ್ವತ್ರಿಕಪೂರ್ಣಾನುಭವದ ಆಧಾರದಿಂದಲೇ ತಿಳಿಸಲೆತ್ನಿಸುವ ಭಾಷ್ಯಕಾರರಿಗೂ ಈ ಅದ್ಭುತಪವಾಡಗಳಿಗೂ ಯಾವ ಸಂಬಂಧವೂ ಇಲ್ಲವೆಂದೇ ಭಾಷ್ಯಾಭ್ಯಾಸದಿಂದ ನಿರ್ಣಯವಾಗುತ್ತದೆ.

**ಪ್ರಶ್ನೆ :– ಆಚಾರ್ಯರು ಬಾಲಸಂನ್ಯಾಸವನ್ನು ಸ್ವೀಕರಿಸಿದರೆಂದು ಹೇಳುವರಲ್ಲ, ಇದು ನಿಜವೆ ?**

ಉತ್ತರ :– ಭಾಷ್ಯಗಳ ಪ್ರಕಾರ ನಿಜವೇ ಎನ್ನಬಹುದು. ಏಕೆಂದರೆ (೧) ಸಂನ್ಯಾಸವು ವೇದೋಕ್ತ (೨) ಜ್ಞಾನಿಗೆ ಅವಿದ್ಯೆಯಿಲ್ಲ, ಕಾಮವಿಲ್ಲ, ಆದ್ದರಿಂದ ಕರ್ಮಗಳೂ ಇಲ್ಲ. ಹೀಗಾಗಿ ಪಾರಮಹಂಸ್ಯವು ಸಹಜ. (೩) ಮುಮುಕ್ಷುವಿಗೆ ಈ ಸಂನ್ಯಾಸವು ಸಾಧನ ಎಂಬಿದು ಯುಕ್ತಿಯುಕ್ತವೂ ಅನುಭವಸಮ್ಮತವೂ ಆಗಿದ್ದು ಶ್ರುತಿಯೂ ಇದನ್ನೇ ಹೇಳುವದು– ಎಂದು ಸಂನ್ಯಾಸವನ್ನು ಅಲ್ಲಲ್ಲಿ ಸಮರ್ಥಿಸಿದ್ದಾರೆ. ಇದಲ್ಲದೆ ವಿರಕ್ತರಾದವರು ಬ್ರಹ್ಮಚರ್ಯದಿಂದಲೇ ಪಾರಿವ್ರಾಜ್ಯವನ್ನು ಸ್ವೀಕರಿಸಬಹುದೆಂಬುದಕ್ಕೆ ಜಾಬಾಲಶ್ರುತಿಯ ಪ್ರಾಮಾಣ್ಯವನ್ನು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಅನೇಕ ಕಡೆಗಳಲ್ಲಿ ಉದಾಹರಿಸಿಯೂ ಇರುತ್ತಾರೆ. 'ಯೋ ಹ್ಯಾದಿತ ಏವ ಸಂನ್ಯಸ್ಯ' ಮುಂತಾದ (ಗೀ.೨–೫೫) ವಾಕ್ಯಗಳೂ ಇದನ್ನು ಸಮರ್ಥಿಸುತ್ತವೆ. ಆದ್ದರಿಂದ ಶ್ರೀಶಂಕರರು ಬ್ರಹ್ಮಚರ್ಯದಿಂದಲೇ ಸಂನ್ಯಾಸವನ್ನು ಸ್ವೀಕರಿಸಿರಬಹುದೆಂದೂ ಅಂಥ ಅದ್ಭುತವೈರಾಗ್ಯವಂತರೂ ಜ್ಞಾನನಿಷ್ಠರೂ ಆಗಿದ್ದರೆಂದೂ ನಂಬಬಹುದಾಗಿದೆ.

**ಪ್ರಶ್ನೆ :– ಆಚಾರ್ಯರ ಗುರುಶಿಷ್ಯಪರಂಪರೆಯ ಬಗ್ಗೆ ಭಾಷ್ಯಾಭಿಪ್ರಾಯವೇನು ?**

ಉತ್ತರ :– ಮಾಂಡೂಕ್ಯಭಾಷ್ಯದ ಕೊನೆಯಲ್ಲಿ ಕೊಟ್ಟಿರುವ ಮಂಗಳಶ್ಲೋಕವೊಂದರಲ್ಲಿ ಆಚಾರ್ಯರು ಗೌಡಪಾದರನ್ನು ಪರಮಗುರುಗಳೆಂದು ಕರೆದಿದ್ದಾರೆ ; ಮತ್ತು ಪ್ರತಿಯೊಂದು ಭಾಷ್ಯದ ಕೊನೆಯಲ್ಲಿಯೂ ''**ಇತಿ ಶ್ರೀಗೋವಿನ್ದಭಗವತ್ಪೂಜ್ಯಪಾದಶಿಷ್ಯಸ್ಯ ಪರಮಹಂಸಪರಿವ್ರಾಜಕಾಚಾರ್ಯಸ್ಯ ಶ್ರೀಶಂಕರಭಗವತಃ ಕೃತೌ**'' ಎಂಬುದಾಗಿ ಬರೆದುಕೊಂಡಿದ್ದಾರೆ. ಇವುಗಳ ಆಧಾರದಿಂದ ಗೋವಿಂದಭಗವತ್ಪಾ

ದರು ಗುರುಗಳೆಂದೂ ಗೌಡಪಾದರು ಪರಮಗುರುಗಳೆಂದೂ ತಿಳಿಯಲಡ್ಡಿಯಿಲ್ಲ. ಇದಲ್ಲದೆ ಹಿಂದೆಯೇ ಹೇಳಿದಂತೆ ಬಾದರಾಯಣ, ಕಾಶಕೃತ್ಸ್ನ, ದ್ರವಿಡಾಚಾರ್ಯ, ಬ್ರಹ್ಮನಂದಿ, ಉಪವರ್ಷ– ಮುಂತಾದವರ ಪರಂಪರೆಗೆ ಆಚಾರ್ಯರು ಸೇರಿದವರೆನ್ನ ಬಹುದು. ಆಚಾರ್ಯರಿಗೆ ಸಂಪ್ರದಾಯದಲ್ಲಿ ಬಹಳ ಗೌರವಾದರಗಳಿದ್ದವೆಂದು ಅಲ್ಲಲ್ಲಿ ಅವರು ಉದಾಹರಿಸಿರುವ ವಾಕ್ಯಗಳಿಂದಲೇ ತಿಳಿದುಬರುತ್ತದೆ. ಉದಾಹರಣೆಗೆ **"ಅತ್ರೋಕ್ತಂ ವೇದಾನ್ತಾರ್ಥಸಂಪ್ರದಾಯವಿದ್ಭಿರಾಚಾರ್ಯೈಃ"** (ಸೂ.ಭಾ.೨–೧–೯), **"ತಸ್ಮಾತ್ ಅಸಂಪ್ರದಾಯವಿತ್ ಸರ್ವಶಾಸ್ತ್ರವಿದಪಿ ಮೂರ್ಖವದೇವ ಉಪೇಕ್ಷಣೀಯಃ"** (ಗೀ.ಭಾ.೧೩–೨), **"ಅತ್ರ ಚ ಸಂಪ್ರದಾಯವಿದಃ ಆಖ್ಯಾಯಿಕಾಮ್ ಆಚಕ್ಷತೇ"** (ಬೃ.ಭಾ.೨–೧–೨೦) ಇತ್ಯಾದಿ ವಾಕ್ಯಗಳನ್ನು ನೋಡಿ.

**ಪ್ರಶ್ನೆ :– ಆಚಾರ್ಯರ ಅನಂತರ ಬಂದ ಶಿಷ್ಯರ ಬಗ್ಗೆ ನಿಮ್ಮ ಅಭಿಪ್ರಾಯ ವೇನು ?**

ಉತ್ತರ :– ಶ್ರೀಸುರೇಶ್ವರಾಚಾರ್ಯರು ಮಾತ್ರ ಆಚಾರ್ಯರ ಸಾಕ್ಷಾತ್ ಶಿಷ್ಯರೆಂದು ಹೇಳಬಹುದು. ಬೃಹದಾರಣ್ಯಕ ತೈತ್ತಿರೀಯವಾರ್ತಿಕಗಳು, ಹಾಗೂ ನೈಷ್ಕರ್ಮ್ಯಸಿದ್ಧಿ ಎಂಬ ಗ್ರಂಥಗಳಲ್ಲಿ ಅವರು ಹಾಗೆಂದು ಕಂಠೋಕ್ತವಾಗಿ ಹೇಳಿಕೊಂಡೂ ಇದ್ದಾರೆ. ಮಿಕ್ಕ ಪದ್ಮಪಾದಾದಿಶಿಷ್ಯರ ವಿಷಯವು ಅನುಮಾನಾಸ್ಪದವಾಗಿರುವದಲ್ಲದೆ ಭಾಷ್ಯಸಿದ್ಧಾಂತಕ್ಕೆ ವಿರೋಧವಾಗಿಯೂ ಇದ್ದುಕೊಂಡಿರುವದು ಕಂಡುಬರುತ್ತದೆ. ಆದ್ದರಿಂದ ಸುರೇಶ್ವರರೊಬ್ಬರನ್ನೇ ಸಾಕ್ಷಾತ್ ಶಿಷ್ಯರೆಂದು ನಾವು ಗ್ರಹಿಸುತ್ತೇವೆ.

**ಪ್ರಶ್ನೆ :– ಆಚಾರ್ಯರು ಮಠಗಳನ್ನು ಸ್ಥಾಪಿಸಿದರೆಂಬ ಬಗ್ಗೆ ಭಾಷ್ಯದಲ್ಲಿ ಯಾವದಾದರೂ ಆಧಾರವಿದೆಯೆ ?**

ಉತ್ತರ :– ಇಲ್ಲ. ಆ ಬಗ್ಗೆ ಚಕಾರತುಕಾರವನ್ನೂ ಆಚಾರ್ಯರು ಬರೆದಿರುವದಿಲ್ಲ.

**ಪ್ರಶ್ನೆ :– ಈಗ ಇರುವ ಮಠಾಧಿಪತಿಗಳು ಆಚಾರ್ಯರಿಂದಲೇ ಸ್ಥಾಪಿಸಲ್ಪಟ್ಟ ಮಠಗಳಿವು ಎನ್ನುವರಲ್ಲ! ಇದಕ್ಕೆ ಏನು ಆಧಾರ ?**

ಉತ್ತರ :– ಇದನ್ನು ಮಠದವರನ್ನೇ ನೇರಾಗಿ ಕೇಳಿ ತಿಳಿದುಕೊಳ್ಳಿ. ಭಾಷ್ಯದಲ್ಲಿ ಮಾತ್ರ ಇವುಗಳ ವಿಚಾರವಿಲ್ಲ. ನಮ್ಮ ಅಭಿಪ್ರಾಯದಂತೆ ಆಚಾರ್ಯರ ಪರಂಪರೆಯಲ್ಲಿ ಬಂದಿರುವ ಮಹಾತ್ಮರು ಯಾರಾದರೂ ಅವುಗಳನ್ನು ಸ್ಥಾಪನೆಮಾಡಿರಬಹುದೆಂದು ಮಾತ್ರ ಊಹಿಸುತ್ತೇವೆ.

**ಪ್ರಶ್ನೆ :– ಹಾಗಾದರೆ ಶಂಕರದಿಗ್ವಿಜಯಗಳನ್ನು ನೀವು ಒಪ್ಪುವದಿಲ್ಲವೆ ?**

ಉತ್ತರ :– ಭಾಷ್ಯದೃಷ್ಟಿಯಿಂದ ಹೇಳುವದಾದರೆ ಒಪ್ಪಲಾಗುವದಿಲ್ಲ. ಇನ್ನು ಆ ದಿಗ್ವಿಜಯಗಳನ್ನೇ ತೆಗೆದುಕೊಂಡರೂ ಅವೂ ಒಂದೇ ಬಗೆಯಾಗಿ ಹೇಳುವದಿಲ್ಲ. ಆಚಾರ್ಯರ ಆವಿರ್ಭಾವಕಾಲದಿಂದ ಹಿಡಿದು ತಿರೋಧಾನಕಾಲದವರೆಗೂ ಅವುಗಳಲ್ಲಿ ಮತಭೇದವಿದೆ. ಯಾವದೊಂದು ಘಟನೆಯನ್ನೂ ನಿಸ್ಸಂದೇಹವಾಗಿ ನಂಬುವಂತಿಲ್ಲ. ಇದಲ್ಲದೆ ಶಂಕರರನ್ನು ಹೊಗಳಲೆತ್ನಿಸಿ ತೆಗಳಿದಂತಾಗಿರುವ ಸಂದರ್ಭಗಳೂ ಅವುಗಳಲ್ಲಿವೆ.

**ಪ್ರಶ್ನೆ :– ಅಂಥ ಒಂದೆರಡೂ ಉದಾಹರಣೆಗಳನ್ನು ಹೇಳುವಿರಾ ?**

ಉತ್ತರ :– ಆಚಾರ್ಯರು ಶ್ರಾದ್ಧದದಿನ ಮಂಡನಮಿಶ್ರನ ಮನೆಯನ್ನು ಹೊಕ್ಕಾಗ ಮೊದಲು ಅವರಿಬ್ಬರಲ್ಲಿ ನಡೆಯಿತೆಂದು ಕೆಲವು ಶಂಕರವಿಜಯಗಳಲ್ಲಿ ಮಿಶ್ರನ ವರ್ಣಿಸಲಾದ ಹೇಯವಾದ ಸಂಭಾಷಣೆಯು ಮಂಡನಮಿಶ್ರನ ಘನತೆಗೂ ಆಚಾರ್ಯರ ಘನತೆಗೂ ಕುಂದು ತರುವಂತಿದೆ.

ಮತ್ತೊಂದು ಉದಾಹರಣೆಯೆಂದರೆ : ಕಾಶ್ಮೀರದಲ್ಲಿ ಶಾರದೆಯು ''ನೀನು ಪರಕಾಯಪ್ರವೇಶಮಾಡಿ ಕಾಮೋಪಭೋಗಮಾಡಿದ್ದರಿಂದ ಈ ಸರ್ವಜ್ಞಪೀಠವನ್ನೇರಲು ಅನರ್ಹ. ಇದು ಆಜನ್ಮಬ್ರಹ್ಮಚಾರಿಗಳಿಗೇ ಮೀಸಲು'' ಎಂದಳಂತೆ. ಅದಕ್ಕೆ ಆಚಾರ್ಯರು ''ಈ ದೇಹದಿಂದ ನಾನು ಕಾಮೋಪಭೋಗಮಾಡಲಿಲ್ಲವಾದ್ದರಿಂದ ಆ ದೋಷವು ನನಗಿಲ್ಲ'' ಎಂದುತ್ತರಿಸಿದರೆಂದು ಒಂದು ಕಡೆ ವರ್ಣಿಸಿದೆ. ಈ ಮಾತು ನಿಜವಾದಲ್ಲಿ ಹಿಂದಿನ ಜನ್ಮದಲ್ಲಿಯ ಪಾಪಪುಣ್ಯಗಳು ಈ ದೇಹದಿಂದ ನಡೆಯಲಿಲ್ಲವಾದ್ದರಿಂದ ಈಗ ಅವು ನಮಗೆ ಸಂಬಂಧಿಸಬಾರದು; ಇದರಂತೆ ಈಗಿನವು ಮುಂದಕ್ಕೆ ಸಂಬಂಧಿಸಬಾರದು. ಹೀಗಾದರೆ ಆಗ ನಾಸ್ತಿಕವಾದವನ್ನೇ ಆಚಾರ್ಯರು ಅನುಮೋದಿಸಿದರೆಂದಾಗುವದಿಲ್ಲವೆ? ಈ ವಿವೇಕವಿಚಾರಗಳಿಲ್ಲದೆ ಏನೋ ಯುಕ್ತಿಯಿಂದ ಉತ್ತರವಿತ್ತು ಆಚಾರ್ಯರನ್ನು ಹೊಗಳಲು ಹೋಗಿ ಇತರರು (ಶಂಕರರನ್ನು ಕಂಡರಾಗದವರು) ತೆಗಳುವದಕ್ಕೆ ಅವಕಾಶಮಾಡಿಕೊಟ್ಟಿರುವ ಇಂಥ ಚರಿತ್ರೆಗಳನ್ನು ನಂಬಲಾಗುವದಿಲ್ಲ.

**ಪ್ರಶ್ನೆ :– ಹಾಗಾದರೆ ಶ್ರೀಶಂಕರರ ವ್ಯಕ್ತಿಚಿತ್ರಣದ ವಿಷಯದಲ್ಲಿ ಭಾಷ್ಯದ ನಿಲುಮೆಯೇನು ? ಇದನ್ನು ಸಂಕ್ಷೇಪವಾಗಿ ಹೇಳಬಲ್ಲಿರಾ ?**

ಉತ್ತರ :– ಓಹೊ ! ಅದೊಂದನ್ನು ಹೇಳಿದರೆ ಮತ್ತೇನೂ ಹೇಳಬೇಕಾದದ್ದೇ ಸದ್ಯಕ್ಕೆ ಉಳಿಯಲಾರದು . ಇದೊ, ಏಕಾಗ್ರತೆಯಿಂದ ಕೇಳಿ.

(1) ಸುಮಾರು ೧೫೦೦ ವರ್ಷಗಳ ಕೆಳಗೆ ಶ್ರೀಶಂಕರಾಚಾರ್ಯರು ನಮ್ಮ ಭಾರತದಲ್ಲಿ ಹುಟ್ಟಿದರು. (2) ಬಾಲ್ಯದಲ್ಲಿಯೇ ಮೇಧಾವಿಗಳೂ ವಿವೇಕಿಗಳೂ ಆಗಿದ್ದು ವೇದಾಧ್ಯಯನಾದಿಗಳಾದೊಡನೆಯೇ ಬ್ರಹ್ಮಚರ್ಯದಿಂದಲೇ ಸಂನ್ಯಾಸವನ್ನು

ಸ್ವೀಕರಿಸಿದರು. (3) ಇವರು ಪರಿಶುದ್ಧವಾದ ಅದ್ವೈತತತ್ತ್ವವನ್ನು ಸಾರ್ವತ್ರಿಕ ಪೂರ್ಣಾನುಭವದ ದೃಷ್ಟಿಯಿಂದ ಈಗಲೇ ಅನುಭವಕ್ಕೆ ಬರುವಂತೆ ಬೋಧಿಸುವ ಒಂದು ಉತ್ತಮಗುರುಪರಂಪರೆಗೆ ಸೇರಿದವರಾಗಿದ್ದರು. (4) ಮಹಾನ್ ವಿಷ್ಣು ಭಕ್ತರಾಗಿದ್ದು ಪರಮಭಾಗವತರಾಗಿದ್ದರು. (5) ಆಗಿನ ಕಾಲಕ್ಕೆ ತಕ್ಕಂತೆ ಜನಗಳಿಗೆ ತಮ್ಮ ಪರಿಶುದ್ಧವಾದ ಅದ್ವೈತಸಂಪ್ರದಾಯವನ್ನು ತಿಳಿಸುವದಕ್ಕಾಗಿ ಪ್ರಸ್ಥಾನತ್ರಯ ಭಾಷ್ಯಗಳನ್ನು ರಚಿಸಿದರು. (6) ಆಸೇತುಹಿಮಾಚಲಪರ್ಯಂತಪ್ರವಾಸಮಾಡಿ ಅವುಗಳನ್ನು ಪ್ರಚುರಗೊಳಿಸಿದರು. (7) ಇವರಿಗೆ ಸುರೇಶ್ವರಾಚಾರ್ಯರೆಂಬ ಶಿಷ್ಯರೊಬ್ಬರಿದ್ದು ಅವರು ಮಹಾಪ್ರತಿಭಾಶಾಲಿಗಳೂ ಇವರಿಗೆ ತಕ್ಕ ಶಿಷ್ಯರೂ ಆಗಿದ್ದರು. (೮) ಮಹಾತತ್ತ್ವವಿಶಾರದರೂ ಸದಾಚಾರಸ್ಥಾಪಕರೂ ಆದ ಆಚಾರ್ಯರನ್ನು ಪ್ರಾತಃಸ್ಮರಣೀಯರೆಂದು ಭಾವಿಸುವ ಭಾರತದೇಶನಿವಾಸಿಗಳು ಅಸಂಖ್ಯಾತರಾಗಿ ಈಗಲೂ ಇರುತ್ತಾರೆ. ಇಷ್ಟನ್ನು ಮಾತ್ರ ಆಚಾರ್ಯರ ಬಗ್ಗೆ ನಾವು ಒಪ್ಪಬಹುದು.

**ಪ್ರಶ್ನೆ :– ಅಂತೂ ಶ್ರೀಶಂಕರಾಚಾರ್ಯರ ಬಗ್ಗೆ ಈವರೆಗೂ ತಿಳಿಸಿದ ವಿಷಯಗಳನ್ನು ಕೇಳಿ ಪ್ರಸ್ಥಾನತ್ರಯಭಾಷ್ಯಗಳ ಮೇರೆಗೆ ಶ್ರೀಶಂಕರರನ್ನು ತಿಳಿಯುವದಕ್ಕೂ ಸುಮ್ಮನೆ ಲೋಕದಲ್ಲಿ ಪ್ರಚಾರದಲ್ಲಿರುವ ತಿಳಿವಳಿಕೆಗೂ ತುಂಬಾ ಅಂತರವಿರುವದೆಂಬುದಾಯಿತು. ಇನ್ನು ತತ್ತ್ವವಿಚಾರ ಹಾಗೂ ಸಾಧನಗಳ ರಹಸ್ಯಗಳನ್ನೂ ಭಾಷ್ಯಾನುಸಾರವಾಗಿ ತಿಳಿಯುವದೇ ಹೆಚ್ಚಿನ ಶ್ರೇಯಸ್ಸಿಗೆ ಕಾರಣವಾಗಬಲ್ಲದಲ್ಲವೆ ?**

ಉತ್ತರ :– ಅಹುದು. ಸುಮ್ಮನೆ ಕೈಗೆ ಸಿಕ್ಕಿದ ಗ್ರಂಥಗಳಿಂದ ಏನೇನೋ ತಿಳಿದುಕೊಳ್ಳುವದಕ್ಕಿಂತ ಭಾಷ್ಯಾನುಸಾರವಾಗಿಯೇ ಸಿದ್ಧಾಂತ– ಹಾಗೂ ಸಾಧನಗಳ ಮರ್ಮಗಳನ್ನು ಅರಿತುಕೊಳ್ಳುವದೇ ಹೆಚ್ಚಿನ ಶ್ರೇಯಸ್ಸಿಗೆ ಕಾರಣವಾಗುತ್ತದೆ. ಈ ಉದ್ದೇಶದಿಂದಲೇ **ಶ್ರೀಶಂಕರಸಿದ್ಧಾಂತಸಂಸ್ಮರಣವೆಂಬ** ಗ್ರಂಥವನ್ನು ಹಿಂದೆಯೇ ಹೇಳಿದಂತೆ ಭಾಗಭಾಗವಾಗಿ ಪ್ರಕಟಿಸುವದರ ಮೂಲಕ ಶ್ರೀಶಂಕರಾಚಾರ್ಯರ ನಿಜವಾದ ಸಿದ್ಧಾಂತ ಹಾಗೂ ಸಾಧನಗಳನ್ನು ಹೊರತರಬೇಕೆಂದು ಅಪೇಕ್ಷೆ ಇದೆ. ಶ್ರೀಶಂಕರಭಗವತ್ಪಾದರೇ ಇದಕ್ಕೆ ಪ್ರೇರಣೆಯನ್ನಿತ್ತು ನಡೆಸಲೆಂದೂ ಜಗದ್ಗುರುಗಳು ಸರ್ವರಿಗೂ ಸನ್ಮಂಗಲವನ್ನನುಗ್ರಹಿಸಲೆಂದೂ ಪ್ರಾರ್ಥಿಸೋಣ.

–ಗುರುದೇವದತ್ತ–

# ಪರಿಶಿಷ್ಟ

## ಪ್ರಮಾಣವಚನಗಳು

1. ತೈತ್ತಿರೀಯಕಸಾರಸ್ಯ ಮಯಾಽಽಚಾರ್ಯಪ್ರಸಾದತಃ ।
ವಿಸ್ಪಷ್ಟಾರ್ಥರುಚೀನಾಂ ಹಿ ವ್ಯಾಖ್ಯೇಯಂ ಸಂಪ್ರಣೀಯತೇ ॥

(ತೈ. ಅವ.)

2. ತದಿದಂ ಗೀತಾಶಾಸ್ತ್ರಂ ಸಮಸ್ತವೇದಾರ್ಥಸಾರಸಙ್ಗ್ರಹಭೂತಂ ದುರ್ವಿಜ್ಞೇಯಾರ್ಥಮ್ । ತದರ್ಥಾವಿಷ್ಕರಣಾಯ ಅನೇಕೈರ್ವಿವೃತ-ಪದಪದಾರ್ಥ(ವಾಕ್ಯ)ವಾಕ್ಯಾರ್ಥನ್ಯಾಯಮಪಿ ಅತ್ಯನ್ತವಿರುದ್ಧಾನೇ-ಕಾರ್ಥತ್ವೇನ ಲೌಕಿಕೈರ್ಗೃಹ್ಯಮಾಣಮುಪಲಭ್ಯ ಅಹಂ ವಿವೇಕತೋಽರ್ಥನಿರ್ಧಾರಣಾರ್ಥಂ ಸಂಕ್ಷೇಪತೋ ವಿವರಣಂ ಕರಿಷ್ಯಾಮಿ ॥

(ಗೀ. ಅವ.)

3. ಏವಮ್ ಅಯಮ್ ಅನಾದಿರನನ್ತಃ ನೈಸರ್ಗಿಕೋಽಧ್ಯಾಸಃ ಮಿಥ್ಯಾ-ಪ್ರತ್ಯಯರೂಪಃ ಕರ್ತೃತ್ವಭೋಕ್ತೃತ್ವಪ್ರವರ್ತಕಃ ಸರ್ವಲೋಕಪ್ರತ್ಯಕ್ಷಃ । ಅಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾ ಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ । ಯಥಾ ಚ ಅಯಮರ್ಥಃ ಸರ್ವೇಷಾಂ ವೇದಾನ್ತಾನಾಮ್, ತಥಾ ವಯಮ್ ಅಸ್ಯಾಂ ಶಾರೀರಕಮೀಮಾಂಸಾಯಾಂ ಪ್ರದರ್ಶಯಿಷ್ಯಾಮಃ ॥ (ಅಧ್ಯಾ. ಭಾ.)

4. ತರ್ಕಜ್ಞಾನಾನಾಂ ತು ಅನ್ಯೋನ್ಯವಿರೋಧಾತ್ ಪ್ರಸಿದ್ಧಾ ವಿಪ್ರತಿಪತ್ತಿಃ । ............ ನ ಚ ಶಕ್ಯನ್ತೇಽತೀತಾನಾಗತವರ್ತಮಾನಾಃ ತಾರ್ಕಿಕಾ ಏಕಸ್ಮಿನ್ ದೇಶೇ ಕಾಲೇ ಸಮಾಹರ್ತುಂ ಯೇನ ತನ್ಮತಿರೇಕರೂಪೈಕಾರ್ಥವಿಷಯಾ ಸಮ್ಯಙ್ಮತಿರಿತಿ ಸ್ಯಾತ್ । ವೇದಸ್ಯ ತು ನಿತ್ಯತ್ವೇ ವಿಜ್ಞಾನೋತ್ಪತ್ತಿಹೇತುತ್ವೇ ಚ ಸತಿ ವ್ಯವಸ್ಥಿತಾರ್ಥವಿಷಯತ್ವೋಪಪತ್ತೇಃ ತಜ್ಜನಿತಸ್ಯ ಜ್ಞಾನಸ್ಯ ಸಮ್ಯಕ್ತ್ವಮತೀತಾನಾಗತವರ್ತಮಾನೈಃ ಸರ್ವೈರಪಿ ತಾರ್ಕಿಕೈಃ ಅಪಹ್ನೋತುಮ್ ಅಶಕ್ಯಮ್ ॥ (ಸೂ. ಭಾ. ೨-೧-೧೧)

5. ಕರ್ಮಫಲೇ ಹಿ ಸ್ವರ್ಗಾದೌ ಅನುಭವಾನಾರೂಢೇ ಸ್ಯಾದಾಶಙ್ಕಾ ಭವೇದ್ವಾ ನ ವಾ ಇತಿ । ಅನುಭವಾರೂಢಂ ತು ಜ್ಞಾನಫಲಮ್ ॥

(ಸೂ. ಭಾ. ೩-೩-೩೨)

6. ಸಮ್ಯಗ್ದರ್ಶನವಿಧ್ವಸ್ತತಮಸಾಂ ತು ನಿತ್ಯಸಿದ್ಧನಿರ್ವಾಣಪರಾಯಣಾನಾಂ

ಸಿದ್ಧ್ಯೈವ ಅನಾವೃತ್ತಿಃ । ತದಾಶ್ರಯೇಣೈವ ಹಿ ಸಗುಣಶರಣಾನಾಮಪಿ ಅನಾವೃತ್ತಿಸಿದ್ಧಿರಿತಿ ॥ (ಸೂ. ಭಾ. ೪–೪–೨೨)

7. ಯದ್ಯದ್ವಿಸ್ತರಾರ್ಥಂ ಶಾಸ್ತ್ರಂ ಯಸ್ಮಾತ್ ಪುರುಷವಿಶೇಷಾತ್ ಸಂಭವತಿ ......ಸ ತತೋಽಪಿ ಅಧಿಕತರವಿಜ್ಞಾನಃ ಇತಿ ಪ್ರಸಿದ್ಧಂ ಲೋಕೇ, ಕಿಮು ವಕ್ತವ್ಯಮ್ ಅನೇಕಶಾಖಾಭೇದಭಿನ್ನಸ್ಯ ದೇವತಿರ್ಯಙ್ಮನುಷ್ಯವರ್ಣಾಶ್ರಮಾದಿಪ್ರವಿಭಾಗಹೇತೋಃ ಋಗ್ವೇದಾದ್ಯಾಖ್ಯಸ್ಯ ಸರ್ವಜ್ಞಾನಾಕರಸ್ಯ ಅಪ್ರಯತ್ನೇನೈವ ಲೀಲಾನ್ಯಾಯೇನ ಪುರುಷನಿಃಶ್ವಾಸವದ್ ಯಸ್ಮಾದ್ ಮಹತೋ ಭೂತಾದ್ ಯೋನೇಃ ಸಂಭವಃ "ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದೃಗ್ವೇದಃ" (ಬೃ.೨–೪–೧೦) ಇತ್ಯಾದಿಶ್ರುತೇಃ, ತಸ್ಯ ಮಹತೋ ಭೂತಸ್ಯ ನಿರತಿಶಯಂ ಸರ್ವಜ್ಞತ್ವಂ ಸರ್ವಶಕ್ತಿಮತ್ತ್ವಂ ಚ ಇತಿ ॥

(ಸೂ. ಭಾ. ೧–೧–೩)

8. ಯೇಷಾಂ ಪುನಃ ಪೂರ್ವಕೃತಸಂಸ್ಕಾರವಶಾತ್ ವಿದುರಧರ್ಮವ್ಯಾಧಪ್ರಭೃತೀನಾಂ ಜ್ಞಾನೋತ್ಪತ್ತಿಃ, ತೇಷಾಂ ನ ಶಕ್ಯತೇ ಫಲಪ್ರಾಪ್ತಿಃ ಪ್ರತಿಷೇದ್ಧುಮ್। ಜ್ಞಾನಸ್ಯ ಐಕಾನ್ತಿಕಫಲತ್ವಾತ್, "ಶ್ರಾವಯೇತ್ ಚತುರೋ ವರ್ಣಾನ್" (ಮೋ. ಧ. ೩೨೭–೪೯) ಇತಿ ಚ ಇತಿಹಾಸಪುರಾಣಾಧಿಗಮೇ ಚಾತುರ್ವರ್ಣ್ಯಸ್ಯ ಅಧಿಕಾರಸ್ಮರಣಾತ್ । ವೇದಪೂರ್ವಕಸ್ತು ನಾಸ್ತಿ ಅಧಿಕಾರಃ ಶೂದ್ರಾಣಾಮ್ ಇತಿ ಸ್ಥಿತಮ್ ॥ (ಸೂ. ೧–೩–೩೮)

9. ........ಏತಸ್ಮಿನ್ನಪಿ ವರ್ತಮಾನಕಾಲೇ ಯಃ ಕಶ್ಚಿತ್ ವ್ಯಾವೃತ್ತಬಾಹ್ಯೌತ್ಸುಕ್ಯಃ ಆತ್ಮಾನಮೇವ ಏವಂ ವೇದ ಅಹಂ ಬ್ರಹ್ಮಾಸ್ಮಿ ಇತಿ ಅಪೋಹ್ಯ ಉಪಾಧಿಜನಿತಭ್ರಾನ್ತಿವಿಜ್ಞಾನಾಧ್ಯಾರೋಪಿತಾನ್ ವಿಶೇಷಾನ್ ಸಂಸಾರಧರ್ಮಾನಾಗನ್ಧಿತಮ್ ಅನನ್ತರಮಬಾಹ್ಯಂ ಬ್ರಹ್ಮೈವಾಹಮಸ್ಮಿ ಕೇವಲಮ್ ಇತಿ, ಸೋಽವಿದ್ಯಾಕೃತಾಽಸರ್ವತ್ವನಿವೃತ್ತೇಃ ಬ್ರಹ್ಮವಿಜ್ಞಾನಾತ್ ಇದಂ ಸರ್ವಂ ಭವತಿ । ನ ಹಿ ಮಹಾವೀರ್ಯೇಷು ವಾಮದೇವಾದಿಷು ಹೀನವೀರ್ಯೇಷು ವಾ ವಾರ್ತಮಾನಿಕೇಷು ಮನುಷ್ಯೇಷು ಬ್ರಹ್ಮಣೋ ವಿಶೇಷಃ ತದ್ವಿಜ್ಞಾನಸ್ಯ ವಾ ಅಸ್ತಿ॥ (ಬೃ. ಭಾ. ೧–೪–೧೦)

10. ನ ಚಾಗ್ನಿಹೋತ್ರಾದೀನ್ಯೇವ ಕರ್ಮಾಣಿ । ಬ್ರಹ್ಮಚರ್ಯಂ ತಪಃ ಸತ್ಯವಚನಂ ಶಮೋ ದಮೋಽಹಿಂಸೇತ್ಯೇವಮಾದೀನ್ಯಪಿ ಕರ್ಮಾಣಿ ಇತರಾಶ್ರಮಪ್ರಸಿದ್ಧಾನಿ ವಿದ್ಯೋತ್ಪತ್ತೌ ಸಾಧಕತಮಾನ್ಯಸಙ್ಕೀರ್ಣಾನಿ ವಿದ್ಯನ್ತೇ ಧ್ಯಾನಧಾರಣಾದಿಲಕ್ಷಣಾನಿ ॥ (ತೈ. ಭಾ. ೧–೧೧)

11. ಬ್ರಹ್ಮಸಂಸ್ಥೋಽಮೃತತ್ವಮೇತಿ ॥ (ಛಾಂ. ೨–೨೩–೧)

12. ಊರ್ಧ್ವರೇತಃಸು ಚಾಽಽಶ್ರಮೇಷು ವಿದ್ಯಾ ಶ್ರೂಯತೇ । ನ ಚ ತತ್ರ ಕರ್ಮಾಙ್ಗತ್ವಂ ವಿದ್ಯಾಯಾಃ ಸಂಭವತಿ । ಕರ್ಮಾಭಾವಾತ್ ॥

(ಸೂ. ಭಾ. ೩–೪–೧೭)

13. ಏತಮೇವ ಪ್ರವ್ರಾಜಿನೋ ಲೋಕಮಿಚ್ಛನ್ತಃ ಪ್ರವ್ರಜನ್ತಿ। (ಬೃ. ೪–೪–೨೨)

14. ಯಃ ಪುನಃ ಪೂರ್ವೋಕ್ತವಿಪರೀತಃ ಪ್ರಾಗೇವ ಕರ್ಮಾರಮ್ಭಾತ್ ಬ್ರಹ್ಮಣಿ ಸರ್ವಾನ್ತರೇ ಪ್ರತ್ಯಗಾತ್ಮನಿ ನಿಷ್ಕ್ರಿಯೇ ಸಂಜಾತಾತ್ಮದರ್ಶನಃ ಸ ದೃಷ್ಟಾದೃಷ್ಟೇಷ್ಟವಿಷಯಾಶೀರ್ವಿವರ್ಜಿತತಯಾ ದೃಷ್ಟಾದೃಷ್ಟಾರ್ಥೇ ಕರ್ಮಣಿ ಪ್ರಯೋಜನಮಪಶ್ಯನ್ ಸಸಾಧನಂ ಕರ್ಮ ಸಂನ್ಯಸ್ಯ ಶರೀರ ಯಾತ್ರಾಮಾತ್ರಚೇಷ್ಟಃ ಯತಿಃ ಜ್ಞಾನನಿಷ್ಠೋ ಮುಚ್ಯತೇ ಇತ್ಯೇತಮರ್ಥಂ ದರ್ಶಯಿತುಮ್ ಆಹ ॥ (ಗೀ. ಭಾ. ೪–೨೧ ಅವ.)

15. ತ್ಯಕ್ತಸರ್ವಪರಿಗ್ರಹಸ್ಯ ಯತೇಃ ಅನ್ನಾದೇಃ ಶರೀರಸ್ಥಿತಿಹೇತೋಃ ಪರಿಗ್ರಹಸ್ಯ ಅಭಾವಾತ್ ಯಾಚನಾದಿನಾ ಶರೀರಸ್ಥಿತೌ ಕರ್ತವ್ಯತಾಯಾಂ ಪ್ರಾಪ್ತಾಯಾಮ್ ''ಅಯಾಚಿತಮಸಂಕ್ಲೃಪ್ತಮುಪಪನ್ನಂ ಯದೃಚ್ಛಯಾ' (ಅಶ್ವ. ೪೬–೧೯) ಇತ್ಯಾದಿನಾ ವಚನೇನ ಅನುಜ್ಞಾತಂ ಯತೇಃ ಶರೀರಸ್ಥಿತಿಹೇತೋಃ ಅನ್ನಾದೇಃ ಪ್ರಾಪ್ತಿದ್ವಾರಮ್ ಆವಿಷ್ಕುರ್ವನ್ ಆಹ ॥

(ಗೀ. ಭಾ. , ೪–೨೨ ಅವ.)

16. ''ಕರ್ಮಣ್ಯಕರ್ಮ ಯಃ ಪಶ್ಯೇತ್'' (೪–೧೮) ಇತ್ಯಾರಭ್ಯ '' ಸ ಯುಕ್ತಃ ಕೃತ್ಸ್ನಕರ್ಮಕೃತ್'' (೪–೧೮), ''ಜ್ಞಾನಾಗ್ನಿದಗ್ಧಕರ್ಮಾಣಮ್'' (೪–೧೯), ''ಶಾರೀರಂ ಕೇವಲಂ ಕರ್ಮ ಕುರ್ವನ್'' (೪–೨೧), ''ಯದೃಚ್ಛಾಲಾಭಸನ್ತುಷ್ಟಃ'' (೪–೨೨), ''ಬ್ರಹ್ಮಾರ್ಪಣಂ ಬ್ರಹ್ಮ ಹವಿಃ'' (೪–೨೪) ''ಕರ್ಮಜಾನ್ ವಿದ್ಧಿ ತಾನ್ ಸರ್ವಾನ್'' (೪–೩೨), ''ಸರ್ವಂ ಕರ್ಮಾಖಿಲಂ ಪಾರ್ಥ'' (೪–೩೩), ''ಜ್ಞಾನಾಗ್ನಿಃ ಸರ್ವಕರ್ಮಾಣಿ'' (೪–೩೭), ''ಯೋಗಸಂನ್ಯಸ್ತಕರ್ಮಾಣಮ್'' (೪–೪೧) ಇತ್ಯೇತೈರ್ವಚನೈಃ ಸರ್ವಕರ್ಮಸಂನ್ಯಾಸಮ್ ಅವೋಚದ್ ಭಗವಾನ್ ॥ (ಗೀ. ೫ ಅವ)

17. ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ ।
ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ ॥ (ಗೀ. ೬–೧)

18. ಸ ಕುತಶ್ಚಿನ್ನಿಮಿತ್ತಾತ್ ಕರ್ಮಪರಿತ್ಯಾಗಾಸಂಭವೇ ಸತಿ ಕರ್ಮಣಿ ತತ್ಫಲೇ ಚ ಸಙ್ಗರಹಿತತಯಾ ಸ್ವಪ್ರಯೋಜನಾಭಾವಾಲ್ಲೋಕಸಂಗ್ರಹಾರ್ಥಂ ಪೂರ್ವವತ್

ಕರ್ಮಣಿ ಪ್ರವೃತ್ತೋೀಽಪಿ ನೈವ ಕಿಂಚಿತ್ಕರೋತಿ । ಜ್ಞಾನಾಗ್ನಿದಗ್ಧಕರ್ಮತ್ವಾ-
ತ್ತದೀಯಂ ಕರ್ಮಾಕರ್ಮೈವ ಸಂಪದ್ಯತೇ ॥ (ಗೀ. ಭಾ. ೪–೨೦)

19. ಗತಸಙ್ಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ ।
ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ ॥ (ಗೀ. ೪–೨೩)

20. ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ।
ಬ್ರಹ್ಮೈವ ತೇನ ಗನ್ತವ್ಯಂ ಬ್ರಹ್ಮಕರ್ಮಸಮಾಧಿನಾ ॥ (ಗೀ. ೪–೨೪)

21. ಅತಶ್ಚ ಶ್ರೇಯೋ ಹಿ ಜ್ಞಾನಮಭ್ಯಾಸಾತ್ ಇತಿ ಉತ್ತರೋತ್ತರವಿಶಿಷ್ಟತ್ವೋಪ-
ದೇಶೇನ ಸರ್ವಕರ್ಮಫಲತ್ಯಾಗಃ ಸ್ತೂಯತೇ ಸಂಪನ್ನಸಾಧನಾನುಷ್ಠಾನಾಶಕ್ತೌ
ಅನುಷ್ಠೇಯತ್ವೇನ ಶ್ರುತತ್ವಾತ್ ॥ (ಗೀ. ಭಾ. ೧೨–೧೨)

22. ಮನ ಏವ ಕೇವಲಂ ರೂಪಜ್ಞಾನನಿಮಿತ್ತಂ ಯೋಗಿನಾಮ್ ॥
(ಬೃ. ಭಾ.೧–೪–೨)

23. ಯೋಗೋಽಪಿ ಅಣಿಮಾದ್ಯೈಶ್ವರ್ಯಪ್ರಾಪ್ತಿಫಲಃ ಸ್ಮರ್ಯಮಾಣಃ ನ ಶಕ್ಯತೇ
ಸಾಹಸಮಾತ್ರೇಣ ಪ್ರತ್ಯಾಖ್ಯಾತುಮ್ ॥ (ಸೂ. ಭಾ. ೧–೩–೩೩)

24. ನ ಚ ಅತೀನ್ದ್ರಿಯಾನ್ ಅರ್ಥಾನ್ ಶ್ರುತಿಮನ್ತರೇಣ ಕಶ್ಚಿತ್ ಉಪಲಭತೇ ಇತಿ ಶಕ್ಯಂ ಸಂಭಾವಯಿತುಮ್ । ನಿಮಿತ್ತಾಭಾವಾತ್ । ಶಕ್ಯಂ ಕಪಿಲಾದೀನಾಂ ಸಿದ್ಧಾನಾಮ್ ಅಪ್ರತಿಹತಜ್ಞಾನತ್ವಾತ್ ಇತಿ ಚೇತ್ । ನ । ಸಿದ್ಧೇರಪಿ ಸಾಪೇಕ್ಷತ್ವಾತ್ । ಧರ್ಮಾನುಷ್ಠಾನಾಪೇಕ್ಷಾ ಹಿ ಸಿದ್ಧಿಃ । ಸ ಚ ಧರ್ಮಃ, ಚೋದನಾಲಕ್ಷಣಃ । ತತಶ್ಚ ಪೂರ್ವಸಿದ್ಧಾಯಾಃ ಚೋದನಾಯಾಃ ಅರ್ಥೋಽ ನ ಪಶ್ಚಿಮಸಿದ್ಧಪುರುಷವಚನೇ ಅತಿಶಙ್ಕಿತುಂ ಶಕ್ಯತೇ । ಸಿದ್ಧವ್ಯಪಾಶ್ರಯ ಕಲ್ಪನಾಯಾಮಪಿ ಬಹುತ್ವಾತ್ ಸಿದ್ಧಾನಾಂ ಪ್ರದರ್ಶಿತೇನ ಪ್ರಕಾರೇಣ ಸ್ಮೃತಿವಿಪ್ರತಿಪತ್ತೌ ಸತ್ಯಾಂ ನ ಶ್ರುತಿವ್ಯಪಾಶ್ರಯಾತ್ ಅನ್ಯತ್ ನಿರ್ಣಯ ಕಾರಣಮ್ ಅಸ್ತಿ ॥ (ಸೂ. ಭಾ. ೨–೧–೧)

25. ಏತೇನ ಸರ್ವಾಣಿ ತರ್ಕಸ್ಮರಣಾನಿ ಪ್ರತಿವಕ್ತವ್ಯಾನಿ । ತಾನ್ಯಪಿ ತರ್ಕೋಽಪಪತ್ತಿ-ಭ್ಯಾಂ ತತ್ತ್ವಜ್ಞಾನಾಯ ಉಪಕುರ್ವನ್ತಿ ಇತಿ ಚೇತ್ ಉಪಕುರ್ವನ್ತು ನಾಮ । ತತ್ತ್ವಜ್ಞಾನಂ ತು ವೇದಾನ್ತವಾಕ್ಯೇಭ್ಯ ಏವ ಭವತಿ ॥ (ಸೂ. ಭಾ.೨–೧–೩)

26. ದ್ವೈತಿನೋ ಹಿ ತೇ ಸಾಂಖ್ಯಾ ಯೋಗಾಶ್ಚ ನಾತ್ಮೈಕತ್ವದರ್ಶಿನಃ । ಯತ್ತು ದರ್ಶನಮ್ ಉಕ್ತಮ್ ''ತತ್ಕಾರಣಂ ಸಾಂಖ್ಯಯೋಗಾಭಿಪನ್ನಮ್'' ಇತಿ ವೈದಿಕಮೇವ ತತ್ರ ಜ್ಞಾನಂ ಧ್ಯಾನಂ ಚ ಸಾಂಖ್ಯ ಯೋಗಶಬ್ದಾಭ್ಯಾಮ್

ಅಭಿಲಪ್ಯತೇ ಪ್ರತ್ಯಾಸತ್ತೇಃ ಇತ್ಯವಗನ್ತವ್ಯಮ್ । ಯೇನ ತು ಅಂಶೇನ ನ ವಿರುಧ್ಯೇತೇ ತೇನ ಇಷ್ಟಮೇವ ಸಾಂಖ್ಯಯೋಗಸ್ಮೃತ್ಯೋಃ ಸಾವಕಾಶತ್ವಮ್ ॥

(ಸೂ. ಭಾ. ೨–೧–೩)

27. ಯಚ್ಛೇದ್ವಾಙ್ಮನಸೀ ಪ್ರಾಜ್ಞಸ್ತದ್ಯಚ್ಛೇಜ್ಜ್ಞಾನ ಆತ್ಮನಿ ।
ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ ತದ್ಯಚ್ಛೇಚ್ಛಾನ್ತ ಆತ್ಮನಿ ॥

(ಕಾ.೧–೩–೧೩)

28. ಮನಸೋ ನಿಗ್ರಹಾಯತ್ತಮಭಯಂ ಸರ್ವಯೋಗಿನಾಮ್ ।
ದುಃಖಕ್ಷಯಃ ಪ್ರಬೋಧಶ್ಚಾಪ್ಯಕ್ಷಯಾ ಶಾನ್ತಿರೇವ ಚ ॥ (ಮಾಂ.ಕಾ.೩–೪೦)

29. ಅಷ್ಟಮೇ ನಾಡೀದ್ವಾರೇಣ ಧಾರಣಾಯೋಗಃ ಸಗುಣ ಉಕ್ತಃ ।

(ಗೀ. ಭಾ. ೯– ಅವ)

30. ಯೋಽಯಂ ಯೋಗಃ ಅಧ್ಯಾಯದ್ವಯೇನ ಉಕ್ತಃ ಜ್ಞಾನನಿಷ್ಠಾಲಕ್ಷಣಃ ಸಸಂನ್ಯಾಸಃ ಕರ್ಮಯೋಗೋಪಾಯಃ, ಯಸ್ಮಿನ್ ವೇದಾರ್ಥಃ ಪರಿಸಮಾಪ್ತಃ ಪ್ರವೃತ್ತಿಲಕ್ಷಣಃ ನಿವೃತ್ತಿಲಕ್ಷಣಶ್ಚ । ಗೀತಾಸು ಚ ಸರ್ವಾಸು ಅಯಮೇವ ಯೋಗೋ ವಿವಕ್ಷಿತೋ ಭಗವತಾ ॥ (ಗೀ. ಭಾ. ೪– ಅವ)

31. ಪ್ರಶ್ನಬೀಜಂ ಪ್ರತಿಲಭ್ಯ ಲಬ್ಧಸಮಾಧಿಪ್ರಜ್ಞಸ್ಯ ಲಕ್ಷಣಬುಭುತ್ಸಯಾ ಅರ್ಜುನ ಉವಾಚ – (ಗೀ. ಭಾ. ೨–೫೪)

32. ಧ್ಯಾನಯೋಗಸ್ಯ ಫಲನಿರಪೇಕ್ಷಃ ಕರ್ಮಯೋಗಃ ಬಹಿರಙ್ಗಂ ಸಾಧನಮ್ ಇತಿ ತಂ ಸಂನ್ಯಾಸತ್ವೇನ ಸ್ತುತ್ವಾ ಅಧುನಾ ಕರ್ಮಯೋಗಸ್ಯ ಧ್ಯಾನಯೋಗ ಸಾಧನತ್ವಂ ದರ್ಶಯತಿ ॥ (ಗೀ. ಭಾ. ೬–೩)

33. ಯೋಗಿನಾಮಪಿ ಸರ್ವೇಷಾಂ ಮದ್ಗತೇನಾನ್ತರಾತ್ಮನಾ ।
ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ ॥

(ಗೀ. ೬–೪೭)

34. ನ ಚ ಮತ್ಸ್ಥಾನಿ ಭೂತಾನಿ ಬ್ರಹ್ಮಾದೀನಿ । ಪಶ್ಯ ಮೇ ಯೋಗಂ ಯುಕ್ತಿಂ ಘಟನಂ ಮೇ ಮಮ ಐಶ್ವರಮ್ ಈಶ್ವರಸ್ಯ ಇಮಮ್ ಐಶ್ವರಮ್ ಯೋಗಮ್ ಆತ್ಮನಃ ಯಾಥಾತ್ಮ್ಯಮ್ ಇತ್ಯರ್ಥಃ ।......... ಇದಂ ಚ ಆಶ್ಚರ್ಯಮ್ ಅನ್ಯತ್ ಪಶ್ಯ ಭೂತಭೃತ್ । ಅಸಙ್ಗೋಽಪಿ ಸನ್ ಭೂತಾನಿ ಬಿಭರ್ತಿ ॥ (ಗೀ. ಭಾ.೯–೫)

35. ಏತಾಂ ಯಥೋಕ್ತಾಂ ವಿಭೂತಿಂ ವಿಸ್ತಾರಂ ಯೋಗಂ ಚ ಯುಕ್ತಿಂ ಚ ಆತ್ಮನಃ ಘಟನಮ್ । ಅಥವಾ ಯೋಗೈಶ್ವರ್ಯಸಾಮರ್ಥ್ಯಂ ಸರ್ವಜ್ಞತ್ವಂ ಯೋಗಜಂ ಯೋಗಃ ಉಚ್ಯತೇ ॥ (ಗೀ. ಭಾ. ೧೦–೭)

36. ವಿಸ್ತರೇಣ ಆತ್ಮನಃ ಯೋಗಂ ಯೋಗೈಶ್ವರ್ಯಶಕ್ತಿವಿಶೇಷಂ ವಿಭೂತಿಂ ಚ ವಿಸ್ತರಂ ಧ್ಯೇಯಪದಾರ್ಥಾನಾಮ್ ಹೇ ಜನಾರ್ದನ ॥ (ಗೀ. ಭಾ. ೧೦–೧೮)

37. ತೇನ ಪಶ್ಯ ಮೇ ಯೋಗಮ್ ಐಶ್ವರಮ್ ಈಶ್ವರಸ್ಯ ಮಮ ಐಶ್ವರಂ ಯೋಗಂ ಯೋಗಶಕ್ತ್ಯತಿಶಯಮ್ ಇತ್ಯರ್ಥಃ ॥ (ಗೀ. ಭಾ. ೧೧–೮)

38. ಯೋಗೇ ತು ತತ್ಪ್ರಾಪ್ತ್ಯುಪಾಯೇ ನಿಸ್ಸಙ್ಗತಯಾ ದ್ವನ್ದ್ವಪ್ರಹಾಣಪೂರ್ವಕಮ್ ಈಶ್ವರಾರಾಧನಾರ್ಥೇ ಕರ್ಮಯೋಗೇ ಕರ್ಮಾನುಷ್ಠಾನೇ ಸಮಾಧಿಯೋಗೇ ಚ ಇಮಾಮ್ ಅನನ್ತರಮೇವ ಉಚ್ಯಮಾನಾಂ ಬುದ್ಧಿಂ ಶೃಣು ॥

(ಗೀ. ಭಾ. ೨–೩೯)

39. ಸಮಾಧೀಯತೇ ಅಸ್ಮಿನ್ ಪುರುಷೋಪಭೋಗಾಯ ಸರ್ವಮ್ ಇತಿ ಸಮಾಧಿಃ ಅನ್ತಃಕರಣಂ ಬುದ್ಧಿಃ........ ॥ (ಗೀ. ಭಾ. ೨–೪೪)

40. ಸಮಾಧೌ ಸಮಾಧೀಯತೇ ಚಿತ್ತಮ್ ಅಸ್ಮಿನ್ ಇತಿ ಸಮಾಧಿಃ ಆತ್ಮಾ ತಸ್ಮಿನ್ ಆತ್ಮನಿ ಇತ್ಯೇತತ್ । ಅಚಲಾ ತತ್ರಾಪಿ ವಿಕಲ್ಪವರ್ಜಿತಾ ಇತ್ಯೇತತ್ । ಬುದ್ಧಿಃ ಅನ್ತಃಕರಣಮ್ ತದಾ ತಸ್ಮಿನ್ ಕಾಲೇ ಯೋಗಮ್ ಅವಾಪ್ಸ್ಯಸಿ ವಿವೇಕಪ್ರಜ್ಞಾಂ ಸಮಾಧಿಂ ಪ್ರಾಪ್ಸ್ಯಸಿ ॥ (ಗೀ. ಭಾ. ೨–೫೩)

41. ಸ್ಥಿತಾ ಪ್ರತಿಷ್ಠಿತಾ 'ಅಹಮಸ್ಮಿ ಪರಂ ಬ್ರಹ್ಮ' ಇತಿ ಪ್ರಜ್ಞಾ ಯಸ್ಯ ಸಃ ಸ್ಥಿತಪ್ರಜ್ಞಃ । ತಸ್ಯ ಕಾ ಭಾಷಾ ? (ಕಿಂ) ಭಾಷಣಂ ವಚನಮ್ ? ಅಸೌ ಕಥಮ್ ಪರೈಃ ಭಾಷ್ಯತೇ ? ಸಮಾಧಿಸ್ಥಸ್ಯ ಸಮಾಧೌ ಸ್ಥಿತಸ್ಯ ಹೇ ಕೇಶವ ?

(ಗೀ. ಭಾ. ೨–೫೪)

42. ಸಮಾಧಿಃ । ಸಮಾಧಿನಿಮಿತ್ತಪ್ರಜ್ಞಾವಗಮ್ಯತ್ವಾತ್ । ಸಮಾಧೀಯತೇ ಅಸ್ಮಿನ್ ಇತಿ ವಾ ಸಮಾಧಿಃ ॥ (ಮಾಂ. ಕಾ. ಭಾ. ૩–૩૭)

43. ತದಪಿ ಗುಣಸಂಖ್ಯಾನಂ ಶಾಸ್ತ್ರಂ ಗುಣಭೋಕ್ತೃವಿಷಯೇ ಪ್ರಮಾಣಮೇವ । ಪರಮಾರ್ಥಬ್ರಹ್ಮೈಕತ್ವವಿಷಯೇ ಯದ್ಯಪಿ ವಿರುಧ್ಯತೇ ತಥಾಪಿ ॥

(ಗೀ. ಭಾ. ೧೮–೧೯)

44. ಶ್ರುತಿಶ್ಚ ''ತದ್ಧೇದಂ ತರ್ಹ್ಯವ್ಯಾಕೃತಮಾಸೀತ್''(ಬೃ. ೧–೪–೭) ಇತಿ । ಇದಮೇವ ವ್ಯಾಕೃತನಾಮರೂಪವಿಭಿನ್ನಂ ಜಗತ್ ಪ್ರಾಗವಸ್ಥಾಯಾಂ

ಪರಿತ್ಯಕ್ತವ್ಯಾಕೃತನಾಮರೂಪಂ ಬೀಜಶಕ್ತ್ಯವಸ್ಥಮ್ ಅವ್ಯಕ್ತಶಬ್ದಯೋಗ್ಯಂ ದರ್ಶಯತಿ ॥ (ಸೂ. ಭಾ. ೧–೪–೨)

45. ಪರಮೇಶ್ವರಾಧೀನಾ ತು ಇಯಮ್ ಅಸ್ಮಾಭಿಃ ಪ್ರಾಗವಸ್ಥಾ ಜಗತಃ ಅಭ್ಯುಪಗಮ್ಯತೇ। ನ ಸ್ವತನ್ತ್ರಾ। ಸಾ ಚ ಅವಶ್ಯಾಭ್ಯುಪಗನ್ತವ್ಯಾ। ಅರ್ಥವತೀ ಹಿ ಸಾ। ನ ಹಿ ತಯಾ ವಿನಾ ಪರಮೇಶ್ವರಸ್ಯ ಸ್ರಷ್ಟೃತ್ವಂ ಸಿಧ್ಯತಿ। ಶಕ್ತಿರಹಿತಸ್ಯ ತಸ್ಯ ಪ್ರವೃತ್ತ್ಯನುಪಪತ್ತೇಃ। ಮುಕ್ತಾನಾಂ ಚ ಪುನರನುತ್ಪತ್ತಿಃ। ಕುತಃ ? ವಿದ್ಯಯಾ ತಸ್ಯಾ ಬೀಜಶಕ್ತೇರ್ದಾಹಾತ್ । ಅವಿದ್ಯಾತ್ಮಿಕಾ ಹಿ ಬೀಜಶಕ್ತಿಃ ಅವ್ಯಕ್ತಶಬ್ದ ನಿರ್ದೇಶ್ಯಾ ಪರಮೇಶ್ವರಾಶ್ರಯಾ ಮಾಯಾಮಯೀ ಮಹಾಸುಪ್ತಿಃ॥

(ಸೂ. ಭಾ. ೧–೪–೩)

46. ಏತೇನ ಪ್ರಕೃತೇನ ಪ್ರಧಾನಕಾರಣವಾದನಿರಾಕರಣಕಾರಣೇನ ಶಿಷ್ಟೈಃ ಮನುವ್ಯಾಸಪ್ರಭೃತಿಭಿಃ ಕೇನಚಿತ್ ಅಂಶೇನ ಅಪರಿಗೃಹೀತಾ ಯೇ ಅಣ್ವಾದಿಕಾರಣವಾದಾಃ ತೇಽಪಿ ಪ್ರತಿಷಿದ್ಧತಯಾ ವ್ಯಾಖ್ಯಾತಾ ನಿರಾಕೃತಾ ದ್ರಷ್ಟವ್ಯಾಃ॥ (ಸೂ. ಭಾ. ೨–೧–೧೨)

47. ವೈಶೇಷಿಕರಾದ್ಧಾನ್ತೋ ದುರ್ಯುಕ್ತಿಯೋಗಾತ್ ವೇದವಿರೋಧಾತ್ ಶಿಷ್ಟಾಪರಿಗ್ರಹಾಚ್ಚ ನಾಪೇಕ್ಷಿತವ್ಯಃ ಇತ್ಯುಕ್ತಮ್ । ಸೋಽರ್ಧವೈನಾಶಿಕಃ ಇತಿ ವೈನಾಶಿಕತ್ವಸಾಮ್ಯಾತ್ ಸರ್ವವೈನಾಶಿಕರಾದ್ಧಾನ್ತೋ ನ ತರಾಮ್ ಅಪೇಕ್ಷಿತವ್ಯಃ ಇತೀದಮ್ ಇದಾನೀಮ್ ಉಪಪಾದಯಾಮಃ॥

(ಸೂ. ಭಾ. ೨–೨–೧೮)

48. ಏವಂ ಜೀವಾದಿಷು ಪದಾರ್ಥೇಷು ಏಕಸ್ಮಿನ್ ಧರ್ಮಿಣಿ ಸತ್ತ್ವಾಸತ್ತ್ವಯೋಃ ವಿರುದ್ಧಯೋರ್ಧರ್ಮಯೋರಸಂಭವಾತ್, ಸತ್ತ್ವೇ ಚ ಏಕಸ್ಮಿನ್ ಧರ್ಮೇ ಅಸತ್ತ್ವಸ್ಯ ಧರ್ಮಾನ್ತರಸ್ಯ ಅಸಂಭವಾತ್, ಅಸತ್ತ್ವೇ ಚ ಏವಂ ಸತ್ತ್ವಸ್ಯ ಅಸಂಭವಾತ್ ಅಸಙ್ಗತಮಿದಮ್ ಆರ್ಹತಂ ಮತಮ್ ॥

(ಸೂ. ಭಾ. ೨–೨–೨೨)

49. ಯತ್ತು ಪುದ್ಗಲಸಂಜ್ಞಕೇಭ್ಯೋಽಣುಭ್ಯಃ ಸಙ್ಘಾತಾಃ ಸಂಭವನ್ತಿ ಇತಿ ಕಲ್ಪಯನ್ತಿ ತತ್ ಪೂರ್ವೇಣೈವ ಅಣುವಾದನಿರಾಕರಣೇನ ನಿರಾಕೃತಂ ಭವತಿ ಇತ್ಯತೋ ನ ಪೃಥಕ್ ತನ್ನಿರಾಕರಣಾಯ ಪ್ರಯತ್ಯತೇ॥ (ಸೂ. ಭಾ.೨–೨–೩೩)

50. ನ ಹಿ ಅಗ್ನಿರುಷ್ಣಃ ಸನ್ ಸ್ವಾತ್ಮಾನಂ ದಹತಿ । ನ ಹಿ ನಟಃ ಶಿಕ್ಷಿತಃ ಸನ್ ಸ್ವಸ್ಕನ್ಧಮ್ ಅಧಿರೋಹತಿ। ನ ಹಿ ಭೂತಭೌತಿಕಧರ್ಮೇಣ ಸತಾ ಚೈತನ್ಯೇನ

ಭೂತಭೌತಿಕಾನಿ ವಿಷಯೀಕ್ರಿಯೇರನ್ । ನ ಹಿ ರೂಪಾದಿಭಿಃ ಸ್ವರೂಪಂ ಪರರೂಪಂ ವಾ ವಿಷಯೀಕ್ರಿಯತೇ । ವಿಷಯೀಕ್ರಿಯನ್ತೇ ತು ಬಾಹ್ಯಾಧ್ಯಾತ್ಮಿಕಾನಿ ಭೂತಭೌತಿಕಾನಿ ಚೈತನ್ಯೇನ ॥ (ಸೂ. ಭಾ. ೩–೩–೫೪)

51. ಏತೇನ ಸ್ವಪ್ನದೃಶೋಽವಗತ್ಯಬಾಧನೇನ ದೇಹಮಾತ್ರಾತ್ಮವಾದೋ ದೂಷಿತೋ ವೇದಿತವ್ಯಃ ॥ (ಸೂ. ಭಾ. ೨–೧–೧೪)

52. ಕಿಂ ದ್ವೇ ದೃಷ್ಟೀ ದ್ರಷ್ಟುರ್ನಿತ್ಯಾ ಅದೃಶ್ಯಾ ಅನ್ಯಾ ಅನಿತ್ಯಾ ದೃಶ್ಯೇತಿ ? ಬಾಢಮ್ । ಪ್ರಸಿದ್ಧಾ ತಾವತ್ ಅನಿತ್ಯಾ ದೃಷ್ಟಿಃ ಅನ್ಧಾನನ್ಧತ್ವದರ್ಶನಾತ್ । ನಿತ್ಯೈವ ಚೇತ್ ಸರ್ವೋಽನನ್ಧ ಏವ ಸ್ಯಾತ್ । ದ್ರಷ್ಟುಸ್ತು ನಿತ್ಯಾ ದೃಷ್ಟಿಃ । "ನ ಹಿ ದ್ರಷ್ಟುರ್ದೃಷ್ಟೇರ್ವಿಪರಿಲೋಪೋ ವಿದ್ಯತೇ" (೪–೩–೩೨) ಇತಿ ಶ್ರುತೇಃ॥ ಅನುಮಾನಾಚ್ಚ । ಅನ್ಧಸ್ಯಾಪಿ ಘಟಾದ್ಯಾಭಾಸವಿಷಯಾ ಸ್ವಪ್ನೇ ದೃಷ್ಟಿರುಪಲಭ್ಯತೇ । ಸಾ ತರ್ಹಿ ಇತರದೃಷ್ಟಿನಾಶೇ ನ ನಶ್ಯತಿ । ಸಾ ದ್ರಷ್ಟುರ್ದೃಷ್ಟಿಃ ॥

(ಬೃ. ಭಾ. ೧–೪–೧೦)

53. ಪ್ರಜ್ಞಪ್ತೇಃ ಸನಿಮಿತ್ತತ್ವಮನ್ಯಥಾ ದ್ವಯನಾಶತಃ ।
ಸಙ್ಕ್ಲೇಶಸ್ಯೋಪಲಬ್ಧೇಶ್ಚ ಪರತನ್ತ್ರಾಽಸ್ತಿತಾ ಮತಾ ॥ ೨೪ ॥

ಪ್ರಜ್ಞಪ್ತೇಃ ಸನಿಮಿತ್ತತ್ವಮಿಷ್ಯತೇ ಯುಕ್ತಿದರ್ಶನಾತ್ ।
ನಿಮಿತ್ತಸ್ಯಾನಿಮಿತ್ತತ್ವಮಿಷ್ಯತೇ ಭೂತದರ್ಶನಾತ್ ॥ ೨೫ ॥

ಚಿತ್ತಂ ನ ಸಂಸ್ಪೃಶತ್ಯರ್ಥಂ ನಾರ್ಥಾಭಾಸಂ ತಥೈವ ಚ ।
ಅಭೂತೋ ಹಿ ಯತಶ್ಚಾರ್ಥೋ ನಾರ್ಥಾಭಾಸಸ್ತತಃ ಪೃಥಕ್ ॥ ೨೬ ॥

ನಿಮಿತ್ತಂ ನ ಸದಾ ಚಿತ್ತಂ ಸಂಸ್ಪೃಶತ್ಯಧ್ವಸು ತ್ರಿಷು ।
ಅನಿಮಿತ್ತೋ ವಿಪರ್ಯಾಸಃ ಕಥಂ ತಸ್ಯ ಭವಿಷ್ಯತಿ ॥ ೨೭ ॥

ತಸ್ಮಾನ್ನ ಜಾಯತೇ ಚಿತ್ತಂ ಚಿತ್ತದೃಶ್ಯಂ ನ ಜಾಯತೇ ।
ತಸ್ಯಪಶ್ಯನ್ತಿ ಯೇ ಜಾತಿಂ ಖೇ ವೈ ಪಶ್ಯನ್ತಿ ತೇ ಪದಮ್ ॥ ೨೮ ॥

(ಮಾಂ.ಕಾ.೪–೨೪ ರಿಂದ ೨೮)

54. ತಸ್ಮಾತ್ ಅಪ್ರಕೃತಿಃ ಅಧಿಷ್ಠಾತಾ ಕೇವಲಂ ನಿಮಿತ್ತಕಾರಣಮ್ ಈಶ್ವರಃ ಇತಿ ಏಷ ಪಕ್ಷಃ ವೇದಾನ್ತವಿಹಿತಬ್ರಹ್ಮೈಕತ್ವಪ್ರತಿಪಕ್ಷತ್ವಾತ್ ಯತ್ನೇನ ಅತ್ರ ಪ್ರತಿಷಿಧ್ಯತೇ ॥ (ಸೂ. ಭಾ. ೨–೨–೩೭)

55. ಅಪಿ ಚ ಆಗಮಬಲೇನ ಬ್ರಹ್ಮವಾದೀ ಕಾರಣಾದಿಸ್ವರೂಪಂ ನಿರೂಪಯತಿ ಇತಿ ನಾವಶ್ಯಂ ತಸ್ಯ ಯಥಾದೃಷ್ಟಮೇವ ಸರ್ವಮ್ ಅಭ್ಯುಪಗನ್ತವ್ಯಮ್ ಇತಿ

ನಿಯಮಃ ಅಸ್ತಿ । ಪರಸ್ಯ ತು ದೃಷ್ಟಾನ್ತಬಲೇನ ಕಾರಣಾದಿಸ್ವರೂಪಂ ನಿರೂಪಯತಃ ಯಥಾದೃಷ್ಟಮೇವ ಸರ್ವಮ್ ಅಭ್ಯುಪಗನ್ತವ್ಯಮ್ ಇತ್ಯಯಮ್ ಅಸ್ತಿ ಅತಿಶಯಃ ॥ (ಸೂ. ಭಾ. ೨–೨–೩೮)

56. ನ ಚ ಪಞ್ಚರಾತ್ರಸಿದ್ಧಾನ್ತಿಭಿಃ ವಾಸುದೇವಾದಿಷು ಏಕಸ್ಮಿನ್ ಸರ್ವೇಷು ವಾ ಜ್ಞಾನೈಶ್ವರ್ಯಾದಿತಾರತಮ್ಯಕೃತಃ ಕಶ್ಚಿದ್ ಭೇದಃ ಅಭ್ಯುಪಗಮ್ಯತೇ । ವಾಸುದೇವಾ ಏವ ಹಿ ಸರ್ವೇ ವ್ಯೂಹಾ ನಿರ್ವಿಶೇಷ ಇಷ್ಯನ್ತೇ ॥

(ಸೂ. ಭಾ. ೨–೨–೪೪)

57. ಯದಪಿ ತಸ್ಯ ಭಗವತಃ ಅಭಿಗಮನಾದಿಲಕ್ಷಣಮ್ ಆರಾಧನಮ್ ಅಜಸ್ರಮ್ ಅನನ್ಯಚಿತ್ತತಯಾ ಅಭಿಪ್ರೇಯತೇ, ತದಪಿ ನ ಪ್ರತಿಷಿಧ್ಯತೇ । ಶ್ರುತಿಸ್ಮೃತ್ಯೋಃ ಈಶ್ವರಪ್ರಣಿಧಾನಸ್ಯ ಪ್ರಸಿದ್ಧತ್ವಾತ್ । ಯತ್ ಪುನಃ ಇದಮುಚ್ಯತೇ, ವಾಸುದೇವಾತ್ ಸಂಕರ್ಷಣಉತ್ಪದ್ಯತೇ ಸಂಕರ್ಷಣಾಚ್ಚ ಪ್ರದ್ಯುಮ್ನಃ ಪ್ರದ್ಯುಮ್ನಾಚ್ಚ ಅನಿರುದ್ಧಃ ಇತಿ । ಅತ್ರ ಬ್ರೂಮಃ । ನ ವಾಸುದೇವಸಂಜ್ಞಕಾತ್ ಪರಮಾತ್ಮನಃ ಸಂಕರ್ಷಣಸಂಜ್ಞಕಸ್ಯ ಜೀವಸ್ಯ ಉತ್ಪತ್ತಿಃ ಸಂಭವತಿ । ಅನಿತ್ಯತ್ವಾದಿದೋಷಪ್ರಸಙ್ಗಾತ್ । ........... । ತಸ್ಮಾತ್ ಅಸಂಗತಾ ಏಷಾ ಕಲ್ಪನಾ ॥ (ಸೂ. ಭಾ. ೨–೨–೪೨)

58. ಇತಶ್ಚ ಅಸಙ್ಗತಾ ಏಷ ಕಲ್ಪನಾ । ಯಸ್ಮಾತ್ ನ ಹಿ ಲೋಕೇ ಕರ್ತುಃ ದೇವದತ್ತಾದೇಃ ಕರಣಂ ಪರಶ್ವಾದಿ ಉತ್ಪದ್ಯಮಾನಂ ದೃಶ್ಯತೇ । ವರ್ಣಯನ್ತಿ ಚ ಭಾಗವತಾಃ ಕರ್ತುರ್ಜೀವಾತ್ ಸಂಕರ್ಷಣಸಂಜ್ಞಕಾತ್ ಕರಣಂ ಮನಃ ಪ್ರದ್ಮುಮ್ನಸಂಜ್ಞಕಮ್ ಉತ್ಪದ್ಯತೇ । ಕರ್ತೃಜಾಚ್ಚ ತಸ್ಮಾತ್ ಅನಿರುದ್ಧ ಸಂಜ್ಞಕೋಽಹಂಕಾರಃ ಉತ್ಪದ್ಯತೇ ಇತಿ । ನ ಚೈತದ್ ದೃಷ್ಟಾನ್ತಮನ್ತರೇಣ ಅಧ್ಯವಸಾತುಂ ಶಕ್ನುಮಃ । ನ ಚೈವಂಭೂತಾಂ ಶ್ರುತಿಮ್ ಉಪಲಭಾಮಹೇ ॥

(ಸೂ. ಭಾ. ೨–೨–೪೩)

59. ನನು ದ್ವೈತಪ್ರಪಞ್ಚವಿಲಯೋ ಹಿ ನಿಯೋಗವಿಷಯೋ ಭವಿಷ್ಯತಿ । ಅಪ್ರವಿಲಾಪಿತೇ ಹಿ ದ್ವೈತಪ್ರಪಞ್ಚೇ ಬ್ರಹ್ಮತತ್ತ್ವಾವಬೋಧೋ ನ ಭವತಿ । ಅತೋ ಬ್ರಹ್ಮತತ್ತ್ವಾವಬೋಧಪ್ರತ್ಯನೀಕಭೂತೋ ದ್ವೈತಪ್ರಪಞ್ಚಃ ಪ್ರವಿಲಾಪ್ಯಃ । ಯಥಾ ಸ್ವರ್ಗಕಾಮಸ್ಯ ಯಾಗಃ ಅನುಷ್ಠಾತವ್ಯ ಉಪದಿಶ್ಯತೇ ಏವಮ್ ಅಪವರ್ಗಕಾಮಸ್ಯ ಪ್ರಪಞ್ಚಪ್ರವಿಲಯಃ । ............... । ತತ್ರ ಯದಿ ತಾವತ್ ವಿದ್ಯಮಾನೋಽಯಂ ಪ್ರಪಞ್ಚೋ ದೇಹಾದಿಲಕ್ಷಣ ಆಧ್ಯಾತ್ಮಿಕಃ, ಬಾಹ್ಯಶ್ಚ ಪೃಥಿವ್ಯಾದಿಲಕ್ಷಣಃ ಪ್ರವಿಲಾಪಯಿತವ್ಯ ಇತ್ಯುಚ್ಯೇತ, ಸ

ಪುರುಷಮಾತ್ರೇಣ ಅಶಕ್ಯಃ ಪ್ರವಿಲಾಪಯಿತುಮ್ ಇತಿ ತತ್ಪ್ರವಿಲಯೋಪದೇಶೋಽಶಕ್ಯ ವಿಷಯ ಏವ ಸ್ಯಾತ್ । ಏಕೇನ ಚ ಆದಿಮುಕ್ತೇನ ಪೃಥಿವ್ಯಾದಿ ಪ್ರವಿಲಯಃ ಕೃತಃ ಇತಿ ಇದಾನೀಂ ಪೃಥಿವ್ಯಾದಿಶೂನ್ಯಂ ಜಗತ್ ಅಭವಿಷ್ಯತ್। ಅಥ ಅವಿದ್ಯಾಧ್ಯಸ್ತೋ ಬ್ರಹ್ಮಣಿ ಏಕಸ್ಮಿನ್ ಅಯಂ ಪ್ರಪಞ್ಚೋ ವಿದ್ಯಯಾ ಪ್ರವಿಲಾಪ್ಯತೇ ಇತಿ ಬ್ರೂಯಾತ್, ತತೋ ಬ್ರಹ್ಮೈವ ಅವಿದ್ಯಾಧ್ಯಸ್ತಪ್ರಪಞ್ಚಪ್ರತ್ಯಾಖ್ಯಾನೇನ ಆವೇದಯಿತವ್ಯಮ್ ''ಏಕಮೇವ ಅದ್ವಿತೀಯಂ ಬ್ರಹ್ಮ'', ''ತತ್ಸತ್ಯಂ ಸ ಆತ್ಮಾ ತತ್ತ್ವಮಸಿ'' (ಛಾಂ.೫–೮–೭) ಇತಿ । ತಸ್ಮಿನ್ ಆವೇದಿತೇ ವಿದ್ಯಾ ಸ್ವಯಮೇವ ಉತ್ಪದ್ಯತೇ । ತಯಾ ಚ ಅವಿದ್ಯಾ ಬಾಧ್ಯತೇ, ತತಶ್ಚ ಅವಿದ್ಯಾಧ್ಯಸ್ತಃ ಸಕಲೋಽಯಂ ನಾಮರೂಪಪ್ರಪಞ್ಚಃ ಸ್ವಪ್ನಪ್ರಪಞ್ಚವತ್ ಪ್ರವಿಲೀಯತೇ । .............. ತಸ್ಮಾತ್ ಅವಗತಿನಿಷ್ಠಾನ್ಯೇವ ಬ್ರಹ್ಮವಾಕ್ಯಾನಿ ನ ನಿಯೋಗನಿಷ್ಠಾನಿ ॥

(ಸೂ. ಭಾ. ೩–೨–೨೧)

60. ಹೃದಯಮ್ ಇತಿ ಪುಣ್ಡರೀಕಾಕಾರೋ ಮಾಂಸಪಿಣ್ಡಃ। ತತ್ಸ್ಥಮ್ ಅನ್ತಃಕರಣಂ ಬುದ್ಧಿರ್ಹೃದಯಮ್ ಇತ್ಯುಚ್ಯತೇ । ......... ಹೃದಯಸ್ಯ ಬುದ್ಧೇಃ ಯೇ ಶೋಕಾಃ । ಬುದ್ಧಿಸಂಶ್ರಯಾ ಹಿ ತೇ । ............. ಆತ್ಮಸಂಶ್ರಯಭ್ರಾನ್ತ್ಯಪನೋದನಾಯ ಹಿ ಇದಂ ವಚನಮ್ 'ಹೃದಿ ಶ್ರಿತಾಃ', 'ಹೃದಯಸ್ಯ ಶೋಕಾಃ' ಇತಿ ಚ ॥ (ಬೃ.೪–೩–೨೨)

61. ತತ್ರ ಆತ್ಮಸ್ವರೂಪವಿಜ್ಞಾನೇನೈವ ತದ್ವಿಷಯಾನಾತ್ಮಾಭಿಮಾನಬುದ್ಧಿಃ ಕಾರಕಕ್ರಿಯಾಫಲಾಧ್ಯಾರೋಪಣಾತ್ಮಿಕಾ ಅವಿದ್ಯಾ ನಿವರ್ತಿತಾ । ತಸ್ಯಾಂ ನಿವರ್ತಿತಾಯಾಂ ಕಾಮಾದಿದೋಷಾನುಪಪತ್ತೇಃ ಅನಾತ್ಮಚಿನ್ತಾನುಪಪತ್ತಿಃ । ಪಾರಿಶೇಷ್ಯಾತ್ ಆತ್ಮಚಿನ್ತೈವ । ತಸ್ಮಾದ್ ತದುಪಾಸನಮ್ ಅಸ್ಮಿನ್ ಪಕ್ಷೇ ನ ವಿಧಾತವ್ಯಮ್ । ಪ್ರಾಪ್ತತ್ವಾತ್ ॥ (ಬೃ. ಭಾ. ೧–೪–೭)

62. ವಾಕ್ಯಜನಿತಾತ್ಮವಿಜ್ಞಾನಸ್ಮೃತಿಸಂತತೇಃ ಶ್ರವಣವಿಜ್ಞಾನಮಾತ್ರಾತ್ ಅರ್ಥಾನ್ತರತ್ವಮ್ ಇತಿ ಚೇತ್ । ನ । ಅರ್ಥಪ್ರಾಪ್ತತ್ವಾತ್ । ಯದೈವ ಆತ್ಮಪ್ರತಿಪಾದಕ ವಾಕ್ಯಶ್ರವಣಾತ್ ಆತ್ಮವಿಷಯಂ ವಿಜ್ಞಾನಮ್ ಉತ್ಪದ್ಯತೇ ತದೈವ ತದುತ್ಪದ್ಯಮಾನಂ ತದ್ವಿಷಯಂ ಮಿಥ್ಯಾಜ್ಞಾನಂ ನಿವರ್ತಯದೇವ ಉತ್ಪದ್ಯತೇ । ಆತ್ಮವಿಷಯಮಿಥ್ಯಾಜ್ಞಾನನಿವೃತ್ತೌ ಚ ತತ್ ಪ್ರಭವಾಃ ಸ್ಮೃತಯೋ ನ ಭವನ್ತಿ ಸ್ವಾಭಾವಿಕ್ಯೋಽನಾತ್ಮವಸ್ತುಭೇದವಿಷಯಾಃ। ..... ಪಾರಿಶೇಷ್ಯಾತ್ ಆತ್ಮೈಕತ್ವವಿಜ್ಞಾನಸ್ಮೃತಿಸನ್ತತೇರರ್ಥತ ಏವ ಭಾವಾತ್ ನ ವಿಧೇಯತ್ವಮ್ ॥

(ಬೃ. ಭಾ. ೧–೪–೭)

63. ಯದಿ ಹಿ ಪ್ರಥಮಃ ಆತ್ಮವಿಷಯಃ ಪ್ರತ್ಯಯಃ ಅವಿದ್ಯಾಂ ನ ನಿವರ್ತಯತಿ ತಥಾ ಅನ್ಯೋಽಪಿ। ತುಲ್ಯವಿಷಯತ್ವಾತ್॥ (ಬೃ. ಭಾ. ೧–೪–೧೦)

64. ಅಪಿ ಚ "ಬ್ರಹ್ಮವೇದ ಬ್ರಹ್ಮೈವ ಭವತಿ" (ಮುಂ. ೩–೨–೯), "ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ" (ಮುಂ. ೨–೨–೮), "ಆನನ್ದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ" (ತೈ. ೨–೯), "ಅಭಯಂ ವೈ ಜನಕ ಪ್ರಾಪ್ತೋಽಸಿ" (ಬೃ.೪–೨–೪), "ತದಾತ್ಮಾನಮೇವಾವೇದಹಂ ಬ್ರಹ್ಮಾಸ್ಮೀತಿ ತಸ್ಮಾತ್ ತತ್ಸರ್ವಮಭವತ್" (ಬೃ. ೧–೪–೧೦), "ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ" (ಈ.೭) ಇತ್ಯೇವಮಾದ್ಯಾಃ ಶ್ರುತಯಃ ಬ್ರಹ್ಮವಿದ್ಯಾನನ್ತರಂ ಮೋಕ್ಷಂ ದರ್ಶಯನ್ತ್ಯಃ ಮಧ್ಯೇ ಕಾರ್ಯಾನ್ತರಂ ವಾರಯನ್ತಿ॥ (ಸೂ. ಭಾ. ೧–೧–೪)

65. ಭವೇದಾವೃತ್ತ್ಯಾನರ್ಥಕ್ಯಂ ತಂ ಪ್ರತಿ ಯಸ್ತತ್ತ್ವಮಸಿ ಇತಿ ಸಕೃದುಕ್ತಮೇವ ಬ್ರಹ್ಮಾತ್ಮತ್ವಮ್ ಅನುಭವಿತುಂ ಶಕ್ನುಯಾತ್। ಯಸ್ತು ನ ಶಕ್ನೋತಿ ತಂ ಪ್ರತ್ಯುಪಯುಜ್ಯತ ಏವಾವೃತ್ತಿಃ॥ (ಸೂ. ಭಾ.೪–೧–೨)

66. ಅವಿದ್ಯಾಧ್ಯಾರೋಪಿತನಿರಾಕರಣಮಾತ್ರಂ ಬ್ರಹ್ಮಣಿ ಕರ್ತವ್ಯಮ್। ನ ತು ಬ್ರಹ್ಮವಿಜ್ಞಾನೇ ಯತ್ನಃ। ಅತ್ಯನ್ತಪ್ರಸಿದ್ಧತ್ವಾತ್॥ (ಗೀ. ಭಾ. ೧೮–೫೦)

67. ಸಂಸಾರೋಪರಮಶ್ಚ ಮಮ ಕರ್ತವ್ಯಃ ಕ್ಷೇತ್ರಕ್ಷೇತ್ರಜ್ಞವಿಜ್ಞಾನೇನ, ಧ್ಯಾನೇನ ಚ ಈಶ್ವರಂ ಕ್ಷೇತ್ರಜ್ಞಂ ಸಾಕ್ಷಾತ್ಕೃತ್ವಾ ತತ್ಸ್ವರೂಪಾವಸ್ಥಾನೇನ ಇತಿ। ಯಶ್ಚ ಏವಂ ಬುಧ್ಯತೇ ಯಶ್ಚ ಬೋಧಯತಿ ನಾಸೌ ಕ್ಷೇತ್ರಜ್ಞ ಇತ್ಯೇವಂಮನ್ವಾನಃ ಸ ಪಣ್ಡಿತಾಪಸದಃ ಸಂಸಾರಮೋಕ್ಷಯೋಃ ಶಾಸ್ತ್ರಸ್ಯ ಚ ಅರ್ಥವತ್ತ್ವಂ ಕರೋಮಿ ಇತಿ ಆತ್ಮಹಾ ಸ್ವಯಂ ಮೂಢಃ ಅನ್ಯಾಂಶ್ಚ ವ್ಯಾಮೋಹಯತಿ......॥ (ಗೀ. ಭಾ. ೧೩–೨)

68. ಅಜ್ಞಾನಾಧ್ಯಾರೋಪಣನಿವೃತ್ತಿರೇವ ಆತ್ಮಾನಮೇವಾವೇತ್ ಇತ್ಯುಕ್ತಂ ನಾತ್ಮನೋ ವಿಷಯೀಕರಣಮ್॥ (ಬೃ. ಭಾ. ೧–೪–೧೦)

69. ಯಥಾ ಚ ಶಾಸ್ತ್ರೋಪದೇಶಸಾಮರ್ಥ್ಯಾತ್ ಧರ್ಮಾಧರ್ಮಾಸ್ತಿತ್ವವಿಜ್ಞಾನಂ ಕರ್ತುಶ್ಚ ದೇಹಾನ್ತರಸಂಬಂಧಿ ವಿಜ್ಞಾನಮ್ ಉತ್ಪದ್ಯತೇ ತಥಾ ಶಾಸ್ತ್ರಾತ್ ತಸ್ಯೈವ ಆತ್ಮನೋಽವಿಕ್ರಿಯತ್ವಾಕರ್ತೃತ್ವೈಕತ್ವಾದಿವಿಜ್ಞಾನಂ ಕಸ್ಮಾನ್ನೋತ್ಪದ್ಯತೇ ? (ಗೀ. ಭಾ. ೨–೨೧)

70. ನ ಚ ಕ್ರಿಯಾರ್ಥೈರ್ವಾಕ್ಯೈಃ ಜ್ಞಾನವಾಕ್ಯಾನಾಂ ಬುದ್ಧ್ಯುತ್ಪಾದಕತ್ವೇ ವಿಶೇಷೋಽಸ್ತಿ॥ (ಬೃ. ಭಾ. ೧–೩–೧)

71. "ಮನಸ್ಯೈವಾನುದ್ರಷ್ಟವ್ಯಮ್" (ಬೃ.೪–೪–೧೯) ಇತಿ ಶ್ರುತೇಃ । ಶಾಸ್ತ್ರಾಚಾರ್ಯೋಪದೇಶಶಮದಮಾದಿಸಂಸ್ಕೃತಂ ಮನಃ ಆತ್ಮದರ್ಶನೇ ಕರಣಮ್ ॥ (ಗೀ. ಭಾ. ೨––೧)

72. ನ ಚ ಇಯಮ್ ಅವಗತಿರ್ನೋತ್ಪದ್ಯತೇ ಇತಿ ಶಕ್ಯಂ ವಕ್ತುಮ್ । "ತದ್ಧಾಸ್ಯ ವಿಜಜ್ಞೌ" (ಛಾಂ. ೬–೧೬–೩) ಇತ್ಯಾದಿಶ್ರುತಿಭ್ಯಃ । ಅವಗತಿಸಾಧನಾನಾಂ ಚ ಶ್ರವಣಾದೀನಾಂ ವೇದಾನುವಚನಾದೀನಾಂ ಚ ವಿಧಾನಾತ್ । ನ ಚ ಇಯಮ್ ಅವಗತಿಃ ಅನರ್ಥಿಕಾ, ಭ್ರಾನ್ತಿರ್ವಾ ಇತಿ ಶಕ್ಯಂ ವಕ್ತುಮ್ । ಅವಿದ್ಯಾನಿವೃತ್ತಿ ಫಲದರ್ಶನಾತ್ । ಬಾಧಕಜ್ಞಾನಾನ್ತರಾಭಾವಾಚ್ಚ ॥(ಸೂ. ಭಾ.೨–೧–೧೪)

73. ನ ಚ ಅಯಂ ವ್ಯವಹಾರಾಭಾವಃ ಅವಸ್ಥಾವಿಶೇಷನಿಬದ್ಧೋಽಭಿಧೀಯತೇ ಇತಿ ಯುಕ್ತಂ ವಕ್ತುಮ್ । "ತತ್ತ್ವಮಸಿ' ಇತಿ ಬ್ರಹ್ಮಾತ್ಮಭಾವಸ್ಯ ಅನವಸ್ಥಾ ವಿಶೇಷನಿಬನ್ಧನತ್ವಾತ್ ॥ (ಸೂ. ಭಾ. ೨–೧–೧೪)

74. ಉಪದಿಶನ್ತಿ ಚ ಅನ್ಯೇಭ್ಯ ಆತ್ಮನೋ ವಿದ್ಯಾಂ ಬುಧಾಃ । ತಥಾ ಚ ಅನ್ಯೇ ಅವಧಾರಯನ್ತಿ॥ (ತೈ. ಭಾ. ೨–೮)

75. ತಥಾ ನಃ ಕ್ಷೇತ್ರಜ್ಞಾನಾಮ್ ಈಶ್ವರೈಕತ್ವೇ ಸತಿ ಶಾಸ್ತ್ರಾನರ್ಥಕ್ಯಂ ಭವತು । ಅವಿದ್ಯಾವಿಷಯೇ ಚ ಅರ್ಥವತ್ತ್ವಮ್ । ಯಥಾ ದ್ವೈತಿನಾಂ ಸರ್ವೇಷಾಂ ಬನ್ಧಾವಸ್ಥಾಯಾಮೇವ ಶಾಸ್ತ್ರಾದ್ಯರ್ಥವತ್ತ್ವಂ ನ ಮುಕ್ತಾವಸ್ಥಾಯಾಮ್ ಏವಮ್ ॥ (ಗೀ. ಭಾ. ೧೩–೨)

76. ಕಥಂ ತು ಅಸತ್ಯೇನ ವೇದಾನ್ತವಾಕ್ಯೇನ ಸತ್ಯಸ್ಯ ಬ್ರಹ್ಮಾತ್ಮತ್ವಸ್ಯ ಪ್ರತಿಪತ್ತಿ ರುಪಪದ್ಯೇತ ? ........ ನೈಷ ದೋಷಃ । ಶಙ್ಕಾವಿಷಾದಿನಿಮಿತ್ತಮರಣಾದಿ ಕಾರ್ಯೋಪಲಬ್ಧೇಃ । ಸ್ವಪ್ನದರ್ಶನಾವಸ್ಥಸ್ಯ ಚ ಸರ್ಪದಂಶನೋದಕಸ್ನಾನಾದಿ ಕಾರ್ಯದರ್ಶನಾತ್ । ತತ್ಕಾರ್ಯಮಪಿ ಅನೃತಮೇವ ಇತಿ ಚೇತ್ । ತತ್ರ ಬ್ರೂಮಃ । ಯದ್ಯಪಿ ಸ್ವಪ್ನದರ್ಶನಾವಸ್ಥಸ್ಯ ಸರ್ಪದಂಶ ನೋದಕಸ್ನಾನಾದಿ–ಕಾರ್ಯಮ್ ಅನೃತಮ್, ತಥಾಪಿ ತದವಗತಿಃ ಸತ್ಯಮೇವ ಫಲಮ್ ॥

(ಸೂ. ಭಾ.೨–೧–೧೪)

77. ನ ಹಿ ಆತ್ಮವಿಜ್ಞಾನತತ್ಸ್ಮೃತಿಸಂತಾನವ್ಯತಿರೇಕೇಣ ಚಿತ್ತವೃತ್ತಿನಿರೋಧಸ್ಯ ಸಾಧನಮಸ್ತಿ । ಅಭ್ಯುಪಗಮ್ಯೇದಮುಕ್ತಮ್ । ನ ತು ಬ್ರಹ್ಮವಿಜ್ಞಾನವ್ಯತಿರೇಕೇಣ ಅನ್ಯನ್ಮೋಕ್ಷಸಾಧನಮ್ ಅವಗಮ್ಯತೇ ॥ (ಬೃ.ಭಾ.೧–೪–೭)

78. ಆತ್ಮಸತ್ಯಾನುಬೋಧೇನ ನ ಸಙ್ಕಲ್ಪಯತೇ ಯದಾ।
ಅಮನಸ್ತಾಂ ತದಾ ಯಾತಿ ಗ್ರಾಹ್ಯಾಭಾವೇ ತದಗ್ರಹಮ್ ॥

(ಮಾಂ.ಕಾ.೩–೩೨)

79. ಕಾಮ್ಯಪ್ರತಿಷಿದ್ಧಯೋರನಾರಮ್ಭಾತ್, ಆರಬ್ಧಸ್ಯ ಚ ಉಪಭೋಗೇನ ಕ್ಷಯಾತ್ ನಿತ್ಯಾನುಷ್ಠಾನೇನ ಚ ಪ್ರತ್ಯವಾಯಾಭಾವಾತ್ ಅಯತ್ನತ ಏವ ಸ್ವಾತ್ಮನ್ಯವಸ್ಥಾನಂ ಮೋಕ್ಷಃ । ಅಥವಾ ನಿರತಿಶಯಾಯಾಃ ಪ್ರೀತೇಃ ಸ್ವರ್ಗಶಬ್ದವಾಚ್ಯಾಯಾಃ ಕರ್ಮಹೇತುತ್ವಾತ್ ಕರ್ಮಭ್ಯ ಏವ ಮೋಕ್ಷ ಇತಿ ಚೇತ್ । ನ । ಕರ್ಮಾನೇಕತ್ವಾತ್ । ಅನೇಕಾನಿ ಹಿ ಆರಬ್ಧಫಲಾನಿ ಅನಾರಬ್ಧಫಲಾನಿ ಚ ಅನೇಕಜನ್ಮಾನ್ತರಕೃತಾನಿ ವಿರುದ್ಧಫಲಾನಿ ಕರ್ಮಾಣಿ ಸಂಭವನ್ತಿ। ಅತಃ ತೇಷ್ವನಾರಬ್ಧಫಲಾನಾಮ್ ಏಕಸ್ಮಿನ್ ಜನ್ಮನ್ಯುಪಭೋಗೇನ ಕ್ಷಯಾಸಂಭವಾತ್ ಶೇಷಕರ್ಮನಿಮಿತ್ತಶರೀರಾರಮ್ಭೋಪಪತ್ತಿಃ । ಕರ್ಮಶೇಷಸದ್ಭಾವಸಿದ್ಧಿಶ್ಚ ॥ (ತೈ. ಅವತರಣಿಕೆ)

80. ನಿರಾಗಮಾಃ ಪುರುಷೋತ್ಪ್ರೇಕ್ಷಾಮಾತ್ರನಿಬನ್ಧನಾಃ ತರ್ಕಾಃ ಅಪ್ರತಿಷ್ಠಿತಾ ಭವನ್ತಿ ಉತ್ಪ್ರೇಕ್ಷಾಯಾ ನಿರಙ್ಕುಶತ್ವಾತ್ । ತಥಾ ಹಿ ಕೈಶ್ಚಿತ್ ಅಭಿಯುಕ್ತೈಃ ಯತ್ನೇನ ಉತ್ಪ್ರೇಕ್ಷಿತಾಸ್ತರ್ಕಾಃ ಅಭಿಯುಕ್ತತರೈರನ್ಯೈಃ ಆಭಾಸ್ಯಮಾನಾ ದೃಶ್ಯನ್ತೇ। ತೈರಪಿ ಉತ್ಪ್ರೇಕ್ಷಿತಾಃ ಸನ್ತಃ ತತೋಽನ್ಯೈಃ ಆಭಾಸ್ಯನ್ತೇ ಇತಿ ನ ಪ್ರತಿಷ್ಠಿತತ್ವಂ ತರ್ಕಾಣಾಂ ಶಕ್ಯಮ್ ಆಶ್ರಯಿತುಮ್। ಪುರುಷಮತಿವೈರೂಪ್ಯಾತ್ ॥

(ಸೂ. ಭಾ. ೨–೧–೧೧)

81. ಅತಸ್ತನ್ಮತಮ್ ಅನಾದೃತ್ಯ ವೇದಾನ್ತಾರ್ಥತತ್ತ್ವಮ್ ಏಕತ್ವದರ್ಶನಂ ಪ್ರತಿ ಆದರವನ್ತೋ ಮುಮುಕ್ಷವಃ ಸ್ಯುಃ ಇತಿ ತಾರ್ಕಿಕಮತದೋಷಪ್ರದರ್ಶನಂ ಕಿಂಚಿದುಚ್ಯತೇಽಸ್ಮಾಭಿಃ, ನ ತು ತಾರ್ಕಿಕವತ್ ತಾತ್ಪರ್ಯೇಣ ॥

(ಪ್ರ. ಭಾ. ೬–೩)

82. ಶಾಸ್ತ್ರಜ್ಞೋಽಪಿ ಸ್ವಾತನ್ತ್ರ್ಯೇಣ ಬ್ರಹ್ಮಜ್ಞಾನಾನ್ವೇಷಣಂ ನ ಕುರ್ಯಾತ್........॥ (ಮುಂ. ಭಾ. ೧–೨–೧೨)

83. ರೂಪಾದ್ಯಭಾವಾದ್ ಹಿ ನಾಯಮರ್ಥಃ ಪ್ರತ್ಯಕ್ಷಸ್ಯ ಗೋಚರಃ । ಲಿಙ್ಗಾದ್ಯಭಾವಾಚ್ಚ ನಾನುಮಾನಾದೀನಾಮ್ । ಆಗಮಮಾತ್ರಸಮಧಿಗಮ್ಯ ಏವ ತು ಅಯಮರ್ಥಃ, ಧರ್ಮವತ್ ॥ (ಸೂ. ಭಾ. ೨–೧–೬)

84. ಕಿಂ ಚ ಅವಿವಾದಃ। ವಿರುದ್ಧಂ ವದನಂ ವಿವಾದಃ ಪಕ್ಷಪ್ರತಿಪಕ್ಷಪರಿಗ್ರಹೇಣ ಯಸ್ಮಿನ್ ನ ವಿದ್ಯತೇ ಸಃ ಅವಿವಾದಃ। ಕಸ್ಮಾತ್ ? ಯತಃ ಅವಿರುದ್ಧಶ್ಚ। ಯಃ

ಈದೃಶಃ ಯೋಗಃ ದೇಶಿತಃ ಉಪದಿಷ್ಟಃ ಶಾಸ್ತ್ರೇಣ ತಂ ನಮಾಮಿ ಅಹಮ್॥

(ಮಾಂ.ಕಾ.ಭಾ.೪–೨)

85. ಸತ್ಸು ತು ವೇದಾನ್ತವಾಕ್ಯೇಷು ಜಗತೋ ಜನ್ಮಾದಿಕಾರಣವಾದಿಷು ತದರ್ಥಗ್ರಹಣದಾರ್ಢ್ಯಾಯ ಅನುಮಾನಮಪಿ ವೇದಾನ್ತವಾಕ್ಯಾವಿರೋಧಿ ಪ್ರಮಾಣಂ ಭವತ್ ನ ನಿವಾರ್ಯತೇ ॥ (ಸೂ. ಭಾ. ೧–೧–೨)

86. ಶ್ರುತ್ಯನುಗೃಹೀತ ಏವ ಹಿ ಅತ್ರ ತರ್ಕಃ ಅನುಭವಾಙ್ಗತ್ವೇನ ಆಶ್ರೀಯತೇ ಸ್ವಪ್ನಾನ್ತಬುದ್ಧಾನ್ತಯೋರುಭಯೋಃ ಇತರೇತರವ್ಯಭಿಚಾರಾತ್ ಆತ್ಮನಃ ಅನನ್ವಾಗತತ್ವಮ್, ಸಂಪ್ರಸಾದೇ ಚ ಪ್ರಪಞ್ಚಪರಿತ್ಯಾಗೇನ ಸದಾತ್ಮನಾ ಸಂಪತ್ತೇಃ ನಿಷ್ಪ್ರಪಞ್ಚಸದಾತ್ಮತ್ವಮ್, ಪ್ರಪಞ್ಚಸ್ಯ ಬ್ರಹ್ಮಪ್ರಭವತ್ವಾತ್ ಕಾರ್ಯ ಕಾರಣಾನನ್ಯತ್ವನ್ಯಾಯೇನ ಬ್ರಹ್ಮಾವ್ಯತಿರೇಕಃ ಇತ್ಯೇವಂಜಾತೀಯಕಃ ॥

(ಸೂ. ಭಾ. ೨–೧–೬)

87. ತತ್ರ ಏತಸ್ಮಿನ್ ಅದ್ವೈತವಿದ್ಯಾಪ್ರಕರಣೇಽಭ್ಯುದಯಸಾಧನಾನಿ ಉಪಾಸನಾನಿ ಉಚ್ಯನ್ತೇ । ಕೈವಲ್ಯಸಂನಿಕೃಷ್ಟಫಲಾನಿ ಚ ಅದ್ವೈತಾತ್ ಈಷದ್ವಿಕೃತ ಬ್ರಹ್ಮವಿಷಯಾಣಿ ''ಮನೋಮಯಃ, ಪ್ರಾಣಶರೀರಃ'' (೩–೪–೧೨) ಇತ್ಯಾದೀನಿ ಕರ್ಮಸಮೃದ್ಧಿಫಲಾನಿ ಚ ಕರ್ಮಾಙ್ಗಸಂಬನ್ಧೀನಿ ।............ ತಾನ್ಯೇತಾನಿ ಉಪಾಸನಾನಿ ಸತ್ತ್ವಶುದ್ಧಿಕರತ್ವೇನ ವಸ್ತುತತ್ತ್ವಾವಭಾಸಕತ್ವಾತ್ ಅದ್ವೈತಜ್ಞಾನೋಪಕಾರಕಾಣಿ ಆಲಮ್ಬನವಿಷಯತ್ವಾತ್ ಸುಸಾಧ್ಯಾನಿ ಚ ಇತಿ ಪೂರ್ವಮ್ ಉಪನ್ಯಸ್ಯನ್ತೇ ॥ (ಛಾಂ. ಭಾ. ಅವ.)

88. ಸ್ವಾಭಾವಿಕಸ್ಯ ಆತ್ಮನಿ ಅವಿಕ್ರಿಯೇ ಅಧ್ಯಾರೋಪಿತಸ್ಯ ಕರ್ತ್ರಾದಿಕಾರಕ ಕ್ರಿಯಾಫಲಭೇದವಿಜ್ಞಾನಸ್ಯ ನಿವರ್ತಕಮ್ ಅದ್ವೈತವಿಜ್ಞಾನಮ್ । ......... ಉಪಾಸನಂ ತು ಯಥಾಶಾಸ್ತ್ರಸಮರ್ಪಿತಂ ಕಿಂಚಿದಾಲಮ್ಬನಮ್ ಉಪಾದಾಯ ತಸ್ಮಿನ್ ಸಮಾನಚಿತ್ತವೃತ್ತಿಸನ್ತಾನಕರಣಂ ತದ್ವಿಲಕ್ಷಣಪ್ರತ್ಯಯಾನನ್ತರಿತಮ್ ಇತಿ ವಿಶೇಷಃ ॥ (ಛಾಂ. ಭಾ. ಅವ.)

89. ಧ್ಯಾನಂ ಚಿನ್ತನಂ ಯದ್ಯಪಿ ಮಾನಸಮ್, ತಥಾಪಿ ಪುರುಷೇಣ ಕರ್ತುಮ್ ಅಕರ್ತುಮ್ ಅನ್ಯಥಾ ವಾ ಕರ್ತುಂ ಶಕ್ಯಮ್ । ಪುರುಷತನ್ತ್ರತ್ವಾತ್ । ಜ್ಞಾನಂ ತು ಪ್ರಮಾಣಜನ್ಯಮ್ । ಪ್ರಮಾಣಂ ಚ ಯಥಾಭೂತವಸ್ತುವಿಷಯಮ್ । ಅತಃ ಜ್ಞಾನಂ ಕರ್ತುಮ್ ಅಕರ್ತುಮ್ ಅನ್ಯಥಾ ವಾ ಕರ್ತುಮ್ ಅಶಕ್ಯಮ್। ಕೇವಲಂ ವಸ್ತುತನ್ತ್ರಮೇವ ತತ್, ನ ಚೋದನಾತನ್ತ್ರಮ್ ನಾಪಿ

ಪುರುಷತನ್ತ್ರಮ್ । ತಸ್ಮಾತ್ ಮಾನಸತ್ವೇಽಪಿ ಜ್ಞಾನಸ್ಯ ಮಹತ್ ವೈಲಕ್ಷಣ್ಯಮ್॥ (ಸೂ. ಭಾ. ೧–೧–೪)

90. ಯದಪಿ ಕೇಚಿತ್ ಆಹುಃ– 'ಪ್ರವೃತ್ತಿನಿವೃತ್ತಿವಿಧಿತಚ್ಛೇಷವ್ಯತಿರೇಕೇಣ ಕೇವಲವಸ್ತುವಾದೀ ವೇದಭಾಗೋ ನಾಸ್ತಿ' ಇತಿ । ತನ್ನ । ಔಪನಿಷದಸ್ಯ ಪುರುಷಸ್ಯ ಅನನ್ಯಶೇಷತ್ವಾತ್। ............. ಅತಃ ಭೂತವಸ್ತುಪರೋ ವೇದ ಭಾಗೋ ನಾಸ್ತಿ ಇತಿ ವಚನಂ ಸಾಹಸಮಾತ್ರಮ್ ॥ (ಸೂ. ಭಾ. ೧–೧–೪)

91. ಸೇಯಂ ಜ್ಞಾನನಿಷ್ಠಾ ಆರ್ತಾದಿಭಕ್ತಿತ್ರಯಾಪೇಕ್ಷಯಾ ಪರಾ ಚತುರ್ಥೀ ಭಕ್ತಿಃ ಇತ್ಯುಕ್ತಾ॥ (ಗೀ. ಭಾ. ೧೮–೫೫)

92. ತೇಷಾಂ ಚತುರ್ಣಾಂ ಮಧ್ಯೇ ಜ್ಞಾನೀ ತತ್ತ್ವವಿತ್ತ್ವಾತ್ ನಿತ್ಯಯುಕ್ತೋ ಭವತಿ। ಏಕಭಕ್ತಿಶ್ಚ ಅನ್ಯಸ್ಯ ಭಜನೀಯಸ್ಯ ಅದರ್ಶನಾತ್। ಅತಃ ಸಃ ಏಕಭಕ್ತಿಃ॥

(ಗೀ. ಭಾ. ೭–೧೭)

93. ಆತ್ಮೈವ ಸತ್ಯಮ್ ಆತ್ಮಸತ್ಯಮ್ ......... । ತಸ್ಯ ಶಾಸ್ತ್ರಾಚಾರ್ಯೋಪ ದೇಶಮ್ ಅನು ಅವಬೋಧಃ ಆತ್ಮಸತ್ಯಾನುಬೋಧಃ। ತೇನ ಸಙ್ಕಲ್ಪ್ಯಾಭಾವ ತಯಾ ನ ಸಙ್ಕಲ್ಪಯತೇ ದಾಹ್ಯಾಭಾವೇ ಜ್ವಲನಮಿವ ಅಗ್ನಿಃ । ಯದಾ ಯಸ್ಮಿನ್ ಕಾಲೇ ತದಾ ತಸ್ಮಿನ್ ಕಾಲೇ ಅಮನಸ್ತಾಮ್ ಅಮನೋಭಾವಂ ಯಾತಿ ಗ್ರಾಹ್ಯಾಭಾವೇ ತತ್ ಮನಃ ಅಗ್ರಹಂ ಗ್ರಹಣವಿಕಲ್ಪನಾವರ್ಜಿತಮ್ ಇತ್ಯರ್ಥಃ॥ (ಮಾಂ. ಕಾ. ಭಾ. ೩–೩೨)

94. ಅಕಲ್ಪಕಂ ಸರ್ವಕಲ್ಪನಾವರ್ಜಿತಮ್ ಅತ ಏವ ಅಜಂ ಜ್ಞಾನಂ ಜ್ಞಪ್ತಿಮಾತ್ರಂ ಜ್ಞೇಯೇನ ಪರಮಾರ್ಥಸತಾ ಬ್ರಹ್ಮಣಾ ಅಭಿನ್ನಂ ಪ್ರಚಕ್ಷತೇ ॥

(ಮಾಂ. ಕಾ. ಭಾ. ೩–೩೩)

95. ನ ಚ "ಆತ್ಮೇತ್ಯೇವೋಪಾಸೀತ" ಇತ್ಯಪೂರ್ವವಿಧಿಃ । ಕಸ್ಮಾತ್ ? ಆತ್ಮಸ್ವರೂಪಕಥನಾನಾತ್ಮಪ್ರತಿಷೇಧವಾಕ್ಯಜನಿತವಿಜ್ಞಾನವ್ಯತಿರೇಕೇಣ ಅರ್ಥಾನ್ತರಸ್ಯ ಕರ್ತವ್ಯಸ್ಯ ಮಾನಸಸ್ಯ ಬಾಹ್ಯಸ್ಯ ವಾ ಅಭಾವಾತ್ । ತತ್ರ ಹಿ ವಿಧೇಃ ಸಾಫಲ್ಯಂ ಯತ್ರ ವಿಧಿವಾಕ್ಯಶ್ರವಣಮಾತ್ರಜನಿತವಿಜ್ಞಾನವ್ಯತಿರೇಕೇಣ ಪುರುಷಪ್ರವೃತ್ತಿರ್ಗಮ್ಯತೇ ॥ (ಬೃ. ಭಾ. ೧–೪–೭)

96. ಯೇ ತು ಅಕ್ಷರಮ್ ಅನಿರ್ದೇಶ್ಯಮ್। ಅವ್ಯಕ್ತತ್ವಾತ್ ಅಶಬ್ದಗೋಚರಮ್ ಇತಿ ನ ನಿರ್ದೇಷ್ಟುಂ ಶಕ್ಯತೇ, ಅತಃ ಅನಿರ್ದೇಶ್ಯಮ್ ಅವ್ಯಕ್ತಂ ನ ಕೇನಾಪಿ ಪ್ರಮಾಣೇನ ವ್ಯಜ್ಯತೇ ಇತಿ ಅವ್ಯಕ್ತಮ್। ಪರ್ಯುಪಾಸತೇ ಪರಿ ಸಮನ್ತಾತ್

ಉಪಾಸತೇ । ಉಪಾಸನಂ ನಾಮ ಯಥಾಶಾಸ್ತ್ರಮ್ ಉಪಾಸ್ಯಸ್ಯ ಅರ್ಥಸ್ಯ ವಿಷಯೀಕರಣೇನ ಸಾಮೀಪ್ಯಮ್ ಉಪಗಮ್ಯ ತೈಲಧಾರಾವತ್ ಸಮಾನಪ್ರತ್ಯಯಪ್ರವಾಹೇಣ ದೀರ್ಘಕಾಲಂ ಯದಾಸನಂ ತತ್ ಉಪಾಸನಮ್ ಆಚಕ್ಷತೇ ॥ (ಗೀ. ಭಾ. ೧೨–೩)

97. ಅನನ್ಯಾಃ ಅಪೃಥಗ್ಭೂತಾಃ ಪರಂ ದೇವಂ ನಾರಾಯಣಂ ಮಾಮ್ ಆತ್ಮತ್ವೇನ ಗತಾಃ ಸನ್ತಃ ಚಿನ್ತಯನ್ತಃ ಮಾಂ ಯೇ ಜನಾಃ ಸಂನ್ಯಾಸಿನಃ ಪರ್ಯುಪಾಸತೇ ತೇಷಾಂ ಪರಮಾರ್ಥದರ್ಶಿನಾಂ ನಿತ್ಯಾಭಿಯುಕ್ತಾನಾಂ ಸತತಾಭಿಯೋಗಿನಾಂ ಯೋಗಕ್ಷೇಮಮ್....... ವಹಾಮಿ ಪ್ರಾಪಯಾಮಿ ಅಹಮ್ ॥

(ಗೀ. ಭಾ. ೯–೨೨)

98. ಚತುರ್ವಿಧಾ ಭಜನ್ತೇ ಮಾಂ ಜನಾಃ ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥

(ಗೀ. ೭–೧೬)

99. ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್ ಮಾಂ ಪ್ರಪದ್ಯತೇ ।
ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥ (ಗೀ. ೭–೧೯)

100. ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಃ ತೇ ಮೇ ಯುಕ್ತತಮಾ ಮತಾಃ ॥ (ಗೀ. ೧೨–೨)

101. ಯೇ ತ್ವಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ ।
ಸರ್ವತ್ರಗಮಚಿನ್ತ್ಯಂ ಚ ಕೂಟಸ್ಥಮಚಲಂ ಧ್ರುವಮ್ ॥ (ಗೀ. ೧೨–೩)

102. ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ ।
ನಿರ್ಮಮೋ ನಿರಹಙ್ಕಾರಃ ಸಮದುಃಖಸುಖಃ ಕ್ಷಮೀ ॥
ಸನ್ತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ ।
ಮಯ್ಯರ್ಪಿತಮನೋಬುದ್ಧಿರ್ಯೋ ಮದ್ಭಕ್ತಃ ಸ ಮೇ ಪ್ರಿಯಃ ॥
ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ ।
ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಃ ಸ ಚ ಮೇ ಪ್ರಿಯಃ ॥
ಅನಪೇಕ್ಷಃ ಶುಚಿರ್ದಕ್ಷಃ ಉದಾಸೀನೋ ಗತವ್ಯಥಃ ।
ಸರ್ವಾರಮ್ಭಪರಿತ್ಯಾಗೀ ಯೋ ಮದ್ಭಕ್ತಃ ಸ ಮೇ ಪ್ರಿಯಃ ॥

ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಙ್ಕ್ಷತಿ।
ಶುಭಾಶುಭಪರಿತ್ಯಾಗೀ ಭಕ್ತಿಮಾನ್ ಯಃ ಸ ಮೇ ಪ್ರಿಯಃ॥
ಸಮಃ ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ।
ಶೀತೋಷ್ಣಸುಖದುಃಖೇಷು ಸಮಃ ಸಙ್ಗವಿವರ್ಜಿತಃ॥
ತುಲ್ಯನಿನ್ದಾಸ್ತುತಿರ್ಮೌನೀ ಸನ್ತುಷ್ಟೋ ಯೇನ ಕೇನಚಿತ್।
ಅನಿಕೇತಃ ಸ್ಥಿರಮತಿರ್ಭಕ್ತಿಮಾನ್ ಮೇ ಪ್ರಿಯೋ ನರಃ॥
ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ।
ಶ್ರದ್ದಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ॥

(ಗೀ. ೧೨–೧೩ ರಿಂದ ೨೦)

103. ಇತಿ ಕ್ಷೇತ್ರಂ ತಥಾ ಜ್ಞಾನಂ ಜ್ಞೇಯಂ ಚೋಕ್ತಂ ಸಮಾಸತಃ।
ಮದ್ಭಕ್ತ ಏತದ್ವಿಜ್ಞಾಯ ಮದ್ಭಾವಾಯೋಪಪದ್ಯತೇ॥ (ಗೀ. ೧೩–೧೮)

104. ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಣ್ಡವ।
ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಙ್ಕ್ಷತಿ॥
ಉದಾಸೀನವದಾಸೀನೋ ಗುಣೈರ್ಯೋ ನ ವಿಚಾಲ್ಯತೇ।
ಗುಣಾ ವರ್ತನ್ತ ಇತ್ಯೇವ ಯೋಽವತಿಷ್ಠತಿ ನೇಙ್ಗತೇ॥
ಸಮದುಃಖಸುಖಃ ಸ್ವಸ್ಥಃ ಸಮಲೋಷ್ಟಾಶ್ಮಕಾಞ್ಚನಃ।
ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿನ್ದಾತ್ಮಸಂಸ್ತುತಿಃ॥
ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ।
ಸರ್ವಾರಮ್ಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ॥
ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ।
ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ॥

(ಗೀ. ೧೪–೨೨ ರಿಂದ ೨೬)

105. ಏತಾಂ ವಿಭೂತಿಂ ಯೋಗಂ ಚ ಮಮ ಯೋ ವೇತ್ತಿ ತತ್ತ್ವತಃ।
ಸೋಽವಿಕಮ್ಪೇನ ಯೋಗೇನ ಯುಜ್ಯತೇ ನಾತ್ರ ಸಂಶಯಃ॥(ಗೀ. ೧೦–೭)

106. ಯೋ ಹಿ ಲೋಕೇ ನಿರತಿಶಯಪ್ರಿಯಃ ಸ ಸರ್ವಪ್ರಯತ್ನೇನ ಲಬ್ಧವ್ಯೋ ಭವತಿ। ತಥಾ ಅಯಮಾತ್ಮಾ ಸರ್ವಲೌಕಿಕಪ್ರಿಯೇಭ್ಯಃ ಪ್ರಿಯತಮಃ। ತಸ್ಮಾತ್ ತಲ್ಲಾಭೇ

ಮಹಾನ್ ಯತ್ನಃ ಆಸ್ಥೇಯಃ ಇತ್ಯರ್ಥಃ । ಕರ್ತವ್ಯತಾಪ್ರಾಪ್ತಮಪಿ ಅನ್ಯಪ್ರಿಯಲಾಭೇ ಯತ್ನಮ್ ಉಜ್ಝಿತ್ವಾ ॥ (ಬೃ.ಭಾ.೧–೪–೮)

107. ಯೋಗಿನಾಮಪಿ ಸರ್ವೇಷಾಂ ಮದ್ಗತೇನಾನ್ತರಾತ್ಮನಾ ।
ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ ॥
(ಗೀ.೬–೪೭)

108. ಮಯ್ಯಾಸಕ್ತಮನಾಃ ಪಾರ್ಥ ಯೋಗಂ ಯುಞ್ಜನ್ ಮದಾಶ್ರಯಃ ।
ಅಸಂಶಯಂ ಸಮಗ್ರಂ ಮಾಂ ಯಥಾ ಜ್ಞಾಸ್ಯಸಿ ತಚ್ಛೃಣು ॥ (ಗೀ.೭–೧)

109. ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ ।
ಭಜನ್ತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಮ್ ॥
ಸತತಂ ಕೀರ್ತಯನ್ತೋ ಮಾಂ ಯತನ್ತಶ್ಚ ದೃಢವ್ರತಾಃ ।
ನಮಸ್ಯನ್ತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥ (ಗೀ. ೯–೧೩, ೧೪)

110. ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯನ್ತಃ ಪರಸ್ಪರಮ್ ।
ಕಥಯನ್ತಶ್ಚ ಮಾಂ ನಿತ್ಯಂ ತುಷ್ಯನ್ತಿ ಚ ರಮನ್ತಿ ಚ ॥
ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ ॥
ತೇಷಾಮೇವಾನುಕಮ್ಪಾರ್ಥಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥
(ಗೀ. ೧೦–೯, ೧೦, ೧೧)

111. ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।
ವಿವಿಕ್ತದೇಶಸೇವಿತ್ವಮರತಿರ್ಜನಸಂಸದಿ ॥ (ಗೀ. ೧೩–೧೦)

112. ನಿರ್ಮಾನಮೋಹಾ ಜಿತಸಙ್ಗದೋಷಾ
ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ ।
ದ್ವನ್ದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈ–
ರ್ಗಚ್ಛನ್ತ್ಯಮೂಢಾಃ ಪದಮವ್ಯಯಂ ತತ್ ॥ (ಗೀ.೧೫–೫)

113. ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮನ್ತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾನ್ತಿಂ ನಿಗಚ್ಛತಿ ।
ಕೌನ್ತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥
ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇऽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇऽಪಿ ಯಾನ್ತಿ ಪರಾಂ ಗತಿಮ್ ॥
ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ ।
ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್ ॥
ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ ॥

(ಗೀ. ೯–೩೦ರಿಂದ ೩೪)

114. ಭಕ್ತೇಃ ಪುನಃ ಗ್ರಹಣಾತ್ ಭಕ್ತಿಮಾತ್ರೇಣ ಕೇವಲೇನ ಶಾಸ್ತ್ರಸಮ್ಪ್ರದಾನೇ ಪಾತ್ರಂ ಭವತಿ ಇತಿ ಗಮ್ಯತೇ ॥ (ಗೀ. ಭಾ.೧೮–೬೮)

115. ಜ್ಞಾನದೀಪೇನ ವಿವೇಕಪ್ರತ್ಯಯರೂಪೇಣ, ಭಕ್ತಿಪ್ರಸಾದಸ್ನೇಹಾಭಿಷಿಕ್ತೇನ ಮದ್ಭಾವನಾಭಿನಿವೇಶವಾತೇರಿತೇನ ಬ್ರಹ್ಮಚರ್ಯಾದಿಸಾಧನಸಂಸ್ಕಾರವತ್ಪ್ರಜ್ಞಾವರ್ತಿನಾ ವಿರಕ್ತಾನ್ತಃಕರಣಾಧಾರೇಣ ವಿಷಯವ್ಯಾವೃತ್ತಚಿತ್ತರಾಗದ್ವೇಷಾ ಕಲುಷಿತನಿವಾತಾಪವರಕಸ್ಥೇನ ನಿತ್ಯಪ್ರವೃತ್ತೈಕಾಗ್ರ್ಯಧ್ಯಾನಜನಿತಸಮ್ಯಗ್ದರ್ಶನ ಭಾಸ್ವತಾ ಜ್ಞಾನದೀಪೇನ ಇತ್ಯರ್ಥಃ ॥ (ಗೀ. ಭಾ. ೧೦–೧೧)

116. ಶಾಸ್ತ್ರಾಚಾರ್ಯೋಪದೇಶೇನ ಜ್ಞಾನೋತ್ಪತ್ತಿಪರಿಪಾಕಹೇತುಸಹಕಾರಿಕಾರಣಂ ಬುದ್ಧಿವಿಶುದ್ಧತ್ವಾದಿ ಅಮಾನಿತ್ವಾದಿ ಚ ಅಪೇಕ್ಷ್ಯ ಜನಿತಸ್ಯ ಕ್ಷೇತ್ರಜ್ಞಪರ ಮಾತ್ಮೈಕತ್ವಜ್ಞಾನಸ್ಯ ಕರ್ತೃತ್ವಾದಿಕಾರಕಭೇದಬುದ್ಧಿನಿಬನ್ಧನಸರ್ವಕರ್ಮ ಸಂನ್ಯಾಸಸಹಿತಸ್ಯ ಸ್ವಾತ್ಮಾನುಭವನಿಶ್ಚಯರೂಪೇಣ ಯತ್ ಅವಸ್ಥಾನಮ್ ಸಾ ಪರಾ ಜ್ಞಾನನಿಷ್ಠಾ ಇತ್ಯುಚ್ಯತೇ ॥ (ಗೀ. ಭಾ. ೧೮–೫೫)

117. ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾತ್ಮಾನಂ ನಿಯಮ್ಯ ಚ ।
ಶಬ್ದಾದೀನ್ ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ ॥
ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ ।
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ॥
ಅಹಙ್ಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್ ।
ವಿಮುಚ್ಯ ನಿರ್ಮಮಃ ಶಾನ್ತೋ ಬ್ರಹ್ಮಭೂಯಾಯ ಕಲ್ಪತೇ ॥

(ಗೀ. ೧೮–೫೧ ರಿಂದ ೫೩)

118. ತತ್ ತತ್ರ ಯೋ ಯೋ ದೇವಾನಾಂ ಮಧ್ಯೇ ಪ್ರತ್ಯಬುಧ್ಯತ ಪ್ರತಿಬುದ್ಧವಾನ್ ಆತ್ಮಾನಮ್ ಯಥೋಕ್ತೇನ ವಿಧಿನಾ ಸ ಏವ ಪ್ರತಿಬುದ್ಧ ಆತ್ಮಾ ತದ್ ಬ್ರಹ್ಮ ಅಭವತ್ । ತಥರ್ಷೀಣಾಂ ತಥಾ ಮನುಷ್ಯಾಣಾಂ ಚ ಮಧ್ಯೇ । ದೇವಾನಾಮ್ ಇತ್ಯಾದಿ ಲೋಕದೃಷ್ಟ್ಯಪೇಕ್ಷಯಾ ॥ (ಬೃ.ಭಾ.೧–೪–೧೦)

119. ಆಜಾನ ಇತಿ ದೇವಲೋಕಃ । ತಸ್ಮಿನ್ ಆಜಾನೇ ಜಾತಾಃ ಆಜಾನಜಾಃ ದೇವಾಃ। ಸ್ಮಾರ್ತಕರ್ಮವಿಶೇಷತೋ ದೇವಸ್ಥಾನೇಷು ಜಾತಾಃ । ಕರ್ಮದೇವಾಃ ಯೇ ವೈದಿಕೇನ ಕರ್ಮಣಾ ಅಗ್ನಿಹೋತ್ರಾದಿನಾ ಕೇವಲೇನ ದೇವಾನ್ ಅಪಿಯನ್ತಿ। ದೇವಾಃ ತ್ರಯಸ್ತ್ರಿಂಶತ್ ಹವಿರ್ಭುಜಃ । ಇನ್ದ್ರಃ ತೇಷಾಂ ಸ್ವಾಮೀ । ತಸ್ಯ ಆಚಾರ್ಯಃ ಬೃಹಸ್ಪತಿಃ । ಪ್ರಜಾಪತಿಃ ವಿರಾಟ್ ತ್ರೈಲೋಕ್ಯಶರೀರಃ । ಬ್ರಹ್ಮಾ ಸಮಷ್ಟಿವ್ಯಷ್ಟಿರೂಪಃ ಸಂಸಾರಮಣ್ಡಲವ್ಯಾಪೀ ॥ (ತೈ.ಭಾ. ೨–೮)

120. ತಸ್ಮಾತ್ ಮುಮುಕ್ಷುರ್ದೇವಾರಾಧನಪರಃ ಶ್ರದ್ಧಾಭಕ್ತಿಪರಃ ಪ್ರಣೇಯೋಽಪ್ರಮಾದೀ ಸ್ಯಾತ್ ವಿದ್ಯಾಪ್ರಾಪ್ತಿಂ ಪ್ರತಿ ವಿದ್ಯಾಂ ಪ್ರತಿ ಇತಿ ವಾ ಕಾಕ್ವಾ ಏತದ್ದರ್ಶಿತಂ ಭವತಿ ದೇವಾಪ್ರಿಯವಾಕ್ಯೇನ ॥ (ಬೃ.ಭಾ.೧–೪–೧೦)

121. ಅಥವಾ ಯಃ ನಾಸ್ತಿ ಬ್ರಹ್ಮ ಇತಿ ಮನ್ಯತೇ ಸಃ ಸರ್ವಸ್ಯೈವ ಸನ್ಮಾರ್ಗಸ್ಯ ವರ್ಣಾಶ್ರಮಾದಿವ್ಯವಸ್ಥಾಲಕ್ಷಣಸ್ಯ ಅಶ್ರದ್ದಧಾನತಯಾ ನಾಸ್ತಿತ್ವಂ ಪ್ರತಿಪದ್ಯತೇ। ಬ್ರಹ್ಮಪ್ರತಿಪತ್ತ್ಯರ್ಥತ್ವಾತ್ ತಸ್ಯ । ಅತಃ ನಾಸ್ತಿಕಃ ಸಃ ಅಸನ್ ಅಸಾಧುಃ ಉಚ್ಯತೇ ಲೋಕೇ । ತದ್ವಿಪರೀತಃ ಸನ್ । ಯಃ ಅಸ್ತಿ ಬ್ರಹ್ಮ ಇತಿ ಚೇತ್ ವೇದ ಸಃ ತದ್ಬ್ರಹ್ಮಪ್ರತಿಪತ್ತಿಹೇತುಂ ಸನ್ಮಾರ್ಗಂ ವರ್ಣಾಶ್ರಮಾದಿವ್ಯವಸ್ಥಾಲಕ್ಷಣಂ ಶ್ರದ್ದಧಾನತಯಾ ಯಥಾವತ್ ಪ್ರತಿಪದ್ಯತೇ ಯಸ್ಮಾತ್ ತತಃ ತಸ್ಮಾತ್ ಸನ್ತಂ ಸಾಧುಮಾರ್ಗಸ್ಥಮ್ ಏನಂ ವಿದುಃ ಸಾಧವಃ । ತಸ್ಮಾತ್ ಅಸ್ತಿ ಇತ್ಯೇವ ಬ್ರಹ್ಮ ಪ್ರತಿಪತ್ತವ್ಯಮ್ ಇತಿ ವಾಕ್ಯಾರ್ಥಃ ॥ (ತೈ. ಭಾ. ೨–೬)

122. ವಾರ್ತಮಾನಿಕೇಷು ಪುರುಷೇಷು ತು ಬ್ರಹ್ಮವಿದ್ಯಾಫಲೇ ಅನೈಕಾನ್ತಿಕತಾ ಶಙ್ಕ್ಯತೇ ಇತ್ಯತ ಆಹ । ತಸ್ಯ ಹ ಬ್ರಹ್ಮ ವಿಜ್ಞಾತುಃ ಯಥೋಕ್ತೇನ ವಿಧಿನಾ ದೇವಾ ಮಹಾವೀರ್ಯಾಃ ಚ ನ ಅಪಿ ಅಭೂತ್ಯೈ ಅಭವನಾಯ ಬ್ರಹ್ಮಸರ್ವಭಾವಸ್ಯ ನೇಶತೇ ನ ಪರ್ಯಾಪ್ತಾ ಕಿಮುತಾನ್ಯೇ । ................ (ಭಾ. ಭಾ. ೧೬೭) ಅಥ ಯಃ ಕಶ್ಚಿತ್ ಅಬ್ರಹ್ಮವಿತ್ ಅನ್ಯಾಮ್ ಆತ್ಮನೋ ವ್ಯತಿರಿಕ್ತಾಂ ಯಾಂ ಕಾಂಚಿತ್ ದೇವತಾಮ್ ಉಪಾಸ್ತೇ ...................। ನ ಸ ಕೇವಲಮ್ ಏವಂಭೂತಃ ಅವಿದ್ವಾನ್ ಅವಿದ್ಯಾದೋಷವಾನೇವ, ಕಿಂ ತರ್ಹಿ ಯಥಾ ಪಶುಃ ಗವಾದಿಃ ವಾಹನದೋಹನಾದ್ಯುಪಕಾರ್ಯೈಃ ಉಪಭುಜ್ಯತೇ

ಏವಂ ಸ ಇಜ್ಯಾದ್ಯನೇಕೋಪಕಾರ್ಯೈಃ ಉಪಭೋಕ್ತವ್ಯತ್ವಾತ್ ಏಕೈಕೇನ ದೇವಾದೀನಾಮ್ । ....................... (ಭಾ. ಭಾ. ೧೭೬) ತತ್ರ ಲೋಕೇ ಬಹುಪಶುಮತೋ ಯಥಾ ಏಕಸ್ಮಿನ್ನೇವ ಪಶೌ ಆದೀಯಮಾನೇ ವ್ಯಾಘ್ರಾದಿನಾ ಅಪಹ್ರಿಯಮಾಣೇ ಮಹತ್ ಅಪ್ರಿಯಂ ಭವತಿ, ತಥಾ ಬಹುಪಶುಸ್ಥಾನೀಯೇ ಏಕಸ್ಮಿನ್ ಪುರುಷೇ ಪಶುಭಾವಾತ್ ವ್ಯುತ್ತಿಷ್ಠತಿ ಅಪ್ರಿಯಂ ಭವತಿ ಇತಿ ಕಿಂ ಚಿತ್ರಂ ದೇವಾನಾಮ್ ಬಹುಪಶ್ವಪಹರಣೇ ಇವ ಕುಟುಮ್ಬಿನಃ। ತಸ್ಮಾತ್ ಏಷಾಂ ದೇವಾನಾಮ್ ತನ್ನ ಪ್ರಿಯಮ್ ಕಿಂ ತತ್ ? ಯದೇತತ್ ಬ್ರಹ್ಮಾತ್ಮತತ್ತ್ವಂ ಕಥಂಚನ ಮನುಷ್ಯಾ ವಿದ್ಯುಃ ವಿಜಾನೀಯುಃ। .............................. । ಅತೋ ದೇವಾಃ ಪಶೂನಿವ ವ್ಯಾಘ್ರಾದಿಭ್ಯೋ ಬ್ರಹ್ಮವಿಜ್ಞಾನಾತ್ ವಿಘ್ನಮ್ ಆಚಿಕೀರ್ಷನ್ತಿ 'ಅಸ್ಮದುಪಭೋಗ್ಯತ್ವಾತ್ ಮಾ ವ್ಯುತ್ತಿಷ್ಠೇಯುಃ' ಇತಿ । ಯಂ ತು ಮುಮೋಚಯಿಷನ್ತಿ ತಂ ಶ್ರದ್ಧಾದಿಭಿರ್ಯೋಕ್ಷ್ಯನ್ತಿ ವಿಪರೀತಮ್ ಅಶ್ರದ್ಧಾದಿಭಿಃ ॥ (ಭಾ.ಭಾ.೧೭೮, ಬೃ.ಭಾ.೧–೪–೧೦)

123. ಬ್ರಹ್ಮವಿದ್ಯಾಫಲಪ್ರಾಪ್ತೌ ವಿಘ್ನಕರಣೇ ದೇವಾದಯ ಈಶತೇ ಇತಿ ಕಾ ಶಙ್ಕಾ ಇತಿ ? ಉಚ್ಯತೇ । ದೇವಾದೀನ್ ಪ್ರತಿ ಋಣವತ್ತ್ವಾತ್ ಮರ್ತ್ಯಾನಾಮ್ ..........................। ಆತ್ಮನೋ ವೃತ್ತಿಪರಿಪಿಪಾಲಯಿಷಯಾ ಅಧಮರ್ಣಾನಿವ ದೇವಾಃ ಪರತನ್ತ್ರಾನ್ ಮನುಷ್ಯಾನ್ ಪ್ರತಿ ಅಮೃತತ್ವಪ್ರಾಪ್ತಿವಿಘ್ನಂ ಕುರ್ಯುಃ ಇತಿ ನ್ಯಾಯ್ಯೈವ ಏಷಾ ಶಙ್ಕಾ............................... । ಬ್ರಹ್ಮವಿತ್ತ್ವೇ ಪಾರಾರ್ಥ್ಯನಿವೃತ್ತೇರ್ನ ಸ್ವಲೋಕತ್ವಂ ಪಶುತ್ವಂ ಚ ಇತ್ಯಭಿಪ್ರಾಯಃ ಅಪ್ರಿಯಾರಿಷ್ಟಿವಚನಾಭ್ಯಾಮ್ ಅವಗಮ್ಯತೇ। ತಸ್ಮಾತ್ ಬ್ರಹ್ಮವಿದೋ ಬ್ರಹ್ಮವಿದ್ಯಾಫಲಪ್ರಾಪ್ತಿಂ ಪ್ರತಿ ಕುರ್ಯುರೇವ ವಿಘ್ನಂ ದೇವಾಃ । ಪ್ರಭಾವವನ್ತಶ್ಚ ಹಿ ತೇ ॥ (ಬೃ.ಭಾ.೧–೩೪–೧೦)

124. ನನ್ವೇವಂ ಸತಿ ಅನ್ಯಾಸ್ವಪಿ ಕರ್ಮಫಲಪ್ರಾಪ್ತಿಷು ದೇವಾನಾಂ ವಿಘ್ನಕರಣಂ ಪೇಯಪಾನಸಮಮ್ । ಹನ್ತ ತರ್ಹಿ ಅವಿಸ್ರಮ್ಭೋಽಭ್ಯುದಯನಿಃಶ್ರೇಯಸಸಾಧನಾನುಷ್ಠಾನೇಷು । ತಥಾ ಈಶ್ವರಸ್ಯ ಅಚಿನ್ತ್ಯಶಕ್ತಿತ್ವಾತ್ ವಿಘ್ನಕರಣೇ ಪ್ರಭುತ್ವಮ್ । ತಥಾ ಕಾಲಕರ್ಮಮನ್ತ್ರೌಷಧಿತಪಸಾಮ್ । ಏಷಾಂ ಹಿ ಫಲಸಂಪತ್ತಿವಿಪತ್ತಿಹೇತುತ್ವಂ ಶಾಸ್ತ್ರೇ ಲೋಕೇ ಚ ಪ್ರಸಿದ್ಧಮ್ । ಅತೋಽಪ್ಯನಾಶ್ವಾಸಃ ಶಾಸ್ತ್ರಾರ್ಥಾನುಷ್ಠಾನೇ । ನ । ಸರ್ವಪದಾರ್ಥಾನಾಂ ನಿಯತನಿಮಿತ್ತೋಪಾದಾನಾತ್ । ..................... ಸುಖದುಃಖಾದಿಫಲನಿಮಿತ್ತಂ ಕರ್ಮ ಇತ್ಯೇತಸ್ಮಿನ್ ಪಕ್ಷೇ ಸ್ಥಿತೇ ವೇದಸ್ಮೃತಿನ್ಯಾಯಲೋಕಪರಿ

ಗೃಹೀತೇ ದೇವೇಶ್ವರಕಾಲಾಸ್ತಾವತ್ ನ ಕರ್ಮಫಲವಿಪರ್ಯಾಸಕರ್ತಾರಃ। ಕರ್ಮಣಾಂ ಕಾಙ್ಕ್ಷಿತಕಾರಕತ್ವಾತ್ । ..................... ಕರ್ಮಕಾಲ ದೈವದ್ರವ್ಯಾದಿಸ್ವಭಾವಾನಾಂ ಗುಣಪ್ರಧಾನಭಾವಸ್ತು ಅನಿಯತಃ ದುರ್ವಿಜ್ಞೇಯಶ್ಚ ಇತಿ ತತ್ಕೃತೋ ಮೋಹೋ ಲೋಕಸ್ಯ । ...................... ತತ್ರ ಕರ್ಮಣಃ ಪ್ರಾಧಾನ್ಯಮ್ ಅಙ್ಗೀಕೃತ್ಯ ವೇದಸ್ಮೃತಿವಾದಾಃ "ಪುಣ್ಯೋ ವೈ ಪುಣ್ಯೇನ ಕರ್ಮಣಾ ಭವತಿ ಪಾಪಃ ಪಾಪೇನ" (೩–೨–೧೩) ಇತ್ಯಾದಯಃ। ಯದ್ಯಪಿ ಏಷಾಂ ಸ್ವವಿಷಯೇ ಕಸ್ಯಚಿತ್ ಪ್ರಾಧಾನ್ಯೋದ್ಭವಃ ಇತರೇಷಾಂ ತತ್ಕಾಲೀನಪ್ರಾಧಾನ್ಯಶಕ್ತಿಸ್ತಮ್ಭಃ, ತಥಾಪಿ ನ ಕರ್ಮಣಃ ಫಲಪ್ರಾಪ್ತಿಂ ಪ್ರತಿ ಅನೈಕಾನ್ತಿಕತ್ವಮ್ । ಶಾಸ್ತ್ರನ್ಯಾಯನಿರ್ಧಾರಿತತ್ವಾತ್ ಕರ್ಮಪ್ರಾಧಾನ್ಯಸ್ಯ ॥(ಬೃ.ಭಾ.೧–೪–೧೦)

125. ಯಸ್ಯ ಹಿ ಅನಾತ್ಮಭೂತಂ ಫಲಂ ದೇಶಕಾಲನಿಮಿತ್ತಾನ್ತರಿತಮ್ ತತ್ರ ಅನಾತ್ಮವಿಷಯೇ ಸಫಲಃ ಪ್ರಯತ್ನೋ ವಿಘ್ನಾಚರಣಾಯ ದೇವಾನಾಮ್। ನ ತ್ವಿಹ ವಿದ್ಯಾಸಮಕಾಲೇ ಆತ್ಮಭೂತೇ ದೇಶಕಾಲನಿಮಿತ್ತಾನನ್ತರಿತೇ ಅವಸರಾನುಪಪತ್ತೇಃ॥ (ಬೃ.ಭಾ.೧–೪–೧೦)

126. ಯಥಾ ಲೋಕೇ ದ್ರಷ್ಟುಶ್ಚಕ್ಷುಷ ಆಲೋಕೇನ ಸಂಯೋಗೋ ಯತ್ಕಾಲಃ ತತ್ಕಾಲ ಏವ ರೂಪಾಭಿವ್ಯಕ್ತಿಃ । ಏವಮ್ ಆತ್ಮವಿಷಯಂ ವಿಜ್ಞಾನಂ ಯತ್ಕಾಲಮ್, ತತ್ಕಾಲ ಏವ ತದ್ವಿಷಯಾಜ್ಞಾನತಿರೋಭಾವ ಸ್ಯಾತ್। ಅತೋ ಬ್ರಹ್ಮವಿದ್ಯಾಯಾಂ ಸತ್ಯಾಮ್ ಅವಿದ್ಯಾಕಾರ್ಯಾನುಪಪತ್ತೇಃ ಪ್ರದೀಪ ಇವ ತಮಃಕಾರ್ಯಸ್ಯ॥ (ಬೃ.ಭಾ.೧–೪–೧೦)

127. ವ್ಯತಿರಿಕ್ತಾತ್ಮದರ್ಶನಪ್ರತಿಪತ್ತೇಃ ಪ್ರಾಗೇವ ಫಲಹೇತ್ವೋಃ ಆತ್ಮಾಭಿಮಾನಸ್ಯ ಸಿದ್ಧತ್ವಾತ್। ಪ್ರತಿಪನ್ನನಿಯೋಗಪ್ರತಿಷೇಧಾರ್ಥೋ ಹಿ ಫಲಹೇತುಭ್ಯಾಮ್ ಆತ್ಮನಃ ಅನ್ಯತ್ವಂ ಪ್ರತಿಪದ್ಯತೇ ನ ಪೂರ್ವಮ್॥ (ಗೀ. ಭಾ.೧೩–೨)

128. ಅನ್ಯೋಽನ್ಯಸ್ಮಿನ್ ಅನ್ಯೋನ್ಯಾತ್ಮಕತಾಮ್ ಅನ್ಯೋನ್ಯಧರ್ಮಾಂಶ್ಚ ಅಧ್ಯಸ್ಯ ಇತರೇತರಾವಿವೇಕೇನ ಅತ್ಯನ್ತವಿವಿಕ್ತಯೋರ್ಧರ್ಮಧರ್ಮಿಣೋಃ ಮಿಥ್ಯಾ ಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ 'ಅಹ ಮಿದಮ್', 'ಮಮೇದಮ್' ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ॥ (ಅಧ್ಯಾಸಭಾಷ್ಯ)

129. ಸರ್ವಜ್ಞಸ್ಯ ಈಶ್ವರಸ್ಯ ಆತ್ಮಭೂತೇ ಇವ ಅವಿದ್ಯಾಕಲ್ಪಿತೇ ನಾಮರೂಪೇ ತತ್ತ್ವಾನ್ಯತ್ವಾಭ್ಯಾಮ್ ಅನಿರ್ವಚನೀಯೇ ಸಂಸಾರಪ್ರಪಞ್ಚಬೀಜಭೂತೇ

ಸರ್ವಜ್ಞಸ್ಯ ಈಶ್ವರಸ್ಯ ಮಾಯಾ, ಶಕ್ತಿಃ, ಪ್ರಕೃತಿಃ ಇತಿ ಚ ಶ್ರುತಿಸ್ಮೃತ್ಯೋರಭಿಲಪ್ಯೇತೇ ॥ (ಸೂ. ಭಾ. ೨–೧–೧೪)

130. ಅವಿದ್ಯಾಪ್ರತ್ಯುಪಸ್ಥಾಪಿತನಾಮರೂಪಕೃತಕಾರ್ಯಕರಣಸಂಘಾತೋಪಾಧ್ಯವಿವೇಕತಾ ಹಿ ಭ್ರಾನ್ತಿಃ ಹಿತಾಕರಣಾದಿಲಕ್ಷಣಃ ಸಂಸಾರಃ, ನ ತು ಪರಮಾರ್ಥತೋಽಸ್ತಿ ಇತಿ ಅಸಕೃತ್ ಅವೋಚಾಮ ॥

(ಸೂ. ಭಾ. ೨–೧–೨೨)

131. ಶಕ್ನೋತೀಹೈವ ಯಃ ಸೋಢುಂ ಪ್ರಾಕ್ ಶರೀರವಿಮೋಕ್ಷಣಾತ್ ।
ಕಾಮಕ್ರೋಧೋದ್ಭವಂ ವೇಗಂ ಸ ಯುಕ್ತಃ ಸ ಸುಖೀ ನರಃ ॥

(ಗೀ. ೫–೨೩)

132. ಕಾಮಃ ಇನ್ದ್ರಿಯಗೋಚರಪ್ರಾಪ್ತೇ ಇಷ್ಟೇ ವಿಷಯೇ ಶ್ರೂಯಮಾಣೇ ಸ್ಮರ್ಯಮಾಣೇ ವಾ ಅನುಭೂತೇ ಸುಖಹೇತೌ ಯಾ ಗರ್ಧಿಃ ತೃಷ್ಣಾ ಸ ಕಾಮಃ । ಕ್ರೋಧಶ್ಚ ಆತ್ಮನಃ ಪ್ರತಿಕೂಲೇಷು ದುಃಖಹೇತುಷು ದೃಶ್ಯಮಾನೇಷು ಶ್ರೂಯಮಾಣೇಷು ಸ್ಮರ್ಯಮಾಣೇಷು ವಾ ಯೋ ದ್ವೇಷಃ ಸ ಕ್ರೋಧಃ । ತೌ ಕಾಮಕ್ರೋಧೌ ಉದ್ಭವಃ ಯಸ್ಯ ವೇಗಸ್ಯ ಸ ಕಾಮಕ್ರೋಧೋದ್ಭವೋ ವೇಗಃ । ರೋಮಾಞ್ಚನಪ್ರಹೃಷ್ಟನೇತ್ರವದನಾದಿಲಿಙ್ಗಃ ಅನ್ತಃಕರಣಪ್ರಕ್ಷೋಭರೂಪಃ ಕಾಮೋದ್ಭವೋ ವೇಗಃ । ಗಾತ್ರಕಮ್ಪಪ್ರಸ್ವೇದಸನ್ದಷ್ಟೌಷ್ಠಪುಟ ರಕ್ತನೇತ್ರಾದಿ ಲಿಙ್ಗಃ ಕ್ರೋಧೋದ್ಭವೋ ವೇಗಃ ॥ (ಗೀ. ಭಾ. ೫–೨೩)

133. "ಜ್ಞಾನಂ ಬ್ರಹ್ಮ" ಇತಿ ವಚನಾತ್ ಪ್ರಾಪ್ತಮ್ ಅನ್ತವತ್ತ್ವಮ್ । ಲೌಕಿಕಸ್ಯ ಜ್ಞಾನಸ್ಯ ಅನ್ತವತ್ತ್ವದರ್ಶನಾತ್ । ಅತಃ ತನ್ನಿವೃತ್ತ್ಯರ್ಥಮಾಹ ಅನನ್ತಮ್ ಇತಿ॥ (ತೈ. ಭಾ. ೨–೧)

134. ಕಾರ್ಯಮ್ ಆಕಾಶಾದಿಕಂ ಬಹುಪ್ರಪಞ್ಚಂ ಜಗತ್, ಕಾರಣಂ ಪರಂ ಬ್ರಹ್ಮ ತಸ್ಮಾತ್ ಕಾರಣಾತ್ ಪರಮಾರ್ಥತೋಽನನ್ಯತ್ವಮ್, ವ್ಯತಿರೇಕೇಣ ಅಭಾವಃ ಕಾರ್ಯಸ್ಯ ಅವಗಮ್ಯತೇ । ಕುತಃ ? ಆರಮ್ಭಣಶಬ್ದಾದಿಭ್ಯಃ ॥

(ಸೂ. ಭಾ. ೨–೧–೧೪)

135. ಯದಾ ತು ಸರ್ವದಿಕ್ಕಾಲಾದಿವಿವಿದಿಷಾ ನಿವರ್ತಿತಾ ಸ್ಯಾತ್ ಸರ್ವೋಪಾಧಿ ನಿರಾಕರಣದ್ವಾರೇಣ ತದಾ ಸೈನ್ಧವಘನವದೇಕರಸಂ ಪ್ರಜ್ಞಾನಘನಮನನ್ತರಮಬಾಹ್ಯಂ ಸತ್ಯಸ್ಯ ಸತ್ಯಮಹಂ ಬ್ರಹ್ಮಾಸ್ಮೀತಿ ಸರ್ವತೋ ನಿವರ್ತತೇ ವಿವಿದಿಷಾ ಆತ್ಮನ್ಯೇವಾವಸ್ಥಿತಾ ಪ್ರಜ್ಞಾ ಭವತಿ ॥ (ಬೃ.ಭಾ.೨–೩–೬)

136. ಚಿತ್ತಕಾಲಾ ಹಿ ಯೇ ಅನ್ತಸ್ಸ್ಥಾ। ಚಿತ್ತಪರಿಚ್ಛೇದ್ಯಾಃ ನಾನ್ಯಃ ಚಿತ್ತಕಾಲವ್ಯತಿರೇಕೇಣ ಪರಿಚ್ಛೇದಕಃ ಕಾಲೋ ಯೇಷಾಂ ತೇ ಚಿತ್ತಕಾಲಾಃ । ಕಲ್ಪನಾಕಾಲೇ ಏವ ಉಪಲಭ್ಯನ್ತೇ ಇತ್ಯರ್ಥಃ । ದ್ವಯಕಾಲಾಶ್ಚ ಭೇದಕಾಲಾಃ ಅನ್ಯೋನ್ಯ ಪರಿಚ್ಛೇದ್ಯಾಃ। ಯಥಾ ''ಆ ಗೋದೋಹನಮ್ ಆಸ್ತೇ।'' ಯಾವತ್ ಆಸ್ತೇ ತಾವತ್ ಗಾಂ ದೋಗ್ಧಿ ಯಾವದ್ ಗಾಂ ದೋಗ್ಧಿ ತಾವದಾಸ್ತೇ । ತಾವಾನಯಮ್ ಏತಾವಾನ್ ಸಃ ಇತಿ ಪರಸ್ಪರಪರಿಚ್ಛೇದ್ಯಪರಿಚ್ಛೇದಕತ್ವಂ (ಯೇಷಾಂ) ಬಾಹ್ಯಾನಾಂ ಭೇದಾನಾಂ ತೇ ದ್ವಯಕಾಲಾಃ। ಅನ್ತಃ ಚಿತ್ತಕಾಲಾಃ ಬಾಹ್ಯಾಶ್ಚ ದ್ವಯಕಾಲಾಃ ಕಲ್ಪಿತಾ ಏವ ತೇ ಸರ್ವೇ । ನ ಬಾಹ್ಯಃ ದ್ವಯಕಾಲತ್ವವಿಶೇಷಃ ಕಲ್ಪಿತತ್ವವ್ಯತಿರೇಕೇಣ ಅನ್ಯಹೇತುಕಃ। ಅತ್ರಾಪಿ ಹಿ ಸ್ವಪ್ನದೃಷ್ಟಾನ್ತೋ ಭವತ್ಯೇವ॥ (ಮಾಂ. ಕಾ. ಭಾ.೨–೧೪)

———————

# ಶ್ರೀ ಶಂಕರಸಿದ್ಧಾಂತಸಂಸ್ಮರಣ

(ಸಾಕ್ಷ್ಯನುಭವ)

ಭಾಗ – ೨

# ಪೀಠಿಕೆ

ಶ್ರೀಶಂಕರಭಗವತ್ಪಾದಾಚಾರ್ಯರ ಪ್ರಸ್ಥಾನತ್ರಯಭಾಷ್ಯದ ಮೇರೆಗೆ ವೇದಾಂತದ ಸಿದ್ಧಾಂತವನ್ನೂ ಸಾಧನೆಗಳನ್ನೂ ಸರಿಯಾಗಿ ಅರಿತುಕೊಳ್ಳುವದು ಈ ಕಾಲದಲ್ಲೂ ಜಿಜ್ಞಾಸುಗಳಿಗೆ ಪರಮ ದುಸ್ತರವಾಗಿರುತ್ತದೆ. ಅನೇಕ ವ್ಯಾಖ್ಯಾನಗಳು, ಅನೇಕ ಗ್ರಂಥಗಳು, ಅನೇಕ ಗುರುಪರಂಪರೆಯ ಪಂಥಗಳು, ಕೆಲವು ಆಧುನಿಕ ಅಧ್ಯಾತ್ಮ ಪ್ರಚಾರ ಮಂಡಲಿಗಳು (Mission) ಮುಂತಾದವುಗಳಿವೆಯಾದರೂ ಒಬ್ಬೊಬ್ಬರೂ ಒಂದೊಂದು ಬಗೆಯಾಗಿ ಅದೇ ಶಂಕರರ ಹೆಸರನ್ನು ತೆಗೆದುಕೊಂಡು ತಮತಮಗೆ ತಿಳಿದಂತೆ ಪ್ರಚಾರಮಾಡುತ್ತಿರುವದು ಈ ಕಾಲದಲ್ಲಿ ಕಂಡುಬರುತ್ತಿದೆ. ಕೇವಲ ಭಾವುಕರಿಗೆ, 'ಎಲ್ಲರೂ ದೊಡ್ಡವರು' ಎಂಬ ಭಾವನೆ ಬರುವದರಿಂದ ಅವರಿಗೇನೂ ಹೆಚ್ಚಿನ ತೊಂದರೆಯಾಗುವದಿಲ್ಲ. ಆದರೆ ತತ್ತ್ವ ಜಿಜ್ಞಾಸುಗಳಾಗಿ ಪ್ರತಿಯೊಂದನ್ನೂ ಅನುಭವಕ್ಕೆ ತೆಗೆದುಕೊಳ್ಳಬೇಕೆಂಬ ತವಕವುಳ್ಳವರಿಗೆ ಮಾತ್ರ ಒಂದು ದೊಡ್ಡತೊಡಕಿನ ಸಮಸ್ಯೆಯೇ ಎದುರಿಗೆ ಬಂದು ನಿಲ್ಲುತ್ತದೆ. ಇಂಥ ಸಂದರ್ಭದಲ್ಲಿ ಶ್ರೀ ಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯದ ನಿರೂಪಣೆಯು ಮಾತ್ರವೇ ಜಿಜ್ಞಾಸುಗಳಿಗೆ ಸೂಕ್ತವಾದ ಪರಿಹಾರದ ಮಾರ್ಗವನ್ನು ತೋರಿಸಿಕೊಡುವ ದಿವ್ಯ ಮಾರ್ಗದರ್ಶಿಯಾಗಿದೆ. ಆದರೆ ಈ ಪ್ರಸ್ಥಾನತ್ರಯಗಳನ್ನು ಅಧ್ಯಯನಮಾಡಿ ಅದರ ಒಳ ತಿರುಳನ್ನು ಅರಿತು ಅದರಿಂದ ಮಾರ್ಗದರ್ಶನ ಪಡೆಯಲು ಈಗಿನ ಜಿಜ್ಞಾಸುಗಳಿಗೆ ತುಂಬಾ ಕಷ್ಟಕರವಾದ ಕೆಲಸವಾಗಿರುತ್ತದೆ. ಮೊದಲೇ ಸಂಸ್ಕೃತಭಾಷೆಯ ಪರಿಚಯ ಬಹಳ ಜನಗಳಿಗೆ ಕಡಿಮೆ. ಭಾಷಾಪರಿಚಯವಿದ್ದರೂ ಸಾಂಪ್ರದಾಯಕಪ್ರಕ್ರಿಯೆಯ ರೀತಿಯನ್ನರಿಯುವದು ಇನ್ನೂ ಕಷ್ಟ. ಪಂಡಿತರು, ಶಾಸ್ತ್ರಿಗಳು – ಅಧ್ಯಯನಮಾಡುವ ಈಗಿನ ರೀತಿಯಲ್ಲೂ ಐಕಮತ್ಯವಿಲ್ಲ. ಹೀಗಾಗಿ ಇದೂ ತುಂಬಾ ಕಷ್ಟದ ಕೆಲಸವೇ ಆಗಿರುತ್ತದೆ. ಇಂಥ ವಿಷಮಸ್ಥಿತಿಯಲ್ಲಿ ಇಡೀ ಜಗತ್ತಿಗೇ ಶ್ರೀ ಶಂಕರಾಚಾರ್ಯರ ಪ್ರಸ್ಥಾನತ್ರಯ ಭಾಷ್ಯಗಳ ತಿರುಳನ್ನು ಜಿಜ್ಞಾಸುಗಳ ಹೃದಯಕ್ಕೆ ತಲುಪಿಸುವದಕ್ಕಾಗಿಯೇ ಅವತಾರಮಾಡಿರುವ ಅಪರ ಶಂಕರಭಗವತ್ಪಾದರೆನಿಸಿದ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರ** ಬೋಧನೆಗೆ ಒಂದು ಅತ್ಯಂತ ವಿಶಿಷ್ಟ ಸ್ಥಾನವಿದೆ. ಇಡೀ ಜಗತ್ತಿನ ಜಿಜ್ಞಾಸುಗಳು ಇತ್ತ ಕಡೆಗೆ ಕಣ್ಣರಳಿಸಿ ನೋಡಲು ಇದು ಸುಸಮಯವಾಗಿದೆ. ವೇದಾಂತವು ಸರ್ವವನ್ನೂ ತನ್ನೊಳಗಡಗಿಸಿಕೊಂಡು ಸರ್ವದರ ಸಾರವನ್ನೂ ಹೀರಿಕೊಂಡು ಸರ್ವವನ್ನೂ ಮೀರಿ ನಿಂತಿರುವ ಪರಮಾರ್ಥ ತತ್ತ್ವದ ಅನುಭವದಲ್ಲಿ ಪರ್ಯವಸಾನವನ್ನು ಹೊಂದುವ ಶಾಸ್ತ್ರವಾದುದರಿಂದ ಇದಕ್ಕೆ ವಿರುದ್ಧವಾದದ್ದು ಹಾಗೂ ಇದಕ್ಕೆ ಎದುರು ಹೇಳುವದು ಯಾವದೂ ಇಲ್ಲ ಎಂಬ ಗೌಡಪಾದಾಚಾರ್ಯರ ಮಾತಿನ (ಗೌ.ಕಾ. ೪೨) ಸತ್ಯತೆಯನ್ನು ಶ್ರೀಶ್ರೀಗಳವರು ತಮ್ಮ ಎಲ್ಲ ಗ್ರಂಥಗಳಲ್ಲಿಯೂ ತೋರಿಸಿಕೊಟ್ಟಿದ್ದಾರೆ. ಕನ್ನಡ–ಸಂಸ್ಕೃತ– ಇಂಗ್ಲಿಷು ಈ ಮೂರು ಭಾಷೆಗಳಲ್ಲಿ ಸುಮಾರು ನೂರೈವತ್ತಕ್ಕೂ ಹೆಚ್ಚು ಗ್ರಂಥಗಳನ್ನು ಬರೆದು,

ಪ್ರಕಟಿಸಿ ಈ ಮಹಾತ್ಮರು ಜಿಜ್ಞಾಸುಗಳಿಗೆ ಮಾಡಿದ ಮಹೋಪಕಾರವನ್ನು ಈ ಅಲ್ಪ ಲೇಖನಿಯು ವರ್ಣಿಸಲಸಮರ್ಥವಾಗಿದೆ.

ಈ ಮಹಾಮಹಿಮರ ಬೋಧನೆಯಿಂದ ತನ್ನ ಅಲ್ಪಶಕ್ತಿಗೆ ನಿಲುಕಿದಷ್ಟು ವಿಷಯಗಳನ್ನು ಗ್ರಹಿಸಿ ತನ್ನ ಅಲ್ಪಶಕ್ತಿಗನುಸರಿಸಿ ಸಾಧನೆಗಳನ್ನು ಜೀವನಕ್ಕಿಳಿಸಿಕೊಂಡು ನಾನು ಸ್ವತಃ ಪಡೆದುಕೊಂಡಿರುವ ನಿಶ್ಚಿತಾಭಿಪ್ರಾಯಗಳನ್ನು ಜನಗಳ ಎದುರಿಗೆ ಇಟ್ಟು ಈಗಿನ ಕಾಲದ ಜಿಜ್ಞಾಸುಗಳ ಗಮನವನ್ನು ಈ ಕಡೆಗೆ ಸೆಳೆಯಬೇಕೆಂಬ ಒಂದೇ ಉದ್ದೇಶದಿಂದ ಆಗಾಗ ಗ್ರಂಥಗಳನ್ನು ಬರೆಯುತ್ತಿರುತ್ತೇನೆ. ಹಿಂದಿನ ''ಶಂಕರದರ್ಶನ'' (ಬ್ರಹ್ಮಜ್ಞ ವಚನ ತ್ರಿಪದಿ) ಹಾಗೂ ''ಶಂಕರಸಂಸ್ಮರಣ''ಗಳಲ್ಲಿ ಪೀಠಿಕೆ ಹಾಗೂ ಗ್ರಂಥಶರೀರಗಳಲ್ಲಿ ಈ ನನ್ನ ಉದ್ದೇಶವನ್ನು ಸ್ಪಷ್ಟಗೊಳಿಸಿದ ಸಂಗತಿಯು ವಾಚಕರಿಗೆ ತಿಳಿದೇ ಇದೆ. ಅದೇ ರೀತಿಯಲ್ಲಿ ಈ ಗ್ರಂಥವೂ ಒಂದು ಸಣ್ಣ ಪ್ರಯತ್ನವಾಗಿರುತ್ತದೆ.

ಇಲ್ಲಿ ಪ್ರತಿಪಾದಿಸಿರುವ ವಿಷಯಗಳು ಸಾರ್ವತ್ರಿಕಾನುಭವದ ಆಧಾರದಿಂದಲೇ ನಿರೂಪಿಸಿದವುಗಳಾದ್ದರಿಂದ ಎಲ್ಲ ಮತ–ಪಂಥ–ಕಾಲ–ದೇಶ–ಲಿಂಗಾದಿಗಳ ಜನಾಂಗಗಳಿಗೂ ಇಲ್ಲಿ ನಿರೂಪಿಸಿದ ತತ್ತ್ವಗಳು ಪೂರ್ಣವಾಗಿ ಅನ್ವಯಿಸುತ್ತವೆ. ಅವರವರು ಆಯಾ ವ್ಯಕ್ತಿತ್ವದ ಪೂರ್ವಾಗ್ರಹಗಳನ್ನು ಬಿಟ್ಟು ಬಿಚ್ಚು ಮನಸ್ಸಿನಿಂದ ಒಳಸರಿದು ತತ್ತ್ವವನ್ನು ಇಲ್ಲಿ ಹೇಳಿರುವಂತೆಯೇ ಕಂಡುಕೊಂಡರೆ ಇದು ಅವರವರ ಅನುಭವಕ್ಕೇ ವೇದ್ಯವಾಗತಕ್ಕದ್ದಾಗಿರುತ್ತದೆ. ಆದ್ದರಿಂದ ಇದನ್ನು ಜಿಜ್ಞಾಸುಗಳೆಲ್ಲರೂ ಆದರಿಸುವರಾಗಿ ಭಾವಿಸಿದ್ದೇನೆ.

ಇಲ್ಲಿ ಸಾಕ್ಷ್ಯನುಭವ ಎಂಬುದನ್ನೇ ಕುರಿತು ಹೆಚ್ಚಿಗೆ ಚರ್ಚಿಸಿದ್ದೇನೆ. ಇದು ಇಡೀ ಶಾಂಕರವೇದಾಂತದ ಅಡಿಗಲ್ಲಾಗಿದೆ. ಈ ಅನುಭವವು ಸರ್ವರಿಗೂ ಒಂದೇ ಬಗೆಯಾಗಿರುವದರಿಂದ ಇದನ್ನು **ಸಾರ್ವತ್ರಿಕಾನುಭವ** ಎಂದೂ ಕಾಲದೇಶಾದಿ ಗಳಿಂದೊಡಗೂಡಿದ ಪೂರ್ಣದೃಶ್ಯರಾಶಿಯನ್ನು ಇದು ವಿಷಯೀಕರಿಸಿಕೊಳ್ಳುವದರಿಂದಲೂ ಕಾಲದೇಶಾದಿ ದ್ವೈತವೇ ಇಲ್ಲದಾಗ ತಾನೇ ತಾನಾಗಿರುವದರಿಂದಲೂ ಇದನ್ನು **ಪೂರ್ಣಾನುಭವ** ಎಂದೂ ನಾನು ಇಲ್ಲಿ ಕರೆದಿದ್ದೇನೆ. ವೇದಾಂತಶಾಸ್ತ್ರದ ಪ್ರಕಾರ ವಿವೇಕವನ್ನೆಲ್ಲ ಮಾಡಿ ಮುಗಿಸಿ ''ಇದೆಲ್ಲವೂ ಕೇವಲಾತ್ಮನೇ ಆಗಿರುವದು.'' ಎಂಬ ಅನುಭವದಲ್ಲಿಯೇ ನೆಲೆನಿಂತಿರುವ ಸ್ಥಿತಿಯನ್ನು 'ಪೂರ್ಣಾನುಭವ' ಎಂದು ಶ್ರೀಶ್ರೀಗಳವರು ಅನೇಕ ಕಡೆಗಳಲ್ಲಿ ಸ್ಪಷ್ಟೀಕರಿಸಿದ್ದಾರೆ. ಆದರೆ ನಾನು ಮಾತ್ರ ಈ 'ಪೂರ್ಣಾನುಭವವೆಂಬ ಶಬ್ದವನ್ನು ಇಲ್ಲಿ ಮೇಲೆ ವಿವರಿಸಿದ ಅರ್ಥದಲ್ಲಿಯೇ ಉಪಯೋಗಿಸಿದ್ದೇನೆ. ಹೀಗೆ ಸಾರ್ವತ್ರಿಕ ಪೂರ್ಣಾನುಭವವನ್ನು ವೇದಾಂತ ಶಾಸ್ತ್ರವು ಮಾತ್ರವೇ ತೋರಿಸಿಕೊಡಬಲ್ಲದ್ದಾಗಿರುತ್ತದೆ. ಈ ಅನುಭವಸ್ವರೂಪದೆಡೆಗೆ ಲಕ್ಷ್ಯವನ್ನು ತಿರುಗಿಸಲು ವೇದಾಂತಶಾಸ್ತ್ರವು ಉಪಯೋಗಿಸುವ ರೀತಿಯೇ **ಅಧ್ಯಾರೋಪ– ಅಪವಾದ** ಎಂಬ ಪ್ರಕ್ರಿಯೆ. ಇದರ ಬಗ್ಗೆ ಇಲ್ಲಿ ನಾನು ವಿಸ್ತಾರವಾಗಿ ಹೇಳಿಲ್ಲ. ಸಂಕ್ಷಿಪ್ತವಾಗಿ ಕೆಲ ಉದಾಹರಣೆಗಳೊಂದಿಗೆ ಹೇಳಿದ್ದೇನೆ. ಶಾಂಕರ

ವೇದಾಂತದ ತಿರುಳೆಲ್ಲವೂ ಈ ಪ್ರಕ್ರಿಯೆಯನ್ನು ತೋರಿಸುವದರಲ್ಲಿಯೇ – (ಇದರ ಮಹತ್ವವನ್ನು ತೋರಿಸುವದರಲ್ಲಿಯೇ) ಅಡಗಿರುತ್ತದೆ. ಇದರಂತೆ ವಸ್ತುತಂತ್ರವಾದ 'ಜ್ಞಾನ'ವನ್ನೂ ಕರ್ತೃತಂತ್ರಗಳಾದ ಉಪಾಸನೆ– ಅಥವಾ ಕರ್ಮಗಳನ್ನೂ ಅವುಗಳ ಸ್ವಭಾವ ಪರಿಶೀಲನೆಯಿಂದ ವಿಂಗಡಿಸಿ ತಿಳಿದುಕೊಳ್ಳದಿದ್ದರೆ ಶಾಂಕರ ವೇದಾಂತವನ್ನು ಅರ್ಥಮಾಡಿಕೊಳ್ಳುವದಕ್ಕಿಂತ ಅಪಾರ್ಥಮಾಡಿಕೊಳ್ಳುವ ಸಂಭವವೇ ಹೆಚ್ಚಾಗಿರುತ್ತದೆ. ಗೀತೆಯ ೨–೭೨ನೇ ಶ್ಲೋಕದಲ್ಲಿ ಹಾಗೂ ೮–೫ರಲ್ಲಿ ಸಮಾನವಾಗಿ ಬರುವ ''ಅಂತಕಾಲ'' ಎಂಬ ಶಬ್ದದ ಸಾಹಚರ್ಯದಿಂದ ಎರಡೂ ಒಂದೇ ತಾತ್ಪರ್ಯಗಳುಳ್ಳ ಶ್ಲೋಕಗಳು ಎಂದು ಭ್ರಮಿಸಿರುವ ಅನೇಕ ಪಂಡಿತರು ಈಗ್ಗೆ ಇದ್ದಾರೆ. ಹೀಗೆ ಈ ವಸ್ತುತಂತ್ರ, ಕರ್ತೃತಂತ್ರದ ಭೇದವನ್ನು ಅರಿಯದೆ ಅತಂತ್ರರಾಗಿರುವವರನ್ನು ಬೆನ್ನುಹತ್ತಿದರೆ ಮುಮುಕ್ಷುಗಳಿಗೆ ಸರಿಯಾದ ಮಾರ್ಗವು ಎಂದಿಗೂ ಸಿಕ್ಕಲಾರದು. ಈ ಬಗ್ಗೆಯೂ ಇಲ್ಲಿ ಸಂಕ್ಷಿಪ್ತವಾಗಿಯೇ ನಿರೂಪಿಸಿದ್ದೇನೆ. ಇದರಂತೆಯೇ ''ಪರಮಾರ್ಥ ದೃಷ್ಟಿ ವ್ಯವಹಾರ ದೃಷ್ಟಿ'' ಈ ಎರಡರ ಅಂತರವೂ ತಿಳಿಯದಿದ್ದರೆ ಶಾಂಕರ ವೇದಾಂತದ ನೆಲೆಯೇ ಸಿಕ್ಕಲಾರದು. ಸಾಕ್ಷ್ಯನುಭವದಲ್ಲಿಯೇ ನಿಲುವನ್ನು ತಕ್ಕೊಂಡು ಆಚಾರ್ಯರು ತಿಳಿಸುವ ''ಆತ್ಮಸ್ವರೂಪವು ನಿರ್ವಿಶೇಷವೂ ಅದ್ವಯವೂ ಆಗಿದೆ. ಅನಾತ್ಮವೆಲ್ಲವೂ ಆತ್ಮನನ್ನರಿಯದಾಗ ಇರುವಂತೆ ಕಾಣುವ ಹುಸಿತೋರಿಕೆ.'' ಮುಂತಾದ ಮಾತುಗಳನ್ನು ಅರ್ಥಮಾಡಿಕೊಳ್ಳಬೇಕು. ಇದೇ ಪರಮಾರ್ಥದೃಷ್ಟಿ. ಇನ್ನು ''ಆತ್ಮನು ಸರ್ವಜ್ಞ ಸರ್ವೇಶ್ವರನಾಗಿದ್ದು ಜಗತ್ತಿನ ಉತ್ಪತ್ತಿ ಸ್ಥಿತಿಲಯಗಳಿಗೆ ಕಾರಣನಾಗಿದ್ದಾನೆ. ಅದೇ ಆತ್ಮನನ್ನು ಇಂಥಿಂಥ ನಾಮರೂಪಗಳೊಂದಿಗೆ ಉಪಾಸನೆಮಾಡಿ ಶರಣಾಗತನಾಗಿ ಆಯಾ ಫಲಗಳನ್ನು ಪಡೆಯಬೇಕು.'' ಮುಂತಾದ ವಾಕ್ಯಗಳನ್ನು ಈಗಿನ 'ನಾನು' ಎಂಬುದನ್ನು ಹಿಡಿದು ಮುಂದಿನ ಜಗತ್ತು ಈ 'ನಾನು' ಇವೆರಡೂ ಆತ್ಮನಲ್ಲಿಯೇ ಇರುವದನ್ನು ಕಂಡುಕೊಂಡು ತುಲನಾತ್ಮಕ ದೃಷ್ಟಿಯಿಂದ ಅರ್ಥಮಾಡಿಕೊಳ್ಳಬೇಕು. ಇದೇ ವ್ಯವಹಾರ ದೃಷ್ಟಿ. ಈಗ ಭಾವನೆ ಶ್ರದ್ಧೆಗಳನ್ನೇ ಅವಲಂಬಿಸಿ ತತ್ತ್ವವನ್ನು ಗ್ರಹಿಸಬೇಕು. ಈ ರಹಸ್ಯವು ಗೊತ್ತಾಗದಿದ್ದುದಕ್ಕೆ ಕರ್ಮೋಪಾಸನೆಗಳನ್ನು ಹೀಗಳೆಯುವ ಹುಚ್ಚು ವೇದಾಂತಿಗಳು ಹುಟ್ಟಿ ಕೊಳ್ಳುತ್ತಿದ್ದಾರೆ. ಹೀಗೆ ಈ ನಾಲ್ಕು ರಹಸ್ಯಗಳನ್ನು ಅವಶ್ಯವಾಗಿ ಜಿಜ್ಞಾಸುಗಳು ತಿಳಿದುಕೊಳ್ಳಬೇಕು. ಇದಕ್ಕೆ ಸಹಾಯಕವಾಗಿ ಈ ಚಿಕ್ಕ ಹೊತ್ತಿಗೆಯು ಹೊರ ಬಂದಿದೆ. ಕೆಲವರಿಗಾದರೂ ಇದರಿಂದ ಉಪಯೋಗವಾಗಿದೆ ಎನಿಸಿದರೆ ನಾನು ಧನ್ಯನೆಂದು ಭಾವಿಸುತ್ತೇನೆ. ಶ್ರೀದತ್ತಸದ್ಗುರುವು ಜಿಜ್ಞಾಸುಗಳಿಗೆ ಇದನ್ನು ಗ್ರಹಿಸುವ ಯೋಗ್ಯತೆಯನ್ನೀಯಲೆಂದು ಪ್ರಾರ್ಥಿಸುತ್ತೇನೆ. ಮುಂದಿನ ಭಾಗದಲ್ಲಿ ಅವಿದ್ಯೆ, ಮಾಯೆ ಈ ವಿಚಾರಗಳನ್ನು ಕುರಿತು ಇದೇ ರೀತಿಯಲ್ಲಿ ಬರೆಯಬೇಕೆಂದಿದ್ದೇನೆ. ಶ್ರೀಸದ್ಗುರುವು ಆರೀತಿ ಪ್ರೇರೇಪಿಸಲಿ.

ತಾ॥ ೨೭–೯–೧೯೭೩ — ದೇವರಾಯ–ಕುಲಕರಣಿ.

|| ಓಂ ||

|| ಶ್ರೀಶಂಕರಾಚಾರ್ಯ ಸದ್ಗುರವೇ ನಮಃ ||

# ಶ್ರೀ ಶಂಕರಸಿದ್ಧಾಂತಸಂಸ್ಮರಣ

## ಪ್ರಕರಣ ಒಂದು

## ಸಾಕ್ಷ್ಯನುಭವ ಅಥವಾ ಔಪನಿಷತ್ ಪುರುಷ

### (೧) ಶಾಂಕರವೇದಾಂತದ ಮರ್ಮ

**ಪ್ರಶ್ನೆ :– ಶ್ರೀ ಶಂಕರಭಗವತ್ಪಾದರು ತಿಳಿಸುವ ಸಿದ್ಧಾಂತದ ಮರ್ಮವನ್ನು ಭೇದಿಸಲು ಅವಶ್ಯವಾಗಿ ತಿಳಿದಿರಲೇ ಬೇಕಾದ ಮುಖ್ಯ ವಿಷಯವಾವುದು ?**

ಉತ್ತರ :– ಕೇಳಿ. ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರು ರಚಿಸಿದ ''ಶಾಂಕರವೇದಾಂತಪ್ರಕ್ರಿಯೆ'' ಎಂಬ ಗ್ರಂಥದ ಕೊನೆಯ ಪುಟದಲ್ಲಿ ಇದಕ್ಕೆ ಉತ್ತರವನ್ನು ಬರೆದಿದ್ದಾರೆ. ಅದನ್ನೇ ಇಲ್ಲಿ ಮನದಂದು ಕೊಳ್ಳಬೇಕು.

**ಪ್ರಶ್ನೆ :– ಆ ಉತ್ತರವೇನೆಂದು ತಿಳಿಸುವಿರಾ ?**

ಉತ್ತರ :– ''ಇಂದ್ರಿಯಾಂತಃಕರಣಗಳಿಂದಾಗುವ ಅನುಭವಕ್ಕಿಂತಲೂ ಬೇರೆಯಾಗಿ ಸಾಕ್ಷಿಚೈತನ್ಯದ ಅವಲಂಬನೆಯಿಂದ ನಮಗೆ ಆಗುವ ನೇರಾದ ಅನುಭವವೊಂದಿದೆಯೆಂಬುದನ್ನು ಮನದಂದುಕೊಂಡ ಹೊರತು ಶಾಂಕರವೇದಾಂತದ ಮರ್ಮವನ್ನು ಭೇದಿಸಿ ತಿಳಿದುಕೊಳ್ಳುವದು ಯಾರಿಂದಲೂ ಆಗಲಾರದು''– ಎಂಬುದೇ ಆ ಉತ್ತರ.

**ಪ್ರಶ್ನೆ :– ಮೇಲಿನ ವಾಕ್ಯದ ಅಭಿಪ್ರಾಯವನ್ನು ಸ್ವಲ್ಪ ಬಿಡಿಸಿ, ವಿಂಗಡಿಸಿ ತಿಳಿಸುವಿರಾ ?**

ಉತ್ತರ :– ಆಗಲಿ. ಇನ್ನು ಮುಂದೆ ಹೀಗೆಯೇ ಪ್ರಶ್ನೋತ್ತರರೂಪದಿಂದ ವಿಸ್ತಾರವಾಗಿ ತಿಳಿಸಬೇಕೆಂದಿರುವ ಈ ಪೂರ್ಣಗ್ರಂಥಕ್ಕೆಲ್ಲಕ್ಕೂ ಇದು ಸೂತ್ರಪ್ರಾಯವಾಗಿರುವ ವಾಕ್ಯವು ಎಂದಿಟ್ಟುಕೊಳ್ಳೋಣ. ಈ ವಾಕ್ಯವನ್ನೇ ವೃತ್ತಿರೂಪದಿಂದ ಎಂದರೆ ಬಿಚ್ಚಿ ಬಿಡಿಸಿ ವಿಸ್ತಾರವಾಗಿ ಈ ಗ್ರಂಥದಲ್ಲೆಲ್ಲ ಹೇಳುತ್ತೇವೆ.

**ಪ್ರಶ್ನೆ :– ಒಳ್ಳೆಯದು, ಸಾಕ್ಷ್ಯನುಭವ ಎಂದರೇನು ? ಅದನ್ನು ಅರಿಯುವದೆಂದರೇನು ? ಅದನ್ನರಿತರೆ ಶಾಂಕರವೇದಾಂತತತ್ತ್ವದ ಮರ್ಮವೇ ಕೈಗೆಟಕುವದೆಂಬುದು ಹೇಗೆ ? ಇವುಗಳನ್ನು ಒಂದೊಂದಾಗಿ ದಯವಿಟ್ಟು ನಿಧಾನವಾಗಿ ತಿಳಿಸಿರಿ.**

ಉತ್ತರ :– ಕೇಳಿ. ಸಾಕ್ಷ್ಯನುಭವ ಎಂಬುದು ಹೊಸದಾಗಿ ಬರತಕ್ಕ ಅನುಭವ ವಿಶೇಷವಲ್ಲ. ನಮ್ಮೆಲ್ಲರ ಸ್ವರೂಪವಾಗಿ ನಮಗೆ ಉಂಟಾಗುವ ಅನುಭವ ಗಳನ್ನೆಲ್ಲವುಗಳನ್ನೂ ಬೆಳಗುತ್ತಾ ಇದ್ದೇ ಬಿಟ್ಟಿದೆ. ಹೊಸದಾಗಿ ಉಂಟಾಗಿ ಅನಂತರ ಮರೆಯಾಗುವ ಅನುಭವಗಳಿಗೆಲ್ಲಕ್ಕೂ ಅತೀತವಾಗಿ ಈ ಸಾಕ್ಷ್ಯನುಭವವು ಇದೆ.

**ಪ್ರಶ್ನೆ :– ಶ್ರುತಿಯಲ್ಲಿ ಈ ಬಗೆಯ ಸಾಕ್ಷ್ಯನುಭವವನ್ನು ಎಲ್ಲಿಯಾದರೂ ತಿಳಿಸಿರುತ್ತದೆಯೆ ?**

ಉತ್ತರ :– ಓಹೋ ! ಈ ಸಾಕ್ಷ್ಯನುಭವದ ವಿಷಯವನ್ನು ವೇದಾಂತಗಳು ಎಂದೆನಿಸಿಕೊಳ್ಳುವ ಶ್ರುತಿಗಳಲ್ಲಿ ಮಾತ್ರವೇ – ಎಲ್ಲಾ ಉಪನಿಷತ್ತುಗಳಲ್ಲಿಯೂ ಒಕ್ಕೊರಲಿನಿಂದ ಘಂಟಾಘೋಷವಾಗಿ ಸಾರಿರುತ್ತದೆ.

**ಪ್ರಶ್ನೆ :– ಹಾಗಾದರೆ ವೇದಾಂತವನ್ನುಳಿದು ಮಿಕ್ಕ ಶಾಸ್ತ್ರಗಳಲ್ಲಿ ಈ ಸಾಕ್ಷ್ಯನುಭವದ ವಿಷಯವು ಇಲ್ಲವೇ ಇಲ್ಲವೇನು ?**

ಉತ್ತರ :– ನಿಜ, ಈ ಸಾಕ್ಷ್ಯನುಭವದ ವಿಷಯವು ವೇದಾಂತೇತರಶಾಸ್ತ್ರ ಗಳಲ್ಲಿ ಇಲ್ಲವೇ ಇಲ್ಲ. ಕೇವಲ ಉಪನಿಷತ್ತುಗಳಲ್ಲಿ ಮಾತ್ರವೇ ಈ ಸಾಕ್ಷಿಯ ವಿಚಾರವು ಬಂದಿರುವದರಿಂದ ಈ ಸಾಕ್ಷ್ಯನುಭವಸ್ವರೂಪವನ್ನು **'ಉಪನಿಷತ್ ಪುರುಷ'** ಎಂದೇ ಕರೆದಿರುತ್ತದೆ. **''ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ''** (ಬೃ.೩– ೯–೨೬) ಎಂದು ಈ ಸಾಕ್ಷಿಸ್ವರೂಪವನ್ನು ಉಪನಿಷತ್ ಪುರುಷ– ಉಪನಿಷತ್ತು ಗಳಿಂದಲೇ ತಿಳಿದು ಬರತಕ್ಕವನು– ಎಂದೇ ಹೇಳಿರುತ್ತದೆ.

**ಪ್ರಶ್ನೆ :– ಆಗಲಿ. ಈಗ ಉಪನಿಷತ್ತುಗಳಲ್ಲಿ ಎಲ್ಲಿಯಾದರೂ ನೇರಾಗಿ 'ಸಾಕ್ಷಿ' ಎಂಬ ಶಬ್ದವನ್ನೇ ಉಪಯೋಗಿಸಿರುವದು ಕಂಡುಬಂದಿದೆಯೆ ?**

ಉತ್ತರ :– ಕೇಳಿ. ಶ್ವೇತಾಶ್ವತರ ಉಪನಿಷತ್ತಿನಲ್ಲಿ (೬–೧೧) **''ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ । ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥''** ಎಂಬ ಮಂತ್ರದಲ್ಲಿ ಸಾಕ್ಷಿ ಎಂಬ ಶಬ್ದವನ್ನೇ ನೇರಾಗಿ ಉಪಯೋಗಿಸಿರುತ್ತದೆ. ಭಗವದ್ಗೀತೆಯ ೯ನೇ ಅಧ್ಯಾಯದ ೧೮ನೇ ಶ್ಲೋಕದಲ್ಲಿಯೂ ಸಹ **''ಗತಿಃ ಭರ್ತಾ ಪ್ರಭುಃ ಸಾಕ್ಷೀ''** । ಎಂದು ಪರಮಾತ್ಮತತ್ತ್ವಕ್ಕೆ ನೇರಾಗಿ ಸಾಕ್ಷಿ ಶಬ್ದವನ್ನು ಉಪಯೋಗಿಸಿರುತ್ತದೆ.

**ಪ್ರಶ್ನೆ :– ಸಾಕ್ಷಿ ಎಂಬುದೇನೋ ಆಯಿತು. ಆದರೆ ನೀವು ಸಾಕ್ಷ್ಯನುಭವ ಎಂದು ಹೇಳುವಿರಲ್ಲ! ಆ ಮಾತಿಗೆ ಏನರ್ಥ ?**

ಉತ್ತರ :– ಒಳ್ಳೆಯ ಪ್ರಶ್ನೆ. ಕೇಳಿ, ಈ ಸಾಕ್ಷಿ ಎಂಬ ತತ್ತ್ವವು ಅನುಭವ ಸ್ವರೂಪವಾಗಿ ಅಖಂಡವಾಗಿದೆ, ಎಂಬುದು ಮೊದಲನೆಯ ಅರ್ಥ. ಇನ್ನು ಈ

ಸ್ವರೂಪದೆಡೆಗೆ ನಾವು ಗಮನಕೊಟ್ಟಾಗ ನಮ್ಮ ಅಂತಃಕರಣವು ಸಾಕ್ಷ್ಯನುಭವದಂತೆಯೇ ಹುಟ್ಟಿ ತೋರಿಕೊಳ್ಳುತ್ತದೆ. ಹೀಗೆ ಸಾಕ್ಷಿಯ ಸ್ವರೂಪದಂತೆಯೇ ಆಗಿ ನಿಂತ ಅರಿವನ್ನು– ಜ್ಞಾನವನ್ನು– ಸಾಕ್ಷ್ಯನುಭವ ಎಂದು ಕರೆಯುವದು ಎರಡನೆಯ ಅರ್ಥ. ಹೀಗೆ ಎರಡರ್ಥದಲ್ಲಿ ಈ ಶಬ್ದವನ್ನು ಉಪಯೋಗಿಸಬಹುದಾಗಿದೆ. ಸಾಕ್ಷ್ಯನುಭವದ ಅರಿವು ನಮಗಾಗಬೇಕು ಎಂಬಲ್ಲಿ ಎರಡನೆಯ ಅರ್ಥವು ವಿವಕ್ಷಿತವಾಗಿದೆ. ಮನಸ್ಸು ಇದ್ದುದನ್ನೂ ಇಲ್ಲದ್ದನ್ನೂ ಹೇಳುವದಕ್ಕೆ ಆಧಾರವಾದ ಅನುಭವವೇ ಸಾಕ್ಷ್ಯನುಭವ ಎಂಬಲ್ಲಿ ಮೊದಲನೆಯ ಅರ್ಥವು ವಿವಕ್ಷಿತವಾಗಿದೆ.

**ಪ್ರಶ್ನೆ :– ಸರಿ, ಈ ಎರಡು ಅರ್ಥಗಳನ್ನೂ ಶ್ರುತಿಗಳಲ್ಲಿ ಬಳಸಿರುವದನ್ನು ಸ್ವಲ್ಪ ತಿಳಿಸುವಿರಾ ?**

ಉತ್ತರ :– ಇಗೋ ನೋಡಿ. ಬೃಹದಾರಣ್ಯಕದ ೨–೫–೧೯ರಲ್ಲಿ ''ತದೇತತ್ ಬ್ರಹ್ಮ ಅಪೂರ್ವಂ ಅನಪರಂ ಅನಂತರಂ ಅಬಾಹ್ಯಂ ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ ॥'' ಎಂಬಲ್ಲಿ ಸರ್ವಾನುಭೂಃ ಎಂಬುದೇ ಈ ಸಾಕ್ಷಿಯು– ಈ ಬ್ರಹ್ಮವು, ಈ ಆತ್ಮನು– ಅನುಭವಸ್ವರೂಪನು ಎಂದು ಮೊದಲನೆಯ ಅರ್ಥದಲ್ಲಿಯೇ ಹೇಳಿರುತ್ತದೆ. ಇಲ್ಲಿ ಶ್ರೀಶಂಕರರು **''ಯಃ ಪ್ರತ್ಯಗಾತ್ಮಾ ದ್ರಷ್ಟಾ ಶ್ರೋತಾ ಮಂತಾ ಬೋದ್ಧಾ ವಿಜ್ಞಾತಾ ಸರ್ವಾನುಭೂಃ ಸರ್ವಾತ್ಮನಾ ಸರ್ವಮನುಭವತೀತಿ ಸರ್ವಾನುಭೂಃ''** ಎಂದು ವಿವರಿಸಿದ್ದಾರೆ.

**ಪ್ರಶ್ನೆ :– ಇದರ ತಾತ್ಪರ್ಯವೇನು ?**

ಉತ್ತರ :– ಇಂದ್ರಿಯ ಹಾಗೂ ಅಂತಃಕರಣದಲ್ಲಾಗುವ ಅನುಭವಗಳನ್ನೆಲ್ಲ ವ್ಯಾಪಿಸಿ ಬೆಳಗುತ್ತಿರುವದರಿಂದ ಎಲ್ಲವನ್ನೂ ಅನುಭವಿಸುವವನಂತೆ ಕಾಣುವ ಅನುಭವ ಸ್ವರೂಪವೇ ಈ ಬ್ರಹ್ಮವು ಎಂಬುದೇ ಇದರ ತಾತ್ಪರ್ಯವು.

**ಪ್ರಶ್ನೆ :– ಅಂತೂ ಸಾಕ್ಷಿಯು ಅನುಭವಸ್ವರೂಪನು ಎಂದು ಇಲ್ಲಿ ಹೇಳಿದಂತಾಯಿತೆನ್ನಿ !**

ಉತ್ತರ :– ಅಹುದು. ಸಾಕ್ಷಿಯು ಅನುಭವಸ್ವರೂಪನಾಗಿರುವನೆಂಬ ಕಾರಣದಿಂದಲೇ ಸಾಕ್ಷ್ಯನುಭವ ಎಂಬ ಪದವನ್ನು ಈ ಗ್ರಂಥಕ್ಕೆಲ್ಲಕ್ಕೂ ಸೂತ್ರಪ್ರಾಯವಾಗಿರುವ ವಾಕ್ಯದಲ್ಲಿ ಶ್ರೀಶ್ರೀಗಳು[1] ಉಪಯೋಗಿಸಿದ್ದಾರೆ.

**ಪ್ರಶ್ನೆ :– ಇನ್ನು ಎರಡನೆಯ ಅರ್ಥವನ್ನು ಶ್ರುತಿಯಲ್ಲಿ ಎಲ್ಲಿ ಹೇಳಿದೆ ?**

ಉತ್ತರ :– ಆತ್ಮಜ್ಞಾನ, ಜ್ಞಾನ, ವಿಜ್ಞಾನ ಮುಂತಾದ ಅನೇಕಶಬ್ದಗಳಿಂದ ಎರಡನೆಯ ಅರ್ಥವನ್ನೇ ಉಪನಿಷತ್ತುಗಳಲ್ಲೆಲ್ಲ ಮತ್ತೆ ಮತ್ತೆ ಉಪಯೋಗಿಸಿರುತ್ತದೆ.

1. ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು.

ವಿದ್ಯೆ, ಆತ್ಮವಿದ್ಯೆ, ಬ್ರಹ್ಮವಿದ್ಯೆ– ಎಂದರೂ ಇದೇ ಅರ್ಥ. ಅನುಭವಸ್ವರೂಪವೇ ಆದ ಸಾಕ್ಷಿ ಸ್ವರೂಪದೆಡೆಗೆ ಗಮನವನ್ನು ಹರಿಸಿದಾಗ ನಮ್ಮ ಅಂತಃಕರಣವೂ ಸಾಕ್ಷಿ ಸ್ವರೂಪದಂತೆಯೇ ಆಗಿ ನಿಲ್ಲುತ್ತದೆ. ಇದನ್ನೇ ''ಬ್ರಹ್ಮವಿದಾಪ್ನೋತಿ ಪರಂ'' (ತೈ.೨–೧) ಬ್ರಹ್ಮವನ್ನರಿತವನು ಆ ಪರಬ್ರಹ್ಮವನ್ನೇ ಹೊಂದುತ್ತಾನೆ– ಎಂದು ಹೇಳಿರುತ್ತದೆ. ಇದು ಎರಡನೆಯ ಅರ್ಥದಲ್ಲಿ ಉಪಯೋಗಿಸಿದ್ದು.

## (೨) ಅನುಭವ ಎಂದರೇನು ?

**ಪ್ರಶ್ನೆ :– ಸರಿ, ಈವರೆಗೆ (೧) ಸಾಕ್ಷ್ಯನುಭವವನ್ನು ಗೊತ್ತುಮಾಡಿಕೊಳ್ಳ ಬೇಕು. (೨) ಸಾಕ್ಷಿ, ಆತ್ಮ ಬ್ರಹ್ಮ– ಎಲ್ಲಾ ಒಂದೇ ಅರ್ಥ. (೩) ಈ ಸಾಕ್ಷಿಯ ವಿಷಯವು ಉಪನಿಷತ್ತಿನಲ್ಲಿಯೇ ತಿಳಿದುಬರುತ್ತದೆ. (೪) ಸಾಕ್ಷಿಯು ಅನುಭವ ಸ್ವರೂಪನು– ಎಂಬ ಮಾತುಗಳನ್ನು ತಾವು ಹೇಳಿದಂತಾಯಿತಲ್ಲವೇ ?**

ಉತ್ತರ :– ನಿಜ, ಸರಿಯಾಗಿ ತಿಳಿದಿರಿ.

**ಪ್ರಶ್ನೆ :– ಈಗ ಅನುಭವಸ್ವರೂಪ ಎಂದಿರಲ್ಲ! ಅನುಭವ ಎಂಬ ಶಬ್ದಕ್ಕೆ ಏನೇನು ಅರ್ಥಗಳಿವೆ ? ನೀವು ತಿಳಿಸುವ ಅನುಭವಸ್ವರೂಪವಾವುದು ? ಇದನ್ನಿಷ್ಟು ಚೆನ್ನಾಗಿ ಬಿಡಿಸಿ ತಿಳಿಸಬಾರದೆ ?**

ಉತ್ತರ :– ಆಗಲಿ, ಕೇಳಿ. ಲೋಕದಲ್ಲಿ ಕೆಲವರು ''ನಮಗೆಲ್ಲಾ ಅದರ ಅನುಭವ ಇದೆ. ನೀವು ಆ ಕೆಲಸಕ್ಕೆ ಹೋಗಬೇಡಿ'' ಎಂದು ಆಡಿಕೊಳ್ಳುವ ಮಾತನ್ನೇ ಹಿಡಿದು ಅನುಭವ ಎಂದರೆ ಹಿಂದೆ ಮಾಡಿದ (ತಿಳಿಯದೆ ಮಾಡಿದ) ತಪ್ಪು ಎಂಬರ್ಥದಲ್ಲಿ ವ್ಯಾಖ್ಯಾನಮಾಡುತ್ತಾರೆ. ಆದರೆ ಇಲ್ಲಿ ಅಂಥ ಅರ್ಥವೇನೂ ಇಲ್ಲ.

**ಪ್ರಶ್ನೆ :– ಸರಿ, ಲೋಕದಲ್ಲಿ ಅನುಭವ ಎಂಬುದಕ್ಕೆ ಇನ್ನೇನು ಅರ್ಥಗಳಿವೆ?**

ಉತ್ತರ :– ಹೊರಗಿನ ವಸ್ತುಗಳನ್ನು ನಮ್ಮ ಇಂದ್ರಿಯಗಳ ಮೂಲಕ ಅರಿತಾಗ ''ಇದು ಇಂಥ ವಸ್ತು'' ಎಂದು ಒಟ್ಟಾರೆ ಒಂದು ಕಲ್ಪನೆ ಬರುವದಲ್ಲವೆ ? ಇದನ್ನು ಪ್ರತ್ಯಯಾನುಭವ ಎನ್ನುತ್ತಾರೆ. ಈ ಪ್ರತ್ಯಯಾನುಭವಗಳು ಹೊರಗಿನಿಂದ ಒಳಕ್ಕೆ ಬರುತ್ತವೆ. ಉದಾಹರಣೆಗೆ – ಮಾವಿನಹಣ್ಣು ಎಂಬ ಪ್ರತ್ಯಯವು ಬರಬೇಕಿದ್ದರೆ ಅದರ ರೂಪ, ಸ್ಪರ್ಶ, ವಾಸನೆ, ರುಚಿಗಳನ್ನು ಅನುಕ್ರಮವಾಗಿ ಕಣ್ಣು, ತ್ವಗಿಂದ್ರಿಯ, ಮೂಗು, ನಾಲಗೆಗಳ ಮೂಲಕ ಗೊತ್ತುಮಾಡಿಕೊಂಡಿರುವದರಿಂದಲೇ ಇವೆಲ್ಲವುಗಳ ಒಟ್ಟಿನಿಂದ 'ಮಾವಿನಹಣ್ಣು' ಎಂಬ ಕಲ್ಪನೆಯು ನಮ್ಮಲ್ಲಿ ಬರುತ್ತದೆ. ಮಾವಿನಹಣ್ಣು ಎಂಬ ಶಬ್ದಕ್ಕೆ ಇಂಥಿಂಥ ರೂಪಾದಿಗಳುಳ್ಳದ್ದು ಎಂದು ಅರ್ಥವನ್ನಿಟ್ಟುಕೊಂಡಿರುವ ಮನಸ್ಸಿನ ಕಲ್ಪನೆಗೇ ಪ್ರತ್ಯಯ ಎನ್ನುತ್ತಾರೆ. ಹೀಗೆಯೇ ಹೊರಗಿನ ಎಲ್ಲಾ ವಸ್ತುಗಳ

ಬಗ್ಗೆಯೂ ನಮ್ಮಲ್ಲಿ ಪ್ರತ್ಯಯಗಳಿರುತ್ತವೆ, ಎಂತಲೇ ಆಯಾ ಶಬ್ದವನ್ನುಪಯೋಗಿಸಿದೊಡನೆಯೇ ಆಯಾ ವಸ್ತುಗಳೆಂದು ನಾವು ಅರ್ಥಮಾಡಿಕೊಳ್ಳುತ್ತೇವೆ. **ಅಂತೂ ಹೊರಗಿನ ವಸ್ತುಗಳ ಬಗ್ಗೆ ಇಂದ್ರಿಯಗಳ ಮೂಲಕ ನಮ್ಮೊಳಗೆ ಉಂಟಾಗುವ ಕಲ್ಪನೆಗೆ ಪ್ರತ್ಯಯ ಎನ್ನುತ್ತಾರೆ. ಈ ಪ್ರತ್ಯಯವನ್ನೇ ಪ್ರತ್ಯಯಾನುಭವ ಎಂದು ಇಲ್ಲಿ ಕರೆದಿರುತ್ತದೆ.**

**ಪ್ರಶ್ನೆ :— ಸರಿ, ಪ್ರತ್ಯಯಾನುಭವವು ಹೊರಗಿನ ವಸ್ತುಗಳ ಮೂಲಕ ಒಳಗೆ ತಯಾರಾಗಿ ಬಂದದ್ದು ಎಂದಾಯಿತು. ಇದಲ್ಲದೆ ಇನ್ನೂ ಯಾವ ಯಾವ ಪ್ರಕಾರದ ಅನುಭವಗಳಿವೆ ?**

ಉತ್ತರ :— ಇಂದ್ರಿಯಗಳ ಸಂಬಂಧವಿಲ್ಲದೆಯೇ ಅಂತಃಕರಣದಲ್ಲಿಯೇ ಎದ್ದುಕೊಂಡು ಹೊರಗಿನ ದೇಹಾದಿಗಳನ್ನೆಲ್ಲಾ ವ್ಯಾಪಿಸುವ ಮತ್ತೊಂದು ಜಾತಿಯ ಅನುಭವವೂ ನಮ್ಮಲ್ಲಿದೆ.

**ಪ್ರಶ್ನೆ :— ಅದು ಹೇಗೆ ?**

ಉತ್ತರ :— ನೋಡಿ, ನಮಗೆ ಕೋಪ ಬರುವದೆಂದಿಟ್ಟುಕೊಳ್ಳೋಣ. ಕೋಪವು ಹೇಗೆ ಬರುತ್ತದೆ ? ನಮಗೆ ಅನಿಷ್ಟವಾಗಿ, ನಮ್ಮ ಕಾಮನೆಗೆ ಅಡ್ಡವಾಗಿ ಯಾವದಾದರೂ ಬಂದೊಡನೆಯೇ ನಮ್ಮ ಅಂತಃಕರಣದಲ್ಲಿ ಕೋಪವು ಕೂಡಲೇ ಎದ್ದು ಕೊಳ್ಳುವದಲ್ಲವೆ?

**ಪ್ರಶ್ನೆ :— ಹೌದು.**

ಉತ್ತರ :— ಈ ಕೋಪವು ಅಂತಃಕರಣದಲ್ಲೆದ್ದು ಮನಸ್ಸು, ಇಂದ್ರಿಯ, ದೇಹ— ಮುಂತಾದ ಎಲ್ಲವನ್ನೂ ವ್ಯಾಪಿಸಿ ಅವುಗಳನ್ನೆಲ್ಲ ತನ್ನ ಸ್ವಾಧೀನಪಡಿಸಿಕೊಂಡು ಬಿಡುತ್ತದೆ. ಎಂತಲೇ ಕೋಪಿಷ್ಠನಾದವನು ಏನು ಬೇಕಾದರೂ ಮಾಡುತ್ತಾನೆ. ಅಲ್ಲವೆ ?

**ಪ್ರಶ್ನೆ :— ಹೌದು, ಆದ್ದರಿಂದಲೇ ಕೋಪವು ಒಳಗಿನಿಂದ ಹೊರಗೆ ಬಂದಂತಾಯಿತಲ್ಲವೆ ?**

ಉತ್ತರ :— ನಿಜ, ಇದನ್ನೇ ವೇದನಾನುಭವ ಅಥವಾ ವೇದನೆ ಎನ್ನುತ್ತೇವೆ. ಸುಖ, ದುಃಖ, ಈರ್ಷೆ, ಮತ್ಸರ, ಭಕ್ತಿ ಪ್ರೇಮ, ಶಾಂತಿ, ವೈರಾಗ್ಯ, ಆಸಕ್ತಿ ಅಹಂಕಾರ (ಸೊಕ್ಕು) — ಮುಂತಾದವುಗಳೆಲ್ಲವೂ ವೇದನಾನುಭವಗಳೇ ಆಗಿವೆ. ಇದೇ ಮತ್ತೊಂದು ಜಾತಿಯೆಂದು ನಾವು ಮೇಲೆ ಹೇಳಿದ್ದು.

**ಪ್ರಶ್ನೆ :— ಸರಿ, ಸರಿ, ಹೊರಗಿನಿಂದ ಒಳಕ್ಕೆ ಬರುವದು ಪ್ರತ್ಯಯಾನುಭವ, ಒಳಗಿನಿಂದ ಹೊರಕ್ಕೆ ಬರುವದು ವೇದನಾನುಭವ— ಎಂದು ಅನುಭವದಲ್ಲಿ ಎರಡು ವಿಧವಾಯಿತಲ್ಲವೇ ?**

ಉತ್ತರ – ಹೌದು.

**ಪ್ರಶ್ನೆ :– ಇದೇನೋ ಸಾಮಾನ್ಯಜನರಿಗೆ ಆಯಿತು. ಆದರೆ ಯೋಗಾದಿ ಸಾಧನೆಗಳನ್ನೂ ತಪಸ್ಸು, ದೇವತೋಪಾಸನೆಗಳನ್ನೂ ಮಾಡಿದವರಿಗೆ ಹಾಗೂ ಕೆಲವರಿಗೆ ಜನ್ಮಾಂತರಸಂಸ್ಕಾರದಿಂದ ಏನೂ ಮಾಡದೆಯೇ ಅಣಿಮಾದಿಸಿದ್ಧಿಗಳು, ದೇವತಾದರ್ಶನ, ಸಂಭಾಷಣೆಗಳು, ಜನ್ಮಾಂತರದ ನೆನಪುಗಳು– ಮುಂತಾದ ವಿಚಿತ್ರಾನುಭವಗಳು ಆಗುವದು ಕಂಡಿದೆಯಲ್ಲ! ಇವು ಏನು ?**

ಉತ್ತರ :– ಸಾಮಾನ್ಯರ ದೃಷ್ಟಿಯಿಂದ ಇವು ಅದ್ಭುತವೂ ದಿವ್ಯವೂ ಭವ್ಯವೂ ಆಗಿರುವ ಜನ್ಮಾಂತರಸಂಸ್ಕಾರ ಅಥವಾ ದಿವ್ಯಸಾಧನಗಳ ಮೂಲಕವೇ ಪ್ರಾಪ್ತವಾದ ಹೆಚ್ಚಿನ ತರಗತಿಯ ಅನುಭವಗಳೆನ್ನುವದರಲ್ಲಿ ಏನೂ ಸಂಶಯವಿಲ್ಲ. ಆದರೆ ಇವೂ ಸಹ ನಾವು ಹಿಂದೆ ಹೇಳಿದ ವೇದನಾನುಭವಗಳಲ್ಲಿಯೇ ಸಮಾವೇಶಗೊಳ್ಳುತ್ತವೆ.

**ಪ್ರಶ್ನೆ :– ಅದು ಹೇಗೆ ? ಕೋಪಾದಿಗಳಂತೆ ಈ ದಿವ್ಯಾನುಭವಗಳು ಸಹಜವಾಗಿ ಬರುವದಿಲ್ಲವಲ್ಲ ! ಸಾಧನೆಯಿಂದ ಸಾಧಿಸಿದ ಅನಂತರವೇ ಇವು ತೋರಿಕೊಳ್ಳುವವುಗಳಾಗಿವೆ. ಹೀಗಿದ್ದ ಮೇಲೆ ಇವು ವೇದನಾನುಭವದ ಸಾಲಿಗೆ ಏಕೆ ಸೇರುತ್ತವೆ ?**

ಉತ್ತರ :– ನಿಜ, ಇವು ಸಾಧನೆಯಿಂದಲೇ ಹೊಸದಾಗಿ ಬರುವವುಗಳೆಂಬ ಬಗ್ಗೆ ಸಂಶಯವೇ ಇಲ್ಲ. ಆದರೆ **ಅನುಭವ** ಎಂಬ ಶಬ್ದಕ್ಕೆ ಅನು ಎಂದರೆ ಅನುಸರಿಸಿ – ಆದಕ್ಕೆ ಹೊಂದಿ–ಭವ ಎಂದರೆ ಉಂಟಾಗು ಎಂದರ್ಥ. ಇಂದ್ರಿಯಗಳನ್ನನುಸರಿಸಿ **ಉಂಟಾದದ್ದು ಪ್ರತ್ಯಯಾನುಭವ ; ಅಂತಃಕರಣವನ್ನು ಅನುಸರಿಸಿ ಉಂಟಾದದ್ದು ವೇದನಾನುಭವ.** ಸಾಧನೆಗಳನ್ನನುಸರಿಸಿ ಅಂತಃಕರಣದಲ್ಲಿಯೇ ಉಂಟಾಗುವ ಈ ದಿವ್ಯಾನುಭವಗಳು ಅನುಭವ ಎಂಬ ಶಬ್ದದಲ್ಲಿಯೇ ಸೇರಿರುವದರಿಂದಲೂ 'ನಾನು ಇಂಥವನು' ಎಂಬ ಅರಿವಿನ ಆಶ್ರಯದಲ್ಲಿಯೇ ಹೊರತೋರಿಕೊಳ್ಳುವದರಿಂದಲೂ ಇವೂ ಸಹ ವೇದನಾನುಭವದಲ್ಲಿಯೇ ಸಮಾವೇಶವಾಗುತ್ತವೆ.

**ಪ್ರಶ್ನೆ :– ಮತ್ತೆ ಪ್ರತ್ಯಯಾನುಭವವಾಗುವದಕ್ಕೂ ಅಂತಃಕರಣವೇ ಬೇಕಲ್ಲವೆ? ಆಗ ಪ್ರತ್ಯಯಕ್ಕೂ ವೇದನೆಗೂ ವ್ಯತ್ಯಾಸವೇನು ?**

ಉತ್ತರ :– ನಿಜ. ಪ್ರತ್ಯಯಾನುಭವವೂ ಸಹ ಅಂತಃಕರಣದಲ್ಲಿಯೇ ಉಂಟಾಗುತ್ತದೆ. ಆದರೆ ಪ್ರತ್ಯಯವು ಉಂಟಾಗಲು ಇಂದ್ರಿಯಗಳ ಸಹಾಯವು ಬೇಕು. ವೇದನೆಗಳುಂಟಾಗಲು ಇಂದ್ರಿಯಗಳ ಹಂಗು ಏನೂ ಇಲ್ಲ. ವೇದನೆಗಳಿಗೆ ವಶವಾಗುವ ವಿಷಯದಲ್ಲಿ ಅಂತಃಕರಣಕ್ಕೆ ಇಂದ್ರಿಯಗಳ ನೆರವು ಬೇಕಿಲ್ಲ. ಹೊರಗಿನ

ವಸ್ತುಗಳ ಬಗ್ಗೆ ಪ್ರತ್ಯಯವನ್ನು ಮಾಡಿಕೊಳ್ಳಲು ಇಂದ್ರಿಯಗಳ ನೆರವು ಬೇಕೇಬೇಕು. ಆದ್ದರಿಂದ ಪ್ರತ್ಯಯಕ್ಕೂ ವೇದನೆಗೂ ಭೇದವಿದೆ.

**ಪ್ರಶ್ನೆ :– ಸರಿ, ಹೊರಗಿನ ವಿಷಯಾನುಭವ, ಒಳಗಿನ ಸಾಮಾನ್ಯ ವೇದನಾನುಭವ, ಸಾಧನೆಗಳಿಂದ ಹೊಸದಾಗಿ ಉಂಟಾಗುವ ಭವ್ಯದಿವ್ಯಾನುಭವ– ಇವುಗಳಿಗೆಲ್ಲಕ್ಕೂ ಅಂತಃಕರಣವಂತೂ ಬೇಕೆ ಬೇಕು ಎಂದಾಯಿತಲ್ಲವೆ ?**

ಉತ್ತರ :– ಅಹುದು. ಆದ್ದರಿಂದಲೇ ಆ ದಿವ್ಯಾನುಭವಗಳನ್ನೂ ಸಾಮಾನ್ಯ ವಾಗಿ ಎಲ್ಲರಿಗೂ ಉಂಟಾಗುವ ಕೋಪಾದಿ ಅನುಭವಗಳನ್ನು ಸೇರಿಸಿಯೇ ನಾವು ಒಟ್ಟಿಗೆ 'ವೇದನಾನುಭವ' ಎಂಬುದರಲ್ಲಿ ಅಡಕಮಾಡಿದ್ದೇವೆ.

**ಪ್ರಶ್ನೆ :–ಅಂತೂ ಈ ಎರಡು ಪ್ರಕಾರಗಳೂ ಗೊತ್ತಾದವು. ಈಗ ಸಾಕ್ಷ್ಯನುಭವ ಎಂದರೇನು ?**

ಉತ್ತರ :– ಇವೆರಡೂ ಅನುಭವಗಳಲ್ಲದೆ ಇವುಗಳಿಗಾಧಾರವಾಗಿ ತಾನು ಒಂದೇ ಬಗೆಯಲ್ಲಿರುತ್ತಾ ಇವುಗಳನ್ನೂ ಬೆಳಗುತ್ತಾ ಇವು ತೋರಿದಾಗ ಇವುಗಳನ್ನೆಲ್ಲ ವ್ಯಾಪಿಸಿ ಇವು ತೋರದಿರುವಾಗ ತಾನೇ ತಾನಾಗಿರುವ ಒಂದು ಬಗೆಯ ಅನುಭವ ವುಂಟು. ಅದೇ ಸಾಕ್ಷ್ಯನುಭವ.

**ಪ್ರಶ್ನೆ :– ಹೊರಗಿನ ವಸ್ತು ಇಂದ್ರಿಯಗಳು, ಅಂತಃಕರಣ– ಇವುಗಳನ್ನು ಅನುಸರಿಸಿ ಹುಟ್ಟುವದಕ್ಕಲ್ಲವೆ ನೀವು ಅನುಭವ ಎಂದು ವಿವರಿಸಿದ್ದು ?**

ಉತ್ತರ :– ನಿಜ.

**ಪ್ರಶ್ನೆ :– ಈಗ ಇವುಗಳಿಗಿಂತ ಬೇರಾಗಿ ಇವುಗಳನ್ನೂ ವ್ಯಾಪಿಸಿ, ಇವು ತೋರಿದರೂ ತೋರದಿದ್ದರೂ ಒಂದೇ ಬಗೆಯಲ್ಲಿರುವ ನಿಮ್ಮ ಸಾಕ್ಷಿಗೆ 'ಅನುಭವ' ಎಂಬ ಮಾತು ಹೊಂದುವದಿಲ್ಲವಲ್ಲ !**

ಉತ್ತರ :– ಅಹುದು. ಅನು – ಭವ ಎಂಬ ಶಬ್ದಾರ್ಥವು ಅದಕ್ಕೆ ಅನ್ವಯಿಸು ವದಿಲ್ಲ. ಆದರೂ ಈ ಅನುಭವಗಳಿಂದ ಬಿಡಿಸಿ ತಿಳಿಸಲು ಅನುಕೂಲವಾಗಲೆಂಬ ಉದ್ದೇಶದಿಂದ ಪ್ರತ್ಯಯಾನುಭವ, ವೇದನಾನುಭವ, ಸಾಕ್ಷ್ಯನುಭವ– ಎಂದು ಒಂದೊಂದು ಶಬ್ದವನ್ನು ಉಪಯೋಗಿಸಿದ್ದೇವೆ.

**ಪ್ರಶ್ನೆ :– ಹಾಗಾದರೆ ಸಾಕ್ಷ್ಯನುಭವ ಎಂದರೆ ನಾವು ಸಾಮಾನ್ಯವಾಗಿ ತಿಳಿದಿರುವ ಅನುಭವದ ಸಾಲಿಗೆ ಸೇರದಿರುವದೆಂದು ನಿಮ್ಮ ಅಭಿಪ್ರಾಯವೆ ?**

ಉತ್ತರ :– ಅಹುದು. ವೇದನ – ಪ್ರತ್ಯಯಗಳಿಲ್ಲದ್ದು ಅವುಗಳನ್ನು ಮೀರಿದ್ದು

ಅವುಗಳನ್ನು ಬೆಳಗತಕ್ಕದ್ದು, ಅವುಗಳು ತೋರಿದರೂ ಅಡಗಿದರೂ ತಾನು ಒಂದೇ ಬಗೆಯಾಗಿರತಕ್ಕದ್ದು– ಎಂಬುದಾಗಿ. ಈ ವೇದನಪ್ರತ್ಯಯಗಳ ಮೂಲಕವೇ ಅದನ್ನು ತಿಳಿಸಲಾಗುತ್ತದೆ. ಇದನ್ನೇ ಸಾಕ್ಷ್ಯನುಭವ, ಅನುಭವ ಎಂಬ ಶಬ್ದಗಳಲ್ಲಿ ಶ್ರೀ ಶ್ರೀಗಳು ತಮ್ಮ ಅನೇಕಗ್ರಂಥಗಳಲ್ಲಿ ಉಪಯೋಗಿಸಿದ್ದಾರೆ.

ಪ್ರಶ್ನೆ :– ಒಟ್ಟಿನಲ್ಲಿ ಅನುಭವ ಎಂದರೆ ವೇದನೆ ಪ್ರತ್ಯಯಗಳಲ್ಲದ ಸಾಕ್ಷ್ಯನುಭವ ಎಂದು ತಾನೆ ನಿಮ್ಮ ಅಭಿಪ್ರಾಯ ?

ಉತ್ತರ :– ಅಹುದು. ಹಾಗೆಯೇ ತಿಳಿಯಬೇಕು.

――――――

## (೩) ಸಾಕ್ಷ್ಯನುಭವವು ಪ್ರಮಾಣಕ್ಕೆ ನಿಲುಕುವದಲ್ಲ

ಪ್ರಶ್ನೆ :– ನೀವು ಮೇಲೆ ತಿಳಿಸಿರುವ ಅನುಭವವೆಂಬುದೊಂದು ಇದೆ ಎಂದು ಶಾಸ್ತ್ರಗಳೂ ಆಚಾರ್ಯರೂ ಹೇಳುವದರಿಂದ ಹಾಗೆಂದು ನಂಬಬೇಕೆ ? ಅಥವಾ ಈಗಲೇ ಆ ಅನುಭವವನ್ನು ಕಂಡುಕೊಳ್ಳಲು ಸಾಧ್ಯವೆ ?

ಉತ್ತರ :– ಓಹೋ ! ಈಗಲೇ ಇಲ್ಲಿಯೇ ಕಂಡುಕೊಳ್ಳಲು ಸಾಧ್ಯವಿದೆ. ಆದ್ದರಿಂದಲೇ ನಾವು ಹಿಂದೆ ಸಾಕ್ಷ್ಯನುಭವ ಎಂಬ ಶಬ್ದವನ್ನು ಎರಡರ್ಥಗಳಲ್ಲಿ ವಿವರಿಸುತ್ತ ಬಂದಿದ್ದೇವೆ. ಆ ಎರಡನೆಯ ಅರ್ಥವೇ ಈಗ ಪ್ರಸಕ್ತವಾಗಿದೆ.

ಪ್ರಶ್ನೆ :– ಹಾಗಾದರೆ ಈಗ ಹೇಳಿ, ವೇದನ, ಪ್ರತ್ಯಯಗಳಲ್ಲದ– ಅನುಭವವೊಂದಿದೆ– ಎಂಬುದಕ್ಕೆ ಪ್ರಮಾಣವೇನು ?

ಉತ್ತರ :– ಅದಿರಲಿ – ಮೊದಲು ವೇದನ ಪ್ರತ್ಯಯಗಳು ನಮ್ಮಲ್ಲಿವೆ ಎಂದು ನಾವು ಹೇಳಿದ್ದು ನಿಮಗೆ ಗೊತ್ತಾಯಿತಷ್ಟೆ ?

ಪ್ರಶ್ನೆ :– ಓಹೋ ! ಗೊತ್ತಾಗಿದೆ ಸ್ವಾಮಿ. ನೀವು ಅವುಗಳನ್ನು ಬಿಡಿಸಿ ಹೇಳಿದಾಗಲೇ ಅವು ಇಂಥಿಂಥವುಗಳು ಎಂದು ಗೊತ್ತು ಮಾಡಿಕೊಂಡಿದ್ದೇನೆ.

ಉತ್ತರ :– ಸರಿ, ಹಾಗೆ ಗೊತ್ತುಮಾಡಿಕೊಳ್ಳಲು ನೀವು ಯಾವ ಪ್ರಮಾಣವನ್ನು ಉಪಯೋಗಿಸಿದಿರಿ ?

ಪ್ರಶ್ನೆ :– ಏನೋ ಸ್ವಾಮಿ, ನೀವು ಹೇಳಿದ್ದು ಅರ್ಥವಾಗಲಿಲ್ಲ !

ಉತ್ತರ :– ನೋಡಿ, ಹೊರಗಿನ ರೂಪಕ್ಕೆ ಕಣ್ಣು ಪ್ರಮಾಣ ; ಒಳಗಿನ ಕೋಪಾದಿವೇದನೆಗಳಿಗೆ ಮನಸ್ಸು ಅಥವಾ ಅಂತಃಕರಣವು ಪ್ರಮಾಣ ಅಲ್ಲವೆ ?

ಪ್ರಶ್ನೆ :– ಅಹುದು.

ಉತ್ತರ :– ಅದರಂತೆಯೇ ಮನಸ್ಸು ಹೀಗಿದೆ, ಇದು ವೇದನೆ, ಇದು ಪ್ರತ್ಯಯ ಎಂದು ಗೊತ್ತುಪಡಿಸಿಕೊಳ್ಳುವಿರಲ್ಲ ! ಏತರ ಆಧಾರದಿಂದ ಅದನ್ನು ಗೊತ್ತುಪಡಿಸಿಕೊಳ್ಳು ವಿರಿ ?– ಎಂಬುದೇ ನನ್ನ ಪ್ರಶ್ನೆಯ ಅರ್ಥ ಗೊತ್ತಾಯಿತೆ ?

**ಪ್ರಶ್ನೆ :– ಹಾ ! ಗೊತ್ತಾಯಿತು. ವೇದನೆಗಳನ್ನೂ ಪ್ರತ್ಯಯಗಳನ್ನೂ ಗೊತ್ತು ಪಡಿಸಿಕೊಂಡಿದ್ದೇನೆ ಎಂಬುದು ನಿಜ. ಆದರೆ ಏತರಿಂದ ಗೊತ್ತುಪಡಿಸುತ್ತೇನೆ ಎಂಬುದು ಮಾತ್ರ ಗೊತ್ತಾಗಲೊಲ್ಲದು, ಸ್ವಾಮಿ.**

ಉತ್ತರ :– ಕೇಳಿ, ವೇದನೆ ಇಂಥದ್ದು ಪ್ರತ್ಯಯ ಇಂಥದ್ದು ಎಂದು ಅನುಭವದಿಂದಲೇ ಗೊತ್ತುಪಡಿಸುತ್ತೀರಿ. ಇದನ್ನೇ ನಾವು ಸಾಕ್ಷ್ಯನುಭವ ಎಂದದ್ದು.

**ಪ್ರಶ್ನೆ :– ಅದೇ, ನೀವು ಅನುಭವದಿಂದ ಎನ್ನುವಿರಲ್ಲ ಅದಕ್ಕೆ ಪ್ರಮಾಣ ವೇನು? ಎಂದೇ ನಾನು ಕೇಳಿದ್ದು. ಅಲ್ಲವೆ ?**

ಉತ್ತರ :– ನೀವು ಕೇಳಿದ್ದು ನಿಜ ಆದರೆ ಪ್ರಮಾಣವು ಹೊರಗಿನ ಪದಾರ್ಥಗಳನ್ನು ತೊರಿಸಬಲ್ಲದೇ ಹೊರತು ಈ ಪ್ರಮಾಣಗಳನ್ನೂ ವೇದನ ಪ್ರತ್ಯಯಗಳನ್ನೂ ಅಂತಃಕರಣವನ್ನೂ ಬೆಳಗಿ ತೋರಿಸುವ ಅನುಭವವನ್ನು ಎಂದಾದರೂ ತೋರಿಸೀತೆ ? ಸಾಧ್ಯವೇ ಇಲ್ಲ. ಈ ಅನುಭವವು ಪ್ರಮಾಣದಿಂದ ಸಿದ್ಧವಾಗುವ ಪ್ರಮೇಯವಲ್ಲ. ಸ್ವಯಂಸಿದ್ಧವಾಗಿರುವ ಪ್ರಮಾತೃವಿಗೂ ಆತ್ಮನಾದ ತತ್ತ್ವವಿದು.

**ಪ್ರಶ್ನೆ :– ಸರಿ, ಸರಿ. ''ನಾನು ಕಣ್ಣೇ ಮುಂತಾದ ಪ್ರಮಾಣಗಳಿಂದ ಹೊರಗಿನ ವಸ್ತುಗಳನ್ನರಿಯುವೆನು'' ಎಂಬುದನ್ನೆಲ್ಲವನ್ನೂ ಬೆಳಗಿ ತೋರಿಸುವ ದಾದ್ದರಿಂದ ಇದಕ್ಕೆ ಪ್ರಮಾಣದ ಹಂಗಿಲ್ಲ ಎಂದಾಯಿತಲ್ಲವೆ ?**

ಉತ್ತರ :– ಹಾ ! ಹಾಗೆ ತಿಳಿದುಕೊಳ್ಳಿ. ಇದನ್ನೇ ಶ್ರುತಿಗಳಲ್ಲಿ **''ಏತ ದಪ್ರಮೇಯಂ ಧ್ರುವಂ''** (ಬೃ.೪–೪–೨೦) ಎಂದಿದೆ. ಭಗವದ್ಗೀತೆಯಲ್ಲಿ **''ಅನಾ ಶಿನೋಽಪ್ರಮೇಯಸ್ಯ''** (೨–೧೮) ಎಂಬಲ್ಲಿ ಶ್ರೀಶಂಕರರು ಬರೆದಿರುವ ಒಂದು ವಾಕ್ಯವನ್ನು ಕೇಳಿ. **''ಸಿದ್ಧೇ ಹಿ ಆತ್ಮನಿ ಪ್ರಮಾತರಿ ಪ್ರಮಿತ್ಸೋಃ ಪ್ರಮಾಣಾನ್ವೇಷಣಾ ಭವತಿ । ನ ಹಿ ಪೂರ್ವಮ್ 'ಇತ್ಥಮಹಮ್' ಇತಿ ಆತ್ಮಾನಮ್ ಪ್ರಮಾಯ ಪಶ್ಚಾತ್ ಪ್ರಮೇಯಪರಿಚ್ಛೇದಾಯ ಪ್ರವರ್ತತೇ ।''**

**ಪ್ರಶ್ನೆ :– ಇದರ ತಾತ್ಪರ್ಯವೇನು ?**

ಉತ್ತರ :– ತಾನು ಸ್ವಯಂ ಸಿದ್ಧನಾಗಿರುವದರಿಂದಲೇ ತನ್ನ ಪ್ರಮಾಣಗಳಿಂದ ಪ್ರಮೇಯಗಳನ್ನರಿಯುವದಕ್ಕೆ ಇಚ್ಛಿಸುತ್ತಾನೆ. ಯಾವನೂ ತನ್ನನ್ನು ತಾನು ಪ್ರಮಾಣ

ಗಳಿಂದ ಪ್ರಮಾಣಿಸಿ ನೋಡಿಕೊಂಡು 'ನಾನು ಇಂಥವನು' ಎಂದು ತಿಳಿದುಕೊಂಡ ನಂತರ ಪ್ರಮೇಯಗಳನ್ನರಿಯಲು ತೊಡಗುವದಿಲ್ಲ. ಅರ್ಥಾತ್ 'ನಾನು' ಸ್ವತಃ ಸಿದ್ಧನಾಗಿ ಇದ್ದೇ ಬಿಟ್ಟಿದ್ದೇನಾದ್ದರಿಂದ ನನ್ನ ಪ್ರಮಾಣಗಳಿಂದ ನನ್ನ ಮುಂದಿರುವ ವಿಷಯಗಳನ್ನು ಬೇಕಾದರೆ ತಿಳಿಯುತ್ತೇನೆ ಎನ್ನುತ್ತಾನೆ– ಎಂಬುದು ಇದರ ತಾತ್ಪರ್ಯ. ಇಲ್ಲಿ ರಹಸ್ಯವೇನೆಂದರೆ – ''ನಾನು'' ಎಂದು ಕೊಳ್ಳುವ ಪ್ರಮಾತೃವಿಗೇ ಪ್ರಮಾಣದ ಹಂಗಿಲ್ಲ; ಎಂದರೆ ಪ್ರಮಾಣದಿಂದ ನಾನು ಸಿದ್ಧವಾಗಿಲ್ಲ; ನನ್ನಿಂದಲೇ ಪ್ರಮಾಣಗಳು ಸಿದ್ಧವಾಗಬೇಕು. ಕಣ್ಣಿನಿಂದ ನಾನು ಸಿದ್ಧನಾಗಿಲ್ಲ; ನನ್ನಿಂದ 'ಇದು ಕಣ್ಣು, ಇದು ಸರಿಯಾಗಿ ಕಾಣುತ್ತದೆ– ಕಾಣುವದಿಲ್ಲ' ಎಂಬುದು ಸಿದ್ಧವಾಗಿರುತ್ತದೆ. ಆದ್ದರಿಂದ ವ್ಯವಹಾರದಲ್ಲಿ 'ನಾನು' ಎಂಬ ಪ್ರಮಾತೃವೇ ಪ್ರಮಾಣಸಿದ್ಧನಲ್ಲದಿರುವಾಗ ಇನ್ನು ಈ ನಾನು ಎಂಬುದನ್ನೂ ಸಹ ಬೆಳಗಿ ತೋರಿಸುವ ಅನುಭವಸ್ವರೂಪಕ್ಕೆ ಪ್ರಮಾಣವೆಲ್ಲಿಂದ ಬರಬೇಕು ?

ಪ್ರಶ್ನೆ :– ತಿಳಿಯಿತು. ಈಗಿನ 'ನಾನು ಇಂಥವನು' ಎಂಬುದರಲ್ಲಿಯೇ ವೇದನೆ– ಪ್ರತ್ಯಯಗಳಿವೆ. ಈ 'ನಾನು' ಎಂಬುದನ್ನೂ ಬೆಳಗಿ ತೋರಿಸುವ ಅನುಭವಸ್ವರೂಪಕ್ಕೆ ಪ್ರಮಾಣದ ಹಂಗಿಲ್ಲ. ಅದು ತಾನೇ ಸ್ವಯಂಸಿದ್ಧವಾಗಿದೆ. ಎಂದಾಯಿ ತಲ್ಲವೇ ?

ಉತ್ತರ :– ಸರಿಯಾಗಿ ತಿಳಿದಿರಿ. ಒಟ್ಟಿನಲ್ಲಿ ಈ ಅನುಭವಸ್ವರೂಪವು ಪ್ರಮೇಯವಲ್ಲ, ಪ್ರಮಾಣಗೋಚರವಲ್ಲ, ಪ್ರಮಾತೃವಿಗೂ ಆಚೆಗಿದ್ದು ಇವೆಲ್ಲವು ಗಳನ್ನೂ ವ್ಯಾಪಿಸಿ ಬೆಳಗುವ ಕೇವಲಾನುಭವವೇ ಸಾಕ್ಷ್ಯನುಭವವು ಎಂದು ತಿಳಿಯ ಬೇಕು.

ಪ್ರಶ್ನೆ :– ಕೆಲವರು 'ಆತ್ಮನಿದ್ದಾನೆ' ಎಂಬುದಕ್ಕೆ ಎಂಟು ಪ್ರಮಾಣಗಳು ಎಂದು ಹೇಳುವರಲ್ಲ !

ಉತ್ತರ :– ಅದು ತಪ್ಪು. ಇದು ಪ್ರಮಾಣದಿಂದ ಸಿದ್ಧವಾಗುವ ತತ್ತ್ವವೇ ಅಲ್ಲ.

ಪ್ರಶ್ನೆ :– ಹಾಗಾದರೆ ಶ್ರೀಶಂಕರರು 'ಶಾಸ್ತ್ರಯೋನಿತ್ವಾತ್' ಎಂಬ ಸೂತ್ರದಲ್ಲಿ ಬ್ರಹ್ಮಕ್ಕೆ ಶಾಸ್ತ್ರವೇ ಪ್ರಮಾಣ ಎಂದು ಹೇಳಿರುವರಲ್ಲ !

ಉತ್ತರ :– ಹೌದು, ಬ್ರಹ್ಮಕ್ಕೆ ಶಾಸ್ತ್ರವು ಪ್ರಮಾಣ, ಶಾಸ್ತ್ರವೇ ಪ್ರಮಾಣ ; ಮಿಕ್ಕನಾದ್ದಲ್ಲ.

ಪ್ರಶ್ನೆ :– ಹಾಗಾದರೆ ಈವರೆಗೆ ಹೇಳಿದ್ದು (ಸಾಕ್ಷ್ಯನುಭವವು ಅಪ್ರಮೇಯ ಎಂದದ್ದು) ತಪ್ಪೆಂದಾಯಿತಲ್ಲ !

ಉತ್ತರ :– ಇಲ್ಲ. ಈ ತತ್ತ್ವವು ಎಂದಿಗೂ ಪ್ರಮೇಯವಲ್ಲದ್ದರಿಂದ ಅಪ್ರಮೇಯವೇ ಅಹುದು. ಆದರೆ ಶಾಸ್ತ್ರವು ಪ್ರಮಾಣ ಎಂದರೆ ಹೇಗೆ ? ಎಂಬುದನ್ನೇ ಚೆನ್ನಾಗಿ ತಿಳಿದುಕೊಳ್ಳಬೇಕು.

## (೪) ಸಾಕ್ಷ್ಯನುಭವಕ್ಕೆ ಶಾಸ್ತ್ರವು ಪ್ರಮಾಣವು ಹೇಗೆ ?

**ಪ್ರಶ್ನೆ :– ಆಗಲಿ, ಪ್ರಮೇಯವೇ ಆಗಿರದೆ ಪ್ರಮಾತೃವಿಗೂ ಆಚೆಗಿರುವ ಸ್ವಯಂಸಿದ್ಧವಾದ ಸಾಕ್ಷಿಸ್ವರೂಪಾನುಭವಕ್ಕೆ ಶಾಸ್ತ್ರವು ಪ್ರಮಾಣ ಎಂದರೇನರ್ಥ ?**

ಉತ್ತರ :– ಇದನ್ನು ನಿಧಾನವಾಗಿ ತಿಳಿದುಕೊಳ್ಳಬೇಕು. ಮೊದಲನೆಯದಾಗಿ ಶ್ರೀಶಂಕರರು ಈ ಸಾಕ್ಷ್ಯನುಭವದ ಬಗ್ಗೆ ಹೇಗೆ ಹೇಳಿದ್ದಾರೇನೆಂದರೆ **''ರೂಪಾದ್ಯಭಾವಾದ್ ಹಿ ನಾಯಮರ್ಥಃ ಪ್ರತ್ಯಕ್ಷಸ್ಯ ಗೋಚರಃ । ಲಿಙ್ಗಾದ್ಯಭಾವಾಚ್ಚ ನಾನುಮಾನಾದಿನಾಮ್ । ಆಗಮಮಾತ್ರಸಮಧಿಗಮ್ಯ ಏವ ತು ಅಯಮರ್ಥಃ, ಧರ್ಮವತ್''** (ಸೂ.ಭಾ.೨–೧–೬) ಇದಕ್ಕೆ ರೂಪಾದಿಗಳಿಲ್ಲದ್ದರಿಂದ ಇದು ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಗೆ ಗೋಚರಿಸತಕ್ಕದ್ದಲ್ಲ. ಹಾಗೂ ಲಿಂಗಾದಿಗಳಿಲ್ಲದ್ದರಿಂದ ಎಂದರೆ ಯಾವದೇ ವಿಧದ ಗುರುತು ಇಲ್ಲದ್ದರಿಂದ ಎಂದರ್ಥ ; ಇದು ಅನುಮಾನ, ಅರ್ಥಾಪತ್ತಿ – ಮುಂತಾದ ಪ್ರಮಾಣಗಳಿಗೂ ಸಿಕ್ಕತಕ್ಕದ್ದಲ್ಲ. ಮತ್ತೇನೆಂದರೆ ಧರ್ಮದಂತೆಯೇ ಇದು ಕೂಡ ಆಗಮಮಾತ್ರದಿಂದಲೇ ಎಂದರೆ ಶಾಸ್ತ್ರ, ಉಪನಿಷತ್ತುಗಳಿಂದ ಮಾತ್ರವೇ ತಿಳಿದುಬರುವ ತತ್ತ್ವವಾಗಿದೆ–ಎಂದಿದ್ದಾರೆ.

**ಪ್ರಶ್ನೆ :– ಹಾಗಾದರೆ ಶಾಸ್ತ್ರದಿಂದ ತಿಳಿದುಬರುವ ಧರ್ಮವು ಹೇಗೆ ಈಗಲೇ ಅನುಭವಕ್ಕೆ ಬರುವದಿಲ್ಲವೋ ಹಾಗೆಯೇ ಸಾಕ್ಷಿಸ್ವರೂಪವೂ ಸಹ ಈಗಲೇ ಅನುಭವಕ್ಕೆ ಬರುವದಿಲ್ಲ ಎಂದಾಯಿತಲ್ಲವೆ ?**

ಉತ್ತರ :– ಹಾಗಲ್ಲ. **''ನ ಧರ್ಮಜಿಜ್ಞಾಸಾಯಾಮಿವ ಶ್ರುತ್ಯಾದಯ ಏವ ಪ್ರಮಾಣಂ ಬ್ರಹ್ಮಜಿಜ್ಞಾಸಾಯಾಮ್ । ಕಿಂತು ಶ್ರುತ್ಯಾದಯೋಽನುಭವಾದಯಶ್ಚ ಯಥಾಸಂಭವಮಿಹ ಪ್ರಮಾಣಮ್ । ಅನುಭವಾವಸಾನತ್ವಾತ್ ಭೂತವಸ್ತುವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ ॥''** (ಸೂ.ಭಾ.೧–೧–೨) ಧರ್ಮಜಿಜ್ಞಾಸೆಯಂತೆ ಈ ಬ್ರಹ್ಮಜಿಜ್ಞಾಸೆಯಲ್ಲಿ ಬರೀ ಶ್ರುತಿಯೇ ಮುಂತಾದದ್ದು ಮಾತ್ರವೇ ಪ್ರಮಾಣವಲ್ಲ; ಮತ್ತೇನೆಂದರೆ ಶ್ರುತಿಯೇ ಮುಂತಾದ್ದಲ್ಲದೆ ಅನುಭವವೇ ಮುಂತಾದ್ದು ಸಹ ಸಂದರ್ಭಾನುಸಾರವಾಗಿ ಪ್ರಮಾಣವಾಗುತ್ತವೆ. ಬ್ರಹ್ಮವು ಮೊದಲೇ ಇದ್ದುಬಿಟ್ಟಿರುವದಾಗಿ ಬ್ರಹ್ಮವಿಜ್ಞಾನವು ವಿಚಾರಸಮಕಾಲದಲ್ಲಿಯೇ ಅನುಭವದಲ್ಲಿ ಕೊನೆಗಾಣತಕ್ಕದ್ದಾಗಿದೆ–ಎಂದು ಆಚಾರ್ಯರು ತಿಳಿಸಿದ್ದಾರೆ. ಇಲ್ಲಿ ಶ್ರುತಿಯೇ ಮುಂತಾದ್ದು ಎಂಬಲ್ಲಿ ಶ್ರುತಿಗೆ

ಸಮ್ಮತವಾದ ಯುಕ್ತಿ ತರ್ಕ ಎಂದರ್ಥ. ಹಾಗೂ ಸಂದರ್ಭಾನುಸಾರ ಎಂಬಲ್ಲಿ (ಯಥಾಸಂಭವಂ) ವೇದಾಂತಗಳಲ್ಲಿ ಹೇಳಿರುವ ಉಪಾಸನೆಗಳಿಗಾದರೆ ಶ್ರುತಿಯೇ ಮುಂತಾದವು ಮಾತ್ರ ಪ್ರಮಾಣ ; ಆದರೆ ವಸ್ತುಸ್ವರೂಪವನ್ನು ತಿಳಿಸುವಲ್ಲಿ ಮಾತ್ರ ಶ್ರುತಿಯ ಜೊತೆಗೆ ಅನುಭವವೂ ಅನುಭವಗಮ್ಯವಾದ ತರ್ಕವೂ ಬೇಕಾಗಿರುತ್ತವೆ– ಎಂಬುದು ಇಲ್ಲಿಯ ರಹಸ್ಯವು. ಒಟ್ಟಿನಲ್ಲಿ ಬ್ರಹ್ಮಕ್ಕೆ ಶಾಸ್ತ್ರವೇ ಪ್ರಮಾಣವಾದರೂ ಶಾಸ್ತ್ರವು ಹೇಳಿದ ಸ್ವರೂಪವು ಈಗಲೇ ನಮ್ಮ ಅನುಭವಕ್ಕೂ ಬರಲೇ ಬೇಕು– ಎಂಬುದು ತಾತ್ಪರ್ಯ.

**ಪ್ರಶ್ನೆ :– ಹಾಗಾದರೆ, ಶಾಸ್ತ್ರದ ಮಾತುಗಳನ್ನು ಅನುಸರಿಸಿದರೆ ಈಗಲೆ ಅನುಭವದಲ್ಲಿ ನಿಲುಗಡೆಯು ಬರುತ್ತದೆಯೆ ?**

ಉತ್ತರ :– ಓಹೋ ! ಸಂಶಯವೇಕೆ ? ಉತ್ತಮಾಧಿಕಾರಿಯಾಗಿದ್ದರೆ ಶಾಸ್ತ್ರವು ಉಪದೇಶಿಸುತ್ತಿರುವಂತೆಯೇ ತನ್ನೊಳಗೆ ಆ ಅನುಭವಸ್ವರೂಪವು ಗೋಚರಿಸಿಯೇ ತೀರುವದು. ಆ ವಿಷಯಕ್ಕೆ ಸಂಶಯವೇ ಇಲ್ಲ. **''ಕರ್ಮಫಲೇ ಹಿ ಸ್ವರ್ಗಾದೌ ಅನುಭವ ಅನಾರೂಢೇ ಸ್ಯಾದಾಶಂಕಾ ಭವೇದ್ವಾ ನ ವಾ ಇತಿ । ಅನುಭವಾರೂಢಂ ತು ಜ್ಞಾನಫಲಂ'' ''ಯತ್ ಸಾಕ್ಷಾದಪರೋಕ್ಷಾತ್ ಬ್ರಹ್ಮ'' ಇತಿ ಶ್ರುತೇಃ। 'ತತ್ತ್ವಮಸಿ' ಇತಿ ಚ ಸಿದ್ಧವದುಪದೇಶಾತ್ ।''** (ಸೂ.ಭಾ.೩–೩–೩೨) ಅನುಭವಕ್ಕೆ ಈಗಲೇ ಸಿಲುಕದಿರುವ ಕರ್ಮಫಲಗಳಾದ ಸ್ವರ್ಗಾದಿಗಳ ವಿಷಯದಲ್ಲಾದರೆ ಆದೀತೊ, ಇಲ್ಲವೋ– ಎಂಬ ಸಂಶಯವು ತಲೆಯೆತ್ತಬಹುದು ; ಆದರೆ, ಈಗಲೇ ಅನುಭವಕ್ಕೆ ಬಂದುಬಿಡುವ ಜ್ಞಾನದ ವಿಷಯದಲ್ಲಿ ಅನುಮಾನಕ್ಕೆ ಅವಕಾಶವೇ ಇಲ್ಲ. ಸಾಕ್ಷಾತ್ ಅಪರೋಕ್ಷವಾಗಿರುವ ನಮ್ಮ ಆತ್ಮವೇ ಬ್ರಹ್ಮವು ಎಂದು ಶ್ರುತಿಯು ತಿಳಿಸುತ್ತದೆ ಹಾಗೂ 'ಅದೇ ನೀನಿರುವಿ' ಎಂದು ಈಗಲೇ ಇದ್ದ ನಮ್ಮ ಸ್ವರೂಪವನ್ನೇ ಹೇಳುತ್ತದೆ– ಎಂಬುದಾಗಿ ಆಚಾರ್ಯರು ಸ್ಪಷ್ಟವಾಗಿ ತಿಳಿಸಿರುತ್ತಾರೆ.

**ಪ್ರಶ್ನೆ :– ಹಾಗಾದರೆ, ಶಾಸ್ತ್ರವೆಂಬ ಪ್ರಮಾಣದಿಂದ ತಿಳಿದುಬರುವ ಈ ಆತ್ಮಸ್ವರೂಪವು– ಸಾಕ್ಷಿಸ್ವರೂಪವು–ಪ್ರಮೇಯವೆಂದೇ ಆಯಿತಲ್ಲ ! ಈ ಹಿಂದೆ ಇದು ಅಪ್ರಮೇಯ ಎಂದು ತಾನೆ ನೀವು ಹೇಳಿದ್ದು ? ಈಗ ಪ್ರಮಾಣಕ್ಕೆ ನಿಲುಕಿದ್ದು ಎಂದಾಯಿತಲ್ಲ?**

ಉತ್ತರ :– ನೀವು ಕೇಳಿದ ಪ್ರಶ್ನೆಯು ಅತ್ಯಂತ ಯೋಗ್ಯವಾಗಿದೆ. ಭಾಷ್ಯದಲ್ಲಿ ಇದೇ ಬಗೆಯ ಪ್ರಶ್ನೆಯನ್ನು ಆಚಾರ್ಯರು ಪೂರ್ವಪಕ್ಷಿಯ ಬಾಯಿಂದ ಹೊರಡಿಸಿದ್ದಾರೆ.

**ಪ್ರಶ್ನೆ :– ಅದೆಲ್ಲಿ ? ಹೇಗೆ ಪ್ರಶ್ನೆ ಬಂದಿದೆ, ಸ್ವಾಮಿ ?**

ಉತ್ತರ :– ಕೇಳಿ. ಸೂತ್ರಭಾಷ್ಯದ ೧–೧–೪ರಲ್ಲಿ ''**ಅವಿಷಯತ್ವೇ ಬ್ರಹ್ಮಣಃ ಶಾಸ್ತ್ರಯೋನಿತ್ವಾನುಪಪತ್ತಿಃ ಇತಿ ಚೇತ್**'' । ಬ್ರಹ್ಮವು ಏತಕ್ಕೂ ವಿಷಯವಲ್ಲ ಎಂದಾದರೆ ಶಾಸ್ತ್ರವೇ ಬ್ರಹ್ಮದ ವಿಷಯಕ್ಕೆ ಪ್ರಮಾಣವು ಎಂಬ ಮಾತು ಹೊಂದುವದಿಲ್ಲವಲ್ಲ ! ಎಂದು ಅಲ್ಲಿ ಪ್ರಶ್ನಿಸಲಾಗಿದೆ.

**ಪ್ರಶ್ನೆ :– ಸರಿ, ಚೆನ್ನಾಗಿದೆ. ಇದಕ್ಕೆ ಉತ್ತರವೇನು ಸ್ವಾಮಿ ?**

ಉತ್ತರ :– ಮೇಲೆ ಹೇಳಿದ ವಾಕ್ಯದ ಮುಂದೆಯೇ ಉತ್ತರದ ವಾಕ್ಯವೂ ಬಂದಿದೆ. ಅದು ಹೀಗಿದೆ : ''**ನ । ಅವಿದ್ಯಾಕಲ್ಪಿತಭೇದನಿವೃತ್ತಿಪರತ್ವಾತ್ ಶಾಸ್ತ್ರಸ್ಯ । ನ ಹಿ ಶಾಸ್ತ್ರಂ ಇದಂತಯಾ ವಿಷಯಭೂತಂ ಬ್ರಹ್ಮ ಪ್ರತಿಪಿಪಾದಯಿಷತಿ । ಕಿಂ ತರ್ಹಿ ಪ್ರತ್ಯಗಾತ್ಮತ್ವೇನ ಅವಿಷಯತಯಾ ಪ್ರತಿಪಾದಯತ್ ಅವಿದ್ಯಾಕಲ್ಪಿತಂ ವೇದ್ಯವೇದಿತೃವೇದನಾದಿಭೇದಂ ಅಪನಯತಿ ।**'' (ಸೂ.ಭಾ.೧–೧–೪) ಶಾಸ್ತ್ರವು ಬ್ರಹ್ಮದಲ್ಲಿ ಅಜ್ಞರು ಕಲ್ಪಿಸಿರುವ ಭೇದವನ್ನು ಅಲ್ಲಗಳೆಯುವದರಲ್ಲಿಯೇ ತಾತ್ಪರ್ಯವುಳ್ಳದ್ದಾಗಿದೆ. ಶಾಸ್ತ್ರವು ಬ್ರಹ್ಮವನ್ನು 'ಇದು ಬ್ರಹ್ಮವು' ಎಂದು ವಿಷಯೀಕರಿಸಿ ತೋರಿಸುವದಿಲ್ಲ. ಮತ್ತೇನೆಂದರೆ ಈ ಬ್ರಹ್ಮವು–ಸಾಕ್ಷಿಯು– ಎಲ್ಲಕ್ಕೂ ಒಳಗಿರುವ ನಿಮ್ಮ ಆತ್ಮನು, ಅದು ಏತಕ್ಕೂ ವಿಷಯವಲ್ಲ– ಎಂದೇ ಹೇಳುತ್ತ ಈಗ ವ್ಯವಹಾರದಲ್ಲಿ ನಾವು ಮಾಡಿಕೊಂಡಿರುವ ಜ್ಞಾತೃ–ಜ್ಞಾನ–ಜ್ಞೇಯ ಎಂಬ ಭೇದವನ್ನು ಅಲ್ಲಗಳೆಯುತ್ತದೆ–ಎಂದು ಹೇಳಿದ್ದಾರೆ. ಇದರಂತೆಯೇ ಗೀತಾಭಾಷ್ಯದಲ್ಲಿ ''**ಶಾಸ್ತ್ರಂ ತು ಅಂತ್ಯಪ್ರಮಾಣಂ ಅತದ್ಧರ್ಮಾಧ್ಯಾರೋಪಣ ಮಾತ್ರ ನಿವರ್ತಕತ್ವೇನ ಪ್ರಾಮಾಣ್ಯಂ ಆತ್ಮನಃ ಪ್ರತಿಪದ್ಯತೇ ನ ತು ಅಜ್ಞಾತಾರ್ಥಜ್ಞಾಪಕತ್ವೇನ ।**'' (೨–೧೮) ಬ್ರಹ್ಮವಲ್ಲದ್ದನ್ನು ಎಂದರೆ ಕಲ್ಪಿತಭೇದವನ್ನು ಅಲ್ಲಗಳೆಯುವ ಮೂಲಕವೇ ಪ್ರಮಾಣವೆನಿಸಿದ ಶಾಸ್ತ್ರವು ಕೊನೆಯ ಪ್ರಮಾಣವೆನಿಸಿದೆ. ಆತ್ಮನಲ್ಲದ್ದನ್ನು – ತನ್ನನ್ನೂ ಸಹ – ಅಲ್ಲಗಳೆಯುವದರ ಮೂಲಕವೇ ಶಾಸ್ತ್ರವು ಪ್ರಮಾಣವಾಗಿದೆಯೇ ಹೊರತು ಹೊಸದಾಗಿ ಎಂದೂ ಗೊತ್ತಿಲ್ಲದ ಬ್ರಹ್ಮವನ್ನು ತಿಳಿಸಿಕೊಡುವದರಿಂದ ಅದು ಪ್ರಮಾಣವಾಗಿಲ್ಲ – ಎಂದು ಬರೆದಿದ್ದಾರೆ.

**ಪ್ರಶ್ನೆ :– ಸರಿ, ಸರಿ. ಹಾಗಾದರೆ, ಸಾಕ್ಷಿಸ್ವರೂಪವನ್ನು ಮುಟ್ಟದೆಯೇ ಅದರಲ್ಲಿ ಆರೋಪಿತವಾದ ಅನಾತ್ಮಗಳಿಂದ ನಮ್ಮ ಚಿತ್ತವನ್ನು ಬಿಡಿಸುವದಕ್ಕೇ ಶಾಸ್ತ್ರವು ಬಂದಿದೆ ಎಂದಾಯಿತಲ್ಲವೆ ?**

ಉತ್ತರ :– ಹೌದು. ಆದ್ದರಿಂದಲೇ ಬ್ರಹ್ಮವು ಅಪ್ರಮೇಯ ; ಅದರ ವಿಷಯಕ್ಕೆ ಶಾಸ್ತ್ರವೇ, ಎಂದರೆ ಉಪನಿಷತ್ತುಗಳೇ ಪ್ರಮಾಣ– ಎಂಬ ಎರಡೂ ನುಡಿಗಳು ಪರಸ್ಪರ ವಿರುದ್ಧವಾಗಿ ಕಂಡರೂ ವಿರುದ್ಧವಾಗಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ಶಾಸ್ತ್ರವು

ಕಲ್ಪಿತವಾದ ಭೇದವನ್ನೆಲ್ಲ ಕಳೆದು ನಮ್ಮ ಚಿತ್ತವನ್ನು ಸಾಕ್ಷಿಸ್ವರೂಪದೆಡೆಗೆ ತಿರುಗಿಸಿದೊಡನೆಯೇ ಮೊದಲೇ ಇದ್ದ ಆ ಸಾಕ್ಷಿಸ್ವರೂಪವೇ ನಾವಾಗುತ್ತೇವೆ. ಆಗ ಶಾಸ್ತ್ರವೂ ಸಹ ಬಾಧಿತವಾಗಿರುತ್ತದೆ. ''ಅತ್ರ ವೇದಾ ಅವೇದಾಃ' (ಬೃ.೪–೩–೨೨) ಇಲ್ಲಿ ವೇದಗಳು ವೇದಗಳಾಗಿರುವದಿಲ್ಲ– ಎಂಬ ಮಾತಿಗೆ ಇದೇ ತಾತ್ಪರ್ಯವು.

## (೫) ಸಾಕ್ಷ್ಯನುಭವದಲ್ಲಿ ತರ್ಕದ ಸ್ಥಾನ

ಪ್ರಶ್ನೆ :– ಸ್ವಾಮಿ, ಶಾಸ್ತ್ರವೇ ಅಲ್ಲದೆ ಅನುಮಾನ, ತರ್ಕ, ಯುಕ್ತಿ– ಎಂಬುದೂ ಸಾಕ್ಷ್ಯನುಭವಕ್ಕೆ ಏಕೆ ಪ್ರಮಾಣವಾಗುವದಿಲ್ಲ ?

ಉತ್ತರ :– ಅನುಭವ, ಯುಕ್ತಿ ತರ್ಕ ಎಂಬುದನ್ನು ಮಾಡಲು ಈಗಿನ 'ನಾನು' ಎಂಬ ಪ್ರಮಾತೃತ್ವವೇ ಬೇಕಾಗಿರುತ್ತದೆ. ಆದರೆ, ಸಾಕ್ಷಿಸ್ವರೂಪವು ಈ ನಾನು ಎಂಬ ಈಗಿನ ಅಹಂಪ್ರತ್ಯಯಕ್ಕೂ ಹಿಂದೆ ಇರುವ ನಿಜವಾದ ನಾನು–ನಾನೆನಿಸದ ನಾನು– ಅಥವಾ ತಾನು ಆಗಿದೆ. ಆದ್ದರಿಂದ ಅಲ್ಲಿ ತರ್ಕ ಅನುಮಾನ–ಯುಕ್ತಿಗಳಿಗೆ ನಿಜವಾಗಿಯೂ ಸ್ಥಾನವಿಲ್ಲ.

ಪ್ರಶ್ನೆ :– ಹಾಗಾದರೆ, ಶ್ರೀಶಂಕರರು ಭಾಷ್ಯಗಳಲ್ಲಿ (೧) ''ಪಶ್ಚಾತ್ ಮನ್ತವ್ಯಃ' ತರ್ಕತಃ ।'' (ಬೃ.ಭಾ.೨–೪–೫). ಬಳಿಕ ತರ್ಕದಿಂದ ಮನನ ಮಾಡತಕ್ಕದ್ದು. (೨) ''ತಸ್ಮಾತ್ ಬ್ರಹ್ಮಜಿಜ್ಞಾಸೋಪನ್ಯಾಸಮುಖೇನ ವೇದಾನ್ತ ವಾಕ್ಯಮೀಮಾಂಸಾ ತದವಿರೋಧಿ ತರ್ಕೋಪಕರಣಾ ನಿಃಶ್ರೇಯಸಪ್ರಯೋಜನಾ ಪ್ರಸ್ತೂಯತೇ ।'' (ಸೂ.ಭಾ.೧–೧–೧) ಆದ್ದರಿಂದ ''ಬ್ರಹ್ಮವನ್ನು ಜಿಜ್ಞಾಸೆ ಮಾಡಬೇಕು'' ಎಂದು ಹೇಳುವದರ ಮೂಲಕವಾಗಿ ವೇದಾಂತವಾಕ್ಯಮೀಮಾಂಸೆ ಯನ್ನು ಅದಕ್ಕೆ ವಿರೋಧವಲ್ಲದ ತರ್ಕದ ಸಹಾಯದಿಂದ ಮಾಡಬೇಕೆಂಬುದು ನಿಃಶ್ರೇಯಸಕ್ಕೆ ಕಾರಣವಾಗಿರುವದರಿಂದ ಹೊಗಳಲ್ಪಟ್ಟಿದೆ. (೩) ''ತದರ್ಥ ಗ್ರಹಣದಾರ್ಢ್ಯಾಯ ಅನುಮಾನಮಪಿ ವೇದಾನ್ತವಾಕ್ಯಾವಿರೋಧಿ ಪ್ರಮಾಣಂ ಭವತ್ ನ ನಿವಾರ್ಯತೇ ।'' (ಸೂ.ಭಾ.೧–೧–೨) ಅದರ ಅರ್ಥವು ಚೆನ್ನಾಗಿ ನೆಲೆಯೂರಿ ನಿಲ್ಲುವದಕ್ಕೆ ವೇದಾಂತವಾಕ್ಯಗಳಿಗೆ ವಿರೋಧವಲ್ಲದ ಅನುಮಾನಗಳೂ ಕೂಡ ಪ್ರಮಾಣವಾಗುವವೆಂಬುದನ್ನು ನಾವೇನೂ ಅಲ್ಲಗಳೆಯುವದಿಲ್ಲ. (೪) ''ಶ್ರುತ್ಯನುಗೃಹೀತ ಏವ ಹಿ ಅತ್ರ ತರ್ಕಃ ಅನುಭವಾಙ್ಗತ್ವೇನ ಆಶ್ರೀಯತೇ ॥'' (ಸೂ.ಭಾ.೨–೧–೬) ಶ್ರುತ್ಯನುಗೃಹೀತತರ್ಕವನ್ನೇ ಇಲ್ಲಿ ಅನುಭವಾಂಗವಾಗಿ ಆಶ್ರಯಿಸಿರುತ್ತದೆ– ಎಂಬುದಾಗಿ ಆಚಾರ್ಯರು ಅಲ್ಲಲ್ಲಿ ತರ್ಕ (ಅನುಮಾನ)ವನ್ನೂ ಅನುಮೋದಿಸಿರುವರೆಂದು ಪಂಡಿತರು ಹೇಳುವರಲ್ಲ !

ಉತ್ತರ :– ಅದು ಸರಿಯಾಗಿಯೇ ಇದೆ. ಅನುಭವಸ್ವರೂಪವಾದ ಸಾಕ್ಷ್ಯನುಭವದಲ್ಲಿ ಸರಿಯಾಗಿ ನೆಲೆನಿಲ್ಲಲು ಶ್ರುತಿಗೆ ಸಮ್ಮತವಾದ ಅಥವಾ ಅನುಭವದ ನೆರಳಿನಲ್ಲಿಯೇ ಅನುಭಾವಿಗಳಾದ ಆಚಾರ್ಯರು ಕಲ್ಪಿಸಿದ ಅನುಭವಾಂಗವಾದ ತರ್ಕಗಳು ಬೇಕೇ ಬೇಕಾಗಿವೆ.

**ಪ್ರಶ್ನೆ :– ಮತ್ತೆ ಯುಕ್ತಿ–ತರ್ಕ–ಅನುಮಾನ ಇವೆಲ್ಲವೂ 'ನಾನು' ಎಂಬುದನ್ನಿಟ್ಟುಕೊಂಡು ನಡೆಯುತ್ತವೆ ; ಸಾಕ್ಷಿಸ್ವರೂಪವು ಈ ನಾನು ಎಂಬ ಅನಿಸುವಿಕೆಗೂ ಹಿಂದೆ ಇರುವದರಿಂದ ಇವುಗಳ ಕೆಲಸ ಅಲ್ಲಲ್ಲಿ – ಎಂದು ನೀವೇ ಹಿಂದೆ ಹೇಳಿದ್ದೀರಲ್ಲ !**

ಉತ್ತರ :– ಅಹುದು. 'ನಾನು' ಎಂಬ ಪ್ರಮಾತೃತ್ವವನ್ನು ಆಧಾರವಾಗಿಟ್ಟುಕೊಂಡ ತರ್ಕಗಳು ಇಲ್ಲಿ ಪ್ರಯೋಜನಕ್ಕೆ ಬರುವದಿಲ್ಲ. ಆದರೆ ಅನುಭವಸ್ವರೂಪವನ್ನೇ – ಸಾಕ್ಷ್ಯನುಭವವನ್ನೇ – ಆಧಾರವಾಗಿಟ್ಟುಕೊಂಡ ತರ್ಕಗಳು ಉಪಯೋಗಕ್ಕೆ ಬಂದೇ ಬರುತ್ತವೆ.

**ಪ್ರಶ್ನೆ :– ಹಾಗಾದರೆ, ತರ್ಕದಲ್ಲಿ ಎರಡು ಬಗೆ ಎಂದಾಯಿತಲ್ಲ !**

ಉತ್ತರ :– ಆಹುದು. ಹೊರಗಿನ ಪದಾರ್ಥಗಳನ್ನು ಇಂದ್ರಿಯಗಳ ಮೂಲಕ ಅರಿತು ಅವುಗಳ ಬಗ್ಗೆ ಪ್ರತ್ಯಕ್ಷವೇ ಅಲ್ಲದೆ ಅನುಮಾನ, ಅರ್ಥಾಪತ್ತಿ ಉಪಮಾನ– ಮುಂತಾದ ಪ್ರಮಾಣಗಳಿಂದ ತರ್ಕಿಸಿ ನೋಡಿ ಆಯಾ ಪ್ರಮಾಣಗಳನ್ನು ದೃಢಪಡಿಸುವ ಕ್ರಮಕ್ಕೆ ಪ್ರಮಾಣತರ್ಕ ಎಂದು ಹೆಸರು. ಇದರಲ್ಲಿಯೂ ಕುತರ್ಕ ಎಂದರೆ ಅನುಭವಕ್ಕೆ ವಿರುದ್ಧವಾದ ತರ್ಕಗಳೂ ಉಂಟು. ಅವುಗಳನ್ನು ಕೇವಲ ತರ್ಕ, ಶುಷ್ಕತರ್ಕ ಎಂದು ಕರೆಯುವರು. ಈ ಸಾಕ್ಷ್ಯನುಭವದ ವಿಷಯವನ್ನು ಕುರಿತು ಯೋಚಿಸುವಾಗ ಈ ಪ್ರಮಾಣತರ್ಕವಾಗಲಿ ಕುತರ್ಕವಾಗಲಿ ಉಪಯೋಗಕ್ಕೆ ಬರುವದಿಲ್ಲ. ಶ್ರುತಿಗಳಲ್ಲಿ ಸಾಕ್ಷ್ಯನುಭವದ ಬಗ್ಗೆ ಜಿಜ್ಞಾಸುಗಳ ಗಮನವನ್ನು ಹರಿಸಲು ಉಪಯೋಗಿಸಿದ ಶ್ರೌತತರ್ಕ ಹಾಗೂ ಆಚಾರ್ಯರುಗಳು ಬೋಧಿಸುವಾಗ ಕಲ್ಪಿಸುವ ಅನುಭವಾಂಗ ತರ್ಕ– ಇವೇ ಇಲ್ಲಿ ಉಪಯೋಗಕ್ಕೆ ಬರುತ್ತವೆ. ಆದ್ದರಿಂದ ಸಾಕ್ಷ್ಯನುಭವವು ತರ್ಕಕ್ಕೆ ಅತೀತ; ಮತ್ತು ತರ್ಕದಿಂದ ಇದರ ಮನನಮಾಡಬೇಕು– ಎಂಬ ಎರಡೂ ಮಾತುಗಳು ಪರಸ್ಪರ ವಿರುದ್ಧವಲ್ಲ.

**ಪ್ರಶ್ನೆ :– ಅಂತೂ ಸಾಕ್ಷ್ಯನುಭವವು ಪ್ರಮೇಯವಲ್ಲದಿದ್ದರೂ ಅದಕ್ಕೆ ಶಾಸ್ತ್ರವೇ ಪ್ರಮಾಣ ಎಂಬಂತೆ ಅದು ತರ್ಕಕ್ಕೆ ಅತೀತವಾಗಿದ್ದರೂ ಆದನ್ನು ತರ್ಕದಿಂದ ಮನನ ಮಾಡಬೇಕು–ಎಂಬುದೂ ಸಹ ಹೊಂದಿಗೆಯೇ ಆಗಿದೆ ಎಂದಾಯಿತು. ಅಲ್ಲವೆ ?**

ಉತ್ತರ :– ನಿಜ, ಈ ಶ್ರೌತತರ್ಕ ಅಥವಾ ಅನುಭವಾಂಗತರ್ಕವೇ ಇಲ್ಲಿ ಬೇಕೆಂಬುದನ್ನು ಮರೆತು ಈಚೆಗೆ ಪ್ರಮಾಣತರ್ಕಗಳ ಜಾಡನ್ನೇಹಿಡಿದು ವೇದಾಂತ ವಿಚಾರವನ್ನು ಅನೇಕ ವ್ಯಾಖ್ಯಾನಕಾರರು ಅನುಸರಿಸಿದ್ದರಿಂದಲೇ ವೇದಾಂತಶಾಸ್ತ್ರವು ತರ್ಕಶಾಸ್ತ್ರದಲ್ಲಿ ಸೇರಿಹೋಗಲು ಅವಕಾಶವಾಯಿತು. ನೇರಾಗಿ ಭಾಷ್ಯಗಳನ್ನು ನೋಡಿದ್ದಾದರೆ ಈ ಪ್ರಮಾಣತರ್ಕದ ಭ್ರಾಂತಿಯು ತೊಲಗಿಹೋಗುತ್ತದೆ.*

**ಪ್ರಶ್ನೆ :– ಶ್ರೌತತರ್ಕದ ಅಥವಾ ಅನುಭವಾಂಗತರ್ಕದ ಒಂದೊಂದು ಉದಾಹರಣೆಗಳನ್ನು ದಯವಿಟ್ಟು ತೋರಿಸುವಿರಾ ?**

ಉತ್ತರ :– ಆಗಲಿ, ಕೇಳಿ. ಕನಸು ಎಚ್ಚರಗಳು ತನ್ನಲ್ಲಿಯೇ ಹುಟ್ಟಿ, ತನ್ನಲ್ಲಿಯೇ ನಿಂತು, ತನ್ನಲ್ಲಿಯೇ ಅಡಗುತ್ತಿರುವದು ಸರ್ವರ ಅನುಭವವಾಗಿದೆ. ಹೀಗೆ ಈ ಎರಡೂ ಅವಸ್ಥೆಗಳ ಆಗುಹೋಗುಗಳನ್ನು ಬೆಳಗಿ ತೋರಿಸುವ ಅನುಭವರೂಪನಾದ ತಾನು ಇವೆರಡಕ್ಕಿಂತಲೂ ಹೆಚ್ಚಿನವನೂ ಇವೆರಡನ್ನೂ ವ್ಯಾಪಿಸಿದವನೂ ಇನ್ನೊಂದಿಲ್ಲದ ತಾನೇ ಎರಡೂ ಆಗಿರುವಂತೆ ಕಾಣುವವನೂ ಹೀಗೆ ಕಂಡರೂ ಏನೂ ಮಾರ್ಪಾಡಿಲ್ಲದವನೂ ಆಗಿದ್ದಾನೆ. ಇದನ್ನು ಕಂಡುಕೊಂಡರೆ ನಿಜವಾದ ತನ್ನ ಸ್ವರೂಪದಲ್ಲಿ ಎಚ್ಚರದ ಅಥವಾ ಕನಸಿನ ಶೋಕಗಳಿಲ್ಲ–ಎಂಬುದು ಒಂದು ಶ್ರೌತತರ್ಕ. ಇದರಂತೆಯೇ ಗಾಢ ನಿದ್ರೆಯಲ್ಲಿ ಈ ಎರಡೂ ಅವಸ್ಥೆಗಳಿಲ್ಲದೆ ತಾನಿರುವನೆಂಬುದು ತನ್ನ ಅನುಭವವನ್ನು ಈಗಲೇ ಲಕ್ಷಿಸಿದ ಮಾತ್ರಕ್ಕೆ ಗೊತ್ತಾಗಿಬಿಡುವದರಿಂದ ತಾನು ಸಾಕ್ಷಿಸ್ವರೂಪನು, ನಿತ್ಯವೂ ಅಸಂಸಾರಿಯು ಎಂಬುದು ಕಂಡುಬರುತ್ತದೆ ; ಇದೊಂದು ಅನುಭವಾಂಗ ತರ್ಕ. ಎಂದರೆ ಇಲ್ಲಿ ಸಾಕ್ಷ್ಯನುಭವದ ಆದಾರದಿಂದಲೇ ತರ್ಕಿಸಿ ಜಾಗ್ರತ್ತು, ಸ್ವಪ್ನ, ಸುಷುಪ್ತಿ– ಎಂಬ ಪ್ರತ್ಯಯಗಳನ್ನು ಜೋಡಿಸಿ – ಇದಕ್ಕೆ ಯುಕ್ತಿ ಎನ್ನುತ್ತಾರೆ– ಅದರಿಂದ ತಾನು ನಿತ್ಯವೂ ಅಸಂಸಾರಿ ಎಂಬ ನಿರ್ಣಯವನ್ನು ತೆಗೆದಿದೆ. ಇದಕ್ಕೆ ಶ್ರೌತತರ್ಕ ಅಥವಾ ಅನುಭವಾಂಗತರ್ಕ ಎಂದು ಹೆಸರು. ಇದು ಅನುಭವದಲ್ಲಿಯೇ ಕೊನೆಗೊಳ್ಳುತ್ತದೆ.

**ಪ್ರಶ್ನೆ :– ಇನ್ನೂ ಇಂಥ ಶ್ರೌತ ತರ್ಕದ ಮಾದರಿಗಳನ್ನು ತೋರಿಸುವಿರಾ ?**

ಉತ್ತರ :– ಮುಂದೆ ಮನನ ಎಂಬ ವಿಷಯದ ಬಗ್ಗೆ ಬರೆಯಬೇಕೆಂದಿರುವ ಗ್ರಂಥಭಾಗದಲ್ಲಿ ಇದನ್ನು ವಿಸ್ತಾರವಾಗಿ ಹೇಳುತ್ತೇವೆ. ಸದ್ಯಕ್ಕೆ ಇಷ್ಟೇ ಸಾಕು.

## (೬) ಸಾಕ್ಷ್ಯನುಭವವು ಸರ್ವವ್ಯಾಪಿ

**ಪ್ರಶ್ನೆ :– ಈವರೆಗಿನ ವಿವೇಚನೆಯಿಂದ ಪ್ರತ್ಯಯಾನುಭವ,**

* ತರ್ಕದ ಬಗ್ಗೆ ಹೆಚ್ಚಿನ ವಿಸ್ತಾರವಾಗಿ ತಿಳಿದುಕೊಳ್ಳಬೇಕೆಂಬವರು 'ಶಂಕರದರ್ಶನ' ಎಂಬ ಗ್ರಂಥದ ೬ನೇ ಅಧ್ಯಾಯವನ್ನೂ ಇದೇ ಗ್ರಂಥದಲ್ಲಿ ೩೧–೩೩ನೇ ಪುಟಗಳನ್ನೂ ನೋಡಬೇಕು.

**ವೇದನಾನುಭವ, ಸಾಕ್ಷ್ಯನುಭವ ಎಂದು ಅನುಭವದಲ್ಲಿ ಮೂರು ಬಗೆಗಳನ್ನು ಕುರಿತು ಹೇಳಿದಂತಾಯಿತು. ಹಾಗೂ ವೇದನ– ಪ್ರತ್ಯಯಗಳಿಂದ ಸಾಕ್ಷ್ಯನುಭವವು ಬೇರೆಯಾಗಿದೆ ಎಂದಾಯಿತು, ಅಲ್ಲವೆ ?**

ಉತ್ತರ :– ಒಂದು ದೃಷ್ಟಿಯಿಂದ ವೇದನೆ ಪ್ರತ್ಯಯಗಳಿಗಿಂತಲೂ ಸಾಕ್ಷ್ಯನುಭವವು ಬೇರೆಯಾಗಿಯೇ ಇದೆ ಎನ್ನಬೇಕು. ಆದರೆ ಸಾಕ್ಷ್ಯನುಭವವನ್ನು ಬಿಟ್ಟು ಉಳಿದ ಅನುಭವಗಳು ಸ್ವತಂತ್ರವಾಗಿ ಇರಲಾರವು. ವೇದನೆ – ಪ್ರತ್ಯಯಗಳಿವೆ ಎಂಬುದಕ್ಕೆ ಸಾಕ್ಷ್ಯನುಭವದ ಆಧಾರವೇ ಬೇಕು.

**ಪ್ರಶ್ನೆ :– ಅದರಂತೆ ಸಾಕ್ಷ್ಯನುಭವ ಎಂಬುದಿದೆ ಎಂದರಿಯಲು ಈ ವೇದನ ಪ್ರತ್ಯಯಗಳೇ ಬೇಕು. ಅಲ್ಲವೆ ? ಆದ್ದರಿಂದ ವೇದನ ಪ್ರತ್ಯಯಗಳನ್ನುಳಿದು ಆ ಸಾಕ್ಷ್ಯನುಭವವೂ ಸ್ವತಂತ್ರವಾಗಿರಲಾರದು ಎಂದೇಕೆ ತಿಳಿಯಬಾರದು ?**

ಉತ್ತರ :– ಇಲ್ಲ, ಇಲ್ಲ. ವೇದನಪ್ರತ್ಯಯಗಳಿಲ್ಲದಿದ್ದರೂ ಸಾಕ್ಷ್ಯನುಭವವು ಸ್ವತಂತ್ರವಾಗಿ ತಾನಿರುವಂತೆಯೇ ಇದ್ದೇಬಿಟ್ಟಿರುತ್ತದೆ. ಉದಾಹರಣೆಗೆ ಗಾಢನಿದ್ರೆಯಲ್ಲಿ ವೇದನಪ್ರತ್ಯಯಗಳಿಲ್ಲ ಎಂಬುದು ನಮಗೆ ಸಾಕ್ಷ್ಯನುಭವದಿಂದಲೇ ಗೊತ್ತಾಗುತ್ತದೆ.

**ಪ್ರಶ್ನೆ :– ಗಾಢನಿದ್ರೆಯಲ್ಲಿ ವೇದನಪ್ರತ್ಯಯಗಳಿರುವದಿಲ್ಲ ಎಂಬುದನ್ನು ಈಗಿನ ನಾನೇ ಎಂದರೆ ಬುದ್ಧಿಯೇ ಹೇಳುತ್ತಿರುವದಲ್ಲ! ಈ ದೃಷ್ಟಿಯಲ್ಲಿ ನೋಡಿದರೆ ಸಾಕ್ಷ್ಯನುಭವದ ಅಸ್ತಿತ್ವಕ್ಕೂ ಬುದ್ಧಿಯೇ ಪ್ರಮಾಣ ಎಂದು ಏಕೆ ಹೇಳಬಾರದು ?**

ಉತ್ತರ :– ಹಾಗಲ್ಲ. ಈ ನಿಮ್ಮ ಸಂಶಯಕ್ಕೆ ಉತ್ತರವನ್ನು ನಿಧಾನವಾಗಿ ಕೇಳಿ. ಇಲ್ಲಿ ಎರಡು ದೃಷ್ಟಿಗಳಿಂದ ಉತ್ತರವನ್ನು ಹೇಳಬೇಕಾಗುತ್ತದೆ. ಮೊದಲನೆಯದಾಗಿ ಗಾಢನಿದ್ರೆಯಲ್ಲಿ ವೇದನಪ್ರತ್ಯಯಗಳಿರಲಿಲ್ಲ– ಎಂಬುದು ಸರ್ವರಿಗೂ ಸಮ್ಮತವೇ ಆಗಿದೆ. ಆದರೆ ಈಗ ಅದನ್ನು ಹೇಳುವೆವಲ್ಲ, ಅದು ಹೇಗೆ ? ಎಂಬುದೇ ಮುಖ್ಯ ಪ್ರಶ್ನೆ. ನಾವು ಈ ನಿದ್ರಾನುಭವವನ್ನು ಹೇಳುವಾಗ ಸಾಕ್ಷಿ ಸ್ವರೂಪರಾಗಿ ಅನುಭವಿಸಿ ಎಂದರೆ ಹಿಂದಿರುಗಿ ನಮ್ಮ ಸ್ವರೂಪದೆಡೆಗೆ ನೋಡಿ ಪುನಃ ಈ ಬುದ್ಧಿ ಹಾಗೂ ಮಾತುಗಳ ಮೂಲಕ ಹೊರಪಡಿಸುತ್ತೇವೆ. ಅರ್ಥಾತ್ ಸಾಕ್ಷಿಯಾಗಿ ನೋಡಿ ಬುದ್ಧಿಯ ಮೂಲಕ ಹೊರಪಡಿಸುತ್ತೇವೆ ಎಂದರ್ಥ. ಬುದ್ಧಿಯು ಶಾಸ್ತ್ರ ಹಾಗೂ ಆಚಾರ್ಯರ ಬೋಧವನ್ನನುಸರಿಸಿ ಹಿಂದಿರುಗಿದಾಗ ಸಾಕ್ಷಿಸ್ವರೂಪವು ನಮ್ಮ ಸಹಜವಾದ ಸ್ವಭಾವವಾಗಿ ಯಾವಾಗಲೂ ಇದ್ದೇಬಿಟ್ಟಿರುವದರಿಂದ ಗೋಚರವಾಗುವದೇ ಹೊರತು ಬುದ್ಧಿಯು ಹಿಂದಿರುಗಿ ನೋಡಿದ್ದರಿಂದ ಸಾಕ್ಷಿಸ್ವರೂಪವು ಇದೆ ಎಂದು ಸಿದ್ಧವಾಗುವದಿಲ್ಲ.

**ಪ್ರಶ್ನೆ :– ಸ್ವಲ್ಪ ನಿಲ್ಲಿ, ನೀವು ಹೇಳುವದು ಸರಿಯಾಗಿ ಅರ್ಥವಾಗಲಿಲ್ಲ. ಮೊದಲೇ ಇದ್ದ ಸಾಕ್ಷಿಸ್ವರೂಪದೆಡೆಗೆ ಬುದ್ಧಿಯನ್ನು ಹೊರಳಿಸಿದೆವು, ಆದ್ದರಿಂದ ಅದರ ವಿಷಯಕವಾದ ಅರಿವಾಯಿತು ಎಂದು ತಾನೆ ನೀವು ಹೇಳಿದ್ದು?**

ಉತ್ತರ :– ಹೌದು, ಸರಿಯಾಗಿಯೇ ಗ್ರಹಿಸಿದ್ದೀರಿ. ಇದರಲ್ಲಿ ಅರ್ಥವಾಗ ದಿದ್ದುದೇನು ?

**ಪ್ರಶ್ನೆ :– ಹಾಗಲ್ಲ. ಸಾಕ್ಷಿಸ್ವರೂಪದ ಅಸ್ತಿತ್ವಕ್ಕೆ ಬುದ್ಧಿಯು ಪ್ರಮಾಣ ಎಂದು ಹಿಂದೆ ನಾನು ಹೇಳಿದ್ದೆನಷ್ಟೆ. ನೀವು, ಅದು ತಾನೇ ಇದ್ದುಬಿಟ್ಟಿದೆ; ಬುದ್ಧಿಯು ಅದನ್ನು ಕಂಡದ್ದರಿಂದ ಆ ಸಾಕ್ಷಿಸ್ವರೂಪದ ಇರವು ಸಿದ್ಧವಾಗಲಿಲ್ಲ ಎಂದು ಹೇಳಿದಿರಿ. ಅಲ್ಲವೆ?**

ಉತ್ತರ :– ಹೌದು, ಹೌದು. ಇನ್ನೇನು ಸಂಶಯ ?

**ಪ್ರಶ್ನೆ:–ಇದಕ್ಕೊಂದು ಸರಿಯಾದ ದೃಷ್ಟಾಂತವನ್ನು ಹೇಳಿ, ನೋಡೋಣ !**

ಉತ್ತರ :– ಕೇಳಿ. ನಾವು ವ್ಯವಹಾರದಲ್ಲಿ ನಮ್ಮ ಮುಖವನ್ನು ಎಂದಿಗೂ ಎದುರಿಗಿಟ್ಟು ನೋಡಲಾರೆವು ; ಅರ್ಥಾತ್ ವಿಷಯೀಕರಿಸಲಾರೆವು. ಏಕೆಂದರೆ, ಮುಖವೇ ನಾವಾಗಿದ್ದೇವೆ. ಆದರೂ 'ಮೂಗಿನ ಹತ್ತಿರ ಕಪ್ಪು ಹತ್ತಿದೆ, ನೋಡಿಕೊಳ್ಳಿ' ಎಂದು ಯಾರಾದರೂ ಹೇಳಿದಾಗ ನಮ್ಮ ಮುಖವನ್ನು ನೋಡಲು ನಾವು ಏನು ಮಾಡುತ್ತೇವೆ ?

**ಪ್ರಶ್ನೆ :– ಒಂದು ಕನ್ನಡಿಯ ಎದುರಿಗೆ ಹೋಗಿ ನಿಲ್ಲುತ್ತೇವೆ. ಆಗ ನಮ್ಮ ಮುಖವು ನಮಗೆ ಕಾಣುತ್ತದೆ. ಇದರಲ್ಲೇನು ವಿಶೇಷ ?**

ಉತ್ತರ :– ಹಾಂ ! ಸರಿಯಾಗಿ ಹೇಳಿದಿರಿ. ನಮ್ಮ ಮುಖವು ನಮಗೆ ಕಾಣುವದಕ್ಕೆ ಕನ್ನಡಿಯು ಸಹಾಯವಾಯಿತು. ಅಲ್ಲವೆ ?

**ಪ್ರಶ್ನೆ :– ಆಗಲಿ, ಅದರಿಂದ ಪ್ರಕೃತವಿಷಯಕ್ಕೆ ಏನು ಪ್ರಯೋಜನ ?**

ಉತ್ತರ :– ನೋಡಿ, ನಮಗೆ ಮುಖವು ಮೊದಲೇ ಇದ್ದುದರಿಂದಲೇ ನಾವು ಕನ್ನಡಿಯ ಎದುರಿಗೆ ನಿಂತಾಗ ಮುಖವು ಕಂಡಿತು. ಆದ್ದರಿಂದ ನಮಗೆ ಮುಖವಿದೆ ಎಂಬುದಕ್ಕೆ ಕನ್ನಡಿಯು ಪ್ರಮಾಣವಲ್ಲ. ಕನ್ನಡಿಯಲ್ಲಿ ನಮ್ಮ ಮುಖದ ಪ್ರತಿಬಿಂಬವು ಕಾಣುತ್ತದೆ ಎಂಬುದಕ್ಕೇ ನಮ್ಮ ಮುಖವು ಪ್ರಮಾಣ. ಅರ್ಥಾತ್ ಮುಖವು ಸ್ವತಃಸಿದ್ಧ, ಕನ್ನಡಿಯಿಂದ ಸಿದ್ಧವಾಗಿಲ್ಲ ಅಲ್ಲವೆ ?

**ಪ್ರಶ್ನೆ :– ಹೌದು.**

ಉತ್ತರ :– ಇದರಂತೆಯೇ ಸಾಕ್ಷ್ಯನುಭವವು ಸ್ವತಃಸಿದ್ಧ. ನಮಗೆ ಬುದ್ಧಿ

ಎಂಬುದಿದೆ, ಅದು ಇಂದ್ರಿಯಗಳ ಮೂಲಕ ಹೊರಗೆ ವಿಷಯಗಳನ್ನು ಗ್ರಹಿಸುತ್ತದೆ ಎಂಬುದಕ್ಕೂ, ಇದೇ ಬುದ್ಧಿಯು ಒಳಸರಿದರೆ ಸಾಕ್ಷ್ಯನುಭವದ ಪ್ರತಿಬಿಂಬವು ಈ ಬುದ್ಧಿಯಲ್ಲಿ ತೋರುತ್ತದೆ ಎಂಬುದಕ್ಕೂ ಸ್ವತಃಸಿದ್ಧವಾದ ಸಾಕ್ಷ್ಯನುಭವವೇ ಪ್ರಮಾಣವೇ ಹೊರತು ಸಾಕ್ಷ್ಯನುಭವದ ಇರುವಿಕೆಗೆ ಬುದ್ಧಿಯು ಪ್ರಮಾಣವಲ್ಲ – ಎಂದು ತಿಳಿಯಬೇಕು.

**ಪ್ರಶ್ನೆ :– ತಿಳಿಯಿತು ಸ್ವಾಮಿ, ವಸ್ತುವಿರುವದರಿಂದ ಬುದ್ಧಿಯಲ್ಲಿ ಜ್ಞಾನವಾಯಿತೇ ಹೊರತು ಜ್ಞಾನವಾದದ್ದರಿಂದ ವಸ್ತು ಇದೆ ಎಂದಲ್ಲ. ಇದು ತಾನೆ ನೀವು ಹೇಳಿದ್ದು ?**

ಉತ್ತರ :– ನಿಜ. ಬುದ್ಧಿ, ಮನಸ್ಸು, ಇಂದ್ರಿಯ, ದೇಹ– ಇದೆಲ್ಲವನ್ನೂ ಈ ಸಾಕ್ಷಿಚೈತನ್ಯವೇ ವ್ಯಾಪಿಸಿ ಬೆಳಗುತ್ತದೆಯಷ್ಟೆ .

**ಪ್ರಶ್ನೆ :– ಹಾಗಾದರೆ, ಹೊರಗಿನ ವಿಷಯಗಳನ್ನರಿಯುವಾಗ ಇಂದ್ರಿಯಗಳು, ಮನಸ್ಸು, ಬುದ್ಧಿ–ಮುಂತಾದವುಗಳಲ್ಲಿ ಕಾಣುವ ಅರಿವು ಈ ಸಾಕ್ಷ್ಯನುಭವದ ಚೈತನ್ಯವೇ ಎಂದಾಯಿತಲ್ಲ ?**

ಉತ್ತರ :– ಹೌದು, ಅದರಲ್ಲಿ ಸಂಶಯವೇನು ? ನೀರು ಸುಡುತ್ತದೆ ಎಂಬಲ್ಲಿ ಆ ಸುಡುವ ಗುಣವು ಸುಡುವ ಸ್ವಭಾವವುಳ್ಳ ಬೆಂಕಿಯದೇ ಹೊರತು ನೀರಿನದು ಹೇಗೆ ಅಲ್ಲವೋ ಹಾಗೆಯೇ ಕಣ್ಣು ರೂಪವನ್ನರಿಯುತ್ತದೆ– ಎಂದರೆ ಆ ಅರಿವು ಅರಿವಿನ ಸ್ವಭಾವವೇ ಆದ ಸಾಕ್ಷ್ಯನುಭವದ್ದೇ ಆಗಿದೆ. ಆದ್ದರಿಂದಲೇ ಈ ಸಾಕ್ಷಿಸ್ವರೂಪವು ಸರ್ವವ್ಯಾಪಿಯು, ಇದು ವ್ಯಾಪಿಸದಿರುವ ತತ್ತ್ವವೇ ಇರುವದಿಲ್ಲ– ಎಂಬುದು ಸಿದ್ಧವಾಗುತ್ತದೆ. ಅರಿವಿನ ಸ್ವರೂಪಕ್ಕೆ ಸಂಬಂಧಪಡದೆ ಯಾವದೂ ತಿಳಿದು ಬರುವದಿಲ್ಲವಲ್ಲವೆ ? ಆ ಅರಿವಿನ ಸ್ವರೂಪವೇ ಸಾಕ್ಷ್ಯನುಭವವು.

## (೭) ಸಾಕ್ಷಿಸ್ವರೂಪವು ಅದ್ವಿತೀಯ

**ಪ್ರಶ್ನೆ :– ಸಾಕ್ಷಿಸ್ವರೂಪವು ಬುದ್ಧಿ – ಇಂದ್ರಿಯ ಮುಂತಾದ ಎಲ್ಲವುಗಳನ್ನೂ ವ್ಯಾಪಿಸಿರುವದೆಂದು ತಾವು ತೋರಿಸಿಕೊಟ್ಟಿರಿ. ಹಾಗೂ ಬುದ್ಧಿಯನ್ನು ಸಾಕ್ಷಿಸ್ವರೂಪದೆಡೆಗೆ ಹೊರಳಿಸಿದಾಗ ಅದರ ಅರಿವು ಆಗುವದೆಂದೂ ತಿಳಿಸಿದಿರಿ. ಇದೇನೋ ಸರಿಯಾಯಿತು. ಆದರೆ ಸಾಕ್ಷಿಸ್ವರೂಪವೂ ಆ ಸ್ವರೂಪದಿಂದ ಬೆಳಗಿಸಿಕೊಳ್ಳಲ್ಪಡುವ ಅಥವಾ ವ್ಯಾಪ್ಯಗಳಾದ ಮನೋಬುದ್ಧ್ಯಾದಿಗಳೂ ಸಹ ಸಾಕ್ಷ್ಯನುಭವದಂತೆಯೇ ನಿಜವಾಗಿದ್ದೇ ಬಿಟ್ಟಿವೆಯಲ್ಲ ? ಹೀಗಿರುವಾಗ ಈ ಸಾಕ್ಷಿರೂಪಬ್ರಹ್ಮವು 'ಅದ್ವಿತೀಯ' ತನಗೆರಡನೆಯದಿಲ್ಲದ್ದು 'ಏಕಮೇವ' ಎಂದು ಶ್ರುತಿಗಳಲ್ಲಿ ಹೇಳಿದ್ದಕ್ಕೆ ಏನರ್ಥ ?**

ಉತ್ತರ :– ಕೇಳಿ. ಇಲ್ಲಿ ವ್ಯಾಪ್ಯ (ವ್ಯಾಪಿಸಲ್ಪಡತಕ್ಕದ್ದು), ವ್ಯಾಪಕ (ವ್ಯಾಪಿಸಿರತಕ್ಕದ್ದು)– ಎಂಬ ಮಾತುಗಳಿಗೆ ಲೋಕದಲ್ಲಿ ಇರುವ ಅರ್ಥಕ್ಕೂ ಈ ಸಾಕ್ಷ್ಯನಭವದ ಬಗೆಗೂ ಬಹಳ ಅಂತರವಿದೆ.

**ಪ್ರಶ್ನೆ – ಅದು ಹೇಗೆ ?**

ಉತ್ತರ :– ನೋಡಿ. ವಿದ್ಯುಚ್ಛಕ್ತಿಯು ತಂತಿಯಲ್ಲಿ ವ್ಯಾಪಿಸುತ್ತದೆ ಎಂದಾಗ ತಂತಿ ಎಂಬುದು ಸ್ವತಂತ್ರವಾಗಿ ಬೇರೆ ಇದ್ದು ಅದನ್ನು ವಿದ್ಯುಚ್ಛಕ್ತಿಯು ವ್ಯಾಪಿಸುತ್ತದೆ ಎಂದಾಗುತ್ತದೆ. ವ್ಯವಹಾರದಲ್ಲಿ ಹೀಗೆ ಉಪಯೋಗಿಸುವಾಗ 'ವಿದ್ಯುಚ್ಛಕ್ತಿ' ಬೇರೆ ತಂತಿ ಬೇರೆ ; ತಂತಿಯು 'ವಸ್ತು' (Matter) ವಿದ್ಯುಚ್ಛಕ್ತಿಯು ಶಕ್ತಿ(energy) ಎಂದು ವಿಭಾಗಿಸಿ ಶಕ್ತಿಯು ಹೊಸದಾಗಿ ಕೆಲವು ಕಾರಣಗಳ ಮೂಲಕ ಹುಟ್ಟುತ್ತದೆ ಎಂದು ಇಟ್ಟುಕೊಂಡು ವಿದ್ಯುತ್ತಿನ ಬಳಕೆಯ ವ್ಯವಹಾರವೆಲ್ಲವೂ ಲೋಕದಲ್ಲಿ ನಡೆದಿರುತ್ತದೆ. ಆದರೆ ಇದೇ ಭೌತಿಕವಿಜ್ಞಾನದ ತತ್ತ್ವಶೋಧಕರು ಈ ಶಕ್ತಿ ಹಾಗೂ ವಸ್ತುಗಳು ನಿಜವಾಗಿಯೂ ಬೇರೆ ಬೇರೆಯಾಗಿಲ್ಲ, ಇವೆಲ್ಲ ಒಂದೇ ಆಗಿವೆ, ಇರುವದೆಲ್ಲವೂ ಬರೀ ಶಕ್ತಿಯೇ, ಅದೇ ವಸ್ತುಗಳಂತೆ ನಮಗೆ ತೋರುತ್ತದೆ– ಎಂಬ ಸಿದ್ಧಾಂತಕ್ಕೆ ಬಂದಿರುತ್ತಾರೆ. ಆಗ ಶಕ್ತಿಯು ವ್ಯಾಪಿಸದಿರುವ ವಸ್ತುವೇ ಇಲ್ಲವೆಂದಾಗಿ ಭೌತಿಕ ಜಗತ್ತಿನಲ್ಲಿ 'ಶಕ್ತಿ' ಎಂಬುದೊಂದೇ ಅದ್ವಿತೀಯ ಮೂಲಭೂತ ತತ್ತ್ವವಾಗಿದ್ದು ವ್ಯವಹಾರದಲ್ಲಿ ವಸ್ತುಗಳ ಅಪೇಕ್ಷೆಯಿಂದ (Relativity) ಶಕ್ತಿ ಎಂಬ ಹೆಸರನ್ನದಕ್ಕೆ ಇಡಬೇಕಾಗಿದೆ ಎಂಬ ತೀರ್ಮಾನಕ್ಕೆ ಬರುತ್ತೇವೆ.

**ಪ್ರಶ್ನೆ :– ಆಗಲಿ. ಪ್ರಕೃತವಿಷಯಕ್ಕೆ ಇದರಿಂದೇನು ಸಹಾಯವಾಯಿತು ?**

ಉತ್ತರ :– ಕೇಳಿ. ಶಕ್ತಿಯ ವ್ಯಾಪ್ತಿಯನ್ನು ಎಲ್ಲೆಡೆಯಲ್ಲೂ ಕಂಡೊಡನೆಯೇ ವಸ್ತು ಎಂಬ ವ್ಯಾಪ್ಯವು ಇಲ್ಲವೇ ಇಲ್ಲ ಎಂದು ತಾನೇ ದೃಷ್ಟಾಂತದಲ್ಲಿ ತಿಳಿಸಿಕೊಟ್ಟದ್ದು? ಅದರಂತೆಯೇ ವ್ಯಾಪಕವಾದ ಸಾಕ್ಷ್ಯನುಭವವನ್ನು ಕಂಡೊಡನೆಯೇ ವ್ಯಾಪ್ಯವಾದ ಬುದ್ಧ್ಯಾದಿಗಳು ಯಾವಾಗಲೂ ಇಲ್ಲವೇ ಇಲ್ಲ ಎಂದು ಗೊತ್ತಾಗಿ ಬಿಡುತ್ತದೆ. ಇದನ್ನೇ ಅದ್ವಯ, ಅದ್ವಿತೀಯ ಎಂದು ಹೇಳುತ್ತೇವೆ.

**ಪ್ರಶ್ನೆ :– ಹಾಗಾದರೆ ಭೌತಿಕವಿಜ್ಞಾನದಲ್ಲಿ ಹೇಳಿದ 'ಶಕ್ತಿ'ಯೇ ಈ ಬ್ರಹ್ಮ ವಸ್ತುವೇನು?**

ಉತ್ತರ :– ಅಲ್ಲ. ಅದು ಹೊರಗಿನ ಜಗತ್ತಿನಲ್ಲಿ ಇಂದ್ರಿಯ, ಮನಸ್ಸು, ಬುದ್ಧಿ ಯಂತ್ರೋಪಕರಣ ಹಾಗೂ ಪ್ರಯೋಗಾದಿಗಳಿಂದ ಕಂಡುಕೊಂಡಿರುವ ವಿಷಯ ಪ್ರಪಂಚಕ್ಕೆ ಸೇರಿದ (Objective) ತತ್ತ್ವವು. ಆದರೆ ವೇದಾಂತೋಕ್ತವಾದ ಸಾಕ್ಷಿಸ್ವರೂಪವು ವ್ಯವಹಾರದಲ್ಲಿ 'ನಾನು' ಎಂದು ಹೇಳಿಕೊಳ್ಳುವವನಿಗೂ ತಿರುಳಾಗಿ

ಇರುವ (subjective) ತತ್ತ್ವವು. ಭೌತಿಕಶಾಸ್ತ್ರದವರ ಶೋಧವು ಎಚ್ಚರದ ಪ್ರಪಂಚಕ್ಕೆ ಮಾತ್ರ ಸೀಮಿತವಾದದ್ದು. ಆದರೆ ವೇದಾಂತದಲ್ಲಿ ಹೇಳಿದ ಸಾಕ್ಷಿಸ್ವರೂಪವು ಎಚ್ಚರ, ಕನಸು, ಗಾಢನಿದ್ರೆ– ಎಂಬುದೆಲ್ಲವನ್ನೂ ಪೂರ್ಣವಾಗಿ ವ್ಯಾಪಿಸಿದ ತತ್ತ್ವವು. ಆದ್ದರಿಂದ ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

**ಪ್ರಶ್ನೆ :– ಸ್ವಾಮಿ, ಸ್ವಲ್ಪ ನಿಲ್ಲಿ. ಭೌತಿಕಶಾಸ್ತ್ರದಲ್ಲಿಯೂ ಸಹ ಯಾರಾದರೊಬ್ಬರು ಮಲಗಿರುವಾಗ ಅವರಿಗೆ ಬಿದ್ದ ಸ್ವಪ್ನಗಳನ್ನು ಕುರಿತು ಗುರುತಿಸುವ ಯಂತ್ರಗಳನ್ನು ತಯಾರಿಸಿದ್ದಾರೆ. ಹಾಗೂ ಗಾಡನಿದ್ರೆಯಲ್ಲಿರುವವರ ತಲೆಗೆ ಒಂದು ವಿಧವಾದ ಯಂತ್ರವನ್ನು ಜೋಡಿಸಿ ಅದರ ಮೂಲಕ ಕೆಲವು ಹೊಸ ಭಾಷೆಯ ಶಬ್ದಗಳನ್ನೂ ವಿಷಯಗಳನ್ನೂ ಹೇಳಿದರೆ (sub-consious mind) ಸಣ್ಣಮಿದುಳಿನ ಮೂಲಕ ಆ ಶಬ್ದಗಳು ಅಲ್ಲಿ ಹೊಕ್ಕು ಆ ಮನುಷ್ಯನು ಎಚ್ಚೆತ್ತಮೇಲೆ ಅವನಿಗೆ ಸಹಜವಾಗಿ ನೆನಪಿಗೆ ಬರುತ್ತವೆಯಂತೆ. ಹೀಗೆ ಸ್ವಪ್ನ ಹಾಗೂ ಸುಷುಪ್ತಿಗಳನ್ನೂ ಸಹ ಭೌತಿಕಶಾಸ್ತ್ರದವರು ಪರಿಶೀಲಿಸಿ ಪರೀಕ್ಷಿಸಿರುವರಲ್ಲ!**

ಉತ್ತರ :– ಹಾಗಲ್ಲ. ಯಾವನೇ ಒಬ್ಬ ಭೌತಶಾಸ್ತ್ರಜ್ಞನು ತಾನು ಎಚ್ಚರದಲ್ಲಿದ್ದು ಅಲ್ಲಿ ತನಗೆ ವಿಷಯವಾಗಿ ಕಾಣುವವರಲ್ಲಿ ಮಲಗಿದವರ ಬಗ್ಗೆ ಈ ಪ್ರಯೋಗಗಳನ್ನು ಮಾಡಬಹುದು. ಆದರೆ ಅದೆಲ್ಲಾ ಸೇರಿ ತನ್ನ ಎಚ್ಚರವೇ ಆಯಿತೇ ಹೊರತು ತನ್ನ ಸ್ವಪ್ನ ಹಾಗೂ ತನ್ನ ನಿದ್ರೆಗೆ ಈ ಎಚ್ಚರಪ್ರಪಂಚದ ಜನಗಳನ್ನಾಗಲಿ, ಯಂತ್ರಗಳನ್ನಾಗಲಿ ತೆಗೆದುಕೊಂಡು ಹೋಗಲು ಸಾಧ್ಯವೇ ಇಲ್ಲ. ಏಕೆಂದರೆ ತನ್ನಲ್ಲಿ ಕನಸು ತೋರುವಾಗ ಎಚ್ಚರದವಸ್ಥೆ ಇರುವದೇ ಇಲ್ಲ. ಎಚ್ಚರವಾದಾಗ ತನ್ನ ಕನಸು ಹಾಗೂ ನಿದ್ರೆಗಳಿರುವದೇ ಇಲ್ಲ. ಆದ್ದರಿಂದ (೧) ತನ್ನ ಎಚ್ಚರ, ಅದಕ್ಕೆ ಸೇರಿದ ಈ ಪ್ರಪಂಚ ; (೨) ತನ್ನ ಸ್ವಪ್ನ, ಅದಕ್ಕೆ ಸೇರಿದ ಆ ಪ್ರಪಂಚ; (೩) ತನ್ನ ನಿದ್ರೆ ಅಲ್ಲಿ ಯಾವ ವಿಧವಾದ ಪ್ರಪಂಚವೂ ಇಲ್ಲದ ತಾನು– ಎಂದೀ ರೀತಿ ತನ್ನ ಸ್ವರೂಪವನ್ನು ಹಿಡಿದು ವಿಚಾರಿಸಲು ಹೊರಟ ವೇದಾಂತಶಾಸ್ತ್ರಕ್ಕೂ "ನಾವೆಲ್ಲರೂ ಈ ಜಗತ್ತಿನಲ್ಲಿ ಹುಟ್ಟಿದ ಮನುಷ್ಯರು, ನಮ್ಮೆಲ್ಲರಿಗೂ ಇಲ್ಲಿ ಕನಸು ನಿದ್ರೆಗಳಾಗುತ್ತಿರುತ್ತವೆ" ಎಂಬ ವ್ಯಾವಹಾರಿಕ ದೃಷ್ಟಿಯನ್ನೇ ಇಟ್ಟುಕೊಂಡು ಹೊರಡುವ ಭೌತಿಕವಿಜ್ಞಾನಕ್ಕೂ ಬಹಳ ವ್ಯತ್ಯಾಸವಿದೆ.

**ಪ್ರಶ್ನೆ :– ಓಹೊ ! ಇಲ್ಲಿ ತಾನು, ತನ್ನಲ್ಲಿ ಎಚ್ಚರ, ಆ ಎಚ್ಚರದಲ್ಲಿ ನಾನು ಹಾಗೂ ಅನೇಕರು ತೋರುವದು ಎಂದಲ್ಲವೆ, ತಿಳಿಯಬೇಕು ?**

ಉತ್ತರ :– ಹೌದು, ಹಾಗೆಯೇ ತಿಳಿಯಬೇಕು.

**ಪ್ರಶ್ನೆ :– ಈ ಅವಸ್ಥಾತ್ರಯದ ಬಗ್ಗೆ ವೇದಾಂತದ ದೃಷ್ಟಿಕೋನವನ್ನು ವಿವರವಾಗಿ ತಿಳಿಸುವಿರಾ ?**

ಉತ್ತರ :– ಇಲ್ಲಿ ಅದು ಅಪ್ರಕೃತ. ಏನೋ ಪ್ರಸಂಗಾನುಸಾರ ಒಂದೆರಡು ಮಾತುಗಳನ್ನು ಹೇಳಿದ್ದೇವಷ್ಟೆ. ಶಂಕರಸಿದ್ಧಾಂತಸಂಸ್ಮರಣ ಗ್ರಂಥಗಳ ಮುಂದಿನ ಭಾಗಗಳಲ್ಲಿ ಒಂದು ಭಾಗವನ್ನೇ ಈ ಅವಸ್ಥಾತ್ರಯಕ್ಕೆ ಮೀಸಲಾಗಿಟ್ಟು ತಿಳಿಸೋಣ. (ಈಗಲೇ ಇದರ ಬಗ್ಗೆ ಹೆಚ್ಚಾಗಿ ತಿಳಿಯಬೇಕೆಂಬುವವರು "The Science of Reality" ಎಂಬ ಇಂಗ್ಲಿಷ್ ಗ್ರಂಥವನ್ನೂ 'ಪರಮಾರ್ಥಚಿಂತಾಮಣಿ' ಎಂಬ ಕನ್ನಡ ಗ್ರಂಥವನ್ನೂ ನೋಡಬೇಕು.)

**ಪ್ರಶ್ನೆ :– ಹೋಗಲಿ, ಪ್ರಕೃತವಿಷಯಕ್ಕೆ ಬರೋಣ. ಭೌತಿಕಸಂಶೋಧನೆಯಿಂದ ನಿರ್ಣಯಿಸಿರುವ 'ಶಕ್ತಿ' ತತ್ತ್ವವು ವೇದಾಂತದಲ್ಲಿ ಹೇಳಿದ ಬ್ರಹ್ಮವಲ್ಲ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ– ಎಂದಲ್ಲವೆ ನಿಮ್ಮ ಅಭಿಪ್ರಾಯ ?**

ಉತ್ತರ :– ಅಹುದು.

**ಪ್ರಶ್ನೆ :– ಹಾಗಾದರೆ, ಈಗ ಆ ವಿಷಯವನ್ನೇಕೆ ಎತ್ತಿದಿರಿ ?**

ಉತ್ತರ :– ಓ ! ಮರೆತುಬಿಟ್ಟಿರೇನು ? ವ್ಯಾಪ್ಯ ವ್ಯಾಪಕ ಎಂದು ವ್ಯವಹಾರದಲ್ಲಿ ಕಾಣುವದಕ್ಕೂ ತತ್ತ್ವವನ್ನು ಕಂಡಾಗ ತತ್ತ್ವದ ದೃಷ್ಟಿಯಿಂದ ವ್ಯಾಪ್ಯ ವ್ಯಾಪಕಭಾವವನ್ನು ಹೇಳುವದಕ್ಕೂ ತುಂಬಾ ಅಂತರವಿದೆ ಎಂಬುದಕ್ಕೆ ಈ ವಿಷಯವನ್ನು ದೃಷ್ಟಾಂತವಾಗಿಟ್ಟುಕೊಂಡಿತ್ತಲ್ಲವೆ ?

**ಪ್ರಶ್ನೆ :– ಹಾಂ ! ಹೌದು. ತಂತಿಯನ್ನು ವಿದ್ಯುತ್ತು ವ್ಯಾಪಿಸುತ್ತದೆ ಎಂಬುದು ವ್ಯಾವಹಾರಿಕ. ಅಲ್ಲಿ ತಂತಿ ವಿದ್ಯುತ್ತು ಬೇರೆ ಬೇರೆಯಾಗಿವೆ. ಆದರೆ ಶಕ್ತಿಯು ಸರ್ವವನ್ನೂ ವ್ಯಾಪಿಸಿದೆ ಎಂದಾಗ ಶಕ್ತಿಯೇ ತತ್ತ್ವವು (ಪರಮಾರ್ಥವು) ಅದೇ ವಸ್ತುವಾಗಿ ತೋರಿಕೊಳ್ಳುತ್ತದೆ ಎಂದಲ್ಲವೆ ತಾವು ಹಿಂದೆ ತಿಳಿಸಿದ್ದು ?**

ಉತ್ತರ :– ಹೌದು. ಅದೇ ದೃಷ್ಟಾಂತವು.

**ಪ್ರಶ್ನೆ :– ಆಗಲಿ, ಈ ದೃಷ್ಟಾಂತದಿಂದ ಸಾಕ್ಷಿಸ್ವರೂಪದ ಬಗ್ಗೆ ಏನು ಉಪಯೋಗವಾಯಿತು ?**

ಉತ್ತರ :– ನೀವೇ ಪ್ರಶ್ನೆ ಕೇಳಿದ್ದೀರಲ್ಲ ! ಬುದ್ಧಿಯೇ ಮುಂತಾದವುಗಳನ್ನು ಸಾಕ್ಷಿಯು ವ್ಯಾಪಿಸುತ್ತದೆ ಎಂದದ್ದರಿಂದ ಸಾಕ್ಷಿಸ್ವರೂಪದಂತೆಯೇ ಬುದ್ಧ್ಯಾದಿಗಳೂ ಇದ್ದೇ ಬಿಟ್ಟಿರುವಾಗ ಸಾಕ್ಷಿಯು ಅದ್ವಿತೀಯನು ಹೇಗೆ ಎಂದು ಕೇಳಿದ್ದಿರಲ್ಲವೆ ? ಅದಕ್ಕಿದು ಉತ್ತರವಾಗಿದೆ.

**ಪ್ರಶ್ನೆ :– ಹೇಗೆ ?**

ಉತ್ತರ :– ವ್ಯಾವಹಾರಿಕದೃಷ್ಟಿಯಿಂದ ಬುದ್ಧಿ ಮುಂತಾದವುಗಳೂ ಸಾಕ್ಷಿ

ಸ್ವರೂಪವೂ ಎಂದು ವಿಭಾಗಮಾಡಿ ಬುದ್ಧಿಯೇ ಮುಂತಾದದ್ದನ್ನು ಸಾಕ್ಷಿಸ್ವರೂಪವು ವ್ಯಾಪಿಸಿರುವದೆಂದು ಹೇಳಿದ್ದು ತಂತಿಯನ್ನು ವಿದ್ಯುತ್ತು ವ್ಯಾಪಿಸುತ್ತದೆ ಎಂದಂತೆ ಆಗಿದೆ. ಆದರೆ ಶಕ್ತಿಯೇ ಪರಮಾರ್ಥ, ಅದೇ ವಸ್ತುವಾಗಿ ತೋರುತ್ತದೆ ಎಂದರಿತಾಗ ಶಕ್ತಿಯು ಹೇಗೆ ದೃಷ್ಟಾಂತದಲ್ಲಿ ಅದ್ವಿತೀಯವಾಗಿರುತ್ತದೆಯೋ ಹಾಗೆಯೇ ಸಾಕ್ಷಿಸ್ವರೂಪದ ಪರಮಾರ್ಥದೃಷ್ಟಿಯಿಂದ ನೋಡಿದರೆ ಅಂತಃಕರಣ ಮುಂತಾದದ್ದಿಲ್ಲವೇ ಇಲ್ಲ, ಸಾಕ್ಷಿಸ್ವರೂಪವೇ ಹೀಗೆ ಕಾಣುತ್ತದೆಯೇ ಹೊರತು ಸಾಕ್ಷಿ ವ್ಯತಿರಿಕ್ತವಾಗಿ ಏನೂ ಇಲ್ಲ ಎಂದು ಗೊತ್ತಾಗುತ್ತದೆ.

**ಪ್ರಶ್ನೆ :– ಇನ್ನೂ ಸ್ವಲ್ಪ ಸುಲಭವಾಗಿ ಬೇರೆ ದೃಷ್ಟಾಂತಗಳಿಂದ ವಿವರಿಸಿ ಇದನ್ನು ತಿಳಿಸಬಾರದೆ ?**

ಉತ್ತರ :– ಆಗಲಿ, ಕೇಳಿ. ಮಣ್ಣಿನಿಂದಾದ ಮಡಿಕೆಯನ್ನು ಮಣ್ಣೇ ವ್ಯಾಪಿಸಿದೆ. ಅಲೆಗಳನ್ನು ನೀರೇ ವ್ಯಾಪಿಸಿದೆ. ಕಟ್ಟಿಗೆಯಿಂದ ಮಾಡಿದ ಕುರ್ಚಿಯನ್ನು ಕಟ್ಟಿಗೆಯೇ ವ್ಯಾಪಿಸಿದೆ. ಈ ವಾಕ್ಯಗಳಲ್ಲಿ ವ್ಯಾಪ್ಯಗಳಾದ ಮಡಕೆ, ಅಲೆ, ಕುರ್ಚಿಗಳು ಬರೀ ವ್ಯವಹಾರ ಎಂದರೆ ಹೆಸರು, ಕಲ್ಪನೆ ಮಾತ್ರ. ವ್ಯಾಪಕಗಳಾದ ಮಣ್ಣು, ನೀರು, ಕಟ್ಟಿಗೆಗಳೇ ಪರಮಾರ್ಥ ತತ್ತ್ವವು. ಹೀಗೆ ವ್ಯಾಪಕವನ್ನು ಕಂಡೊಡನೆಯೇ ವ್ಯಾಪ್ಯದ ಇರುವಿಕೆಯು ಬಾಧಿಸಿ ಅದು ಬರೀ ತತ್ತ್ವರೂಪವೇ ಆಗಿ ಕಾಣುವದನ್ನೇ ಪರಮಾರ್ಥದೃಷ್ಟಿ ಎನ್ನುತ್ತಾರೆ.

**ಪ್ರಶ್ನೆ :– ಹಾಗೆಯೇ ವ್ಯಾಪಕದ ಸಾಕ್ಷಿಸ್ವರೂಪವನ್ನು ಕಂಡಾಗ ವ್ಯಾಪ್ಯಗಳಾದ ಬುದ್ಧಿ ಮನಸ್ಸು ಮುಂತಾದವುಗಳ ಅಸ್ತಿತ್ವವು ಸ್ವತಂತ್ರವಾಗಿರುವಂತೆ ಮೊದಲು ಕಾಣುತ್ತಿದ್ದರೂ ಈಗ ಈ ಪರಮಾರ್ಥದೃಷ್ಟಿಯನ್ನವಲಂಬಿಸಿದೊಡನೆಯೇ ಇವುಗಳೆಲ್ಲ ಬಾಧಿತವಾಗುತ್ತವೆ. ಅಂದರೆ ಬರೀ ಹೆಸರು ಕಲ್ಪನೆಗಳು ಮಾತ್ರ ಎಂಬುದು ಗೊತ್ತಾಗುತ್ತದೆ ಎಂದಲ್ಲವೆ, ನಿಮ್ಮ ಅಭಿಪ್ರಾಯ ?**

ಉತ್ತರ :– ಸರಿಯಾಗಿ ಹೇಳಿದಿರಿ. **''ಯತ್ರ ತ್ವಸ್ಯ ಸರ್ವಂ ಆತ್ಮೈವಾಭೂತ್ ತತ್ರ ಕೇನ ಕಂ ಪಶ್ಯೇತ್''** (೨–೪–೧೪) ಎಲ್ಲಿ ಇದೆಲ್ಲವೂ ಆತ್ಮನೇ ಆಯಿತೋ ಆಗ ಯಾವದರಿಂದ ಏನನ್ನು ನೋಡಿಯಾನು ? (ಆಗ ಇನ್ನೊಂದೆಂಬುದೇ ಇರುವದಿಲ್ಲ ಎಂದರ್ಥ) ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ಯಾಜ್ಞವಲ್ಕ್ಯರು ಹೇಳಿದ್ದಾರೆ. ಇಂಥ ಪರಮಾರ್ಥದೃಷ್ಟಿಯನ್ನೇ ಶಾಸ್ತ್ರ ಹಾಗೂ ಸದ್ಗುರುಗಳ ಉಪದೇಶದಿಂದ ಪಡೆದುಕೊಳ್ಳಬೇಕು. ಅದನ್ನೇ ನಾವು ಆರಂಭದಲ್ಲಿ **''ಸಾಕ್ಷ್ಯನುಭವ''** ಎಂಬಲ್ಲಿಯ ಎರಡನೆಯ ಅರ್ಥದಲ್ಲಿ ವಿವರಿಸಿ ಹೇಳಿದ್ದೇವೆ.

**ಪ್ರಶ್ನೆ :– ಹಾಗಾದರೆ ಸಾಕ್ಷಿಸ್ವರೂಪವಲ್ಲದ ಇನ್ನೊಂದೆಂಬುದು ನಿಜವಾಗಿಲ್ಲ ಎಂಬುದನ್ನೇ ಮನಗಾಣಬೇಕಲ್ಲವೆ ?**

ಉತ್ತರ :– ಹೌದು. ಹಾಗೆ ಮನಗಂಡಾಗ ಬ್ರಹ್ಮವು ಅಥವಾ ಸಾಕ್ಷಿಯು ಅದ್ವಿತೀಯವಾದದ್ದು ಎಂಬ ಮಾತಿನ ಸ್ವಾರಸ್ಯವು ಗೊತ್ತಾಗುತ್ತದೆ.

**ಪ್ರಶ್ನೆ :– ಹೀಗೆ ಅನಾತ್ಮವೆಂಬುದಿಲ್ಲವೇ ಇಲ್ಲ, ಬರೀ ಆತ್ಮನೇ ಪರಮಾರ್ಥವಾಗಿರತಕ್ಕವನು ಎಂದು ಆಚಾರ್ಯರು ಎಲ್ಲಿ ಹೇಳಿದ್ದಾರೆ ?**

ಉತ್ತರ :– ಬೃಹದಾರಣ್ಯಕ ೨–೪–೧೪ ರಲ್ಲಿ ಈ ವಾಕ್ಯವನ್ನು ಬರೆದಿದ್ದಾರೆ. **"ತಸ್ಮಾತ್ ಅವಿದ್ಯಯೈವ ಅನಾತ್ಮತ್ವಂ ಪರಿಕಲ್ಪಿತಂ ನ ತು ಪರಮಾರ್ಥತಃ ಆತ್ಮತವ್ಯತಿರೇಕೇಣ ಅಸ್ತಿ ಕಿಂಚಿತ್ ।"** ಅನಾತ್ಮವೆಂಬುದೆಲ್ಲವೂ ಅವಿದ್ಯೆಯಿಂದ ಕಲ್ಪಿಸಲ್ಪಟ್ಟಿದ್ದೇ ಹೊರತು ಪರಮಾರ್ಥವಾಗಿ ಆತ್ಮನಿಗಿಂತ ಬೇರೆಯಾಗಿ ಅನಾತ್ಮವೆಂಬ ಪದಾರ್ಥವೇ ಇರುವದಿಲ್ಲ– ಎಂಬುದು ಇದರ ತಾತ್ಪರ್ಯವು. ಆದ್ದರಿಂದ ಜನಸಾಮಾನ್ಯರ ಗ್ರಹಿಕೆಯನ್ನನುಸರಿಸಿ ಅನಾತ್ಮಗಳ ಅಸ್ತಿತ್ವವನ್ನು ಅಧ್ಯಾರೋಪ ದೃಷ್ಟಿಯಿಂದ ಒಪ್ಪಿ ಆತ್ಮಾನಾತ್ಮವಿವೇಕವನ್ನು – ಅನಾತ್ಮದಿಂದ ಆತ್ಮನನ್ನು ವಿಂಗಡಿಸಿ ತಿಳಿದುಕೊಳ್ಳುವ ವಿಚಾರವನ್ನು– ಮಾಡಬೇಕು ಎಂಬುದಾಗಿ ಬೋಧವನ್ನಾರಂಭಿಸಿತ್ತು. ಆತ್ಮತತ್ತ್ವವನ್ನು ಕಂಡಾಗ ಅನಾತ್ಮವೆಂಬುದು ಯಾವಾಗಲೂ ಇಲ್ಲವೇ ಇಲ್ಲವೆಂದಾಗಿ ಸರ್ವವೂ ಆತ್ಮನೇ ಆಗಿ ನಿಲ್ಲುವದೇ ಪರಮಾರ್ಥದೃಷ್ಟಿಯಾಗಿದೆ.

## (೮) ಸಾಕ್ಷಿಶಬ್ದವು ಸಾಪೇಕ್ಷ

**ಪ್ರಶ್ನೆ :– ಹಾಗಾದರೆ ಸಾಕ್ಷಿ ಎಂಬ ಶಬ್ದವೂ ವ್ಯರ್ಥವೆಂದಾಯಿತಲ್ಲ ! ಏಕೆಂದರೆ ಸಾಕ್ಷ್ಯ ಎಂಬ ಇನ್ನೊಂದಿದ್ದರಲ್ಲವೆ, ಸಾಕ್ಷಿ ಎನಿಸಿಕೊಳ್ಳುವದು ! ಸಾಕ್ಷ್ಯವಾದ ಬುದ್ಧ್ಯಾದಿಗಳೇ ನಿಜವಾಗಿಲ್ಲದಾಗ ಸಾಕ್ಷಿ ಎಂಬುದಾದರೂ ನಿಜವಾದದ್ದು ಎಂದು ತಿಳಿಯುವದು ಹೇಗೆ ? ಅದೂ ಕಲ್ಪಿತವೇ ಎಂದು ಏಕೆ ಹೇಳಬಾರದು ? ಅಥವಾ ಬುದ್ಧಿಯ ಅಪೇಕ್ಷೆಯಿಂದ ಸಾಕ್ಷಿ ಎನಿಸಿತ್ತು, ಬುದ್ಧ್ಯಾದಿಗಳೇ ಇಲ್ಲವೆಂದಮೇಲೆ ಸಾಕ್ಷಿಯೂ ಇಲ್ಲ ಎಂದೇಕೆ ತಿಳಿಯಬಾರದು ?**

ಉತ್ತರ :– ನಿಮ್ಮ ಈ ಪ್ರಶ್ನೆಗಳಿಗೆ ಎರಡು ರೀತಿಯಿಂದ ಉತ್ತರ ಕೊಡಬೇಕಾಗುತ್ತದೆ. ಸಾವಧಾನವಾಗಿ ಕೇಳಿ.

**ಪ್ರಶ್ನೆ :– ಆಗಲಿ.**

ಉತ್ತರ :– ಈಗ ಮೊದಲನೆಯದಾಗಿ 'ಸಾಕ್ಷಿ' ಶಬ್ದವನ್ನು ಕುರಿತು ಕೆಲವು ವಿಷಯಗಳನ್ನು ವಿಚಾರಿಸೋಣ. ಬುದ್ಧ್ಯಾದಿಗಳು ನಿಜವಾಗಿಲ್ಲದ್ದರಿಂದಲೂ ಇವುಗಳ

ಅಪೇಕ್ಷೆಯಿಂದಲೇ ಸಾಕ್ಷಿ ಎಂಬ ಶಬ್ದವನ್ನು ಪ್ರಯೋಗಿಸಿದ್ದರಿಂದಲೂ ಬುದ್ಧ್ಯಾದಿಗಳು ಪರಮಾರ್ಥವಾಗಿಲ್ಲ ಎಂಬುದನ್ನು ಕಂಡುಕೊಂಡಾಗ ಸಾಕ್ಷಿ ಎಂಬ ಶಬ್ದವು ವ್ಯರ್ಥವಾಗುವದೆಂಬುದೇ ನಿಜವು. ಆದ್ದರಿಂದಲೇ **''ಸರ್ವಶಬ್ದಪ್ರವೃತ್ತಿನಿಮಿತ್ತ ಶೂನ್ಯತ್ವಾತ್ ತಸ್ಯ''** (ಮಾಂ.೭) ಎಂದೇ ಶ್ರೀಶಂಕರರು ಬರೆದಿದ್ದಾರೆ. ಯಾವ ಶಬ್ದ ಪ್ರತ್ಯಯಗಳೂ ಅಲ್ಲಿ ಇಲ್ಲ–ಎಂಬುದು ಇದರ ತಾತ್ಪರ್ಯವು. ಆದ್ದರಿಂದ ಸಾಕ್ಷಿ ಎಂಬ ಶಬ್ದವು ಆರೋಪಿತವೇ, ಕಲ್ಪಿತವೇ ಆಗಿದೆ.

**ಪ್ರಶ್ನೆ :– ಲೋಕದಲ್ಲಿ ಸಾಕ್ಷ್ಯವನ್ನನುಸರಿಸಿಯೇ ಸಾಕ್ಷಿ ಶಬ್ದವಿರುವದಲ್ಲವೆ? ಹಾಗೆಯೇ ಈ ಸಾಕ್ಷಿ ಶಬ್ದವೂ ಸಹ ಸಾಪೇಕ್ಷವಾದದ್ದು ಎಂದಾಯಿತಲ್ಲ!**

ಉತ್ತರ :– ಹೌದು, ಈ ಸಾಕ್ಷಿಶಬ್ದವು ಸಾಪೇಕ್ಷವೇ ಆಗಿದೆ. ಆದರೆ ಲೋಕದಲ್ಲಿಯ ಶಬ್ದಕ್ಕೂ ಇದಕ್ಕೂ ವ್ಯತ್ಯಾಸವುಂಟು.

**ಪ್ರಶ್ನೆ :– ಅದೇನು ವ್ಯತ್ಯಾಸ ?**

ಉತ್ತರ :– ಕೇಳಿ. ವ್ಯಾಕರಣಶಾಸ್ತ್ರದ ಪಾಣಿನೀಯ ಸೂತ್ರದಲ್ಲಿ **''ಸಾಕ್ಷಾತ್ ದ್ರಷ್ಟರಿ ಸಂಜ್ಞಾಯಾಮ್''** ಎಂದು ಸಾಕ್ಷಿಸ್ವರೂಪದ ನಿರ್ವಚನವಿದೆ. ಇದಕ್ಕೆ ನೇರಾಗಿ ನೋಡುವವನಿಗೆ 'ಸಾಕ್ಷಿ' 'ಎಂದು'. ಸಂಜ್ಞೆ ಎಂದರ್ಥ. ಲೋಕವ್ಯವಹಾರದಲ್ಲಿ 'ನಾನೇ ಸ್ವತಃ ಕಂಡೆ' ಎನ್ನುವವನನ್ನೇ ನಿಜವಾದ ಸಾಕ್ಷಿ ಎಂದು ವ್ಯವಹರಿಸುತ್ತಾರೆ. ಇಲ್ಲಿ ನೋಡುವವನು ತನಗನ್ಯವಾದ ವಸ್ತುವನ್ನು ದೇಶದ ಅಂತರದಲ್ಲಿ (ದೇಶ ವ್ಯವಧಾನದಿಂದ) ನೋಡುವ ಕ್ರಿಯೆಯನ್ನು ಮಾಡುವವನು ಎಂಬರ್ಥವಿದೆ.

**ಪ್ರಶ್ನೆ :– ಹಾಗಾದರೆ ವೇದಾಂತದಲ್ಲಿ ಈ ಬಗೆಯ ಅರ್ಥವಿಲ್ಲವೇನು ?**

ಉತ್ತರ :– ವ್ಯವಹಾರದಲ್ಲಿ 'ದ್ರಷ್ಟರಿ' ಎಂದರೆ ನೋಡುವ ಕ್ರಿಯೆಯನ್ನು ಮಾಡುವವನು ಎಂಬರ್ಥದಲ್ಲಿಯೇ ಸಾಕ್ಷಿಶಬ್ದವಿರುವದರಿಂದ ದ್ರಷ್ಟರಿ ಎಂಬುದರ ಲ್ಲಿಯೇ ಅಲ್ಲಿ ಹೆಚ್ಚು ಅವಲಂಬನೆಯಿದೆ. ಆದರೆ ವೇದಾಂತದಲ್ಲಿ 'ಸಾಕ್ಷಾತ್' ಎಂಬುದರಲ್ಲಿಯೇ ಹೆಚ್ಚು ತಾತ್ಪರ್ಯವಿದೆ.

**ಪ್ರಶ್ನೆ :– ಹಾಗೆಂದರೇನು ?**

ಉತ್ತರ :– ಕೇಳಿ. 'ಸಾಕ್ಷಾತ್' ಎಂದರೆ ನೇರಾಗಿ ಇನ್ನೊಂದರ ಹಂಗಿಲ್ಲದೆ ನೋಡುವವನು ಎಂದರ್ಥ. ನಾವು ಈವರೆಗೆ ತಿಳಿಸಿದ ಸಾಕ್ಷಿಸ್ವರೂಪಚೈತನ್ಯವು ಅಥವಾ ಅನುಭವಸ್ವರೂಪವು ಸರ್ವವನ್ನೂ ವ್ಯಾಪಿಸಿ ಸರ್ವವನ್ನೂ ಬೆಳಗುತ್ತಲಿರುವ ಸ್ವರೂಪವಾದ್ದರಿಂದ ಇದು ನೋಡುವ ಕ್ರಿಯೆಯನ್ನು ಮಾಡುವದಿಲ್ಲ, ಇದು ನಿಷ್ಕ್ರಿಯ. ಇದರಲ್ಲಿ ಕ್ರಿಯೆ ಎಂಬುದಿಲ್ಲ.

**ಪ್ರಶ್ನೆ :– ಬೆಳಗುವವದೆಂಬುದೂ ಒಂದು ಕ್ರಿಯೆಯೇ ಅಲ್ಲವೆ ?**

ಉತ್ತರ :– ಅಲ್ಲ, ಸೂರ್ಯನು ಬೆಳಗುತ್ತಾನೆ ಎಂದರೆ ಅದು ಬರೀ ಸ್ವಭಾವವೇ ಹೊರತು ಕ್ರಿಯೆಯಲ್ಲ. ಬೆಟ್ಟವು ನಿಂತಿದೆ ಎಂದರೆ ಅದು ಸ್ವಭಾವವೇ ಹೊರತು ಕ್ರಿಯೆಯಲ್ಲ. ದೀಪವು ಬೆಳಗುತ್ತದೆ, ಕುದುರೆಯು ನಿಂತಿದೆ, ಎಂದರೆ ಅದೊಂದು ಕ್ರಿಯೆಯಾಗುತ್ತದೆ. ಏಕೆಂದರೆ ಒಮ್ಮೆ ಬೆಳಗುವದು ಮತ್ತೊಮ್ಮೆ ಬೆಳಗದಿರುವದು ದೀಪಕ್ಕೆ ಉಂಟು. ಒಮ್ಮೆ ನಿಲ್ಲುವದು ಮತ್ತೊಮ್ಮೆ ಓಡುವದು ಕುದುರೆಗೆ ಉಂಟು. ಹಾಗೆ ಈ ಸಾಕ್ಷಿಸ್ವರೂಪದಲ್ಲಿಲ್ಲ. ಸೂರ್ಯನಂತೆ ನಿತ್ಯಚಿನ್ಮಾತ್ರಸ್ವರೂಪವಿದು. ಎಲ್ಲವನ್ನೂ ವ್ಯಾಪಿಸಿ ಬೆಳಗತಕ್ಕದ್ದಾದ್ದರಿಂದ ದೇಶಕಾಲಗಳ ವ್ಯವಧಾನವೇ ಇದಕ್ಕೆ ಇಲ್ಲ. ಇಂಥ ಕೇವಲ ಚಿನ್ಮಾತ್ರವೇ ಈ ಸಾಕ್ಷಿಸ್ವರೂಪವು.

**ಪ್ರಶ್ನೆ :– ಶ್ರೀಶಂಕರರು ಹೀಗೆಂದು ಎಲ್ಲಿಯಾದರೂ ಹೇಳಿರುವರೇನು ?**

ಉತ್ತರ :– ಇದೋ ನೋಡಿ. ತೈತ್ತಿರೀಯ ಉಪನಿಷತ್ತಿನ ೨–೧ರಲ್ಲಿ ಬರೆದ ವಾಕ್ಯ ಹೀಗಿದೆ.

**"ಯತ್ತು ಬ್ರಹ್ಮಣೋ ವಿಜ್ಞಾನಂ ತತ್ ಸವಿತೃ ಪ್ರಕಾಶವತ್ ಅಗ್ನ್ಯುಷ್ಣವಚ್ಚ ಬ್ರಹ್ಮ ಸ್ವರೂಪ ಅವ್ಯತಿರಿಕ್ತಂ ಸ್ವರೂಪಮೇವ ತತ್ । ನ ತತ್ ಕಾರಣಾಂತರಸವ್ಯಪೇಕ್ಷಮ್ । ನಿತ್ಯಸ್ವರೂಪತ್ವಾತ್ । ಸರ್ವಭಾವಾನಾಂ ಚ ತೇನ ಅವಿಭಕ್ತದೇಶಕಾಲತ್ವಾತ್ ಕಾಲಾಕಾಶಾದಿಕಾರಣತ್ವಾಚ್ಚ ನಿರತಿಶಯಸೂಕ್ಷ್ಮತ್ವಾಚ್ಚ । ನ ತಸ್ಯ ಅನ್ಯದ್ ಅವಿಜ್ಞೇಯಂ ಸೂಕ್ಷ್ಮಂ ವ್ಯವಹಿತಂ ವಿಪ್ರಕೃಷ್ಟಂ ಭೂತಂ ಭವತ್ ಭವಿಷ್ಯದ್ವಾ ಅಸ್ತಿ। ತಸ್ಮಾತ್ ಸರ್ವಜ್ಞಂ ಬ್ರಹ್ಮ॥"** ಇದರ ಅಭಿಪ್ರಾಯವೇನೆಂದರೆ, ಬ್ರಹ್ಮದ ವಿಜ್ಞಾನವಾದರೊ, ಸೂರ್ಯನ ಪ್ರಕಾಶದಂತೆಯೂ ಅಗ್ನಿಯ ಉಷ್ಣತೆಯಂತೆಯೂ ಬ್ರಹ್ಮದ ಸ್ವರೂಪವೇ ಆಗಿದೆ. ಬ್ರಹ್ಮವೂ ಅದರ ಜ್ಞಾನವೂ ಎಂಬ ಭೇದವು ಅಲ್ಲಿರುವದಿಲ್ಲ. ಜ್ಞಾನವೇ ಬ್ರಹ್ಮವು, ಬ್ರಹ್ಮವೇ ಜ್ಞಾನವು. ಅದು ಕಾರಣಾಂತರವನ್ನಪೇಕ್ಷಿಸಿ ಇರತಕ್ಕದ್ದಲ್ಲ. ದೇಶಕಾಲಾದಿ ಎಲ್ಲಾ ಭಾವಗಳೂ ಬ್ರಹ್ಮಕ್ಕಿಂತ ಬೇರೆಯಾಗಿಲ್ಲವೇ ಇಲ್ಲ. ಏಕೆಂದರೆ ಕಾಲಾಕಾಶಾದಿಗಳಿಗೂ ಬ್ರಹ್ಮವು ಕಾರಣವಾಗಿರುತ್ತದೆ. ಕಾಲಾಕಾಶಾದಿಗಳಿಗಿಂತಲೂ ಅತ್ಯಂತ ಸೂಕ್ಷ್ಮವೂ ಆಗಿರುತ್ತದೆ. ಬ್ರಹ್ಮಕ್ಕಿಂತ ಬೇರೆಯಾಗಿ ಬ್ರಹ್ಮದ ಅರಿವಿಗೆ ನಿಲುಕದೆ ದೂರವಾಗಿರುವ ಯಾವದೇ ಜ್ಞೇಯವು ಎಲ್ಲೂ ಎಂದೂ ಇರಲು ಶಕ್ಯವಿಲ್ಲ. ಆದ್ದರಿಂದ ಬ್ರಹ್ಮವು 'ಜ್ಞ' ಸ್ವರೂಪವು.

**ಪ್ರಶ್ನೆ :– ಆದ್ದರಿಂದಲೇ ಅರಿಯುವದು, ಬೆಳಗುವದು, ನೋಡುವದು ಕ್ರಿಯೆಯಲ್ಲ, ಸ್ವಭಾವ ಎಂದಲ್ಲವೆ, ನೀವು ಹೇಳಿದ್ದು ?**

ಉತ್ತರ :– ಹೌದು, ಹೌದು. ಈ ಕಾರಣದಿಂದಲೇ 'ಸಾಕ್ಷಾತ್' ಎಂಬುದು

ಇಲ್ಲಿ ಮುಖ್ಯ ಶಬ್ದವಾಗಿದೆ. ಅವಿದ್ಯಾಕಲ್ಪಿತವಾದ ಇನ್ನೊಂದಿರುವಂತೆ ತೋರುವಾಗ ಅದನ್ನೆಲ್ಲ ವ್ಯಾಪಿಸಿ ಬೆಳಗುವವನೆಂಬ ವ್ಯವಹಾರಕ್ಕೆ ಈ ಸಾಕ್ಷಿಯು ಪಾತ್ರನಾಗುತ್ತಾನೆ. ಆ ಅವಿದ್ಯಾಕಲ್ಪಿತವಾದದ್ದು ಅಡಗಿದಾಗ ಅಥವಾ ವಿದ್ಯೆಯಿಂದ ಬಾಧಿತವಾದಾಗ ಕೇವಲನಾಗಿರುತ್ತಾನೆ. ಆಗ ಬೆಳಗುವವನು ಎಂದೆನಿಸಿಕೊಳ್ಳುವದಿಲ್ಲ.

**ಪ್ರಶ್ನೆ :– ಇದಕ್ಕೊಂದು ನಿದರ್ಶನವನ್ನು ಹೇಳುವಿರಾ ?**

ಉತ್ತರ :– ಆಗಲಿ ಕೇಳಿ. ಎಚ್ಚರದ ಪ್ರಪಂಚವು ತೋರುತ್ತಿರುವಾಗ ಆಧ್ಯಾತ್ಮಿಕ (ದೇಹ, ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ, ಸುಖ, ದುಃಖ, ನಾನು ಎಂಬ ಅನಿಸುವಿಕೆ ಇತ್ಯಾದಿಗಳು) ಆಧಿಭೌತಿಕ (ಆಕಾಶ, ವಾಯು, ಅಗ್ನಿ, ಜಲ, ಭೂಮಿ– ಇದರಲ್ಲಿ ಎಲ್ಲ ವಿಧದ ಪ್ರಾಣಿಗಳೂ ಪದಾರ್ಥಗಳೂ ಮುಂತಾದದ್ದು), ಆಧಿದೈವಿಕ (ಗ್ರಹ, ನಕ್ಷತ್ರ, ಸೂರ್ಯ, ಚಂದ್ರ, ಲೋಕ, ಲೋಕಾಂತರ ಇತ್ಯಾದಿಗಳು) ಕಾಲದೇಶ ಕಾರ್ಯ ಕಾರಣಭಾವ ಸಮೇತವಾದ ಈ ಇಡಿಯ ಪ್ರಪಂಚವನ್ನೇ ವ್ಯಾಪಿಸಿ ಬೆಳಗುವವನು ಅರ್ಥಾತ್ 'ಸಾಕ್ಷಿ' ಎನಿಸಿದ್ದಾನೆ. ಇದರಂತೆಯೇ ಇಡಿಯ ಕನಸೆಲ್ಲವನ್ನೂ ವ್ಯಾಪಿಸಿ ಅರಿಯುವವನೆಂದೂ ಎನಿಸಿದ್ದಾನೆ. ಆದರೆ ಗಾಢನಿದ್ರೆಯಲ್ಲಿ ಎಚ್ಚರದ ಅಥವಾ ಕನಸಿನ ಯಾವದೇ ವಿಧವಾದ ಪ್ರಪಂಚವು– ಅವಿದ್ಯಾಕಲ್ಪಿತವಾದ ಹುಸಿತೋರಿಕೆಯು– ಇಲ್ಲದಿರುವದರಿಂದ ಆಗ ಏನನ್ನೂ ಅರಿಯದವನಾಗಿರುತ್ತಾನೆ ಎಂದು ಎನಿಸಿಕೊಳ್ಳುವನು.

**ಪ್ರಶ್ನೆ :– ಗಾಢನಿದ್ರೆಯಲ್ಲಿ ಚೈತನ್ಯವೇ ಇರುವದಿಲ್ಲ ಎಂದೇಕೆ ಹೇಳಬಾರದು? ಬರೀ ಅರಿವಿನ ಸ್ವರೂಪವಿದ್ದು ಅರಿವಿನಿಂದ ಬೆಳಗಿಸಿಕೊಳ್ಳಲ್ಪಡುವ ಅವಿದ್ಯಾಕಲ್ಪಿತ ವಾದ ಇನ್ನೊಂದೆಂಬುದಿಲ್ಲವೆಂದೇಕೆ ಕಲ್ಪಿಸುತ್ತೀರಿ ?**

ಉತ್ತರ :– ನಾವೇನೂ ಹಾಗೆ ಕಲ್ಪಿಸಿಲ್ಲ. ಶ್ರುತಿಯೂ ಭಾಷ್ಯಕಾರರೂ ಹಾಗೆಂದು ತಿಳಿಸಿದ್ದಾರೆ. ಅಲ್ಲದೆ ಸಾರ್ವತ್ರಿಕಾನುಭವವೂ ಹಾಗೆಯೇ ಇದೆ.

**ಪ್ರಶ್ನೆ :– ಇದನ್ನು ಸ್ವಲ್ಪ ಚೆನ್ನಾಗಿ ವಿಸ್ತರಿಸಿ ತಿಳಿಸಬಾರದೆ ?**

ಉತ್ತರ :– ನಾವು ಈ ಗ್ರಂಥಮಾಲೆಯಲ್ಲಿ ಪ್ರಕಟಿಸಬೇಕೆಂದಿರುವ ಅವಸ್ಥಾತ್ರಯವಿವೇಕವೆಂಬ ಭಾಗದಲ್ಲಿ ವಿಸ್ತಾರವಾಗಿ ಚರ್ಚಿಸಬೇಕೆಂದಿರುವೆವು.

**ಪ್ರಶ್ನೆ :– ಹೋಗಲಿ, ಪ್ರಕೃತಕ್ಕೆ ಸಂಕ್ಷಿಪ್ತವಾಗಿಯಾದರೂ ಹೇಳಿ.**

ಉತ್ತರ :– ಕೇಳಿ. ಬೃಹದಾರಣ್ಯಕದಲ್ಲಿ (೪–೩–೨೩ ರಿಂದ ೩೦) ಜನಕ, ಯಾಜ್ಞವಲ್ಕ್ಯ ಸಂವಾದವು ಬಂದಿದೆ. ಅಲ್ಲಿ ಸುಷುಪ್ತಿಯಲ್ಲಿ ಏನನ್ನೂ ಅರಿಯದಿರಲು ಕಾರಣವೇನೆಂದರೆ, ಅರಿಯಲ್ಪಡುವ ಇನ್ನೊಂದೆಂಬುದಿಲ್ಲವೇ ಹೊರತು ಅರಿವಿನ ಸ್ವರೂಪವೇ ಆದ ಆತ್ಮನ ಅರಿವಿಗೆ ಲೋಪವಿಲ್ಲ ಎಂದು ಸ್ಪಷ್ಟವಾಗಿ ಹೇಳಿರುತ್ತದೆ.

ಅದರಂತೆಯೇ ಸೂ.ಭಾ. ೨-೩-೧೮ರಲ್ಲಿ **"ವಿಷಯಾಭಾವಾದಿಯಮಚೇತಯಮಾನತಾ । ನ ಚೈತನ್ಯಾಭಾವಾತ್ । ಯಥಾ ವಿಯದಾಶ್ರಯಸ್ಯ ಪ್ರಕಾಶಸ್ಯ ಪ್ರಕಾಶ್ಯಾಭಾವಾತ್ ಅನಭಿವ್ಯಕ್ತಿಃ । ನ ಸ್ವರೂಪಾಭಾವಾತ್ ತದ್ವತ್ ।"** ಎಂದು ಆಚಾರ್ಯರು ಸ್ಪಷ್ಟವಾಗಿ ಹೇಳಿದ್ದಾರೆ. ಆಕಾಶದ ಕಡೆಗೆ ಹಿಡಿದಿರುವ ದೀಪವು (Torch light) ಬೆಳಗಲ್ಪಡುವ ಇನ್ನೊಂದಿಲ್ಲದ್ದರಿಂದ ಏನನ್ನೂ ಬೆಳಗುವದಿಲ್ಲವೇ ಹೊರತು ಬೆಳಗುವ ಪ್ರಕಾಶವಿಲ್ಲದ್ದರಿಂದಲ್ಲ. ಅದರಂತೆಯೇ ಆತ್ಮನು ಸುಷುಪ್ತಿಯಲ್ಲಿ ಇನ್ನೊಂದಿರದಿರುವದರಿಂದಲೇ ಏನನ್ನೂ ಅರಿಯಲಿಲ್ಲವೇ ಹೊರತು ಚೈತನ್ಯವಿಲ್ಲದ್ದರಿಂದಲ್ಲ ಎಂಬುದು ಈ ವಾಕ್ಯದ ಅರ್ಥ.

**ಪ್ರಶ್ನೆ :– ಒಟ್ಟಿನಲ್ಲಿ ಸಾಕ್ಷಿಯು ಅರಿವಿನ ಸ್ವರೂಪನು ಎಂದು ತಾನೆ ಇದರ ತಾತ್ಪರ್ಯ?**

ಉತ್ತರ :– ಹೌದು, ಹಾಗೆಯೇ ತಿಳಿಯಬೇಕು. ಈ ಪ್ರಾಸಂಗಿಕವನ್ನು ಬಿಟ್ಟು ಪ್ರಕೃತಕ್ಕೆ ಬರೋಣ. ನಾವು ಯಾವ ವಿಚಾರಕ್ಕೆ ಹೊರಟಿದ್ದೆವು ?

**ಪ್ರಶ್ನೆ :– 'ಸಾಕ್ಷಾದ್ದ್ರಷ್ಟಾ' ಎಂದರೆ ಅರಿವಿನ ಸ್ವರೂಪನು, ಅರಿಯುವ ಕ್ರಿಯೆಯಲ್ಲ ಎಂಬುದನ್ನಲ್ಲವೆ, ನೀವು ಹೇಳಿದ್ದು ?**

ಉತ್ತರ :– ಹಾ । ಸರಿಯಾಗಿ ನೆನಪಿಟ್ಟಿದ್ದೀರಿ. ಆದ್ದರಿಂದಲೇ ಲೋಕದಲ್ಲಿ ಬಳಸುವ ಸಾಕ್ಷಿಯಂತೆ ಈ ಸಾಕ್ಷಿ ಅಲ್ಲ ಎಂದು ತಿಳಿಯಬೇಕು.

**ಪ್ರಶ್ನೆ :– ಹಾಗಾದರೆ ಆ ಶಬ್ದವನ್ನೇಕೆ ಉಪಯೋಗಿಸುವಿರಿ ?**

ಉತ್ತರ :– ಹೇಳುವ ಕೇಳುವ ವ್ಯವಹಾರಕ್ಕೆ ಶಬ್ದಗಳೇ ಬೇಕಲ್ಲವೆ ? ಆದರೆ ಶಬ್ದದಿಂದ ಲಕ್ಷಿಸಲ್ಪಡುವ ತತ್ತ್ವವು ಮಾತ್ರ ಇಲ್ಲಿ ಶಬ್ದಕ್ಕೆ ಅತೀತವೇ ಆಗಿದೆ. 'ಸಾಕ್ಷಿ' ಶಬ್ದವನ್ನು ಅಧ್ಯಾರೋಪಿತವಾಗಿ ಪ್ರಯೋಗಿಸಿ (ಅವಿದ್ಯಾಕಲ್ಪಿತವಾದ ಸಾಕ್ಷ್ಯದ ಅಪೇಕ್ಷೆಯಿಂದ ಕಲ್ಪಿಸಿ) ಕೇಳುವ ಜಿಜ್ಞಾಸುವು ಸಾಕ್ಷಿಸ್ವರೂಪವಾಗಿ ನಿಲ್ಲುವದಕ್ಕನುವು ಮಾಡಿಕೊಡುವದಕ್ಕೆ ಮಾತ್ರವೇ ಈ ಶಬ್ದವನ್ನು ಶ್ರುತಿಯೂ ಬ್ರಹ್ಮನಿಷ್ಠರೂ ಉಪಯೋಗಿಸು ತ್ತಾರೆ.

**ಪ್ರಶ್ನೆ :– ಸರಿ, ಸರಿ. ಶ್ರುತಿ ಹಾಗೂ ಗುರುಗಳ ಬೋಧವನ್ನನುಸರಿಸಿ ಸ್ವರೂಪದಲ್ಲಿ ನಿಂತಾಗ ಈ ಶಬ್ದವೇ ಇರುವದಿಲ್ಲವಲ್ಲವೆ ?**

ಉತ್ತರ :– ಹೌದು, ಆದ್ದರಿಂದಲೇ ನಾವು ಸಾಕ್ಷಿಶಬ್ದವು ಸಾಪೇಕ್ಷ ಎಂದು ಹೇಳಿದ್ದೆವು. ಆದರೆ ಸಾಕ್ಷಿಸ್ವರೂಪವು ಮಾತ್ರ ಸಾಪೇಕ್ಷವಲ್ಲ. ಅದು ನಿರಪೇಕ್ಷವಾಗಿ

ತಾನೇ ತಾನಾಗಿರುವ ಪರಮಾರ್ಥ ಸತ್ಯ ತತ್ತ್ವವು.

**ಪ್ರಶ್ನೆ :– ಸಾಕ್ಷಿಶಬ್ದವು ಸಾಪೇಕ್ಷವಾದರೂ ಸಾಕ್ಷಿಸ್ವರೂಪವು ನಿರಪೇಕ್ಷವಾಗಿದೆ ಎಂಬುದನ್ನೇ ಇಲ್ಲಿ ಮುಖ್ಯವಾಗಿ ತಿಳಿಯಬೇಕಾಗಿದೆಯಲ್ಲವೆ ?**

ಉತ್ತರ :– ಹೌದು, ಇದರಂತೆಯೇ ''ಸಾಕ್ಷಿಪ್ರತ್ಯಯವೂ ಸಾಪೇಕ್ಷವೇ ಆಗಿದೆ'' ಎಂದೂ ಕಂಡುಕೊಳ್ಳಬೇಕು.

**ಪ್ರಶ್ನೆ :– ಅದು ಹೇಗೆ ? ಸಾಕ್ಷಿಪ್ರತ್ಯಯ ಎಂದರೇನು ?**

ಉತ್ತರ :– ಅದನ್ನೇ ಈಗ ಪುನಃ ಚರ್ಚಿಸೋಣ. ಈ ವಿಷಯವು ಬಹಳ ಸೂಕ್ಷ್ಮವಾಗಿದೆ. ನಿಧಾನವಾಗಿ ಕೇಳಿ.

## (೯) ಸಾಕ್ಷಿಪ್ರತ್ಯಯವೂ ಸಾಪೇಕ್ಷ

**ಪ್ರಶ್ನೆ :– ಪ್ರತ್ಯಯ ಎಂದರೆ ಇಂದ್ರಿಯಗಳಿಂದ ಹೊರಗಿನ ವಸ್ತುಗಳನ್ನು ಕಂಡಾಗ ಮನಸ್ಸಿನಲ್ಲಿ ಉಂಟಾಗುವ ಅನುಭವ ಎಂದು ತಾನೆ ನೀವು ಆರಂಭದಲ್ಲಿ ಹೇಳಿದ್ದು ?**

ಉತ್ತರ :– ಹೌದು.

**ಪ್ರಶ್ನೆ – ಮತ್ತೆ ಈಗ 'ಸಾಕ್ಷಿಪ್ರತ್ಯಯ' ಎನ್ನುವಿರಲ್ಲ ! ಹಾಗೆಂದರೇನು ? ಹೊರಗಿನ ವಸ್ತುಗಳ ಬಗ್ಗೆ ಉಂಟಾಗುವಂತೆ ಸಾಕ್ಷಿಯ ಬಗ್ಗೆಯೂ ಪ್ರತ್ಯಯವು ಅಂತಃಕರಣದಲ್ಲಿ ಉಂಟಾಗುವದೇನು ?**

ಉತ್ತರ :– ಹೌದು, ಹಿಂದೆ ಆರಂಭದಲ್ಲಿಯೇ ನಮ್ಮ ಅಂತಃಕರಣವು ಶಾಸ್ತ್ರ ಹಾಗೂ ಸದ್ಗುರುಗಳ ಉಪದೇಶವನ್ನನುಸರಿಸಿ ಸಾಕ್ಷಿಸ್ವರೂಪದೆಡೆಗೆ ಹಿಂದಿರುಗಿದಾಗ ಆ ಸಾಕ್ಷಿಸ್ವರೂಪದಂತೆಯೇ ಅದು ತೋರಿಕೊಳ್ಳತೊಡಗುತ್ತದೆ, ಇದನ್ನೇ ಎರಡನೆಯ ಅರ್ಥದಲ್ಲಿ 'ಸಾಕ್ಷ್ಯನುಭವ' ಎನ್ನುತ್ತೇವೆ ಎಂದು ವಿವರಿಸಿತ್ತಲ್ಲವೆ ? ಅದನ್ನೇ ಈಗ 'ಸಾಕ್ಷಿಪ್ರತ್ಯಯ' ಎಂದು ಕರೆದಿದ್ದೇವೆ.

**ಪ್ರಶ್ನೆ :– ಶ್ರೀಶಂಕರರು ತಮ್ಮ ಭಾಷ್ಯದಲ್ಲಿ ಇದನ್ನೆಲ್ಲಿಯಾದರೂ ಹೇಳಿದ್ದಾರೆಯೆ ?**

ಉತ್ತರ :– ಓಹೋ ! ಇದನ್ನವರು 'ಆತ್ಮಪ್ರತ್ಯಯ' ಎಂದು ಅನೇಕ ಪ್ರಸಂಗಗಳಲ್ಲಿ ಹೇಳಿದ್ದಾರೆ. ಆತ್ಮಜ್ಞಾನ ಎಂದರೆ ಇದೇ ಆಗಿದೆ.

**ಪ್ರಶ್ನೆ :– ಯಾವ ಯಾವ ಸಂದರ್ಭಗಳಲ್ಲಿ ಹೇಗೆ ಹೇಗೆ ಹೇಳಿರುವರೆಂಬುದನ್ನು ಸ್ವಲ್ಪ ವಿವರಿಸುವಿರಾ ?**

ಉತ್ತರ :– ಆಗಲಿ, ಕೇಳಿ. ಮೊದಲು ಮಾಂಡೂಕ್ಯದಲ್ಲಿ ''ಏಕಾತ್ಮಪ್ರತ್ಯಯ ಸಾರಂ'' (ಮಂತ್ರ –೭) ಎಂಬಲ್ಲಿ ''ಜಾಗ್ರದಾದಿಸ್ಥಾನೇಷು ಏಕ ಏವ ಅಯಮಾತ್ಮಾ ಇತಿ ಅವ್ಯಭಿಚಾರಿ ಯಃ ಪ್ರತ್ಯಯಃ ತೇನ ಅನುಸರಣೀಯಂ । ಅಥವಾ ಏಕ ಆತ್ಮಪ್ರತ್ಯಯಃ ಸಾರಂ ಪ್ರಮಾಣಂ ತುರೀಯಸ್ಯಾಧಿಗಮೇ ತತ್ ತುರೀಯಂ ಏಕಾತ್ಮಪ್ರತ್ಯಯ ಸಾರಂ ॥'' ಎಂದಿದ್ದಾರೆ. ಇದರಂತೆಯೇ ಮುಂಡಕದಲ್ಲಿ (೨–೨–೧೦) ''ತದ್ಯದಾತ್ಮ ವಿದೋ ವಿದುಃ'' ಎಂಬಲ್ಲಿ – ''ತತ್ ಯದಾತ್ಮವಿದಃ ಆತ್ಮಾನಂ ಸ್ವಂ ಶಬ್ದಾದಿವಿಷಯ ಬುದ್ಧಿಪ್ರತ್ಯಯ ಸಾಕ್ಷಿಣಂ ಯೇ ವಿವೇಕಿನೋ ವಿದುಃ ವಿಜಾನಂತಿ, ತೇ ಆತ್ಮವಿದಃ ತದ್ವಿದುಃ ಆತ್ಮಪ್ರತ್ಯಯಾನುಸಾರಿಣಃ ....... ತ ಏವ ತದ್ವಿದುಃ ನ ಇತರೇ ಬಾಹ್ಯ ಪ್ರತ್ಯಯಾನುಸಾರಿಣಃ ।'' ಎಂದಿದ್ದಾರೆ. ಹಾಗೆಯೇ ಭಗವದ್ಗೀತೆಯ (೧೩–೩೪) ''ಜ್ಞಾನಚಕ್ಷುಷಾ'' ಎಂಬಲ್ಲಿ – ''ಶಾಸ್ತ್ರಾಚಾರ್ಯಪ್ರಸಾದೋಪಜನಿತಂ ಆತ್ಮಪ್ರತ್ಯ ಯಿಕಂ ಜ್ಞಾನಂ ಚಕ್ಷುಃ ।'' ಎಂದಿದ್ದಾರೆ.

ಪ್ರಶ್ನೆ :– ಅಂತೂ 'ಆತ್ಮಪ್ರತ್ಯಯ' ಎಂಬ ಶಬ್ದವನ್ನೇನೋ ಉಪಯೋಗಿಸಿ ದಂತಾಯಿತು. ಈ ಸಂದರ್ಭದ ವಾಕ್ಯದ ಅಭಿಪ್ರಾಯವನ್ನೂ ತಿಳಿಸಬಾರದೆ ?

ಉತ್ತರ :– ಆಗಲಿ, ಕೇಳಿ. (೧) ಎಚ್ಚರ, ಕನಸು, ನಿದ್ರೆ – ಈ ಮೂರಕ್ಕೂ ತಾನು ಒಬ್ಬನೇ ಆಗಿದಾನೆಂಬುದನ್ನು ಲಕ್ಷಿಸಿದಾಗ ಅಂತಃಕರಣದಲ್ಲಿ ಈಗಿನ 'ನಾನು ಇಂಥವನು' ಎಂಬುದು ಹೋಗಿ ಕೇವಲ ತಾನೇ ತಾನಾಗಿರುವ ತನ್ನ ಸ್ವರೂಪದ ಅರಿವು ಬರುತ್ತದೆ. ಈ ಅರಿವನ್ನು ಅನುಸರಿಸಿದಾಗಲೇ ಆತ್ಮಸ್ವರೂಪನಾಗಿ (ತುರೀಯನಾಗಿ) ಜಿಜ್ಞಾಸುವು ನೆಲೆ ನಿಲ್ಲುತ್ತಾನೆ. ಅಥವಾ ಈ ತುರೀಯನನ್ನರಿಯಲು ಈ ಆತ್ಮ ಪ್ರತ್ಯಯ ಒಂದೇ ಪ್ರಮಾಣವು. ಆದ್ದರಿಂದಲೂ ತುರೀಯನು ಏಕಾತ್ಮಪ್ರತ್ಯಯಸಾರನು. ಆತ್ಮಪ್ರತ್ಯಯದಿಂದ ಮಾತ್ರವೇ ತಿಳಿದು ಬರತಕ್ಕವನು– ಎಂಬುದು ಮಾಂಡೂಕ್ಯ ವಾಕ್ಯದ ಸಾರಾಂಶವು. (೨) ತಾನೆಂಬ ಸ್ವರೂಪನು ಶಬ್ದಾದಿವಿಷಯಗಳಿಗೂ ಬುದ್ಧಿಗೂ ಸಾಕ್ಷಿಯಾಗಿರುವನೆಂಬುದನ್ನು ಯಾವ ವಿವೇಕಿಗಳು ಅರಿಯುವರೊ ಅವರೇ ಆತ್ಮವೇತ್ತರು, ಎಂದರೆ ಆತ್ಮಪ್ರತ್ಯಯವನ್ನೇ ಅನುಸರಿಸುವವರು. ಅಂಥವರೇ ಆತ್ಮನನ್ನರಿಯುವರೇ ಹೊರತು ಕೇವಲ ಹೊರಗಿನ ಶಬ್ದಾದಿ ಪ್ರತ್ಯಯಗಳನ್ನನುಸರಿಸುವ ವರು ಎಂದಿಗೂ ಆತ್ಮನನ್ನರಿಯಲಾರರು– ಎಂಬುದು ಮುಂಡಕದ ವಾಕ್ಯದ ತಾತ್ಪರ್ಯವು. (೩) ಶಾಸ್ತ್ರ ಹಾಗೂ ಆಚಾರ್ಯರ ಪ್ರಸನ್ನತೆಯ ಉಪದೇಶದಿಂದ (ಅನುಗ್ರಹದಿಂದ) ಹುಟ್ಟಿದ ಆತ್ಮಪ್ರತ್ಯಯಿಕವಾದ ಜ್ಞಾನವೇ ಇಲ್ಲಿ ಜ್ಞಾನದ ಕಣ್ಣು (ಜ್ಞಾನಚಕ್ಷು) ಎಂಬ ಶಬ್ದಕ್ಕೆ ಅರ್ಥ– ಎಂಬುದು ಗೀತಾವಾಕ್ಯದ ಸಾರಾಂಶವು.

ಪ್ರಶ್ನೆ :– ಬಹಳ ಚೆನ್ನಾಗಿದೆ ಸ್ವಾಮಿ. ಆಚಾರ್ಯ ಹಾಗೂ ಶಾಸ್ತ್ರಗಳ

**ಉಪದೇಶದಿಂದ ಅಂತಃಕರಣದಲ್ಲಿ ಆತ್ಮಪ್ರತ್ಯಯವು ಹುಟ್ಟುವದೆಂಬುದೇ ಇಲ್ಲಿ ಮುಖ್ಯವಲ್ಲವೆ ?**

ಉತ್ತರ :– ಹೌದು, ಇದನ್ನೇ ಜ್ಞಾನ–ವಿಜ್ಞಾನ ಮುಂತಾದ ಶಬ್ದಗಳಿಂದ ಶಾಸ್ತ್ರಗಳಲ್ಲಿ ಕರೆದಿದೆ.

**ಪ್ರಶ್ನೆ :– ಸರಿ, ಈಗಿನ 'ನಾನು ಇಂಥವನು' ಎಂಬುದನ್ನು ಬಿಟ್ಟು ಕೇವಲ ತಾನಾದ ಸ್ವರೂಪವನ್ನು ಲಕ್ಷಿಸಿದಾಗ ಅಂತಃಕರಣದಲ್ಲಿ ಹುಟ್ಟಿದ ಆತ್ಮಪ್ರತ್ಯಯವೂ ಸಹ ಸಾಪೇಕ್ಷವಾಗಿದೆ ಎಂದಿರಲ್ಲ, ಅದು ಹೇಗೆ ?**

ಉತ್ತರ :– ಶಾಸ್ತ್ರಾಚಾರ್ಯರ ಉಪದೇಶಕ್ಕನುಸರಿಸಿ ಹಿಂದಿರುಗಿದಾಗ ಈ ಆತ್ಮಪ್ರತ್ಯಯವು ಹೊಸದಾಗಿ ಹುಟ್ಟಿತಷ್ಟೆ. ಆ ಮೊದಲು ಆತ್ಮಸ್ವರೂಪವೇನೋ ಇದ್ದೇ ಇತ್ತಾದರೂ ಅದರ ವಿಷಯದ ಪ್ರತ್ಯಯವು ಬುದ್ಧಿಯಲ್ಲಿ ಹುಟ್ಟಿದ್ದಿಲ್ಲ. ಆತ್ಮನಲ್ಲದ ಮಿಕ್ಕನಾದ ವಿಷಯಗಳ ಬಗ್ಗೆಯೇ ಬುದ್ಧಿಯಲ್ಲಿ ಇಂದ್ರಿಯಗಳ ಮೂಲಕ ಪ್ರತ್ಯಯಗಳುಂಟಾಗುತ್ತಿದ್ದವು. ಅವುಗಳನ್ನೇ ಮೇಲೆ ವಿವರಿಸಿದ ಮುಂಡಕದ ವಾಕ್ಯದಲ್ಲಿ ಆಚಾರ್ಯರು 'ಹೊರಗಿನ ಶಬ್ದಾದಿಪ್ರತ್ಯಯಗಳು' ಎಂಬ ಮಾತಿನಲ್ಲಿ ಹೇಳಿದ್ದಾರೆ.

ಹೀಗೆ ಹೊರಗಿನ ವಿಷಯಗಳ ಕಡೆಗೇ ನೋಡುತ್ತಾ ಅವುಗಳ ಸಂಬಂಧವಾದ ಪ್ರತ್ಯಯಗಳನ್ನೇ ಉಂಟುಮಾಡಿಕೊಳ್ಳುತ್ತಿದ್ದ ಅಂತಃಕರಣವು ಅರ್ಥಾತ್ ಬದ್ಧಿಯು ಶಮದಮಾದಿ ಸಾಧನೆಗಳ ಸಂಸ್ಕಾರದ ಮೂಲಕವೂ ಶಾಸ್ತ್ರ ಹಾಗೂ ಆಚಾರ್ಯರ ಉಪದೇಶವನ್ನನುಸರಿಸುವದರ ಮೂಲಕವೂ ಒಳಸರಿದಾಗ ಆತ್ಮಸ್ವರೂಪದಲ್ಲಿಯೇ ನಿಂತುಬಿಡುತ್ತದೆ. ಆಗ ಈ ಬುದ್ಧಿಯಲ್ಲಿ ''ಆತ್ಮಪ್ರತ್ಯಯವು ಹುಟ್ಟಿತು'' ಎಂಬ ವ್ಯವಹಾರವಾಗುತ್ತದೆ.

**ಪ್ರಶ್ನೆ :– ಅಂದರೆ ಮೊದಲಿನ ಶಬ್ದಾದಿ ಹೊರಗಿನ ಪ್ರತ್ಯಯಗಳ ಅಪೇಕ್ಷೆಯಿಂದ ಇದನ್ನು ಆತ್ಮಪ್ರತ್ಯಯ ಎನ್ನುವರೆಂದು ತಾನೆ ನಿಮ್ಮ ಅಭಿಪ್ರಾಯ ?**

ಉತ್ತರ :– ಹೌದು, ಅನಾತ್ಮಪ್ರತ್ಯಯದ ಸಾಪೇಕ್ಷ ದೃಷ್ಟಿಯಿಂದಲೇ ಇದನ್ನು ಆತ್ಮಪ್ರತ್ಯಯ ಎನ್ನುತ್ತೇವೆ. ಈ ಪ್ರತ್ಯಯವು ಹುಟ್ಟಿದ್ದೂ ಸಹ ಆತ್ಮಸ್ವರೂಪದ ಬೆಳಕಿನಲ್ಲಿಯೇ ಕಾಣುತ್ತದೆ. ಆದ್ದರಿಂದ ಸ್ವಾಭಾವಿಕವಾದ ಅವಿದ್ಯಾಸ್ಥಿತಿಯಲ್ಲಿ ಹುಟ್ಟುತ್ತಿರುವ ಅನಾತ್ಮಪ್ರತ್ಯಯಗಳನ್ನೂ ಶಾಸ್ತ್ರಾಚಾರ್ಯರ ಉಪದೇಶ ಹಾಗೂ ಶಮದಮಾದಿ ಸಾಧನೆಗಳಿಂದ ಹುಟ್ಟುವ ಆತ್ಮಪ್ರತ್ಯಯವನ್ನೂ ಬೆಳಗಿ ತೋರಿಸುವ ಆತ್ಮಸ್ವರೂಪವು ಎರಡನ್ನೂ ಮೀರಿ ನಿರಪೇಕ್ಷವಾಗಿ ಸ್ವತಂತ್ರವಾಗಿ ಇರುತ್ತದೆ.

**ಪ್ರಶ್ನೆ :– ಓಹೊ ! ಈ ಅರ್ಥದಲ್ಲಿಯೇ ನೀವು 'ಆತ್ಮಪ್ರತ್ಯಯ ಸಾಪೇಕ್ಷವಾಗಿದೆ' ಎಂದು ಹೇಳುವಿರಲ್ಲವೆ ?**

ಉತ್ತರ :– ನಿಜ, ನಿಜ. ಆತ್ಮಶಬ್ದ ಹಾಗೂ ಆತ್ಮಪ್ರತ್ಯಯಗಳು ಸಾಪೇಕ್ಷವೇ ಆಗಿದ್ದರೂ ಆತ್ಮಸ್ವರೂಪವು ಮಾತ್ರ ನಿರಪೇಕ್ಷವಾಗಿದೆ. ಅನಾತ್ಮಪ್ರತ್ಯಯವನ್ನೇ 'ಅಜ್ಞಾನ' ಎಂದೂ ಅದರ ಉಪಾಧಿಯಲ್ಲಿ ತೋರುವ ಆತ್ಮನನ್ನು ಅಜ್ಞಾನಿ ಎಂದೂ ಅದರಂತೆಯೇ ಆತ್ಮಪ್ರತ್ಯಯವನ್ನು 'ಜ್ಞಾನ' ವೆಂದೂ ಅದರ ಉಪಾಧಿಯಲ್ಲಿ ತೋರುವ ಆತ್ಮನನ್ನು ಜ್ಞಾನಿ ಎಂದೂ ವ್ಯಾವಹಾರಿಕವಾಗಿ ಶಾಸ್ತ್ರದಲ್ಲಿ ಕರೆದಿರುತ್ತದೆ.

**ಪ್ರಶ್ನೆ:– ಹೀಗೆ ಶ್ರೀಶಂಕರರು ಎಲ್ಲಿಯಾದರೂ ಸ್ಪಷ್ಟವಾಗಿ ಬರೆದಿದ್ದಾರೆಯೇ?**

ಉತ್ತರ :– ಇದೋ ನೋಡಿ. ಈ ಗೀತಾಭಾಷ್ಯದ ವಾಕ್ಯದಲ್ಲಿ ನಿಚ್ಚಳವಾಗಿ ಬರೆದಿದ್ದಾರೆ : **ಯಥಾ ಬುದ್ಧ್ಯಾದ್ಯಾಹೃತಸ್ಯ ಶಬ್ದಾದ್ಯರ್ಥಸ್ಯ ಅವಿಕ್ರಿಯ ಏವ ಸರ್ ಬುದ್ಧಿವೃತ್ತ್ಯಾ ಅವಿವೇಕವಿಜ್ಞಾನೇನ ಅವಿದ್ಯಯಾ ಉಪಲಬ್ಧಾ ಆತ್ಮಾ ಕಲ್ಪ್ಯತೇ, ಏವಮೇವ ಆತ್ಮಾನಾತ್ಮವಿವೇಕಜ್ಞಾನೇನ ಬುದ್ಧಿವೃತ್ತ್ಯಾ ವಿದ್ಯಯಾ ಅಸತ್ಯರೂಪಯೈವ ಪರಮಾರ್ಥತ ಅವಿಕ್ರಿಯ ಏವ ಆತ್ಮಾ ವಿದ್ವಾನ್ ಉಚ್ಯತೇ** (೨–೨೧) ಹೇಗೆ ಅವಿದ್ಯೆಯಿಂದ ಕಲ್ಪಿತಗಳಾದ ಶಬ್ದಾದಿವಿಷಯಗಳನ್ನು ತಂದೊಡ್ಡುವ ಆತ್ಮಾನಾತ್ಮರ ವಿವೇಕವಿಲ್ಲದಿರುವ ಬುದ್ಧಿವೃತ್ತಿಗಳ ಉಪಾಧಿಯ ಮೂಲಕ ಆತ್ಮನು 'ಅಜ್ಞಾನಿ' ಎಂದು ಕಲ್ಪಿಸಲ್ಪಡುವನೋ ಹಾಗೆಯೇ ಆತ್ಮಾನಾತ್ಮರ ವಿವೇಕವಿಜ್ಞಾನದಿಂದ ಕೂಡಿದ ವಿದ್ಯೆ (ಜ್ಞಾನ) ಎಂದು ಹೇಳಿಸಿಕೊಳ್ಳುವ ಬುದ್ಧಿವೃತ್ತಿಯ ಉಪಾಧಿಯ ಮೂಲಕ ಯಾವಾಗಲೂ ತನ್ನಲ್ಲಿ ಬದಲಾವಣೆಯೇ ಇಲ್ಲದಿರುವ ಆತ್ಮನು 'ಜ್ಞಾನಿ' ಎನಿಸಿಕೊಳ್ಳುತ್ತಾನೆ– ಎಂಬುದು ಇದರ ತಾತ್ಪರ್ಯವು.

**ಪ್ರಶ್ನೆ :– ಈ ವಾಕ್ಯದಲ್ಲಿ ಯಾವ ಯಾವ ವಿಷಯಗಳನ್ನು ತಿಳಿಸಿದಂತಾಗಿದೆ ಎಂಬುದನ್ನು ದಯವಿಟ್ಟು ಬಿಡಿಸಿ ಹೇಳುವಿರಾ ?**

ಉತ್ತರ :– ಆಗಲಿ, ಕೇಳಿ (೧) ಆತ್ಮಸ್ವರೂಪವು ಯಾವ ವಿಕಾರವೂ ಇಲ್ಲದೆ ನಿತ್ಯವಾಗಿದ್ದುಬಿಟ್ಟಿದೆ. (೨) ಅವಿದ್ಯೆಯಿಂದ ಕಲ್ಪಿತವಾದ –ಆತ್ಮನನ್ನರಿಯದವರಿಗೆ ಆತ್ಮನಲ್ಲಿರುವಂತೆ ಕಾಣುವ– ಶಬ್ದಾದಿವಿಷಯಗಳನ್ನೂ ಅದನ್ನು ಗ್ರಹಿಸುವ– ಬುದ್ಧಿ ಮುಂತಾದವುಗಳನ್ನೂ ಆತ್ಮನೇ ಬೆಳಗಿ ತೋರಿಸುವನು. (೩) ನಿಜವಾಗಿರುವ ಆತ್ಮ ಸ್ವರೂಪವನ್ನೂ ಕಲ್ಪಿತಗಳಾದ ಬುದ್ಧಿ ಮುಂತಾದವುಗಳನ್ನೂ ವಿಂಗಡಿಸಿ ನೋಡಿಕೊಳ್ಳದಿರುವ ರೂಪದ ಅವಿವೇಕದಿಂದಲೇ ಆತ್ಮನು ಶಬ್ದಾದಿಗಳನ್ನು ತಿಳಿಯುವವನು, ಅನುಭವಿಸುವವನು ಎಂಬ ವ್ಯವಹಾರವಾಗುತ್ತದೆ. ಈ ವ್ಯವಹಾರದ ಉಪಾಧಿಯಿಂದಲೇ ಆತ್ಮನು 'ಅಜ್ಞಾನಿ' ಎನಿಸುತ್ತಾನೆ. (೪) ಇದರಂತೆಯೇ ಆತ್ಮಾನಾತ್ಮರ ವಿವೇಕದಿಂದ ''ಅನಾತ್ಮವಿಲ್ಲವೇ ಇಲ್ಲ ಇದೆಲ್ಲವೂ ಬರೀ ಆತ್ಮನು'' ಎಂದು ಶಾಸ್ತ್ರಾಚಾರ್ಯರ ಉಪದೇಶಾದಿಗಳಿಂದ ಕಂಡುಕೊಳ್ಳುವ ರೂಪದ ಬುದ್ಧಿವೃತ್ತಿಯನ್ನೇ

ವಿದ್ಯೆ ಎನ್ನುವರು. ಇದರ ಉಪಾಧಿಯಿಂದ ಆತ್ಮನು 'ಜ್ಞಾನಿ' ಎನಿಸಿಕೊಳ್ಳುತ್ತಾನೆ. (೫) ಅಜ್ಞಾನ, ಜ್ಞಾನ– ಇವೆರಡೂ ಅಸತ್ಯಗಳೇ ಆಗಿವೆ. ಎಂದರೆ ಅಪರಮಾರ್ಥ, ಕಲ್ಪಿತಗಳಾಗಿವೆ. ಆದರೆ, ಆತ್ಮಸ್ವರೂಪವು ಮಾತ್ರ ಪರಮಾರ್ಥ ಸತ್ಯವಾಗಿ ಅಜ್ಞಾನ, ಜ್ಞಾನಗಳಿಂದ ಸ್ವಲ್ಪವೂ ಮಾರ್ಪಾಡಾಗದೆ ತಾನೇ ತಾನಾಗಿದೆ – ಎಂಬೀ ಐದು ಅಂಶಗಳೇ ಮೇಲಿನ ವಾಕ್ಯದ ಮುಖ್ಯ ತಿರುಳಾಗಿದೆ.

**ಪ್ರಶ್ನೆ :– ಬಹಳ ಚೆನ್ನಾಗಿದೆ ಸ್ವಾಮಿ ಈ ವಿವರಣೆ. ಆತ್ಮನಿಗೆ ನಿಜವಾಗಿಯೂ ಜ್ಞಾನ– ಅಜ್ಞಾನಗಳ ಸೋಂಕು ಇಲ್ಲವೇ ಇಲ್ಲವೆಂದಾಯಿತಲ್ಲ!**

ಉತ್ತರ :– ಹೌದು, ಇದೇ ನಿಜವಾದದ್ದು.

**ಪ್ರಶ್ನೆ :– ಹಾಗಾದರೆ ಅಜ್ಞಾನವನ್ನು ಕಳೆಯಲು ಸುಜ್ಞಾನವನ್ನು ಬೋಧಿಸಲು ಸರ್ವಶಾಸ್ತ್ರಗಳೂ (ಉಪನಿಷತ್ತುಗಳು) ಹೊರಟಿವೆ ಎಂಬ ಮಾತು ಆತ್ಮನಲ್ಲಿ ಅವಿದ್ಯೆಯೇ ಇರದಿದ್ದರೆ ಹೇಗೆ ಸಮಂಜಸವಾಗುತ್ತದೆ, ಸ್ವಾಮಿ ?**

ಉತ್ತರ :– ಪರಮಾರ್ಥವಾಗಿ ಆತ್ಮನಲ್ಲಿ ಅವಿದ್ಯೆ ಅಥವಾ ಅಜ್ಞಾನವು ಎಂದೂ ಇಲ್ಲವೇ ಇಲ್ಲ. ಇದನ್ನು ತಿಳಿಸುವದಕ್ಕಾಗಿಯೇ ಲೋಕದಲ್ಲಿ ಅನುಭವದಲ್ಲಿರುವ ಸಾರ್ವತ್ರಿಕವಾದ ಅವಿದ್ಯೆಯನ್ನು ಅಧ್ಯಾರೋಪಿತವಾಗಿ ಒಪ್ಪಿ ವಿದ್ಯೆಯ ಅಧ್ಯಾರೋಪದಿಂದ ಅದನ್ನು ಕಳೆದು ಅವೆರಡೂ ಇಲ್ಲದ ಪರಮಾರ್ಥಾತ್ಮನಲ್ಲಿ ಮುಮುಕ್ಷುಗಳನ್ನು ನೆಲೆ ನಿಲ್ಲಿಸಲಾಗುತ್ತದೆ.

**ಪ್ರಶ್ನೆ :– ಹಾಗಾದರೆ 'ವಿದ್ಯಾವಿದ್ಯೆ' ಎಂಬ ವ್ಯವಹಾರವು ಅಧ್ಯಾರೋಪಿತ ಎಂದಾಯಿತಲ್ಲವೆ ?**

ಉತ್ತರ :– ಹೌದೇ ಹೌದು. ಆತ್ಮಸ್ವರೂಪವೊಂದನ್ನುಳಿದು ಮಿಕ್ಕದ್ದೆಲ್ಲವೂ ಅಧ್ಯಾರೋಪಿತವೇ ಆಗಿದೆ. **"ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ"** ಎಂಬ ಮಾತಿಗೆ ಇದೇ ತಾತ್ಪರ್ಯ.

**ಪ್ರಶ್ನೆ :– ಸರಿ, ಸರಿ. ಆತ್ಮಶಬ್ದ, ಆತ್ಮಪ್ರತ್ಯಯ, ಅರ್ಥಾತ್ ಸಾಕ್ಷಿಶಬ್ದ ಸಾಕ್ಷಿಪ್ರತ್ಯಯ–ಇವೆರಡೂ ಸಾಪೇಕ್ಷವಾಗಿವೆ. ಆದರೆ ಸಾಕ್ಷಿಸ್ವರೂಪವು ಮಾತ್ರ ನಿರಪೇಕ್ಷವಾದದ್ದು ಎಂದು ತಾನೆ ಸಿದ್ಧವಾಯಿತು ?**

ಉತ್ತರ :– ಹೌದು, ಆದ್ದರಿಂದಲೇ ಲೋಕದಲ್ಲಿ ಉಪಯೋಗಿಸುವ ಸಾಕ್ಷಿ ಶಬ್ದಕ್ಕೂ ವೇದಾಂತದಲ್ಲಿ ಉಪಯೋಗಿಸುವ ಸಾಕ್ಷಿಶಬ್ದಕ್ಕೂ ಬಹಳ ಅಂತರವಿದೆ. **ವೇದಾಂತದಲ್ಲಿ ಸಾಕ್ಷಿ ಎಂದರೆ ಸಾಕ್ಷ್ಯ–ಸಾಕ್ಷಿ ವಿಭಾಗಗಳಿಲ್ಲದ ಸಾಕ್ಷಿ. ಎಂದರೆ ಸಾಕ್ಷಿ ಎಂಬ ಶಬ್ದಪ್ರತ್ಯಯಗಳಿಗತೀತವಾದ ಕೇವಲ ಅದ್ವಯಸ್ವರೂಪವು ಎಂದು ತಾತ್ಪರ್ಯ.**

ಆದ್ದರಿಂದಲೇ ಸಾಕ್ಷಿಸ್ವರೂಪವು ಅದ್ವಿತೀಯ ಎಂದು ಹಿಂದೆ ಹೇಳಿರುವದು ಇಲ್ಲಿ ಸಿದ್ಧವಾದಂತಾಯಿತು.

## (೧೦) ಸಾಕ್ಷಿಗಳು ಅನೇಕರಿಲ್ಲ

**ಪ್ರಶ್ನೆ :– ಕೆಲವು ಅದ್ವೈತಿಗಳು ಜೀವಸಾಕ್ಷಿಗಳನೇಕ, ಈಶ್ವರಸಾಕ್ಷಿಯು ಏಕ ಎಂದು ಹೇಳುವರಲ್ಲ।**

ಉತ್ತರ :– ಅದು ಶುದ್ಧತಪ್ಪು, ಸಾಕ್ಷಿಸ್ವರೂಪವು 'ನಾನು' ಎಂದೆನಿಸುವ ಈಗಿನ ಅಹಂಕಾರವನ್ನು ಮೀರಿ ಇರುವ ತತ್ತ್ವವು. ಆದ್ದರಿಂದಲೇ ಕಾಲದೇಶಾದಿಸರ್ವ ಭಾವಗಳನ್ನೂ ಅದು ಮೀರಿರುತ್ತದೆ. ನಾನು ಎಂಬ ಅನಿಸುವಿಕೆ ಇದ್ದಲ್ಲಿಯೇ ಕಾಲದೇಶಾದಿಭಾವಗಳಿರಬೇಕು. ಹಾಗೂ ಕಾಲದೇಶಾದಿಗಳಿರುವಲ್ಲಿಯೇ ಏಕ, ಅನೇಕ ಎಂಬ ಮಾತು ಮತ್ತು ಅರಿವುಗಳ ಚಲಾವಣೆ ಇರುತ್ತದೆ. ಆದರೆ ಈಗಿನ ಈ ''ನಾನು ಇಂಥವನು'' ಎಂಬ ಭಾವಕ್ಕೂ ಆಚೆಗಿರುವ ಸಾಕ್ಷಿಯನ್ನು 'ಒಂದು' ಎಂದು ಹೇಳುವದಕ್ಕೆ ಬರುವದಿಲ್ಲ, ಇನ್ನು 'ಅನೇಕ' ಎಂಬುದೆಲ್ಲಿಂದ ಬಂತು ?

**ಪ್ರಶ್ನೆ :– ಹಾಗಾದರೆ ಈ ರೀತಿಯ ಅಭಿಪ್ರಾಯಗಳು ಹುಟ್ಟುವದಕ್ಕೆ ಏನು ಕಾರಣ ಸ್ವಾಮಿ ?**

ಉತ್ತರ :– ಶಾಂಕರಭಾಷ್ಯಕ್ಕೆಲ್ಲಕ್ಕೂ ಅಡಿಗಲ್ಲಾಗಿರುವ ಸಾರ್ವತ್ರಿಕ ಪೂರ್ಣಾನುಭವರೂಪವಾದ ಸಾಕ್ಷ್ಯನುಭವದ ಪರಮಾರ್ಥದೃಷ್ಟಿಯ ಗುಟ್ಟನ್ನೆ ಅರಿಯದ ವ್ಯಾಖ್ಯಾನಕಾರರು ಕೇವಲ ಬುದ್ಧಿಕಲ್ಪಿತತರ್ಕದೃಷ್ಟಿಯನ್ನವಲಂಬಿಸಿಯೇ ಸಾಕ್ಷಿಸ್ವರೂಪವನ್ನು ವಿವರಿಸಹೊರಟದ್ದರ ಪರಿಣಾಮವೇ ಈ ರೀತಿಯ ಅಭಿಪ್ರಾಯಕ್ಕೆ ಕಾರಣ. ಆದ್ದರಿಂದಲೇ ಈ ಗ್ರಂಥಕ್ಕೆಲ್ಲಕ್ಕೂ ಅಡಿಗಲ್ಲಾಗಿ ನಾವು ಆರಂಭದಲ್ಲಿ ತೆಗೆದುಕೊಂಡಿರುವ ಶ್ರೀಶ್ರೀಗಳವರ ಸೂತ್ರವಾಕ್ಯದಲ್ಲಿ ''ಸಾಕ್ಷ್ಯನುಭವವನ್ನು ಗುರುತಿಸದವರು ಶಾಂಕರವೇದಾಂತದ ರಹಸ್ಯವನ್ನು ಭೇದಿಸುವದು ಎಂದಿಗೂ ಶಕ್ಯವಿಲ್ಲ'' ಎಂಬ ಮಾತು ಸಂಪೂರ್ಣನಿಜವಾಗಿದೆ.

**ಪ್ರಶ್ನೆ :– ಹಾಗಾದರೆ ವಿಚಾರಮಾಡಲು ಹೊರಟ ಮುಮುಕ್ಷುಗಳಾದ ನಮಗೆಲ್ಲ ಒಬ್ಬೊಬ್ಬರಿಗೊಂದೊಂದು ಸಾಕ್ಷಿಯಿರುತ್ತದೆ ಎಂಬ ಅಭಿಪ್ರಾಯವು ಪೂರ್ತಿ ತಪ್ಪೆಂದಾಯಿತಲ್ಲ ?**

ಉತ್ತರ :– ಸಂಶಯವೇಕೆ ? ''**ಅನ್ಯಥಾ ಹಿ ಸ್ವದೇಹಪರಿಚ್ಛಿನ್ನ ಏವ ಪ್ರತ್ಯಗಾತ್ಮಾ ಸಾಂಖ್ಯಾದಿಭಿರಿವ ದೃಷ್ಟಃ ಸ್ಯಾತ್ । ತಥಾ ಚ ಸತಿ ಅದ್ವೈತಮಿತಿ ಶ್ರುತಿಕೃತೋ ವಿಶೇಷೋ ನ ಸ್ಯಾತ್ ।**'' (ಮಾಂ.೧–೩) ಒಂದೊಂದು ದೇಹಕ್ಕೆ ಒಬ್ಬೊಬ್ಬ ಪ್ರತ್ಯಗಾತ್ಮನು (ಸಾಕ್ಷಿಯು) ಎಂದು ಒಪ್ಪಿದರೆ ಕಾಪಿಲಸಾಂಖ್ಯರಂತೆ ದ್ವೈತಶಾಸ್ತ್ರವೇ

ಆಗುತ್ತದೆ. ಶ್ರುತಿಯಲ್ಲಿ ಹೇಳಿದ ಅದ್ವೈತವೆಂಬ ಹೆಚ್ಚಿನ ಜ್ಞಾನವು ಆಗುವದೇ ಇಲ್ಲ. ಆದ್ದರಿಂದ 'ಜೀವಸಾಕ್ಷಿಗಳನೇಕ' ಎಂಬುವ ಮತವನ್ನು ಆಚಾರ್ಯರು ತಳ್ಳಿಹಾಕಿದಂತಾಗಿರುತ್ತದೆ. 'ತಾನು' ತನ್ನಲ್ಲಿ ಎಚ್ಚರ, ಎಚ್ಚರದಲ್ಲಿ 'ನಾನು', 'ಇತರರು' ಎಂದು ವಿಚಾರಿಸಿದರೆ ವಿಚಾರಸಮಕಾಲದಲ್ಲಿಯೇ ಇದೆಲ್ಲವೂ ತಾನೇ ಆಗಿದೆ ಎಂಬುದು ಅನುಭವಕ್ಕೇ ಗೋಚರವಾಗುತ್ತದೆ. ಇದನ್ನೇ **''ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತಿ । ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ''** **(ಈ.೬)** ಎಂದು ಈಶಾವಾಸ್ಯದಲ್ಲಿಯೂ **''ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ । ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ''** (೬–೨೯) ಎಂದು ಗೀತೆಯಲ್ಲಿಯೂ ಸ್ಪಷ್ಟವಾಗಿ ಹೇಳಿರುತ್ತದೆ. ಆದ್ದರಿಂದ ಜೀವಸಾಕ್ಷಿಗಳನೇಕ ಎಂಬ ವಾದವು ಶ್ರುತಿ, ಸ್ಮೃತಿ, ಭಾಷ್ಯ ಹಾಗೂ ಅನುಭವಗಳಿಗೆ ವಿರುದ್ಧವಾದದ್ದೆಂದೇ ತಿಳಿಯಬೇಕು. ಮತ್ತು ಇದು ಯುಕ್ತಿಬಾಹಿರವೂ ಆಗಿದೆ.

**ಪ್ರಶ್ನೆ :– ಅದು ಹೇಗೆ ?**

ಉತ್ತರ :– ನೋಡಿ. ಜೀವಸಾಕ್ಷಿಗಳನೇಕ ಎಂದು ತಿಳಿಯುವಾಗ ಈ ಅನೇಕ ಸಾಕ್ಷಿಗಳು ಯಾವ ಅನುಭವಮಾತ್ರಕ್ಕೆ ಗೋಚರವಾಗುವವೋ ಆ ಅನುಭವರೂಪವೇ ನಿಜವಾದ 'ಸಾಕ್ಷಿ' ಎನಿಸಿಕೊಂಡೀತೇ ಹೊರತು ಅನೇಕಗಳೆಂದು ತೋರುವ ಜೀವಸಾಕ್ಷಿಗಳು ಸಾಕ್ಷ್ಯವೇ ಆಗುತ್ತವೆಯಲ್ಲದೆ ಎಂದಿಗೂ ಸಾಕ್ಷಿ ಎನಿಸಲಾರವು ಎಂಬುದು ತಟ್ಟನೇ ಕಾಣುತ್ತದೆ. ಆದ್ದರಿಂದ ಇದು ಯುಕ್ತಿಗೂ ಹೊಂದುವ ಮಾತಲ್ಲ.

**ಪ್ರಶ್ನೆ :– ಈಶ್ವರಸಾಕ್ಷಿ ಅದು ಏಕ– ಎನ್ನುವರಲ್ಲ! ಹಾಗೆಂದರೇನು ?**

ಉತ್ತರ :– ಅದೊಂದು ಅರ್ಥವಿಲ್ಲದ ಮಾತು– ಎಂದೇ ತಿಳಿಯಬೇಕು.

**ಪ್ರಶ್ನೆ :– ಏಕೆ ?**

ಉತ್ತರ :– ವೇದಾಂತದಲ್ಲಿ ಅದ್ವಿತೀಯವಾದ ಸಾಕ್ಷಿಸ್ವರೂಪವನ್ನೇ ಅವಿದ್ಯಾಕಲ್ಪಿತವಾದ– ಸಾಕ್ಷಿಯನ್ನರಿಯದಿರುವಾಗ ಸಾಕ್ಷಿಯಲ್ಲಿರುವಂತೆ ತೋರುವ– ಜಗತ್ತಿನ ಅಪೇಕ್ಷೆಯಿಂದ ಈಶ್ವರ ಎಂದು ಕರೆಯುತ್ತಾರೆ. ಆದ್ದರಿಂದ ಸಾಕ್ಷಿಯೇ ಈಶ್ವರನೇ ಹೊರತು, ಈಶ್ವರನಿಗೆ ಸಾಕ್ಷಿ ಎಂಬ ಮಾತು ಹಾಸ್ಯಾಸ್ಪದವಾದದ್ದು. ಯಾವದಾದರೊಂದಕ್ಕೆ ಈಶ್ವರನು ಸಾಕ್ಷ್ಯನಾದರೆ ಅವನೆಂಥ ಈಶ್ವರನು ? ಅವನಿಗೆ ಸಾಕ್ಷಿಯಾದ ಆ ತತ್ವವೇ ನಿಜವಾದ ಈಶ್ವರನೆಂದಾಗಿ ಈ ಸಾಕ್ಷ್ಯವಾದದ್ದು ಎಂದಿಗೂ ಈಶ್ವರನೆನಿಸಿಕೊಳ್ಳಲೇ ಆರದು. ಹೀಗಾಗಿ ಈಶ್ವರಸಾಕ್ಷಿ ಎಂಬ ಮಾತು ಯುಕ್ತಿವಿರೋಧವೂ ಆಗುತ್ತದೆ.

ಪ್ರಶ್ನೆ :– ಹೀಗೆ ಅವಿದ್ಯಾಕಲ್ಪಿತಜಗತ್ತಿನ ಅಪೇಕ್ಷೆಯಿಂದಲೇ ಅದ್ವಿತೀಯ ಸಾಕ್ಷಿಸ್ವರೂಪವು ಈಶ್ವರನೆನಿಸಿಕೊಂಡಿದೆ, ಸ್ವತಃ ಅದ್ವಿತೀಯವಾಗಿದೆ ಎಂದು ಆಚಾರ್ಯರು ಎಲ್ಲಿಯಾದರೂ ಹೇಳಿರುವರೇನು ?

ಉತ್ತರ :– ಓಹೋ ಕೇಳಿ. 'ತದೇವಮ್ ಅವಿದ್ಯಾತ್ಮಕೋಪಾಧಿಪರಿಚ್ಛೇದಾಪೇಕ್ಷಮೇವ ಈಶ್ವರಸ್ಯ ಈಶ್ವರತ್ವಮ್, ಸರ್ವಜ್ಞತ್ವಮ್, ಸರ್ವಶಕ್ತಿತ್ವಂ ಚ । ನ ಪರಮಾರ್ಥತೋ ವಿದ್ಯಯಾ ಅಪಾಸ್ತಸರ್ವೋಪಾಧಿಸ್ವರೂಪೇ ಆತ್ಮನಿ ಈಶಿತ್ರೀಶಿತವ್ಯಸರ್ವಜ್ಞತ್ವಾದಿವ್ಯವಹಾರಃ ಉಪಪದ್ಯತೇ । (ಸೂ.ಭಾ.೨–೧–೧೪) ಅವಿದ್ಯೆಯಿಂದ ಕಲ್ಪಿತವಾದ ಉಪಾಧಿಗಳ ಮೂಲಕವೇ ಈಶ್ವರನ ಈಶ್ವರತ್ವ, ಸರ್ವಜ್ಞತ್ವಾದಿಗಳು ಆರೋಪಿತವಾಗಿರುತ್ತವೆ. ವಿದ್ಯೆಯಿಂದ ಉಪಾಧಿಗಳೆಲ್ಲವೂ ಯಾವಾಗ ತೊಲಗಿಹೋಗುವವೋ ಆಗ ಯಾವ ಉಪಾಧಿಗಳ ಸೋಂಕೂ ಇಲ್ಲದ ಅದ್ವಿತೀಯಾತ್ಮನಲ್ಲಿ ಆಳುವವನು, ಆಳಿಸಿಕೊಳ್ಳಲ್ಪಡುವವನು ಅಥವಾ 'ಸರ್ವ' ಹಾಗೂ 'ಜ್ಞ' ಎಂಬ ವ್ಯವಹಾರವು ಹೇಗೂ ಹೊಂದುವದಿಲ್ಲ– ಎಂಬುದು ಇದರ ಅರ್ಥ. ಆದ್ದರಿಂದ ಈಶ್ವರಸಾಕ್ಷಿ ಎಂಬ ಮಾತೇ ತಪ್ಪು. ಸಾಕ್ಷಿಯೇ ಈಶ್ವರನು, ಸಾಕ್ಷಿಯೇ ಅದ್ವಿತೀಯನು.

'ಪ್ರಶ್ನೆ :– ಇವೆರಡೂ ಪರಸ್ಪರವಿರೋಧವಲ್ಲವೆ ?

ಉತ್ತರ :– ಅಲ್ಲ, ಅವಿದ್ಯಾಕಲ್ಪಿತವಾದ ಪ್ರಪಂಚದ ದೃಷ್ಟಿಯಿಂದ ಈಶ್ವರ ; ಸ್ವತಃ, ಪರಮಾರ್ಥದೃಷ್ಟಿಯಿಂದ ಅದ್ವಿತೀಯ.

ಪ್ರಶ್ನೆ :– ಬಹಳ ಚೆನ್ನಾಗಿದೆ ಸ್ವಾಮಿ. ಇದುವರೆಗೂ ತಾವು ಸಾಕ್ಷಿಯು ಅಪ್ರಮೇಯನು, ಆದರೂ ಶಾಸ್ತ್ರಕ್ಕೆ ಗೋಚರನು ; ತರ್ಕಾತೀತನು ಆದರೂ ತರ್ಕದಿಂದ ಮನನಮಾಡಬೇಕು ; ಅದ್ವಿತೀಯನು ಆದರೂ ಈಶ್ವರನು. ಇವು ಪರಸ್ಪರ ವಿರೋಧವಾದವುಗಳಲ್ಲ– ಎಂಬುದನ್ನು ತಿಳಿಸಿದಂತಾಯಿತಲ್ಲವೆ ?

ಉತ್ತರ :– ಹೌದು, ಈ ಪ್ರತಿಪಾದನೆಯು ಶ್ರುತಿ, ಸ್ಮೃತಿ, ಭಾಷ್ಯ, ಅನುಭವ, ಯುಕ್ತಿಗಳಿಗೆ ಹೊಂದುಗೆಯಾಗಿರುತ್ತದೆ. ಆದ್ದರಿಂದ ಮುಮುಕ್ಷುಗಳು ಹೀಗೆ ತಿಳಿಯುವದು ಅವಶ್ಯ.

––––––

## ಪ್ರಕರಣ ಎರಡು

# ವೇದಾಂತಪ್ರಕ್ರಿಯೆ

### (೧) ಅಧ್ಯಾರೋಪಾಪವಾದ

ಪ್ರಶ್ನೆ :– ಸಾಕ್ಷ್ಯನುಭವದ ವಿಷಯದಲ್ಲಿ ತಾವು ಸಾಕ್ಷಿಸ್ವರೂಪವು ಅದ್ವಿತೀಯ, ಸಾಕ್ಷಿಯನ್ನುಳಿದು ಮಿಕ್ಕದ್ದೆಲ್ಲವೂ ಕಲ್ಪಿತ – ಎಂದು ಒಪ್ಪಿಕೊಳ್ಳುವಿರಷ್ಟೆ?

ಉತ್ತರ :– ಹೌದು, ಇದರಲ್ಲಿ ಸಂದೇಹವೇನು ?

ಪ್ರಶ್ನೆ :– ಸತ್ಯವು ಹೀಗಿದ್ದ ಮೇಲೆ ನೀವೂ ಸಹ ವಿಷಯವನ್ನು ತಿಳಿಸುವಾಗ ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರ, ವೇದನೆ, ಪ್ರತ್ಯಯ–ಮುಂತಾದವುಗಳ ಅಸ್ತಿತ್ವವನ್ನು ಒಪ್ಪಿಕೊಳ್ಳುವದೇಕೆ ? ಇದಲ್ಲದೆ ತಿಳಿಸುವ ನಿಮಗೂ ದೇಹಾದಿಸಕಲಪರಿಕರಗಳೂ ಬೇಕಲ್ಲವೆ ? ಹೀಗಿರುವಾಗ ಇವುಗಳೆಲ್ಲವುಗಳೂ ಸಾಕ್ಷಿಸ್ವರೂಪದಲ್ಲಿ ಕಲ್ಪಿತವಾಗಿವೆ– ಎಂಬ ಮಾತಿಗೆ ಏನು ಬೆಲೆ ?

ಉತ್ತರ :– ಸಾಕ್ಷಿಸ್ವರೂಪ ಪರಮಾರ್ಥವನ್ನು ಕಂಡು ಅದರಲ್ಲಿಯೇ ನೆಲೆನಿಂತವರ ದೃಷ್ಟಿಯಿಂದ ಸಾಕ್ಷಿಯನ್ನುಳಿದು ಮಿಕ್ಕೆಲ್ಲವೂ ಕಲ್ಪಿತ ಎಂಬುದು ಸರಿಯಾಗಿಯೇ ಇದೆ. ಆದರೆ ದೇಹಾದಿಗಳೆಲ್ಲವೂ ಸತ್ಯವಾಗಿ ಇದ್ದೇ ಬಿಟ್ಟಿವೆ ಎಂಬ ಗ್ರಹಿಕೆಯಿಂದ ಕೂಡಿಕೊಂಡು ಪ್ರಶ್ನೆಗಳನ್ನು ಮಾಡುತ್ತಾ ಹೋಗುವವರೊಂದಿಗೆ ಅವುಗಳು ಇರುವಂತೆಯೇ ಭಾವಿಸಿಕೊಂಡು ಮಾತನಾಡಬೇಕಾದದ್ದು ಅನಿವಾರ್ಯವಾಗಿರುತ್ತದೆ.

ಪ್ರಶ್ನೆ :– ಸರಿ, ಕೇಳುವವರ ದೇಹಾದಿಗಳ ಅಸ್ತಿತ್ವವನ್ನು ಅನುವಾದಿಸಿಕೊಳ್ಳುವದೇನೋ ಯೋಗ್ಯವೇ ಆಯಿತು. ಆದರೆ ಉಪದೇಶಮಾಡುವ ತಾವೂ ಸಹ ದೇಹೇಂದ್ರಿಯಾದಿಗಳನ್ನವಲಂಬಿಸಿಯೇ ಮಾತನಾಡುವದು ಅನಿವಾರ್ಯವೇ ಆಗಿರುವದರಿಂದ ಹೇಳುವವರಿಗೂ ದೇಹೇಂದ್ರಿಯಾದಿಗಳು ಇರಲೇಬೇಕೆಂದಾಗುವದಿಲ್ಲವೆ ? ಹೀಗಿರುವಾಗ ದೇಹಾದಿಗಳೆಲ್ಲವೂ ಕಲ್ಪಿತವಾದವುಗಳು ಎಂಬುದರಲ್ಲಿ ಅರ್ಥವೇನಿದೆ ?

ಉತ್ತರ :– ವಿಷಯವನ್ನು ತಿಳಿಸಿ ಹೇಳುವವರಿಗೆ ತಮ್ಮ ದೇಹೇಂದ್ರಿಯಾದಿಗಳಾಗಲಿ, ಕೇಳುವವರ ದೇಹೇಂದ್ರಿಯಾದಿಗಳಾಗಲಿ ಇವೆರಡೂ ಕಲ್ಪಿತಗಳೇ ಆಗಿವೆ. ಹಾಗೂ ಅದ್ವಯವಾದ ಸಾಕ್ಷಿಸ್ವರೂಪಮಾತ್ರವೇ ಪರಮಾರ್ಥಸತ್ಯತತ್ತ್ವವಾಗಿದೆ– ಎಂಬುದು ಚೆನ್ನಾಗಿ ಗೊತ್ತಿರುತ್ತದೆ. ಆದ್ದರಿಂದ ತಿಳಿದವರು ಬೋಧಿಸುವಾಗ ಹೇಳುವ

ಹಾಗೂ ಕೇಳುವವರ ದೇಹೇಂದ್ರಿಯಾದಿಗಳು ನಿಜವಾಗಿರುವಂತೆ ಭಾವಿಸಿ ಬೋಧನೆಯನ್ನು ಮಾಡುತ್ತಿದ್ದರೂ ಅವು ಆಗ ಅವರ ದೃಷ್ಟಿಯಲ್ಲಿ ಲೆಕ್ಕಕ್ಕಿರುವದಿಲ್ಲ.

**ಪ್ರಶ್ನೆ :– ದೇಹಾದಿಗಳು ಇಬ್ಬರಿಗೂ ಇದ್ದರೂ ಅವು ಲೆಕ್ಕಕ್ಕಿಲ್ಲ ಎಂಬುದನ್ನು ಹೇಗೆ ತಿಳಿದುಕೊಳ್ಳಬೇಕು ? ಇದಕ್ಕೊಂದು ದೃಷ್ಟಾಂತವನ್ನು ಹೇಳುವಿರಾ ?**

ಉತ್ತರ :– ಓಹೊ ! ಕೇಳಿ. ಅಣ್ಣತಮ್ಮಂದಿರಿಬ್ಬರು ಒಂದು ನಾಟಕದಲ್ಲಿ ಭೀಮ ದುರ್ಯೋಧನರ ವೇಷ ಹಾಕಿದ್ದಾರೆಂದು ಕಲ್ಪಿಸಿರಿ. ರಂಗಭೂಮಿಯ ಮೇಲೆ ಅವರಿಬ್ಬರೂ ಒಬ್ಬರನ್ನೊಬ್ಬರು ದೂಷಿಸುವ ಮಾತುಗಳನ್ನಾಡುತ್ತಾರೆ. ಆ ಪ್ರವೇಶವು ಮುಗಿದ ಮೇಲೆ ಪರದೆಯ ಹಿಂದೆ ಬಂದಾಗ ಇಬ್ಬರೂ ಒಂದೆಡೆ ಕುಳಿತು ತಮ್ಮ ಗೃಹಕೃತ್ಯದ ಮಾತುಗಳನ್ನಾಡುತ್ತಿದ್ದಾಗ ಅವರ ವೇಷಭೂಷಣಗಳು ಹಾಗೆಯೇ ಇದ್ದರೂ ಸಹ ಅವು ಲೆಕ್ಕದಲ್ಲಿಲ್ಲ. ಅಲ್ಲವೆ ? ಹಾಗೆಯೇ ಪರಮಾರ್ಥ ತತ್ತ್ವಬೋಧಕರಿಗೆ ವೇಷದಂತಿರುವ ಈ ದೇಹಾದಿಗಳು ಲೆಕ್ಕದಲ್ಲಿರುವದಿಲ್ಲ. ಕೇಳುವವನಿಗೇನೋ ಅವು ಇವೆ ಎಂಬ ಬುದ್ಧಿಯು ಮೊದಮೊದಲು ಇದ್ದರೂ ಬೋಧಕರ ಬೋಧನೆಯನ್ನನುಸರಿಸಿ ಒಳಸರಿದು ಆತ್ಮಸ್ವರೂಪದಲ್ಲಿಯೇ ನಿಂತಾಗ ಅವನಿಗೂ ದೇಹಾದಿಗಳು ಲೆಕ್ಕದಲ್ಲಿರುವದಿಲ್ಲ.

**ಪ್ರಶ್ನೆ :– ಬೋಧಕರಿಗೆ ದೇಹೇಂದ್ರಿಯಾದಿಗಳು ಕಾಣುತ್ತಿದ್ದರೂ ಅವು ನಿಜವಲ್ಲ ಎಂಬ ಬುದ್ಧಿ ಇರುವದರಿಂದ ಅವು ಲೆಕ್ಕದಲ್ಲಿಲ್ಲ ಎಂದು ತಾನೇ ನೀವು ಹೇಳಿದ್ದು ?**

ಉತ್ತರ :– ಹೌದು, ಸರಿಯಾಗಿ ಗ್ರಹಿಸಿದಿರಿ. ಇದನ್ನು ಶಾಸ್ತ್ರದಲ್ಲಿ 'ಬಾಧಿತಾನುವೃತ್ತಿ' ಎಂದು ಕರೆಯುತ್ತಾರೆ. ಇದಕ್ಕೆ ಆಚಾರ್ಯರು ಒಂದು ದೃಷ್ಟಾಂತವನ್ನೂ ಕೊಟ್ಟಿರುತ್ತಾರೆ.

**ಪ್ರಶ್ನೆ :– ಅದು ಯಾವ ದೃಷ್ಟಾಂತ ?**

ಉತ್ತರ :– ಇದೋ ನೋಡಿ. ಬೃಹದಾರಣ್ಯಕ ೨–೧–೨೦ರಲ್ಲಿ "ಅವಿವೇಕಿನಾಂ ಮಿಥ್ಯಾಬುದ್ಧಿತ್ವಾತ್ । ವಿವೇಕಿನಾಂ ಚ ಸಂವ್ಯವಹಾರಮಾತ್ರಾಲಮ್ಬನಾರ್ಥತ್ವಾತ್ । ಯಥಾ 'ಕೃಷ್ಣೋ ರಕ್ತಶ್ಚ ಆಕಾಶಃ' ಇತಿ ವಿವೇಕಿನಾಮಪಿ ಕದಾಚಿತ್ ಕೃಷ್ಣತಾ ರಕ್ತತಾ ಚ ಆಕಾಶಸ್ಯ ಸಂವ್ಯವಹಾರಮಾತ್ರಾಲಮ್ಬನಾರ್ಥತ್ವಂ ಪ್ರತಿಪದ್ಯತೇ ಇತಿ ನ ಪರಮಾರ್ಥತಃ ಕೃಷ್ಣೋ ರಕ್ತೋ ವಾ ಆಕಾಶೋ ಭವಿತುಮರ್ಹತಿ ।" ಪರಮಾರ್ಥವನ್ನರಿತವರಿಗೂ ಅರಿಯದವರಿಗೂ ಉಪಾಧಿಕೃತವಾದ ಭೇದಗಳು ಇರುವವೆಂಬ ಬುದ್ಧಿಯು ಸಮಾನವಾಗಿ ಇದ್ದೇ ಇದೆಯಲ್ಲ– ಎಂಬ ಪ್ರಶ್ನೆಗೆ, ತಿಳಿಯದವರಿಗೆ ಉಪಾಧಿಕೃತಭೇದಗಳು ನಿಜವಾಗಿರುವವೆಂಬ ತಪ್ಪುತಿಳಿವಳಿಕೆ

ಇರುತ್ತದೆ. ಆದರೆ ವಿವೇಕಿಗಳಿಗಾದರೊ, ಅವು ಕೇವಲ ವ್ಯವಹಾರಕ್ಕೆ ಮಾತ್ರ ಬಳಸುವ ವಸ್ತುಗಳಾಗಿರುತ್ತವೆ. ಹೇಗೆಂದರೆ 'ಆಕಾಶವು ಕಪ್ಪು ಕೆಂಪೂ ಆಗಿರುತ್ತದೆ' ಎಂದು ಅವಿವೇಕಿಗಳು ನಿಜವಾಗಿಯೇ ತಿಳಿದಿರುತ್ತಾರೆ. ಆದರೆ ವಿವೇಕಿಗಳು ಹಾಗೆಂದು ಮಾತನಾಡುತ್ತಿದ್ದರೂ ಅದು ಹಾಗಿಲ್ಲ ಎಂಬ ಬುದ್ಧಿಯು ನಿಶ್ಚಿತವಾಗಿರುತ್ತದೆ- ಎಂಬುದಾಗಿ ಆಚಾರ್ಯರು ಉತ್ತರಿಸಿರುತ್ತಾರೆ. ಇದರಿಂದ ಇಲ್ಲಿ ನಿಜವಾಗಿರದಿದ್ದರೂ ನಿಜವಾಗಿರುವಂತೆ ವಿವೇಕಿಗಳು ವ್ಯವಹರಿಸುವದೇ ಬಾಧಿತಾನುವೃತ್ತಿ ಎನಿಸಿಕೊಂಡಿದೆ.

**ಪ್ರಶ್ನೆ :– ಹಾಗಾದರೆ ಉಪದೇಶಕರು ಬಾಧಿತಾನುವೃತ್ತಿಯಿಂದ ದೇಹಾದಿಗಳಿರುವಂತೆ ಭಾವಿಸಿ ಉಪದೇಶವನ್ನಾರಂಭಿಸುತ್ತಾರೆ ಎಂದ ಹಾಗಾಯಿತು, ಅಲ್ಲವೆ?**

ಉತ್ತರ :– ಹೌದು, ಹಾಗೆಯೇ ಉಪದೇಶಿಸಬೇಕಾಗುತ್ತದೆ. ಎಂದೂ ಇಲ್ಲದ ದೇಹಾದಿಗಳ ಧರ್ಮಗಳನ್ನು ಆತ್ಮನಲ್ಲಿ ಇರುವಂತೆ ಕಲ್ಪಿಸಿಕೊಂಡೇ ಉಪದೇಶ ಮಾಡಲುಪಕ್ರಮಿಸುತ್ತಾರೆ. ಉಪದೇಶದ ಅಂತ್ಯದಲ್ಲಿ ಬರೀ ಆತ್ಮಸ್ವರೂಪಮಾತ್ರವೇ ಪರಮಾರ್ಥವಾಗಿ ನಿಂತಿರುವದಲ್ಲದೆ ದೇಹೇಂದ್ರಿಯಾದಿಗಳೆಲ್ಲವೂ ಬಾಧಿತವಾಗಿಬಿಟ್ಟಿರುತ್ತವೆ. ಈ ಬೋಧನೆಯ ಪದ್ಧತಿಯನ್ನೇ ಶಾಸ್ತ್ರದಲ್ಲಿ **ಅಧ್ಯಾರೋಪ- ಅಪವಾದ ಪ್ರಕ್ರಿಯೆ** ಎಂದು ಕರೆಯುತ್ತಾರೆ. ವೇದಾಂತಗಳಲ್ಲೆಲ್ಲ ಇದೇ ಪ್ರಕ್ರಿಯೆಯನ್ನೇ ಬಳಸಿಕೊಂಡಿರುತ್ತದೆ. ಇದನ್ನೇ ಸಾಂಪ್ರದಾಯಿಕಪ್ರಕ್ರಿಯೆ ಎಂದು ಶ್ರೀ ಶಂಕರಾಚಾರ್ಯರು ತಮ್ಮ ಭಾಷ್ಯಗಳಲ್ಲಿ ಹೇಳಿಕೊಂಡಿದ್ದಾರೆ.

**ಪ್ರಶ್ನೆ :– ಶ್ರೀಶಂಕರರು ಈ ಪ್ರಕ್ರಿಯೆ ಬಗ್ಗೆ ಎಲ್ಲಿ, ಹೇಗೆ- ಹೇಳಿದ್ದಾರೆಂಬುದನ್ನು ಸ್ವಲ್ಪ ತಿಳಿಸುತ್ತೀರಾ ?**

ಉತ್ತರ :– ಕೇಳಿ. ಈ ಬಗ್ಗೆ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಅನೇಕ ಸಲ ಆಚಾರ್ಯರು ಬರೆದಿದ್ದಾರೆ. ಅವುಗಳಲ್ಲಿ ಒಂದು ಸಂದರ್ಭವನ್ನು ಇಲ್ಲಿ ತಿಳಿಸೋಣ. ಗೀತಾಭಾಷ್ಯ ೧೩–೧೩ ರಲ್ಲಿ ಈ ಪ್ರಕ್ರಿಯೆಯನ್ನು ವರ್ಣಿಸುವಾಗ **''ಉಪಾಧಿಕೃತಂ ಮಿಥ್ಯಾರೂಪಮಪಿ ಅಸ್ತಿತ್ವಾಧಿಗಮಾಯ ಜ್ಞೇಯಧರ್ಮವತ್ ಪರಿಕಲ್ಪ್ಯ ಉಚ್ಯತೇ...। ತಥಾ ಹಿ ಸಂಪ್ರದಾಯವಿದಾಂ ವಚನಮ್ – 'ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಞ್ಚಂ ಪ್ರಪಞ್ಚ್ಯತೇ' ಇತಿ।''** ಎಂದು ಬರೆದಿದ್ದಾರೆ.

**ಪ್ರಶ್ನೆ :– ಈ ವಾಕ್ಯದ ತಾತ್ಪರ್ಯವೇನು ?**

ಉತ್ತರ :–ಉಪಾಧಿಯಿಂದ ಕಾಣುವ– ಅವಿದ್ಯೆಯಿಂದ ಇದ್ದಂತೆ ತೋರುವ– ನಿಜವಾಗಿಯೂ ಇಲ್ಲದವುಗಳಾದ ದೇಹಾದಿಗಳನ್ನು ಇರುವಂತೆಯೇ ಭಾವಿಸಿಕೊಂಡು ಹಾಗೂ ಅವು ಆತ್ಮಸ್ವರೂಪಕ್ಕೆ ಸಂಬಂಧಿಸಿದ ಧರ್ಮಗಳೋ ಎಂಬಂತೆ ಕಲ್ಪನೆಮಾಡಿ ಇಲ್ಲಿ ಬೋಧವನ್ನು ಆರಂಭಿಸಿರುತ್ತದೆ. **ಅಧ್ಯಾರೋಪ ಅಪವಾದವೆಂಬ ಪ್ರಕ್ರಿಯೆಯ**

ಮೂಲಕವೇ ನಿಷ್ಪ್ರಪಂಚನಾದ ಅದ್ವಯನಾದ ಆತ್ಮನನ್ನು ತಿಳಿಸಬೇಕಾಗುತ್ತದೆ. ಎಂದು ಸಂಪ್ರದಾಯವನ್ನು ಬಲ್ಲವರ ವಚನವೂ ಹೀಗೆಂದೇ ತಿಳಿಸುತ್ತದೆ– ಎಂಬುದು ಮೇಲಿನ ವಾಕ್ಯದ ಅಭಿಪ್ರಾಯವಾಗಿದೆ.

**ಪ್ರಶ್ನೆ – ಬಹಳ ಚೆನ್ನಾಗಿದೆ ಸ್ವಾಮಿ, ನಮ್ಮ ವ್ಯವಹಾರದಲ್ಲಿಯೂ ಸಹ ಈ ರೀತಿಯ ಬೋಧನಕ್ರಮಕ್ಕೆ ದೃಷ್ಟಾಂತಗಳಿವೆಯೆ ?**

ಉತ್ತರ :– ಓಹೋ ! ಶ್ರೀ ಶಂಕರರು ಬೃಹದಾರಣ್ಯಕಭಾಷ್ಯದಲ್ಲಿ ಅಂತಹ ಕೆಲವು ದೃಷ್ಟಾಂತಗಳನ್ನು ಕೊಟ್ಟಿರುತ್ತಾರೆ.

**ಪ್ರಶ್ನೆ :– ಅವು ಯಾವುವು ?**

## (೨) ಉದಾಹರಣೆಗಳು

ಉತ್ತರ :– **''ಯಥಾ ಏಕಪ್ರಭೃತಿ ಆಪರಾರ್ಧಸಂಖ್ಯಾಸ್ವರೂಪಪರಿಜ್ಞಾನಾಯ ರೇಖಾಧ್ಯಾರೋಪಣಂ ಕೃತ್ವಾ ಏಕೇಯಂ ರೇಖಾ, ದಶೇಯಮ್, ಶತೇಯಮ್, ಸಹಸ್ರೇಯಮ್, ಇತಿ ಗ್ರಾಹಯತಿ । ಅವಗಮಯತಿ ಸಂಖ್ಯಾಸ್ವರೂಪಂ ಕೇವಲಮ್, ನ ತು ಸಂಖ್ಯಾಯಾ ರೇಖಾತ್ಮತ್ವಮೇವ । ಯಥಾ ಚ ಅಕಾರಾದೀನಿ ಅಕ್ಷರಾಣಿ ವಿಜಿಗ್ರಾಹಯಿಷುಃ ಪತ್ರಮಷೀರೇಖಾದಿಸಂಯೋಗೋಪಾಯಮ್ ಆಸ್ಥಾಯ ವರ್ಣಾನಾಂ ಸತತ್ತ್ವಮ್ ಆವೇದಯತಿ, ನ ಪತ್ರಮಷ್ಯಾತ್ಮತಾಮ್ ಅಕ್ಷರಾಣಾಂ ಗ್ರಾಹಯತಿ । ತಥಾ ಚೇಹ ಉತ್ಪತ್ತ್ಯಾದ್ಯನೇಕೋಪಾಯಮ್ ಆಸ್ಥಾಯ ಏಕಂ ಬ್ರಹ್ಮತತ್ತ್ವಮ್ ಆವೇದಿತಮ್ । ಪುನಃ ತತ್ಕಲ್ಪಿತೋಪಾಯಜನಿತವಿಶೇಷಪರಿಶೋಧನಾರ್ಥಂ ನೇತಿ ನೇತಿ ಇತಿ ತತ್ತ್ವೋಪಸಂಹಾರಃ ಕೃತಃ ॥''** (ಬೃ.ಭಾ.೪–೪–೨೩)

**ಪ್ರಶ್ನೆ :– ಈ ವಾಕ್ಯಗಳ ಸಾರಾಂಶವೇನು ?**

ಉತ್ತರ :– ಲೋಕದಲ್ಲಿ ಹುಡುಗರಿಗೆ ಸಂಖ್ಯೆಯನ್ನು ತಿಳಿಸಿಕೊಡುವದಕ್ಕೆ ಕೆಲವು ಗೆರೆಗಳನ್ನೂ ಅಕಾರಾದ್ಯಕ್ಷರಗಳನ್ನು ಕಲಿಸಿಕೊಡುವದಕ್ಕೆ ಕಾಗದ, ಮಷಿ– ಮುಂತಾದವುಗಳನ್ನೂ ಸಾಧನವಾಗಿ ಉಪಯೋಗಿಸುತ್ತಿರುತ್ತಾರಷ್ಟೆ. ಇಲ್ಲಿ ಬೋಧನೆಗೆ ಸಾಧನವಾಗಿರುವ ಕಾಗದ, ಮಷಿ, ಗೆರೆ– ಮುಂತಾದವುಗಳನ್ನು ತಿಳಿಸಿಕೊಡಬೇಕೆಂಬ ಉದ್ದೇಶವೇನೂ ಬೋಧಕರಿಗೆ ಇರುವದಿಲ್ಲ; ಪತ್ರಮಷ್ಯಾದಿಗಳು ಸಂಖ್ಯೆಯೆಂದಾಗಲಿ, ಅಕ್ಷರವೆಂದಾಗಲಿ, ಅವರು ಬೋಧಿಸುವದೂ ಇಲ್ಲ. ಅವುಗಳನ್ನು ನೆಪಮಾಡಿಕೊಂಡು ಸಂಖ್ಯೆಯನ್ನೂ ಅಕ್ಷರವನ್ನೂ ಅವರು ತಿಳಿಸಿಕೊಡುತ್ತಾರೆ. ಅಲ್ಲವೆ ? ಹೀಗೆಯೇ ವೇದಾಂತಗಳಲ್ಲಿಯೂ ಸಹ ಅದ್ವಿತೀಯಾತ್ಮತತ್ತ್ವವನ್ನು ತಿಳಿಸುವದಕ್ಕೋಸ್ಕರ ಆತ್ಮನಿಂದ ಜಗತ್ತಿನ ಉತ್ಪತ್ತಿಯೇ ಮುಂತಾದವುಗಳನ್ನು ಆರೋಪಿಸಿ ಕೊನೆಯಲ್ಲಿ 'ನೇತಿ,

ನೇತಿ' – ಇದಲ್ಲ, ಇದಲ್ಲ ಎಂದು ಎಲ್ಲ ವಿಕಲ್ಪಗಳನ್ನೂ ಅಲ್ಲಗಳೆಯಲಾಗುತ್ತದೆ– ಎಂಬುದು ಆಚಾರ್ಯರ ವಾಕ್ಯದ ಅಭಿಪ್ರಾಯ. ಇದರಂತೆಯೇ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟುವಾಗ ಸಾರುವೆಯನ್ನು ಮೊದಲು ಕಟ್ಟುತ್ತಾರೆ. ಕಟ್ಟಡವು ತಯಾರಾದ ಮೇಲೆ ಆ ಸಾರುವೆಯನ್ನು ಕಿತ್ತೆಸೆಯುತ್ತಾರೆ– ಮುಂತಾದ ಲೌಕಿಕ ದೃಷ್ಟಾಂತಗಳನ್ನು ಇಲ್ಲಿ ತೆಗೆದುಕೊಳ್ಳಬಹುದಾಗಿದೆ.

**ಪ್ರಶ್ನೆ :– ಹಾಗಾದರೆ ಕಲ್ಪಿತವಸ್ತುಗಳನ್ನು ಇರುವಂತೆ ಭಾವಿಸಿ ಉಪದೇಶಿಸುವ ಕ್ರಮಕ್ಕೆ ಅಧ್ಯಾರೋಪ ಎನ್ನುತ್ತಾರೆ– ಎಂದಂತಾಯಿತಲ್ಲವೆ ?**

ಉತ್ತರ :– ಹೌದು, ಸರಿಯಾಗಿ ಗ್ರಹಿಸಿದಿರಿ. ಹೀಗೆಯೇ ಸತ್ಯತತ್ತ್ವವನ್ನು ಕಂಡೊಡನೆ ಈ ಕಲ್ಪಿತವು ಯಾವಾಗಲೂ ಇರಲಿಲ್ಲವೆಂದು ತಾನೇ ಗೊತ್ತಾಗಿ ಬಿಡುವದನ್ನೇ ಅಪವಾದ ಎಂದು ಕರೆಯುವರು. ಶ್ರೀಶಂಕರರು ಸೂತ್ರಭಾಷ್ಯದಲ್ಲಿ **"ಅಪವಾದೋ ನಾಮ ಯತ್ರ ಕಸ್ಮಿಂಶ್ಚಿತ್ ವಸ್ತುನಿ ಪೂರ್ವನಿವಿಷ್ಟಾಯಾಂ ಮಿಥ್ಯಾಬುದ್ಧೌ ನಿಶ್ಚಿತಾಯಾಂ ಪಶ್ಚಾತ್ ಉಪಜಾಯಮಾನಾ ಯಥಾರ್ಥಾ ಬುದ್ಧಿಃ ಪೂರ್ವನಿವಿಷ್ಟಾಯಾಃ ಮಿಥ್ಯಾಬುದ್ಧೇರ್ನಿವರ್ತಿಕಾ ಭವತಿ । ಯಥಾ ದೇಹೇನ್ದ್ರಿಯಸಂಘಾತೇ ಆತ್ಮಬುದ್ಧಿಃ ಆತ್ಮನ್ಯೇವಾತ್ಮ ಬುದ್ಧ್ಯಾ ಪಶ್ಚಾತ್ ಭಾವಿನ್ಯಾ ..... ನಿವರ್ತ್ಯತೇ । ಯಥಾ ವಾ ದಿಗ್ಭ್ರಾನ್ತಿಬುದ್ಧಿಃ ದಿಗ್ಯಾಥಾತ್ಮ್ಯಬುದ್ಧ್ಯಾ ನಿವರ್ತ್ಯತೇ । (೩–೩–೯)** ಎಂದಿದ್ದಾರೆ. ಇದರ ತಾತ್ಪರ್ಯವೇನೆಂದರೆ– ಯಾವದೊಂದು ವಸ್ತುವಿನ ಬಗ್ಗೆ ತಪ್ಪು ತಿಳಿವಳಿಕೆಯಿಂದ ಇದು ಇಂಥದ್ದು ಎಂದು ಮೊದಲು ತಿಳಿದಿರುವರಷ್ಟೆ. ಆಮೇಲೆ ಸರಿಯಾದ ತಿಳಿವಳಿಕೆಯು ಹುಟ್ಟಿ ವಸ್ತುವಿನ ಯಥಾರ್ಥಸ್ವರೂಪವು ಗೊತ್ತಾದಾಗ ಹಿಂದಿನ ತಪ್ಪುತಿಳಿವಳಿಕೆಯು ಹೊರಟುಹೋಗುವದನ್ನೇ ಅಪವಾದ ಎನ್ನಲಾಗುತ್ತದೆ. ಉದಾಹರಣೆಗೆ– ದೇಹಾದಿಸಂಘಾತದಲ್ಲಿ ಮೊದಲು ಇದ್ದ ಆತ್ಮಬುದ್ಧಿಯು, ಪರಮಾರ್ಥಾತ್ಮಜ್ಞಾನವು ಬಂದೊಡನೆಯೇ ಹೇಗೆ ಬಾಧಿಸಲ್ಪಡುವದೋ ಅಥವಾ ಹೇಗೆ ದಿಕ್ಕುಗಳ ಬಗೆಗೆ ಮೊದಲು ತಪ್ಪುತಿಳಿವಳಿಕೆ ಇದ್ದು ಸರಿಯಾದ ತಿಳಿವಳಿಕೆ ಬಂದಮೇಲೆ ಮೊದಲಿನ ತಿಳಿವಳಿಕೆಯು ಬಾಧಿಸಲ್ಪಡುವದೋ ಹಾಗೆಯೇ ಇಲ್ಲಿಯೂ ತಿಳಿಯಬೇಕು– ಎಂದು ಅಪವಾದಪ್ರಕ್ರಿಯೆಯನ್ನು ವಿವರಿಸಿದ್ದಾರೆ.

**ಪ್ರಶ್ನೆ :– ಸರಿ, ಸ್ವಾಮಿ. ಅಂತೂ ಸಾಕ್ಷಿ ಅಥವಾ ಆತ್ಮಸ್ವರೂಪಬೋಧನೆಗೆ ಈ ಅಧ್ಯಾರೋಪಾಪವಾದವೇ ಮುಖ್ಯಪ್ರಕ್ರಿಯೆ ಎಂದಾಯಿತಲ್ಲ!**

ಉತ್ತರ :– ಹೌದು, ಇದೊಂದೇ ಪ್ರಕ್ರಿಯೆಯು ವೇದಾಂತಗಳಲ್ಲೆಲ್ಲ ಹಾಸುಹೊಕ್ಕಾಗಿರುತ್ತದೆ. ವೇದಾಂತದ ಮುಖ್ಯ ಪ್ರಕ್ರಿಯೆಯೇ ಇದಾಗಿದೆ. ಇನ್ನುಳಿದ ಸಾಮಾನ್ಯವಿಶೇಷ, ಅವಸ್ಥಾತ್ರಯ, ಪಂಚಕೋಶ– ಮುಂತಾದ ಪ್ರಕ್ರಿಯೆಗಳೆಲ್ಲವೂ ಈ

ಅಧ್ಯಾರೋಪಾಪವಾದಪ್ರಕ್ರಿಯೆಯಲ್ಲಿಯೇ ಸಮಾವೇಶವಾಗುತ್ತದೆ. ಎಲ್ಲ ಪ್ರಕ್ರಿಯೆ ಗಳೂ ಇದರದೇ ಬೇರೆ ಬೇರೆ ರೂಪಗಳಾಗಿವೆ ಎಂದು ತಿಳಿಯುವದವಶ್ಯ.

## (೩) ಈ ಪ್ರಕ್ರಿಯೆಯೇ ಏಕೆ ?

**ಪ್ರಶ್ನೆ :– ಆತ್ಮಸ್ವರೂಪವನ್ನು ತಿಳಿಸಲು ಈ ಪ್ರಕ್ರಿಯೆಯೇ ಆಗಬೇಕೆಂಬುದಕ್ಕೆ ಕಾರಣವೇನು ಸ್ವಾಮಿ ? ಮಿಕ್ಕ ವಿಷಯಗಳನ್ನು ತಿಳಿಸುವಂತೆ ಇದನ್ನೂ ತಿಳಿಸಲಿಕ್ಕಾಗುವದಿಲ್ಲವೆ ?**

ಉತ್ತರ :– ಇಲ್ಲ, ಮಿಕ್ಕನಾದ ವಿಷಯಗಳನ್ನು ತಿಳಿಸುವಂತೆ ಪ್ರಮಾಣ ಲಕ್ಷಣಾದಿಗಳ ಮೂಲಕವೂ ದ್ರವ್ಯ, ಗುಣ, ಕ್ರಿಯೆ, ಜಾತಿ– ಮುಂತಾದವುಗಳ ಮೂಲಕವೂ ಆತ್ಮನನ್ನು ತಿಳಿಸಲು ಶಕ್ಯವೇ ಇಲ್ಲ. ಏಕೆಂದರೆ, ಆತ್ಮತತ್ತ್ವವು ಅರಿಯುವಾತನ ಸ್ವರೂಪವೇ ಆಗಿರುವದರಿಂದ ಅದನ್ನು ವಿಷಯೀಕರಿಸುವದು ಎಂದಿಗೂ ಸಾಧ್ಯವಿಲ್ಲ. ಅದು ವಿಷಯವೇ ಆಗಲಾರದು.

**ಪ್ರಶ್ನೆ :– ತಾವು ಈಗ ಹೇಳಿದ ವಿಷಯವನ್ನು ಮನಸ್ಸಿಗೆ ನಾಟುವಂತೆ ವಿವರಿಸಬಾರದೆ?**

ಉತ್ತರ :– ಇದೋ ನೋಡಿ, ಹೊರಗಿರುವ ವಸ್ತುಗಳನ್ನು ಕಣ್ಣಿನಿಂದ ನೋಡು ತ್ತೇವೆ, ಅಲ್ಲವೆ ? ಆದರೆ ಕಣ್ಣು ಸರಿಯಾಗಿ ಕಾಣುತ್ತದೆ ಅಥವಾ ಕಾಣುವದಿಲ್ಲ ಎಂಬುದು ಏತರಿಂದ ತಿಳಿದುಬರುತ್ತದೆ ? ಎಂದು ವಿಚಾರಿಸಲಾಗಿ ಅದು ಅನುಭವ ಗೋಚರವಾಗಿದೆ ಅಥವಾ ನಾನೇ ಅದನ್ನು ಅರಿಯುತ್ತೇನೆ– ಎಂದಲ್ಲವೆ ಹೇಳಬೇಕು?

**ಪ್ರಶ್ನೆ :– ಹೌದು, ಕಣ್ಣು ಹೊರಗಿನ ರೂಪವನ್ನು ವಿಷಯೀಕರಿಸಿದರೆ, ಈ ಅನುಭವಾತ್ಮಕನಾದ ತಾನು– ಆತ್ಮನು– ಕಣ್ಣನ್ನೇ ವಿಷಯೀಕರಿಸತಕ್ಕವನಾಗಿದ್ದಾನೆ.**

ಉತ್ತರ :– ಇಂಥ ಆತ್ಮನನ್ನು ಕಣ್ಣಿನಿಂದ ವಿಷಯೀಕರಿಸಿ ಅರಿಯುವದಕ್ಕೆ ಆದೀತೆ?

**ಪ್ರಶ್ನೆ :– ಇಲ್ಲ, ಎಂದೂ ಆಗಲಾರದು.**

ಉತ್ತರ :– ಸರಿಯಾಗಿ ತಿಳಿದಿರಿ. ಹೀಗೆಯೇ ಎಲ್ಲ ಇಂದ್ರಿಯಗಳನ್ನೂ ಮನಸ್ಸು, ಬುದ್ಧಿ, ವಿಷಯ ವೇದನೆಗಳಾದ ಸುಖದುಃಖಾದಿಗಳೆಲ್ಲವನ್ನೂ ಬೆಳಗುವ ಅನುಭವಾತ್ಮಕ ವಾದ ತತ್ತ್ವವನ್ನು ಇವುಗಳಲ್ಲಿ ಏತರಿಂದಲೂ ವಿಷಯೀಕರಿಸುವದು ಸಾಧ್ಯವಿಲ್ಲ. ಈ ತತ್ತ್ವವು ನಿತ್ಯವೂ ಅವಿಷಯವಾಗಿರತಕ್ಕದ್ದಾಗಿದೆ. ಆದ್ದರಿಂದಲೇ ಈ ತತ್ತ್ವವನ್ನು ತಿಳಿಸುವದಕ್ಕೆ ಆತ್ಮನಲ್ಲದ ಎಂದರೆ ದೇಹೇಂದ್ರಿಯಮನೋಬುದ್ಧಿ –ಅಹಂಕಾರಾದಿ ಗಳಲ್ಲಿರುವ 'ನಾನು' ಎಂಬ ಬುದ್ಧಿಯನ್ನು ತೊಲಗಿಸುವದೊಂದೇ ಉಪಾಯವೇ ಹೊರತು ಆತ್ಮನನ್ನು ವಿಷಯೀಕರಿಸಿ ತಿಳಿಸುವದು ಸಾಧ್ಯವೇ ಇಲ್ಲ.

**ಪ್ರಶ್ನೆ :– ಬಹಳ ಚೆನ್ನಾಗಿದೆ ಸ್ವಾಮಿ. ಶ್ರೀಶಂಕರರು ತಾವು ಈವರೆಗೆ ಹೇಳಿದ ವಿಷಯಗಳನ್ನು ಎಲ್ಲಿ ಹೇಳಿದ್ದಾರೆ ? ಒಂದೆರಡು ವಾಕ್ಯಗಳನ್ನು ಉದಾಹರಿಸಿ ತಿಳಿಸುವಿರಾ?**

ಉತ್ತರ :– ಅವಶ್ಯವಾಗಿ ಹೇಳೋಣ. ಮೊದಲನೆಯದಾಗಿ ಮಾಂಡೂಕ್ಯದಲ್ಲಿ (ಮಾಂ.೭) "**ನಾಪಿ ಪ್ರಮಾಣಾಂತರವಿಷಯತ್ವಂ ಸ್ವರೂಪೇಣ, ಗವಾದಿವತ್ । ಆತ್ಮನೋ ನಿರುಪಾಧಿಕತ್ವಾತ್ । ಗವಾದಿವತ್ ನಾಪಿ ಜಾತಿಮತ್ವಂ ಅದ್ವಿತೀಯತ್ವೇನ ಸಾಮಾನ್ಯವಿಶೇಷಾಭಾವಾತ್ । ನಾಪಿ ಕ್ರಿಯಾವತ್ವಂ ಪಾಚಕಾದಿವದವಿಕ್ರಿಯತ್ವಾತ್ । ನಾಪಿ ಗುಣವತ್ವಂ ನೀಲಾದಿವತ್ ನಿರ್ಗುಣತ್ವಾತ್ ।**" ಎಂದು ಬರೆದಿದ್ದಾರೆ. ಇದರ ತಾತ್ಪರ್ಯವೇನೆಂದರೆ (೧) ಆತ್ಮತತ್ತ್ವವು ಹೊರಗಿರುವ ಎತ್ತು ಮುಂತಾದ ಪ್ರಾಣಿಗಳಂತೆ ಪ್ರತ್ಯಕ್ಷಾದಿಪ್ರಮಾಣಗಳಿಂದ ಸ್ವರೂಪನಿಶ್ಚಯಮಾಡತಕ್ಕ ವಿಷಯವಲ್ಲ. (೨) ಅನುಭವಾತ್ಮಕನಾದ ಈ ಆತ್ಮನು ತನಗೆರಡನೆಯದಿಲ್ಲದವನಾದ್ದರಿಂದ ಎತ್ತು ಕುದುರೆ – ಮುಂತಾಗಿ ಜಾತಿವಿಶೇಷದಿಂದಲೂ ತಿಳಿಸಲಾಗುವದಿಲ್ಲ. ಏಕೆಂದರೆ ಪ್ರಾಣಿಗಳು ಎಂಬ ಸಾಮಾನ್ಯವೂ ಅದರಲ್ಲಿ ಎತ್ತು, ಎಮ್ಮೆ, ಕೋಣ, ಹಸು ಮುಂತಾದ ವಿಶೇಷಗಳೂ ಇರುವಂತೆ ಈ ಅದ್ವಿತೀಯಾತ್ಮತತ್ತ್ವದಲ್ಲಿ ಸಾಮಾನ್ಯವಿಶೇಷ ಭಾವಗಳಿರುವದಿಲ್ಲ: (೩) ಅಡಿಗೆಯವನು ಮುಂತಾಗಿ ಕ್ರಿಯೆಯಿಂದ ತಿಳಿದುಬರತಕ್ಕ ವಸ್ತುವೂ ಇದಲ್ಲ. ಏಕೆಂದರೆ ಈ ತತ್ತ್ವವು ಅವಿಕ್ರಿಯವಾಗಿದೆ. (೪) ನೀಲವರ್ಣದ್ದು–ಕೆಂಪುವರ್ಣದ್ದು– ಮುಂತಾಗಿ ಗುಣಗಳಿಂದಲೂ ಇದನ್ನು ವರ್ಣಿಸಲಿಕ್ಕಾಗದು. ಏಕೆಂದರೆ ಇದು ನಿರ್ಗುಣವಾಗಿದೆ. ಅಂತೂ ಪ್ರಮಾಣ, ಲಕ್ಷಣ, ದ್ರವ್ಯ, ಗುಣ, ಕ್ರಿಯೆ, ಜಾತಿ, ಸಾಮಾನ್ಯಾದಿಗಳ ಮೂಲಕ ಈ ಆತ್ಮನನ್ನು ಹೊರಗಿನ ವಸ್ತುಗಳಂತೆ ವಿಷಯೀಕರಿಸುವದು ಎಂದಿಗೂ ಸಾಧ್ಯವಿಲ್ಲ–ಎಂದರ್ಥ.

ಇನ್ನು ಎರಡನೆಯದಾಗಿ ಗೀತಾಭಾಷ್ಯದಲ್ಲಿ (೧೩–೨) "**ಕರಣೇ ಚಕ್ಷುಷಿ ವಿಪರೀತಗ್ರಹಣಾದಿದೋಷಸ್ಯ ದರ್ಶನಾತ್ । ವಿಪರೀತಾದಿಗ್ರಹಣಂ ತನ್ನಿಮಿತ್ತಂ ವಾ ತೈಮಿರಿಕತ್ವಾದಿದೋಷಃ ಗ್ರಹೀತುಶ್ಚಕ್ಷುಷಃ ಸಂಸ್ಕಾರೇಣ ತಿಮಿರೇ ಅಪನೀತೇ ಗ್ರಹೀತುರದರ್ಶನಾತ್ ನ ಗ್ರಹೀತುರ್ಧರ್ಮೋ ಯಥಾ.....।**" ಎಂದು ಬರೆದಿದ್ದಾರೆ. ಇದರ ತಾತ್ಪರ್ಯವೇನೆಂದರೆ–ನೋಡುವದಕ್ಕೆ ಸಾಧನವಾದ ಕಣ್ಣಿನಲ್ಲಿ ವಿಪರೀತವಾಗಿ ಕಾಣುವದೇ ಮುಂತಾದ ದೋಷವು ಕಂಡುಬರುತ್ತದೆ. ಆದರೆ ತಪ್ಪಾಗಿ ಕಾಣುವ ಅಥವಾ ಕಾಣದಿರುವ ದೋಷವು ನೋಡುವವನಿಗೆ ಇರುವದಿಲ್ಲ. ಏಕೆಂದರೆ ಅದೇ ಕಣ್ಣಿನ ದೋಷಗಳನ್ನು ಸಂಸ್ಕಾರದಿಂದ ತೆಗೆದುಹಾಕಿದಾಗ ನೋಡುವವನಿಗೆ ಮೊದಲಿನಂತೆ ವಿಪರೀತಗ್ರಹಣಾದಿಗಳು ಕಾಣುವದಿಲ್ಲ. ಆದ್ದರಿಂದ ತಪ್ಪಾಗಿ

ನೋಡುವದೇ ಮುಂತಾದದ್ದು ಕಣ್ಣಿನ ದೋಷವೇ ಹೊರತು ನೋಡುವವನ ದೋಷವಲ್ಲ– ಎಂದಿದ್ದಾರೆ.

**ಪ್ರಶ್ನೆ :– ಇದರ ಸಾರವನ್ನು ಇನ್ನೂ ಸ್ವಲ್ಪ ಸ್ಪಷ್ಟವಾಗಿ ಹೇಳಬಲ್ಲಿರಾ ?**

ಉತ್ತರ :– ಲಕ್ಷ್ಯವಿಟ್ಟು ಕೇಳಿ. ಕಣ್ಣಿಗೆ ಪರೆ ಬಂದಾಗ ಕಾಣದಿರುವದು, ವಿಪರೀತವಾಗಿ ಕಾಣುವದು– ಇವೆಲ್ಲವೂ ಕಣ್ಣಿನ ದೋಷವೇ ಹೊರತು ನೋಡುವವನ ದೋಷವಲ್ಲ. ಕಣ್ಣಿನ ಪರೆ ತೆಗೆದಾಗ ಮತ್ತೆ ಸರಿಯಾಗಿಯೇ ಕಾಣುತ್ತದೆ. ಒಟ್ಟಿನಲ್ಲಿ ಕಣ್ಣು ಸರಿಯಾಗಿ ಕಾಣದಿದ್ದುದನ್ನೂ ಕಣ್ಣು ಸರಿಯಾಗಿ ಕಾಣುವದನ್ನೂ ನೇರಾಗಿ ಅರಿಯತಕ್ಕ ಅನುಭವಸ್ವರೂಪನಾದ ತಾನು ಒಂದೇ ಬಗೆಯಾಗಿದ್ದಾನೆ ಎಂಬುದನ್ನು ಲಕ್ಷಿಸಬೇಕು.

**ಪ್ರಶ್ನೆ :– ಆಗಲಿ, ಇದರಿಂದ ಪ್ರಕೃತವಿಷಯಕ್ಕೆ ಯಾವ ಪ್ರಯೋಜನ ವಾಯಿತು?**

ಉತ್ತರ :– ಕಣ್ಣಿನ ದೃಷ್ಟಿಯನ್ನು ಅರಿಯುವ–ನೋಡುವ–ದ್ರಷ್ಟೃವಾದ ಆತ್ಮನನ್ನು ಕಣ್ಣಿನಿಂದ ವಿಷಯೀಕರಿಸಿ ಹೊರಗಿನ ರೂಪಗಳನ್ನರಿಯುವಂತೆ ಅರಿಯ ಲಾಗುವದಿಲ್ಲ ಎಂಬುದು ಇದರಿಂದ ಸಿದ್ಧವಾಯಿತು. ಆದ್ದರಿಂದಲೇ ಬೃಹದಾರಣ್ಯಕ ಉಪನಿಷತ್ತಿನಲ್ಲಿ ''ನ ದೃಷ್ಟೇರ್ದ್ರಷ್ಟಾರಂ ಪಶ್ಯೇಃ'' (೩–೪–೨) ದೃಷ್ಟಿಯ ದ್ರಷ್ಟೃವನ್ನು ಕಾಣಲಾರೆ– ಎಂದು ಹೇಳಿರುತ್ತದೆ.

**ಪ್ರಶ್ನೆ :– ಸರಿ, ಸ್ವಾಮಿ. ಇಂದ್ರಿಯಗಳಿಗೂ ಪ್ರತ್ಯಕ್ಷಾದಿಪ್ರಮಾಣಗಳಿಗೂ ಈ ಅನುಭವರೂಪನಾದ ಆತ್ಮನು ಗೋಚರನಲ್ಲ ಎಂದಾಯಿತಲ್ಲವೆ ?**

ಉತ್ತರ :– ಹೌದು, ಆದ್ದರಿಂದಲೇ ಪ್ರತ್ಯಕ್ಷಾದಿಪ್ರಮಾಣ ಹಾಗೂ ಇಂದ್ರಿಯಗಳಿಂದ ಗೋಚರವಾಗುವ ವಸ್ತುಗಳ ಧರ್ಮಗಳಾದ ದ್ರವ್ಯ, ಗುಣ, ಜಾತಿ, ಕ್ರಿಯೆ, ಸಾಮಾನ್ಯಾದಿಗಳು ಈ ಆತ್ಮನಿಗಿಲ್ಲ ಎಂಬುದು ಅನುಭವಸಮ್ಮತವಾಗಿರುತ್ತದೆ. ಇದನ್ನೇ ಮೇಲೆ ಹೇಳಿದ ಮಾಂಡೂಕ್ಯದ ವಾಕ್ಯದಲ್ಲಿ ಆಚಾರ್ಯರು ತಿಳಿಸಿರುತ್ತಾರೆ.

**ಪ್ರಶ್ನೆ :– ಅಂತೂ ವಿಷಯಿಯ ಪರಮಾರ್ಥರೂಪನಾದ ಈ ಆತ್ಮನು ವಿಷಯನಾಗುವದೇ ಇಲ್ಲ ಎಂಬುದು ಇಲ್ಲಿ ಸ್ಪಷ್ಟವಾಯಿತು, ಅಲ್ಲವೆ ?**

ಉತ್ತರ– ಹೌದು, ಆದ್ದರಿಂದಲೇ ಅನುಭವಸ್ವರೂಪನಾದ ಆತ್ಮನಲ್ಲದ– ಆತ್ಮನಲ್ಲಿ ಅವಿದ್ಯೆಯಿಂದ ಹುಟ್ಟುಹಾಕಿದ– ಅನಾತ್ಮಗಳನ್ನು ವರ್ಣಿಸಿ ಅವುಗಳಿಂದ ಹಿಂದಿರುಗಿಸುವ ಒಂದೇ ಉಪಾಯದಿಂದ ಮಾತ್ರವೇ ಆತ್ಮನಲ್ಲಿ ಮುಮುಕ್ಷುವಿಗೆ ನೆಲೆ ನಿಲ್ಲುವಿಕೆಯು ಬರುತ್ತದೆ ಎಂಬುದನ್ನರಿತ ಶಾಸ್ತ್ರವೂ ಅನುಭಾವಿಗಳಾದ ಗುರುಗಳೂ ಈ ಅಧ್ಯಾರೋಪ ಅಪವಾದ ಪ್ರಕ್ರಿಯೆಯನ್ನೇ ಆತ್ಮಸ್ವರೂಪದ ಬೋಧನೆಗೆ ಉಪಾಯ

ವಾಗಿ ಬಳಸುತ್ತಾರೆ. ಗೀತಾಭಾಷ್ಯದಲ್ಲಿ "ತಸ್ಮಾತ್ ಜ್ಞಾನೇ ಯತ್ನೋ ನ ಕರ್ತವ್ಯಃ, ಕಿಂತು ಅನಾತ್ಮನಿ ಆತ್ಮಬುದ್ಧಿನಿವೃತ್ತಾವೇವ ।" (೧೮-೫೦) ಆದ್ದರಿಂದ ಆತ್ಮನ ಜ್ಞಾನಕ್ಕಾಗಿ ಯತ್ನಮಾಡಬೇಕಾದದ್ದಿಲ್ಲ, ಆದರೆ ಅನಾತ್ಮದಲ್ಲಿ ಆತ್ಮಬುದ್ಧಿಯನ್ನು ತೊಲಗಿಸಿಕೊಳ್ಳುವದಕ್ಕಾ ಗಿಯೇ ಪ್ರಯತ್ನವನ್ನು ಮಾಡಬೇಕಾಗಿರುತ್ತದೆ- ಎಂದಿದ್ದಾರೆ.

**ಪ್ರಶ್ನೆ :- ಆತ್ಮಸ್ವರೂಪಬೋಧನೆಗೆ ಕಲ್ಪಿತಗಳಾದ ಅನಾತ್ಮಗಳನ್ನಲ್ಲಗಳೆಯುವದೊಂದೇ ಮಾರ್ಗವಾದ್ದರಿಂದ ಅಧ್ಯಾರೋಪಾಪವಾದಪ್ರಕ್ರಿಯೆಯೇ ವೇದಾಂತಶಾಸ್ತ್ರದ ಮುಖ್ಯವೂ ಏಕಮೇವ ಪ್ರಕ್ರಿಯೆಯೂ ಆಗಿದೆ ಎಂಬುದು ತಮ್ಮ ನಿರೂಪಣೆಯಿಂದ ತಿಳಿದಂತಾಯಿತು. ಈಗ ಈ ಅಧ್ಯಾರೋಪಾಪವಾದ ಪ್ರಕ್ರಿಯೆಯೇ ಮಿಕ್ಕ ಎಲ್ಲಾ ಪ್ರಕ್ರಿಯೆಗಳಲ್ಲಿಯೂ ಹಾಸುಹೊಕ್ಕಾಗಿರುವದೆಂಬುದನ್ನು ಹೇಗೆ ತಿಳಿದುಕೊಳ್ಳಬೇಕು ? ಅದರ ಕೆಲವು ಪ್ರಕಾರಗಳನ್ನು ಹೇಳುವಿರಾ ?**

## (೪) ಪ್ರಕ್ರಿಯೆಯ ಪ್ರಕಾರಗಳು

ಉತ್ತರ :- ಓಹೋ ! ಅದಕ್ಕೇನು ? ಅವಶ್ಯವಾಗಿ ಹೇಳೋಣ, ಕೇಳಿ. ಶ್ರೀಶ್ರೀಗಳವರು ತಮ್ಮ **ಶಂಕರ ವೇದಾಂತ ಸಾರ** ಎಂಬ ಗ್ರಂಥದಲ್ಲಿ ಇಂಥ ಅನೇಕ ಪ್ರಕಾರಗಳನ್ನು ತೋರಿಸಿಕೊಟ್ಟಿದ್ದಾರೆ. ಅವುಗಳನ್ನು ಅವಶ್ಯವಾಗಿ ಮನನ ಮಾಡಿಕೊಳ್ಳಬೇಕು. ಇಲ್ಲಿ ಉದಾಹರಣೆಗಾಗಿ ಕೆಲವು ಅಧ್ಯಾರೋಪಗಳ ಮಾದರಿಗಳನ್ನು ತೋರಿಸಲಾಗಿದೆ.

(೧) ಕೇವಲ ಅನುಭವಸ್ವರೂಪನೂ ಅದ್ವಯನೂ ಆದ ಆತ್ಮನಲ್ಲಿ ವಿದ್ಯೆ, ಅವಿದ್ಯೆ- ಎಂಬ ಭೇದವ್ಯವಹಾರವು ಇರುವಹಾಗಿಲ್ಲ. ಪರಮಾರ್ಥವು ಹೀಗಿದ್ದರೂ ವ್ಯವಹಾರದಲ್ಲಿ ನಮ್ಮ ಬುದ್ಧಿಗೆ ಸಹಜವಾಗಿರುವ ಅವಿದ್ಯೆಯನ್ನು ಆತ್ಮಸ್ವರೂಪದ ಬಗ್ಗೆಯೂ ಇರುವಂತೆ ಆರೋಪಿಸಿ ಲೋಕಾನುಭವಕ್ಕನುಸರಿಸಿ ವಿದ್ಯೆಯಿಂದ ಅವಿದ್ಯೆ ತೊಲಗುವದೆಂದು ತಿಳಿಸಿ ಆತ್ಮವಿದ್ಯೆಯನ್ನು ಬೋಧಿಸಿ, ವಿದ್ಯೆ, ಅವಿದ್ಯೆ ಎಂಬ ವ್ಯವಹಾರಕ್ಕೆ ಆತ್ಮನು ಅತೀತನಾಗಿರುವನೆಂಬ ಅನುಭವದಲ್ಲಿ ನಿಲ್ಲಿಸುವದು- ಒಂದು ಪ್ರಕಾರವು.

(೨) ನಿತ್ಯವೂ ನಿರ್ವಿಕಾರಿಯಾದ ಆತ್ಮನಲ್ಲಿ ಬಂಧ, ಮೋಕ್ಷ ಎಂಬ ವಿಕಾರಗಳಿರಲು ಶಕ್ಯವೇ ಇಲ್ಲ. ಹೀಗಿದ್ದರೂ ಲೋಕಸಿದ್ಧವಾದ ಸಂಸಾರಬಂಧವನ್ನು ಆತ್ಮನಲ್ಲಿರುವಂತೆ ಭಾವಿಸಿ ಬಂಧನಿವೃತ್ತಿಯ ಉಪಾಯಗಳನ್ನು ಹಂತ ಹಂತವಾಗಿ ಬೋಧಿಸುತ್ತ ಕೊನೆಯಲ್ಲಿ ಅದ್ವಿತೀಯವಾದ ಆತ್ಮಾನುಭವದಲ್ಲಿ ನಿಲ್ಲಿಸಿದಾಗ ಆತ್ಮನಿಗೆ ಎಂದಿಗೂ ಬಂಧಮೋಕ್ಷಗಳು ಇರಲಿಲ್ಲ, ಆತ್ಮನು ನಿತ್ಯಮುಕ್ತಸ್ವರೂಪನು ಎಂಬ ಅನುಭವದಲ್ಲಿ ನಿಲ್ಲಿಸುವದು- ಮತ್ತೊಂದು ಪ್ರಕಾರವು.

ಹೀಗೆಯೇ ಸರ್ವವ್ಯವಹಾರಗಳಿಗೂ ಅತೀತವಾದ ತತ್ತ್ವವನ್ನು ತಿಳಿಸಲು ಕೆಲ ಕೆಲವು ವ್ಯವಹಾರಗಳನ್ನು ಆರೋಪಿಸಿ ತತ್ತ್ವವನ್ನು ತಿಳಿಸುವ ಪದ್ಧತಿಯು ವೇದಾಂತ ಶಾಸ್ತ್ರದಲ್ಲಿ ರೂಢಿಯಲ್ಲಿ ಬಂದಿರುತ್ತದೆ. ಇದೇ ವೇದಾಂತಸಂಪ್ರದಾಯದ ಬೋಧನೆಯ ಕ್ರಮವು. ಶಾಂಕರಭಾಷ್ಯವು ಈ ಪರಿಶುದ್ಧಸಂಪ್ರದಾಯವನ್ನೇ ಅವಲಂಬಿಸಿರುತ್ತದೆ– ಎಂಬುದನ್ನು ಮರೆಯಲಾಗದು.

## (೫) ಸಂಪ್ರದಾಯದ ಅವನತಿ

**ಪ್ರಶ್ನೆ :– ವ್ಯಾಖ್ಯಾನಕಾರರೂ ಇತರ ಅದ್ವೈತಗ್ರಂಥಗಳ ನಿರ್ಮಾಪಕರೂ ಈ ಸಂಪ್ರದಾಯವನ್ನು ಅನುಸರಿಸಲಿಲ್ಲವೆ ?**

ಉತ್ತರ :– ನಾವು ಈ (ಪು.೨) ಶಂಕರಸಂಸ್ಮರಣ ಗ್ರಂಥದಲ್ಲಿ ಹೇಳಿರುವಂತೆ ಶ್ರೀಸುರೇಶ್ವರಾಚಾರ್ಯರೊಬ್ಬರು ಮಾತ್ರ ಸರಿಯಾದ ಸಂಪ್ರದಾಯವನ್ನನುಸರಿಸಿ ದ್ದಾರೆ ಎನ್ನಲಡ್ಡಿಯಿಲ್ಲ. ಮಿಕ್ಕ ಎಂದರೆ ಪಂಚಪಾದಿಕೆ, ಭಾಮತಿ– ಎಂಬ ಸುಪ್ರಸಿದ್ಧ ವ್ಯಾಖ್ಯಾನಕಾರರೂ ವಿವರಣ, ಕಲ್ಪತರು– ಮುಂತಾದ ಉಪವ್ಯಾಖ್ಯಾನಕಾರರೂ ಇಷ್ಟಸಿದ್ಧಿ, ನ್ಯಾಯಮಕರಂದ– ಮುಂತಾದ ಅದ್ವೈತಗ್ರಂಥಕರ್ತೃಗಳೂ ಈ ಪರಿಶುದ್ಧ ಸಂಪ್ರದಾಯವನ್ನು ಅನುಸರಿಸಿಲ್ಲ.

**ಪ್ರಶ್ನೆ :– ಇವರೆಲ್ಲರೂ ಅದ್ವೈತವನ್ನೇ ಬೇರೆ ಬೇರೆ ಪ್ರಕಾರದಿಂದ ಪ್ರತಿಪಾದಿಸಿದ್ದರಿಂದ ಇವರೆಲ್ಲರನ್ನೂ ಸಾಂಪ್ರದಾಯಕರಾದ ಆಚಾರ್ಯರೆಂದೇ ಈಗ್ಗೆ ಸಾಮಾನ್ಯರೂ ಪಂಡಿತರೂ ಭಾವಿಸುತ್ತಿರುವಾಗ ನೀವು ಇವರು ಸಾಂಪ್ರದಾಯಕರೇ ಅಲ್ಲ ಎನ್ನುವಿರಲ್ಲ! ಇದು ಯೋಗ್ಯವೆ ?**

ಉತ್ತರ :– ಈ ವ್ಯಾಖ್ಯಾನಕಾರರುಗಳೆಲ್ಲರೂ ಕೊನೆಯಲ್ಲಿ ಅದ್ವೈತಸಿದ್ಧಾಂತಕ್ಕೇ ಮೇಳಮಾಡಿ ತಮ್ಮ ಗ್ರಂಥಗಳನ್ನು ಬರೆದಿದ್ದರೂ ಶ್ರೀಶಂಕರಾಚಾರ್ಯರಂತೆ ಸಾರ್ವತ್ರಿಕ ಪೂರ್ಣಾನುಭವದ ಆಧಾರ ಹಾಗೂ ಅಧ್ಯಾರೋಪಾಪವಾದದ ಪ್ರಕ್ರಿಯೆಗಳನ್ನವ ಲಂಬಿಸಿ ತತ್ತ್ವವನ್ನು ಶೋಧಿಸುತ್ತಾ ಕೊನೆಯಲ್ಲಿ ಅನುಭವಪರ್ಯವಸಾಯಿಯಾಗಿ ಮಾಡುವ ಪದ್ಧತಿಯ ಶುದ್ಧ ಸಂಪ್ರದಾಯವನ್ನು ಅನುಸರಿಸಿರುವದಿಲ್ಲ.

**ಪ್ರಶ್ನೆ :– ಈ ಬಗ್ಗೆ ಒಂದು ಉದಾಹರಣೆಯನ್ನು ಹೇಳುವಿರಾ ?**

ಉತ್ತರ :– ಇದೋ ನೋಡಿ. ವಿದ್ಯಾವಿದ್ಯೆಗಳೆಂಬ ವ್ಯವಹಾರಕ್ಕೆ ಅತೀತವಾಗಿರುವ ಆತ್ಮತತ್ತ್ವದಲ್ಲಿ ಲೋಕಸಿದ್ಧವಾಗಿರುವ ಅವಿದ್ಯೆಯನ್ನು ಆತ್ಮನ ವಿಷಯದಲ್ಲಿ ಆರೋಪಿಸಿಕೊಂಡು ವಿದ್ಯೆಯಿಂದ ಅವಿದ್ಯೆಯು ಬಾಧಿತವಾಗಿ ಆತ್ಮಸ್ವರೂಪದಲ್ಲಿ ನೆಲೆನಿಂತಾಗ ವಿದ್ಯಾವಿದ್ಯಾವ್ಯವಹಾರಕ್ಕೆ ಅತೀತನಾದ

ಚಿನ್ಮಾತ್ರಾತ್ಮನೇ ಪರಮಾರ್ಥಸತ್ಯನು ಎಂಬ ಅನುಭವವು ಬಂದುಬಿಡುತ್ತದೆ– ಎಂಬುದು ಶಾಂಕರವೇದಾಂತದ ಅಥವಾ ಪ್ರಸ್ಥಾನತ್ರಯಭಾಷ್ಯದ ಸಾಂಪ್ರದಾಯಿಕ ಶೈಲಿಯಾಗಿದೆ. ಆದರೆ ವ್ಯಾಖ್ಯಾನಕಾರರಾದರೋ...

**ಪ್ರಶ್ನೆ :– ಅದೇಕೆ ಸ್ವಾಮಿ ? ಅವರೂ ಆತ್ಮನೊಬ್ಬನೇ ಪರಮಾರ್ಥನೆಂದು ಹೇಳುತ್ತಾರಲ್ಲ!**

ಉತ್ತರ :– ನಿಜ. ಕೊನೆಯಲ್ಲಿ ಹಾಗೆ ತಂದು ಕೂಡಿಸುತ್ತಾರೆ. ಆದರೆ ವಿಚಾರಕ್ಕೆ ಹೊರಟು ತತ್ತ್ವಶೋಧನೆ ಮಾಡುವಾಗ– ಆತ್ಮನನ್ನಾವರಿಸಿ ಆತ್ಮನನ್ನಾಶ್ರಯಿಸಿ ಆತ್ಮನ ಶಕ್ತಿಯಾದ ಅವಿದ್ಯೆಯು ಈಗಿನ ಲೋಕಸಿದ್ಧವಾದ ಅವಿದ್ಯೆಗೆ ಉಪಾದಾನಕಾರಣವಾಗಿ ಭಾವರೂಪವಾಗಿ ಇದ್ದುಬಿಟ್ಟಿದೆ ; ಇದು ವಿದ್ಯೆಯಿಂದ ತೊಲಗುತ್ತದೆ ; ಜ್ಞಾನಿಯು ಜೀವಂತನಿರುವಾಗ ಕಿಂಚಿತ್ ಶೇಷ ಉಳಿಯುತ್ತದೆ ; ವಿದೇಹಕೈವಲ್ಯದಲ್ಲಿ ಪೂರ್ತಿ ಹೋಗುತ್ತದೆ– ಎಂಬ ಪ್ರತಿಪಾದನೆಗಳನ್ನವಲಂಬಿಸುತ್ತಾರೆ. ಹೀಗೆ ಇಟ್ಟುಕೊಂಡಾಗ ಅವಿದ್ಯೆಯು ಆತ್ಮನಿಗೆ ಸೇರಿದ್ದೆಂದೇ ಆಗುವದೇ ಹೊರತು ಆತ್ಮನಲ್ಲಿ ಆರೋಪಿತ ಎಂದಾಗುವದಿಲ್ಲ.

**ಪ್ರಶ್ನೆ :– ಮತ್ತೆ ಅವರೂ ಅಧ್ಯಾರೋಪಾಪವಾದನ್ಯಾಯವನ್ನು ಬಳಸಿರುವರಲ್ಲ! ಆ ಶಬ್ದವನ್ನು ಉಪಯೋಗಿಸಿರುವರಲ್ಲ!**

ಉತ್ತರ :– ಶಬ್ದವನ್ನೇನೋ ಬಳಸುತ್ತಾರೆ. ಆದರೆ ಪರಿಶುದ್ಧ ಸಂಪ್ರದಾಯವನ್ನನುಸರಿಸುವದಿಲ್ಲ.

**ಪ್ರಶ್ನೆ :– ಅದು ಹೇಗೆ ?**

ಉತ್ತರ :– ಅಧ್ಯಾರೋಪ ಎಂದರೆ ಲೋಕಸಿದ್ಧವಾದ ಅವಿದ್ಯೆಯಿಂದ ಕಲ್ಪಿಸಲ್ಪಟ್ಟದ್ದು ಎಂದು ಅರ್ಥ. ಲೋಕಸಿದ್ಧವಾದ ಅವಿದ್ಯೆಗೆ ಉಪಾದಾನಕಾರಣವಾಗಿ ಆತ್ಮನಲ್ಲಿ ಸೇರಿದ ಆತ್ಮನ ಶಕ್ತಿಯಾದ ಅವಿದ್ಯೆ ಎಂದಿಟ್ಟುಕೊಂಡಾಗ ಅದು ಅಧ್ಯಾರೋಪವೆಂದೆನಿಸದೆ ವಸ್ತುನಿಷ್ಠವಾದದ್ದೆಂಬಂತೆಯೇ ಅರ್ಥವನ್ನು ಕೊಡುತ್ತದೆ. ಆದ್ದರಿಂದ ಶಬ್ದಗಳನ್ನು ಬಳಸಿದರೂ ಕೊನೆಯಲ್ಲಿ ಅದ್ವೈತಕ್ಕೆ ಮೇಳಮಾಡಿ ತೋರಿಸಿದರೂ ಸರಿಯಾದ ಸಂಪ್ರದಾಯವನ್ನು ಇವರುಗಳು ಅನುಸರಿಸಿಲ್ಲವೆಂಬುದು ಖಂಡಿತ.

**ಪ್ರಶ್ನೆ :– ಹೀಗೆಯೇ ಇನ್ನೂ ಯಾವ ಯಾವ ಭಾಗಗಳಲ್ಲಿ ಸಂಪ್ರದಾಯಕ್ಕೆ ವ್ಯಾಖ್ಯಾನಕಾರರುಗಳು ಭಿನ್ನರಾಗಿದ್ದಾರೆ ?**

ಉತ್ತರ :– ಈ ಚಿಕ್ಕ ಗ್ರಂಥದಲ್ಲಿ ಅದನ್ನೆಲ್ಲ ತೋರಿಸಲು ಸಾಧ್ಯವಿಲ್ಲ. ಇಲ್ಲಿ ಅದು ಪ್ರಕೃತವೂ ಅಲ್ಲ. ಈ ವಿಷಯದಲ್ಲಿ ಚೆನ್ನಾಗಿ ತಿಳಿಯಬೇಕೆನ್ನುವವರು

ಕಾರ್ಯಾಲಯದಲ್ಲಿ ಪ್ರಕಟವಾದ ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ, ಸುಗಮಾ, ಸೂತ್ರಭಾಷ್ಯಾರ್ಥವಿವೇಚಿನೀ (ಮೂರು ಭಾಗಗಳು), ಪಂಚಪಾದಿಕಾಪ್ರಸ್ಥಾನಂ– ಇವೇ ಮುಂತಾದ ಸಂಸ್ಕೃತಗ್ರಂಥಗಳನ್ನೂ ವೇದಾಂತವಿಚಾರದ ಇತಿಹಾಸ, ಪಂಚಪಾದಿಕೆ, ಶಂಕರಸಿದ್ಧಾಂತ, ಶಂಕರದರ್ಶನ– ಮುಂತಾದ ಕನ್ನಡ ಗ್ರಂಥಗಳನ್ನೂ ಚೆನ್ನಾಗಿ ಅಭ್ಯಸಿಸಬೇಕು.

ಆದ್ದರಿಂದಲೇ ಶಂಕರಸಂಸ್ಮರಣ ಗ್ರಂಥದ ಕೊನೆಯಲ್ಲಿ (ಪು.೬೮) ನಾವು ''ಭಾಷ್ಯಾನುಸಾರವಾಗಿಯೇ ಸಿದ್ಧಾಂತ ಹಾಗೂ ಸಾಧನೆಗಳ ಮರ್ಮವನ್ನು ಅರಿತುಕೊಳ್ಳುವದೇ ಹೆಚ್ಚಿನ ಶ್ರೇಯಸ್ಸಿಗೆ ಕಾರಣವಾಗುತ್ತದೆ'' ಎಂದು ತಿಳಿಸಿರುತ್ತೇವೆ.

——————

## ಪ್ರಕರಣ ಮೂರು

## ವಸ್ತುತಂತ್ರ – ಕರ್ತೃತಂತ್ರ

### (೧) ಅವನತಿಗೆ ಕಾರಣ.

**ಪ್ರಶ್ನೆ :– ಈ ಪರಿಶುದ್ಧ ಸಾಂಪ್ರದಾಯಿಕಬೋಧವು ವ್ಯಾಖ್ಯಾನಕಾರರುಗಳಿಂದ ಈಚೆಗೆ ಬಿಟ್ಟುಹೋಯಿತೆಂದು ತಾವು ಹೇಳಿದಿರಿ. ಇದರಿಂದ ಆತ್ಮತತ್ತ್ವಬೋಧನೆಯ ಕ್ರಮದಲ್ಲಿ ಭಾಷ್ಯಕ್ಕೂ ಪ್ರಚಲಿತವೇದಾಂತಬೋಧನೆಯ ಕ್ರಮಕ್ಕೂ ಏನೇನು ವ್ಯತ್ಯಾಸಗಳಾಗಿವೆ ?**

ಉತ್ತರ :– ಮುಖ್ಯವಾಗಿ ಅಹಂಪ್ರತ್ಯಯಕ್ಕೂ ಸಾಕ್ಷಿಯಾಗಿರುವ ನಮ್ಮೆಲ್ಲರ ಸ್ವರೂಪವೇ ಆಗಿರುವ ಸಾಕ್ಷ್ಯನುಭವವನ್ನು ಮೊಟ್ಟಮೊದಲು ಅಧಿಕಾರಿಗಳಾದ ಮುಮುಕ್ಷುಗಳಿಗೆ ತಿಳಿಸಿಕೊಡುವ ವಿಷಯದಲ್ಲಿಯೇ ತುಂಬಾ ವ್ಯತ್ಯಾಸವಾಗಿದೆ. ಶ್ರೀಶಂಕರರು ಸಾಕ್ಷ್ಯನುಭವವನ್ನು ವಸ್ತುತಂತ್ರವಾಗಿ ಬೋಧನಸಮಕಾಲದಲ್ಲಿಯೇ ಅನುಭವಕ್ಕೆ ಬರುವಂತೆ ಬೋಧಿಸುತ್ತಾರೆ. ಆದರೆ ಈಗಿನ ಬೋಧನಪದ್ಧತಿಯಲ್ಲಿ ಸಾಕ್ಷಿಸ್ವರೂಪವನ್ನು ಭಾವನಾತ್ಮಕವಾಗಿ ಶ್ರದ್ಧೆ, ಯುಕ್ತಿ, ಶ್ರುತಿವಾಕ್ಯ, ಪ್ರಮಾಣಗಳು, ಅನುಮಾನ, ತರ್ಕ – ಮುಂತಾದವುಗಳ ಆಧಾರದಿಂದ ತಿಳಿಸಲೆತ್ನಿಸುತ್ತಾರೆ.

**ಪ್ರಶ್ನೆ :– ಶ್ರೀ ಶಂಕರರೂ ಶ್ರುತಿವಾಕ್ಯತರ್ಕಾದಿಗಳನ್ನು ತೆಗೆದುಕೊಳ್ಳುವದಿಲ್ಲವೆ? ಅಲ್ಲಿಯೂ ಶ್ರದ್ಧಾದಿಗಳಿಗೆ ಅವಕಾಶವಿಲ್ಲವೆ ?**

ಉತ್ತರ :– ಇದೆ. ಶಂಕರರೂ ಶ್ರುತಿವಾಕ್ಯಾದಿಗಳನ್ನು ತೆಗೆದುಕೊಂಡೇ ಹೇಳುತ್ತಾರೆ. ಆದರೆ, ಒಂದು ಮುಖ್ಯ ವ್ಯತ್ಯಾಸವಿದೆ. ಅದೇನೆಂದರೆ ಕೊನೆಯಲ್ಲಿ

ಸಾರ್ವತ್ರಿಕಪೂರ್ಣಾನುಭವದಲ್ಲಿ ಮುಮುಕ್ಷುಗಳ ಚಿತ್ತವನ್ನು ಪರ್ಯವಸಾನಗೊಳಿಸುವದೇ ಶ್ರೀ ಶಂಕರರ ಶೈಲಿಯಾಗಿದೆ. ಈಗಿನ ವೇದಾಂತಿಗಳಲ್ಲಿ ಈ ವಸ್ತುತಂತ್ರ ಬೋಧೆಯೇ ಇಲ್ಲವಾಗಿದೆ. ಎಲ್ಲವೂ ಕರ್ತೃತಂತ್ರದಲ್ಲಿಯೇ ಕೊನೆಗಾಣುತ್ತದೆ.

**(೨) ವಸ್ತುತಂತ್ರ ಹಾಗೂ ಕರ್ತೃತಂತ್ರಗಳಲ್ಲಿರುವ ವ್ಯತ್ಯಾಸ.**

**ಪ್ರಶ್ನೆ :– ವಸ್ತುತಂತ್ರ ಹಾಗೂ ಕರ್ತೃತಂತ್ರ ಎಂದರೇನು ?**

ಉತ್ತರ :– ಕರ್ಮ ಹಾಗೂ ಉಪಾಸನೆಗಳು ಕರ್ತೃತಂತ್ರವಾಗಿರುತ್ತವೆ. ಎಂದರೆ ಮಾಡುವವನಿಗೆ ಅಧೀನವಾಗಿರುತ್ತವೆ. ಮಾಡಬಹುದು, ಬಿಡಬಹುದು ಅಥವಾ ಮತ್ತೊಂದು ಬಗೆಯಿಂದ ಮಾಡಬಹುದು. ಇದೇ ಕರ್ತೃತಂತ್ರದ ಸ್ವಭಾವವು. ವಸ್ತುತಂತ್ರವೆಂದರೆ ವಸ್ತುವು ಹೇಗಿದೆಯೋ ಹಾಗೆಯೇ ಅದನ್ನನುಸರಿಸಿಯೇ ಜ್ಞಾನವನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಏಕೆಂದರೆ ಜ್ಞಾನವು ಅರಿಯುವವನ ಅಧೀನವಲ್ಲ.

**ಪ್ರಶ್ನೆ :– ಇದಕ್ಕೆ ಒಂದು ಉದಾಹರಣೆಯನ್ನು ಹೇಳುವಿರಾ ?**

ಉತ್ತರ :– ಕೇಳಿ, ಸಾಲಗ್ರಾಮವನ್ನು ವಿಷ್ಣುವೆಂದು ಭಾವಿಸಿ ಪೂಜಿಸಿ ಎಂದು ಶಾಸ್ತ್ರದಲ್ಲಿ ಹೇಳಿದರೆ ಭಾವಿಸಬಹುದು, ಬಿಡಬಹುದು, ಬೇರೊಂದು ಬಗೆಯಲ್ಲಿ ಭಾವಿಸಬಹುದು. ಅದು ಭಾವಿಸುವವನ ಅಧೀನವಾಗಿರುತ್ತದೆ, ಇದೇ ಕರ್ತೃತಂತ್ರವು. ಯಾವದಾದರೊಂದು ಪದಾರ್ಥವನ್ನು ಉದಾಹರಣೆಗೆ ಬೆಂಕಿಯನ್ನು ಅರಿತುಕೊಳ್ಳುವಾಗ ಅದು ಬಿಸಿಯಿದೆ, ಪ್ರಕಾಶವುಳ್ಳದ್ದಾಗಿದೆ– ಎಂದು ಹೇಗಿದೆಯೋ ಹಾಗೆಯೇ ಅರಿತುಕೊಳ್ಳಬೇಕೇ ಹೊರತು ಅದು ತಣ್ಣಗಿದೆ, ಅಪ್ರಕಾಶವಾಗಿದೆ ಎಂದು ವಿರುದ್ಧವಾಗಿ ತಿಳಿಯಲಿಕ್ಕೆ ಎಂದಿಗೂ ಸಾಧ್ಯವಿಲ್ಲ. ಹೀಗೆ ವಸ್ತುವನ್ನನುಸರಿಸಿ ತಿಳಿಯುವದೇ ವಸ್ತುತಂತ್ರ ಎನಿಸುತ್ತದೆ.

**ಪ್ರಶ್ನೆ :– ಸರಿ, ಅರ್ಥವಾಯಿತು. ಪ್ರಕೃತವಿಷಯದಲ್ಲಿ ಇದು ಹೇಗೆ ಅನ್ವಯಿಸುತ್ತದೆ?**

ಉತ್ತರ :– ಶ್ರುತಿಗಳಲ್ಲಿ ವಿಧಿಸಿದ ಕರ್ಮ ಹಾಗೂ ಉಪಾಸನಾವಾಕ್ಯಗಳ ಅರ್ಥವನ್ನು ಶ್ರದ್ಧೆ, ಮೀಮಾಂಸಾ ನ್ಯಾಯ– ಮುಂತಾದವುಗಳ ಬಲದಿಂದಲೇ ತಿಳಿದು ಅನುಷ್ಠಾನಮಾಡತಕ್ಕದ್ದು. ಆದರೆ ಆತ್ಮವಿಜ್ಞಾನವನ್ನು ಬೋಧಿಸುವ ಶ್ರುತಿ ವಾಕ್ಯಗಳನ್ನು ಮಾತ್ರ ಆ ಕ್ಷಣದಲ್ಲಿಯೇ ನಮ್ಮ ಅನುಭವಕ್ಕೂ ಹೊಂದಿಸಿಕೊಂಡು ಮೀಮಾಂಸಾ ನೋಡಿ ಗೊತ್ತುಪಡಿಸಬೇಕಾಗಿರುತ್ತದೆ. ಇಲ್ಲಿಯೂ ಶ್ರದ್ಧೆ, ಏಕಾಗ್ರತೆ, ನ್ಯಾಯಾದಿಗಳು ಬೇಕಾಗಿರುತ್ತವೆಯಾದರೂ ಈಗಲೇ ಅನುಭವದಲ್ಲಿ ಪರ್ಯವಸಾನವಾಗುವದೆಂಬುದೊಂದು ವಿಶೇಷ.

**ಪ್ರಶ್ನೆ :– ಶ್ರೀ ಶಂಕರರು ಈ ವಿಷಯವನ್ನು ಹೀಗೆಯೇ ತಮ್ಮ ಭಾಷ್ಯಗಳಲ್ಲಿ ಹೇಳಿರುವರೆ ?**

ಉತ್ತರ :– ಹೇಳಿದ್ದಾರೆ, ಇದೋ ನೋಡಿ, "ನ ಧರ್ಮಜಿಜ್ಞಾಸಾಯಾಮಿವ ಶ್ರುತ್ಯಾದಯ ಏವ ಪ್ರಮಾಣಂ ಬ್ರಹ್ಮಜಿಜ್ಞಾಸಾಯಾಮ್, ಕಿಂತು ಶ್ರುತ್ಯಾದಯೋಽನುಭವಾದಯಶ್ಚ ಯಥಾ ಸಂಭವಮ್ ಇಹ ಪ್ರಮಾಣಮ್ । ಅನುಭವಾವಸಾನತ್ವಾತ್ ಭೂತವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ ॥" (ಸೂ.ಭಾ.೧–೧–೨) ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ವಾಕ್ಯದ ಅರ್ಥವನ್ನು ಹಿಂದೆಯೇ ಕೊಟ್ಟಿದೆ, ಅದು ನಿಮ್ಮ ನೆನಪಿನಲ್ಲಿರಬಹುದು. ಒಟ್ಟಿನಲ್ಲಿ ಧರ್ಮಜಿಜ್ಞಾಸೆಯಲ್ಲಿ ಬರಿಯ ಶ್ರುತ್ಯಾದಿಗಳೇ ಪ್ರಮಾಣವು ; ಆದರೆ ಬ್ರಹ್ಮಜಿಜ್ಞಾಸೆಯಲ್ಲಿ ಶ್ರುತ್ಯಾದಿಗಳೂ ಅನುಭವಾದಿಗಳೂ ಯಥಾ ಸಂಭವವಾಗಿ ಪ್ರಮಾಣವಾಗಿರುತ್ತವೆ ಎಂದು ತಿಳಿಯಬೇಕಲ್ಲದೆ ಈ ಆತ್ಮವಿಜ್ಞಾನವು ಕರ್ತೃತಂತ್ರವಲ್ಲ, ವಸ್ತುತಂತ್ರವೇ ಆಗಿದೆ ಎಂಬುದನ್ನು ಮರೆಯಬಾರದು. ಸೂತ್ರ ಭಾಷ್ಯದಲ್ಲಿ "ಅತಃ ನ ಪುರುಷವ್ಯಾಪಾರತನ್ತ್ರಾ ಬ್ರಹ್ಮವಿದ್ಯಾ । ಕಿಂ ತರ್ಹಿ ಪ್ರತ್ಯಕ್ಷಾದಿ ಪ್ರಮಾಣವಿಷಯವಸ್ತುಜ್ಞಾನವತ್ ವಸ್ತುತನ್ತ್ರಾ ।" (೧–೧–೪) ಎಂದಿದ್ದಾರೆ. ಈ ಬ್ರಹ್ಮವಿದ್ಯೆಯು ಪುರುಷವ್ಯಾಪಾರಕ್ಕೆ ಅಧೀನವಾದುದಲ್ಲ, ಮತ್ತೇನೆಂದರೆ ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಂದ ವಸ್ತುವಿನ ಜ್ಞಾನವಾಗುವಂತೆ ಇದು ವಸ್ತುತಂತ್ರವಾಗಿದೆ– ಎಂದು ಇದರ ಅರ್ಥ.

**ಪ್ರಶ್ನೆ :– ಈಚಿನ ವೇದಾಂತಿಗಳೂ ಸಹ ಅನುಭವ ಎಂಬ ಶಬ್ದವನ್ನು ಉಪಯೋಗಿಸುವರಲ್ಲ !**

ಉತ್ತರ :– ಹೌದು, ಉಪಯೋಗಿಸುವರು. ಆದರೆ ಸಾರ್ವತ್ರಿಕ ಪೂರ್ಣಾನುಭವವನ್ನು ಆಧರಿಸದೆ ಇವರು ನಿರ್ವಿಕಲ್ಪಸಮಾಧಿಯೇ ಮುಂತಾದ ವೈಯುಕ್ತಿಕಾನುಭವಗಳನ್ನು ಪ್ರಮಾಣವಾಗಿ ಹಿಡಿಯುತ್ತಾರೆ. ಆದ್ದರಿಂದ ಅವರ ಪ್ರತಿಪಾದನೆಯು ಸರಿಯಾಗಿರುವದಿಲ್ಲ.

**ಪ್ರಶ್ನೆ :– ಆಗಲಿ, ಆದರೆ ಜ್ಞಾನದಿಂದಲೇ ಮೋಕ್ಷ, ಆತ್ಮನೇ ತಾನೆಂದು ತಿಳಿಯಬೇಕು– ಎಂದು ಈಚಿನವರೂ ಹೇಳುತ್ತಾರಷ್ಟೆ ? ಮತ್ತೆ ಭಾಷ್ಯದ ಬೋಧನೆಗೂ ಈಗಿನವರ ಬೋಧನೆಗೂ ಏನು ವ್ಯತ್ಯಾಸವಾಯಿತು ? ಇದನ್ನು ಚೆನ್ನಾಗಿ ವಿವರಿಸಿ ತಿಳಿಸಬಾರದೆ ?**

ಉತ್ತರ :– ಇದಕ್ಕೆ ಶ್ರುತಿಯಲ್ಲಿ ತಿಳಿಸಿದ ಬೋಧನೆಯ ಪ್ರಕಾರವನ್ನೂ ಆಚಾರ್ಯರು ಅದನ್ನು ವಿವರಿಸುವ ಪ್ರಕಾರವನ್ನೂ ಕೆಲವು ಉದಾಹರಣೆಗಳಿಂದ

ಹೇಳಿ, ಆಮೇಲೆ ಈಗಿನವರು ತಿಳಿಸುವ ಕ್ರಮವನ್ನೂ ಹೇಳಬೇಕಾಗುತ್ತದೆ. ಆದ್ದರಿಂದ ಸಾವಧಾನವಾಗಿ ಈ ಮುಂದೆ ಹೇಳುವ ವಿಷಯಗಳನ್ನು ಏಕಾಗ್ರತೆಯಿಂದ ಕೇಳಿ.

## (೩) ವಸ್ತುತಂತ್ರ ಬೋಧೆ

ಮೊದನೆಯದಾಗಿ ಈ ಸಾಕ್ಷ್ಯನುಭವವು ಸಾಕ್ಷಾತ್ ಅಪರೋಕ್ಷವಾಗಿರುವ ತತ್ತ್ವವು. ಆದ್ದರಿಂದ ಈ ವಿಷಯದ ನಿರೂಪಣೆಯೂ ಸಾಕ್ಷಾತ್ತಾಗಿಯೇ ಅಪರೋಕ್ಷವಾಗಿಯೇ ನೆಡಯಬೇಕು.

**ಪ್ರಶ್ನೆ :– ಸಾಕ್ಷಾತ್ ಎಂದರೇನು ? ಅಪರೋಕ್ಷ ಎಂದರೇನು ?**

ಉತ್ತರ :– ಬೃಹದಾರಣ್ಯಕದಲ್ಲಿ **''ಯದ್ ಬ್ರಹ್ಮಸಾಕ್ಷಾತ್ ಅವ್ಯವಹಿತಂ ಕೇನಚಿತ್ ದ್ರಷ್ಟುಃ ಅಪರೋಕ್ಷಾತ್ ಅಗೌಣಮ್ ನ ಶ್ರೋತ್ರಬ್ರಹ್ಮಾದಿವತ್ ।''** (೩–೪–೧) ಎಂಬುದಾಗಿ ಆಚಾರ್ಯರು ಬರೆದಿದ್ದಾರೆ. ಇದರ ತಾತ್ಪರ್ಯವೇನೆಂದರೆ– ಸಾಕ್ಷಿಸ್ವರೂಪಕ್ಕೂ ತನಗೂ ಯಾವ ದೇಶದ ಅಥವಾ ಕಾಲದ ಅಂತರವು ಇರುವದಿಲ್ಲ. ಹಾಗೂ ಸಾಕ್ಷಿಸ್ವರೂಪವೆಂಬುದು ತಾನೇ ಆಗಿದ್ದಾನೆಯೇ ಹೊರತು ಬೇರೆಯಲ್ಲ. ಇದನ್ನೇ ಇಲ್ಲಿ ನಾವು ಸಾಕ್ಷಾತ್ ಮತ್ತು ಅಪರೋಕ್ಷ ಎಂಬುದಾಗಿ ಹೇಳಿದ್ದೇವೆ.

**ಪ್ರಶ್ನೆ :– ಆಗಲಿ, ಬೋಧವು ಹೀಗೆ ಸಾಕ್ಷಾತ್ ಅಪರೋಕ್ಷವಾಗಿ ನಡೆಯಬೇಕು ಎಂದರೇನರ್ಥ ?**

ಉತ್ತರ :– ಇದೋ ನೋಡಿ. ಹೊರಗಿನ ವಸ್ತುಗಳನ್ನು ಇಂದ್ರಿಯಗಳಿಂದ ಅರಿಯುತ್ತೇವೆ. ಅದರಂತೆ ಯೋಚನೆ, ಭಾವನೆ, ಸುಖದುಃಖಾದಿಗಳನ್ನು ಅಂತಃಕರಣದಿಂದ ಅರಿಯುತ್ತೇವೆ. ಇದರಿಂದ 'ಅರಿಯುವವನು ನಾನು, ಈ ಸುಖದುಃಖಗಳನ್ನು ಅನುಭವಿಸುವವನು ನಾನು' ಎಂದು ತಿಳಿದುಕೊಳ್ಳುತ್ತೇವೆ. ಅಲ್ಲವೆ ?

**ಪ್ರಶ್ನೆ :– ಹೌದು.**

ಉತ್ತರ :– ಕೇಳಿ. ಈಗ ''ನಾನು ಸುಖದುಃಖಾದಿಗಳನ್ನು ಅನುಭವಿಸುವವನು'' ಎನ್ನುವಾಗ ಈ ಕರ್ತೃವಾದ, ಭೋಕ್ತೃವಾದ, ಪ್ರಮಾತೃವಾದ ನಾನು ಎಂಬುದನ್ನು ಏತರಿಂದ ಅರಿಯುತ್ತೇವೆ ? ಎಂಬುದೇ ಇಲ್ಲಿ ಮುಖ್ಯಪ್ರಶ್ನೆ. ಇದನ್ನು ಜಿಜ್ಞಾಸುವು ವಿಚಾರಿಸತೊಡಗಿದನೆಂದರೆ ಅವನಿಗೆ ದೊರಕುವ ಉತ್ತರವೇನೆಂದು ಬಲ್ಲಿರಾ ?

**ಪ್ರಶ್ನೆ :– ಇದೇನು ದೊಡ್ಡಪ್ರಶ್ನೆ ಸ್ವಾಮಿ ? 'ನಾನು' ಎಂದು ನಮಗೆ ಅನಿಸುತ್ತದೆ ಎಂಬುದು ನಮ್ಮೆಲ್ಲರ ಅನುಭವವೇ ಆಗಿದೆಯಲ್ಲವೆ ?**

ಉತ್ತರ :– ಹಾ ! ಸರಿಯಾಗಿ ಹೇಳಿದಿರಿ, ಇದೇ ನಮಗೂ ಬೇಕಾದದ್ದು. ನಾನು ಎಂಬ ಅನಿಸುವಿಕೆಯು– ಅಹಂ ಪ್ರತ್ಯಯವು– ಅನುಭವಗೋಚರವಾಗಿದೆಯೆಂದು ಒಪ್ಪಿ ಕೊಂಡಿರಷ್ಟೆ.

**ಪ್ರಶ್ನೆ :– ಹೌದು, ಇದರಿಂದೇನು ?**

ಉತ್ತರ :– ಹೀಗೆ ಒಪ್ಪಿಕೊಳ್ಳುವಾಗ ಆ ಅನುಭವಸ್ವರೂಪವೇ ನೀವಾಗಿ ನಿಂತು ಈ ಮಾತನ್ನು ಹೇಳುತ್ತಿದ್ದೀರಿ. **ಈ ರೀತಿ ವಿಚಾರಸಮಕಾಲದಲ್ಲಿಯೇ ಈಗಿನ ಅಹಂಪ್ರತ್ಯಯವನ್ನು ಮುಂದೂಡಿ ಅನುಭವಸ್ವರೂಪವೇ ಆಗಿ ನಿಲ್ಲುವ ಈ ಬೋಧನೆಯ ಕ್ರಮಕ್ಕೇ ಸಾಕ್ಷಾತ್ ಅಪರೋಕ್ಷ ಬೋಧನೆ ಎಂದು ಹೆಸರು.**

**ಪ್ರಶ್ನೆ :– ಓಹೋ ಚೆನ್ನಾಗಿದೆ, ಮತ್ತು ಬಲು ಸೂಕ್ಷ್ಮವಾಗಿದೆ. ಹೀಗೆ ಅನುಭವಸ್ವರೂಪವೇ ಆಗಿ ನಿಲ್ಲುವದಕ್ಕೆ ಉಪಯೋಗಿಸುವ ಬೋಧನಕ್ರಮಗಳ ಬಗ್ಗೆ ಇನ್ನಿಷ್ಟು ತಿಳಿಸುವಿರಾ ?**

ಉತ್ತರ :– ಕೇಳಿ. ನಾನೊಂದು ಕನಸನ್ನು ಕಂಡೆನು, ಈಗ ಎಚ್ಚರವಾಯಿತು. ಸುಖವಾಗಿ ನಿದ್ರಿಸಿದೆನು– ಮುಂತಾಗಿ ಹೇಳುವಾಗ ಜನರು ಈಗಿನ ನಾನೆಂಬುದಕ್ಕೂ ಸಾಕ್ಷಿಯಾಗಿರುವ ಅನುಭವಸ್ವರೂಪರಾಗಿಯೇ ಹೇಳುತ್ತಿರುತ್ತಾರೆ. ಆದರೆ ಕೇಳುವಾಗ ಈಗಿನ ನಾನು, ಬುದ್ಧಿ, ಮನಸ್ಸುಗಳನ್ನು ಉಪಯೋಗಿಸುವದರಿಂದ ಈ ನಾನು ಮುಂತಾದವುಗಳಿಂದಲೇ ನಮಗೆ ಕನಸು ನಿದ್ರೆಗಳು ಗೊತ್ತಾಗುವವೆಂಬ ಭ್ರಾಂತಿಗೆ ಪಕ್ಕಾಗಿರುತ್ತಾರೆ.

**ಪ್ರಶ್ನೆ :– ಹಾಗಾದರೆ ನಮಗೆ ಅರಿವಿಲ್ಲದೆಯೇ ನಾವು ಸಾಕ್ಷ್ಯನುಭವವನ್ನು ಉಪಯೋಗಿಸುವೆವೆಂದಾಯಿತಲ್ಲವೆ ?**

ಉತ್ತರ :– ಹೌದು. ಒಂದು ಚಿಕ್ಕ ಮಗುವಿಗೆ 'ಮಗು ! ಇಲ್ಲಿ ನೋಡು' ಎಂದರೆ ಅದು ನೋಡುತ್ತದೆ. ಅದೇ ಮಗುವಿಗೆ 'ನಿನ್ನ ಕಣ್ಣು ಎಲ್ಲಿ?' ಎಂದರೆ ಅದಕ್ಕೆ ಗೊತ್ತಾಗುವದಿಲ್ಲ. ನಾವೇ ನಾಲ್ಕು ದಿನ 'ಇದು ಕಣ್ಣು, ಇದು ಮೂಗು'– ಎಂದು ಅದಕ್ಕೆ ಹೇಳಿಕೊಟ್ಟಾಗ ಆ ಮಗುವಿಗೆ ''ನಾನು ಏತರಿಂದ ನೋಡುವೆನೋ ಅದಕ್ಕೆ ಕಣ್ಣೆನ್ನುವರು'' ಎಂದು ಜ್ಞಾನವಾಗುತ್ತದೆ. ಈ ಜ್ಞಾನಕ್ಕೂ ಮೊದಲು ಅದು ಕಣ್ಣಿನಿಂದಲೇ ನೋಡುತ್ತಿತ್ತಲ್ಲವೆ ? ಹೀಗೆಯೇ ಮೊದಲೇ ಇದ್ದ ಹಾಗೂ ಉಪಯೋಗಿಸುತ್ತಿದ್ದ ಸಾಕ್ಷ್ಯನುಭವವನ್ನು ಈಗಿನ ಅಹಂಪ್ರತ್ಯಯದಿಂದ ಬಿಡಿಸಿ ತಿಳಿಸಿದಾಗ ಆ ಅನುಭವಸ್ವರೂಪವೇ ತಾನಾಗಿ ಜಿಜ್ಞಾಸುವು ಬೋಧಸಮಕಾಲದಲ್ಲಿ ನಿಲ್ಲುತ್ತಾನೆ. ಇದನ್ನೇ ಸಾಕ್ಷಾತ್ ಅಪರೋಕ್ಷವಾಗಿ ಬೋಧಿಸುವ ಪದ್ಧತಿ ಎನ್ನುತ್ತಾರೆ. ಶ್ರೀಶಂಕರರು ಸೂತ್ರಭಾಷ್ಯದ ೨–೧–೧೪ರಲ್ಲಿ ''**ಸ್ವಯಂಪ್ರಸಿದ್ಧಂ ಹಿ ಏತತ್**

ಶಾರೀರಸ್ಯ ಬ್ರಹ್ಮಾತ್ಮತ್ವಮ್ ಉಪದಿಶ್ಯತೇ, ನ ಯತ್ನಾನ್ತರಪ್ರಸಾಧ್ಯಮ್ ।'' ಜೀವರಿಗೆ ತಾನೇ ಸಿದ್ಧವಾಗಿರುವ ಈ ಬ್ರಹ್ಮಾತ್ಮತ್ವವನ್ನು ಶ್ರುತಿಗಳಲ್ಲಿ ಉಪದೇಶಮಾಡಿದೆಯೇ ಹೊರತು ಮತ್ತೊಂದು ಪ್ರಯತ್ನದಿಂದ ಸಾಧಿಸಿಕೊಳ್ಳಬೇಕಾದದ್ದನ್ನು ಹೇಳಿಲ್ಲ– ಎಂಬ ವಾಕ್ಯದಿಂದ ಬ್ರಹ್ಮಸ್ವರೂಪವು ಅರ್ಥಾತ್ ಸಾಕ್ಷಿಸ್ವರೂಪವು ನಮ್ಮೆಲ್ಲರ ಸ್ವಾಭಾವಿಕವಾದ ಪರಮಾರ್ಥಸ್ವರೂಪವಾಗಿದೆ ಎಂಬುದನ್ನು ತಿಳಿಸಿರುತ್ತಾರೆ. ಇದೇ ಸಾಕ್ಷಾತ್ ಅಪರೋಕ್ಷವಾದ ಸ್ವರೂಪವು.

**ಪ್ರಶ್ನೆ :– ಇಂಥ ಉಪದೇಶಪರವಾಕ್ಯಗಳನ್ನು ಆಚಾರ್ಯರು ಎಲ್ಲಿ ಹೇಳಿದ್ದಾರೆ?**

ಉತ್ತರ :– ಪ್ರಸ್ಥಾನತ್ರಯಭಾಷ್ಯಗಳಲ್ಲೆಲ್ಲ ಕಡೆಗೂ ಹೀಗೆಯೇ ಸಾಕ್ಷಾತ್ ಅಪರೋಕ್ಷವಾಗಿ ನೆಲೆನಿಲ್ಲಿಸುವಂತೆಯೇ ಆತ್ಮತತ್ತ್ವ ಬೋಧನೆಯನ್ನು ಮಾಡಿದ್ದಾರೆ. ಇಲ್ಲಿ ಉದಾಹರಣೆಗಾಗಿ ಬೃಹದಾರಣ್ಯಕದ ಒಂದು ವಾಕ್ಯವನ್ನು ನೋಡೋಣ. **''ತಯಾ ಅವಿಪರಿಲುಪ್ತಯಾ ನಿತ್ಯಯಾ ದೃಷ್ಟ್ಯಾ ಸ್ವರೂಪಭೂತಯಾ ಸ್ವಯಂಜ್ಯೋತಿಃಸಮಾಖ್ಯಯಾ ಇತರಾಮ್ ಅನಿತ್ಯಾಂ ದೃಷ್ಟಿಂ ಸ್ವಪ್ನಬುದ್ಧಾನ್ತಯೋರ್ವಾಸನಾಪ್ರತ್ಯಯರೂಪಾಂ ನಿತ್ಯಮೇವ ಪಶ್ಯನ್ ದೃಷ್ಟೇರ್ದ್ರಷ್ಟಾ ಭವತಿ ।''** (೧–೪–೧೦) ಯಾವಾಗಲೂ ಲೋಪವಿಲ್ಲದ ತನ್ನ ಸ್ವರೂಪವೇ ಆಗಿರುವ ಸ್ವಯಂಜ್ಯೋತಿ ಎಂಬ ಹೆಸರಿನ ಆ ನಿತ್ಯದೃಷ್ಟಿಯಿಂದ ಕನಸು ಎಚ್ಚರಗಳಲ್ಲಿ ವಾಸನೆ, ಪ್ರತ್ಯಯರೂಪದಲ್ಲಿರುವ ಅನಿತ್ಯವಾದ ಇನ್ನೊಂದು ದೃಷ್ಟಿಯನ್ನು ಯಾವಾಗಲೂ ಕಾಣುತ್ತಿರುವದರಿಂದ ದೃಷ್ಟಿಯ ದ್ರಷ್ಟೃವೆನಿಸುತ್ತಾನೆ– ಎಂಬುದು ಇದರ ಅರ್ಥವು.

**ಪ್ರಶ್ನೆ :– ಇದರಲ್ಲಿ ನೀವು ಹೇಳಿದ ಸಾಕ್ಷಾದಪರೋಕ್ಷದ ಬೋಧವು ಹೇಗೆ ಬಂದಿದೆ?**

ಉತ್ತರ :– ಕೇಳಿ. ವ್ಯವಹಾರದಲ್ಲಿ 'ನಾನು ನೋಡುತ್ತೇನೆ' ಎಂಬ ದೃಷ್ಟಿಯು ಎಚ್ಚರದಲ್ಲಿ ಪ್ರತ್ಯಯರೂಪವಾಗಿಯೂ– ಎಂದರೆ ಹೊರಗೆ ನಿಜವಾಗಿರುವ ವಸ್ತುಗಳನ್ನು ಅರಿಯುವದೆಂಬ ರೂಪವಾಗಿಯೂ– ಕನಸಿನಲ್ಲಿ ವಾಸನಾರೂಪವಾಗಿಯೂ ಇರುತ್ತದೆ. ಆದರೆ ಎಚ್ಚರದಲ್ಲಿ ಹೀಗೆ, ಕನಸಿನಲ್ಲಿ ಹಾಗೆ ಎಂಬುದು ನಮಗೆ ಗೊತ್ತಾಗುವದಲ್ಲ! ಅದು ಸಾಕ್ಷ್ಯನುಭವದಿಂದಲೇ ನಮಗೆ ಗೊತ್ತಾಗುತ್ತದೆ. ಎಂದರೆ ಸಾಕ್ಷ್ಯನುಭವ ಸ್ವರೂಪನಾಗಿಯೇ ತಾನು ಈ ಎಚ್ಚರವನ್ನೂ ಆ ಸ್ವಪ್ನ ವನ್ನೂ ನೇರಾಗಿ, ಉಂಡೆಯಾಗಿ, ವ್ಯಾಪಿಸಿ ಅರಿಯುತ್ತಾನೆ. ಈ ಅರಿವಿನ ಸ್ವರೂಪವೇ ನಿತ್ಯದೃಷ್ಟಿಯು. ಈ ವಿಚಾರವನ್ನು ಅನುಸರಿಸಿದಾಗ ಈಗಿನ ನಾನು ಎಂಬುದನ್ನು ಕೈಬಿಟ್ಟು ಈಗಿನ ನಾನನ್ನೂ ಕನಸಿನ ನಾನನ್ನೂ ಅವು ಇದ್ದುದನ್ನೂ ಇಲ್ಲದ್ದನ್ನೂ ಬೆಳಗುವ ತಾನಾಗಿ

ಸ್ವಯಂಜ್ಯೋತಿ ಸ್ವರೂಪನಾಗಿಯೇ ಮುಮುಕ್ಷುವು ನಿಲ್ಲುತ್ತಾನೆ. ಇದೇ ಅಭಿಪ್ರಾಯವನ್ನೇ ಪುನಃ ಬೃಹದಾರಣ್ಯಕದಲ್ಲಿ 'ದೃಷ್ಟೇರ್ದ್ರಷ್ಟಾ' (೩–೪–೨) ಎಂಬಲ್ಲಿಯೂ ಐತರೇಯ ಉಪನಿಷತ್ತಿನಲ್ಲಿಯೂ (೧–೩) ವಿವೇಚನೆಮಾಡಿದ್ದಾರೆ.

ಒಟ್ಟಿನಲ್ಲಿ ಬೋಧಸಮಕಾಲದಲ್ಲಿ ಅರ್ಥಾತ್ ವಿವೇಕಸಮಕಾಲದಲ್ಲಿ ಆ ವಸ್ತುವೇ ನಾವಾಗಿ ನಿಲ್ಲುವಂತೆ ಬೋಧಿಸುವ ಕಲೆಯೇ ಇಲ್ಲಿ ಪ್ರಧಾನವಾಗಿದೆ.

**ಪ್ರಶ್ನೆ :– ಮೂಗನ್ನು ಮುಚ್ಚಿದರೆ ಬಾಯಿಯು ತಾನಾಗಿಯೇ ತೆರೆಯುವಂತೆ ಈಗಿನ 'ನಾನು ಇಂಥವನು' ಎಂಬುದರ ಕಡೆ ಹೋಗುವದನ್ನು ಬಿಡಿಸಿದೊಡನೆಯೇ ಇದರ ಹಿಂದಿರುವ ಸಾಕ್ಷಿಸ್ವರೂಪವಾಗಿಯೇ ಜಿಜ್ಞಾಸುವು ನಿಲ್ಲುತ್ತಾನೆಂದಾಯಿತಲ್ಲವೆ?**

ಉತ್ತರ :– ಹೌದು, ಸರಿಯಾಗಿ ಗ್ರಹಿಸಿದಿರಿ. ಇದೇ ಸಾಕ್ಷಾತ್ ಅಪರೋಕ್ಷವಾದ ಬೋಧವು. ಹಾಗೂ ಮೊದಲೇ ಸ್ವರೂಪವೇ ಆಗಿದ್ದ ಆತ್ಮವಸ್ತುವನ್ನನುಸರಿಸಿ ಅದು ಹೇಗಿದೆಯೋ ಹಾಗೆಯೇ ಕಂಡುಕೊಳ್ಳುವ ವಸ್ತುತಂತ್ರದ ಬೋಧನೆಯ ಕ್ರಮವು. ಇದು ಭಾಷ್ಯದಲ್ಲಿ ತುಂಬಿ ತುಳುಕುತ್ತಿದೆ. ಅನುಭಾವಿಗಳಾದ ಸದ್ಗುರುಗಳಿಂದ ಭಾಷ್ಯವನ್ನು ಶ್ರವಣಮಾಡಿದರೆ ಈ ಬೋಧದ ಮಹಿಮೆಯು ಗೋಚರವಾಗುತ್ತದೆ.

**ಪ್ರಶ್ನೆ :– ಸರಿ, ಭಾಷ್ಯಕಾರರ ಬೋಧನೆಯ ಪದ್ಧತಿಯನ್ನು ತಿಳಿಸಿದಿರಿ. ಈಗಿನ ವೇದಾಂತಬೋಧಕರ ಪದ್ಧತಿಯು ಹೇಗಿದೆ ?**

ಉತ್ತರ :– ಕೇಳಿ. ಅದನ್ನೂ ಇಲ್ಲಿ ಸಂಕ್ಷಿಪ್ತವಾಗಿ ತಿಳಿಸುತ್ತೇವೆ. ಆಗ ಅದಕ್ಕೂ ಇದಕ್ಕೂ ವ್ಯತ್ಯಾಸವು ನಿಮಗೇ ಸ್ಪಷ್ಟವಾಗುತ್ತದೆ.

### (೪) ಈಗಿನ ಬೋಧಪದ್ಧತಿ

ಶಾಸ್ತ್ರದಲ್ಲಿ (ಉಪನಿಷತ್ತುಗಳಲ್ಲಿ) ಆತ್ಮಜ್ಞಾನದಿಂದಲೇ ಮೋಕ್ಷ ಎಂದು ಹೇಳಿದೆ. ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರಗಳ ಆಚೆಗೆ ಆತ್ಮ ತತ್ತ್ವವಿದೆ ಎಂದು ಶಾಸ್ತ್ರವು ಹೇಳುತ್ತದೆ. ಹೀಗೆ ಶಾಸ್ತ್ರದಲ್ಲಿ ಶ್ರದ್ಧೆಯನ್ನಿಟ್ಟು ಗುರುಮುಖದಿಂದ ಆತ್ಮನಿದ್ದಾನೆ ಎಂದು ತಿಳಿದುಕೊಂಡರೆ ಅದು ಪರೋಕ್ಷಜ್ಞಾನ ವಾಯಿತು. ಆಮೇಲೆ ಅದೇ ಗುರುಬೋಧದಿಂದ ಎಚ್ಚರದವಸ್ಥೆ, ಅದರ ವಾಸನೆ ಯಾದ ಕನಸಿನವಸ್ಥೆ, ಇವೆರಡರ ಬೀಜವಾದ (ಕಾರಣವಾದ) ನಿದ್ರಾವಸ್ಥೆ, ಈ ನಿದ್ರೆಯೂ ಇರದಿರುವ ಸಮಾಧ್ಯವಸ್ಥೆ(ನಿರ್ವಿಕಲ್ಪ ಸಮಾಧಿ)– ಇವುಗಳನ್ನು ಅನ್ವಯ ವ್ಯತಿರೇಕದಿಂದ ಪರೀಕ್ಷಿಸಿ ಆತ್ಮನು ಎಲ್ಲಾ ಅವಸ್ಥೆ ಗಳಲ್ಲಿರುವವನಾದ್ದರಿಂದ ಆತ್ಮನ ಅನ್ವಯವನ್ನೂ ಅವಸ್ಥೆಗಳು ಒಂದರಲ್ಲಿ ಮತ್ತೊಂದಿರುವದಿಲ್ಲವಾದ್ದರಿಂದ ಅವಸ್ಥೆಗಳ ವ್ಯತಿರೇಕವನ್ನೂ ಕಂಡುಕೊಂಡಾಗ ಅವಸ್ಥೆಗಳು ಅನಿತ್ಯ, ಆತ್ಮನು ನಿತ್ಯ ಎಂಬುದು

ಗೊತ್ತಾಗುವದು. ಒಂದು ದಿನದಲ್ಲಿ ಆಗುವ ಮೂರು ಅವಸ್ಥೆಗಳಲ್ಲೂ ಆತ್ಮನು ಅನುಸ್ಯೂತನಾಗಿರುತ್ತಾನೆ. ಹೀಗೆಯೇ ಹಿಂದೆ ಹೋದ, ಮುಂದೆ ಬರುವ ಎಲ್ಲಾ ದಿನಗಳಲ್ಲಿಯೂ ಉದಯಾಸ್ತಗಳನ್ನು ಹೊಂದದೆ ನಿತ್ಯನಾಗಿರುತ್ತಾನೆ. ಆ ಆತ್ಮನೇ ನಾನಾಗಿದ್ದೇನೆಂದು ತಿಳಿದುಕೊಳ್ಳಬೇಕು, ಮತ್ತು ಅದನ್ನೇ ಗಟ್ಟಿಗೊಳಿಸಬೇಕು. ಇದಕ್ಕಾಗಿ ಶ್ರವಣ, ಮನನ, ನಿದಿಧ್ಯಾಸನಾದಿಸಾಧನಗೆಳನ್ನು ಮಾಡಿ ಕೊನೆಯಲ್ಲಿ ಸಮಾಧಿಯನ್ನು ಪಡೆದಾಗ ಈ ಬೋಧವು ದೃಢವಾಗುವದು. ಇಲ್ಲಿ ಆತ್ಮನಿದ್ದಾನೆಂದು ಅರಿತದ್ದು ಪರೋಕ್ಷಜ್ಞಾನವಾದರೆ ಆ ಆತ್ಮನೇ ನಾನೆಂದು ತಿಳಿದದ್ದು ಅಪರೋಕ್ಷ ಜ್ಞಾನವಾಯಿತು. ಇದರಲ್ಲೂ ಮೊದಲು ಅದೃಢಾಪರೋಕ್ಷಜ್ಞಾನವಾಗಿರುತ್ತದೆ. ಬ್ರಹ್ಮಾಭ್ಯಾಸ, ಸಮಾಧಿ– ಮುಂತಾದವುಗಳ ಮೂಲಕ ಅದು ಕಾಲಾಂತರದಲ್ಲಿ ದೃಢಾಪರೋಕ್ಷಜ್ಞಾನವಾಗುತ್ತದೆ. ಆಗಲೂ ಅವಿದ್ಯೆಯ ಲೇಶವು ಉಳಿದಿರುವ ಜೀವನ್ಮುಕ್ತಾವಸ್ಥೆಯಲ್ಲಿ ಜ್ಞಾನಿಯು ಇರುತ್ತಾನೆ. ದೇಹಪಾತಾನಂತರ ಅವಿದ್ಯಾಲೇಶವು ತೊಲಗಿ ವಿದೇಹ ಕೈಲವ್ಯವಾಗುತ್ತದೆ.

ಈ ಜಾಡಿನಲ್ಲಿ ಈಗಿನವರು ಬೋಧಿಸುತ್ತಿರುತ್ತಾರೆ. ಈ ಬೋಧನೆಯ ಸಮರ್ಥನೆಗೆ ಅನುಮಾನ ತರ್ಕಾದಿಗಳನ್ನೂ ಉಪಯೋಗಿಸುತ್ತಾರೆ. ಆತ್ಮನ ಅಸ್ತಿತ್ವಕ್ಕೆ ಪ್ರಮಾಣಗಳನ್ನು ಹೇಳುವವರೂ ಕೆಲವರಿದ್ದಾರೆ.

### (೫) ಇದರಲ್ಲಿಯ ದೋಷಗಳು

**ಪ್ರಶ್ನೆ :– ಇದರಲ್ಲಿ ದೋಷವೇನು ಸ್ವಾಮಿ ?**

ಉತ್ತರ :– **ಮೊದಲನೆಯದಾಗಿ,** ಆತ್ಮಜ್ಞಾನದಲ್ಲಿ ಮೊದಲು ಪರೋಕ್ಷ ಆಮೇಲೆ ಅಪರೋಕ್ಷ ಎಂಬುದಿಲ್ಲ. **''ಯಃ ಸಾಕ್ಷಾದಪರೋಕ್ಷಾತ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ''** (ಬೃ.೩–೪–೧) ಎಂದಿರುವದರಿಂದ ಹೊರಗಿನ ವಸ್ತುಜ್ಞಾನದಲ್ಲಿ ಹೇಗೆ ಪರೋಕ್ಷ ಅಪರೋಕ್ಷಗಳೆಂಬ ಭೇದವಿರುವದೋ ಉದಾಹರಣೆಗೆ ಇಂಥ ದೇಶದಲ್ಲಿ ಇಂಥದೊಂದು ದೊಡ್ಡ ಕಟ್ಟಡವಿದೆ ಎಂದು ವಿಶ್ವಸನೀಯಪ್ರಮಾಣದಿಂದ ತಿಳಿದುಬಂದರೆ ಆ ಕಟ್ಟಡದ ಪರೋಕ್ಷಜ್ಞಾನವಾದಂತಾಯಿತು ; ಅಲ್ಲಿಗೇ ಹೋಗಿ ಅದನ್ನು ಪ್ರತ್ಯಕ್ಷ ನೋಡಿದಾಗ ಅಪರೋಕ್ಷಜ್ಞಾನವಾಯಿತು ; ಹೀಗೆ ಕಾಲದೇಶಗಳ ಅಂತರವುಳ್ಳ ವಸ್ತುವಿನಲ್ಲಿ ಈ ಭೇದವಿರುವದೋ ಹಾಗೆ ಈ ಆತ್ಮತತ್ತ್ವದಲ್ಲಿ ಭೇದವಿಲ್ಲ. ಅಪರೋಕ್ಷದಲ್ಲಿ ದೃಢ, ಅದೃಢ – ಎಂಬುದಂತೂ ಇಲ್ಲವೇ ಇಲ್ಲ.

**ಎರಡನೆಯದಾಗಿ,** ಆತ್ಮಜ್ಞಾನಕ್ಕಾಗಿ ಉಪಯೋಗಿಸಿದ ಅವಸ್ಥೆಗಳ ವಿವೇಕದಲ್ಲಿ 'ಎಲ್ಲಾ ಅವಸ್ಥೆಗಳಲ್ಲಿಯೂ ಆತ್ಮನಿದ್ದಾನೆ' ಎಂಬ ಗ್ರಹಿಕೆಯು ಅವಸ್ಥೆಗಳೊಳಗೆ ಆತ್ಮನಿದಾನೆಂಬ ಭಾವನೆಯನ್ನು ಉಂಟುಮಾಡುತ್ತದೆ. ಇದಲ್ಲದೆ ಸಮಾಧಿಯೇ

ಮುಂತಾದ ವೈಯುಕ್ತಿಕಾನುಭವವನ್ನು ತೆಗೆದುಕೊಂಡಿರುವದರಿಂದ ಆಚಾರ್ಯರು ನಿರೂಪಿಸುವ ಸಾರ್ವತ್ರಿಕ ಪೂರ್ಣಾನುಭವದ ಆಧಾರವನ್ನು ಕೈಬಿಟ್ಟಂತಾಗಿರುತ್ತದೆ.

ಮೂರನೆಯದಾಗಿ, ಆತ್ಮತತ್ತ್ವಜ್ಞಾನವು ಕೇವಲ ಶ್ರದ್ಧಾಮಾತ್ರಗಮ್ಯವಲ್ಲ, ಸಾರ್ವತ್ರಿಕಾನುಭವದ ಆಧಾರದಿಂದ ಸಿದ್ಧವಾಗತಕ್ಕದ್ದು. ಇಲ್ಲಿಯಾದರೋ ಶಾಸ್ತ್ರದ ಮೇಲಿನ ಕೇವಲ ಶ್ರದ್ಧೆಯಿಂದ ಆತ್ಮನಿದ್ದಾನೆ ಎಂದು ಇಟ್ಟುಕೊಂಡು ವಿಚಾರಕ್ಕೆ ಹೊರಟಂತಾಗಿರುತ್ತದೆ. ''ತಾನು ಇರುವೆನೆಂಬುದನ್ನು ಯಾವನೂ ನಿರಾಕರಿಸಲು ಶಕ್ಯ ವಿಲ್ಲ'' ಎಂಬ ಸಾರ್ವತ್ರಿಕಾನುಭವದ ಆಧಾರದಿಂದ ಆತ್ಮಸ್ವರೂಪನಿರ್ಧಾರಣೆಗೆ ಹೊರಡುವ ಶ್ರೀ ಶಂಕರಚಾರ್ಯರ ಪ್ರತಿಪಾದನೆಗೂ ಇದಕ್ಕೂ ತುಂಬಾ ಅಂತರ ಬಂದಂತಾಯಿತು. **''ಆತ್ಮನಶ್ಚ ಪ್ರತ್ಯಾಖ್ಯಾತುಮ್ ಅಶಕ್ಯತ್ವಾತ್ । ಯ ಏವ ನಿರಾಕರ್ತಾ ತಸ್ಯೈವ ಆತ್ಮತ್ವಾತ್ ।''** (ಸೂ.ಭಾ.೧-೧-೪) ಎಂಬಿವೇ ಮುಂತಾದ ಆಚಾರ್ಯರ ವಾಕ್ಯಗಳನ್ನು ಇಲ್ಲಿ ಗಮನಿಸಬೇಕು.

ನಾಲ್ಕನೆಯದಾಗಿ, ಆತ್ಮನನ್ನರಿಯುವದೆಂದರೆ ಯಾವದೋ ವಿಷಯವನ್ನು ಅರಿತಂತಲ್ಲ ; ಆತ್ಮನನ್ನರಿಯುವದೆಂಬ ಮಾತಿಗೆ ಇಲ್ಲಿ ಆತ್ಮನಾಗಿ ನಿಲ್ಲುವದೆಂದೇ ಅರ್ಥವಿದೆ. ಇದು ತಿಳಿಯತಕ್ಕದ್ದಲ್ಲ; ಉಳಿಯತಕ್ಕದ್ದು. ಈ ಆತ್ಮನಾಗಿ ಉಳಿಯುವಿಕೆ ಯನ್ನೇ 'ಆತ್ಮಜ್ಞಾನ' ಎಂದು ಕರೆದಿದೆ, ಎಂಬ ರಹಸ್ಯವೇ ಈಗಿನ ವೇದಾಂತಿಗಳಿಗೆ ತಿಳಿಯದಾಗಿದೆ.

**ಪ್ರಶ್ನೆ :– ಆಚಾರ್ಯರು, ಆತ್ಮಜ್ಞಾನವೆಂದರೆ ಆತ್ಮನಾಗಿ ನಿಲ್ಲುವದೇ ಹೊರತು ಆತ್ಮನನ್ನರಿಯುವದಲ್ಲ, ವಿಷಯೀಕರಿಸುವದಲ್ಲ ಎಂದು ಎಲ್ಲಿಯಾದರೂ ಹೇಳಿದ್ದಾರೆಯೆ ?**

ಉತ್ತರ :– ಹೇಳಿದ್ದಾರೆ. ಬೃಹದಾರಣ್ಯಕದಲ್ಲಿ **''ವಿಜ್ಞಾತಾರಮ್ ಅರೇ ಕೇನ ವಿಜಾನೀಯಾತ್''** (೨-೪-೧೪) ಎಂಬ ವಾಕ್ಯವನ್ನು ವಿವರಿಸುವಾಗ ಈ ಮಾತನ್ನು ಬರೆದಿದ್ದಾರೆ. **''ಯತ್ರಾಪಿ ಅವಿದ್ಯಾವಸ್ಥಾಯಾಮ್ ಅನ್ಯೋಽನ್ಯಂ ಪಶ್ಯತಿ, ತತ್ರಾಪಿ ಯೇನೇದಂ ಸರ್ವಂ ವಿಜಾನಾತಿ ತಂ ಕೇನ ವಿಜಾನೀಯಾತ್ ? ಯೇನ ವಿಜಾನಾತಿ ತಸ್ಯ ಕರಣಸ್ಯ ವಿಜ್ಞೇಯೇ ವಿನಿಯುಕ್ತತ್ವಾತ್ । ಜ್ಞಾತುಶ್ಚ ಜ್ಞೇಯ ಏವ ಹಿ ಜಿಜ್ಞಾಸಾ ನಾತ್ಮನಿ । ನ ಚ ಅಗ್ನೇರಿವ ಆತ್ಮಾ ಆತ್ಮನೋ ವಿಷಯಃ । ನ ಚ ಅವಿಷಯೇ ಜ್ಞಾತುರ್ಜ್ಞಾನಮ್ ಉಪಪದ್ಯತೇ । ತಸ್ಮಾತ್ ಯೇನೇದಂ ಸರ್ವಂ ವಿಜಾನಾತಿ ತಂ ವಿಜ್ಞಾತಾರಂ ಕೇನ ಕರಣೇನ ಕೋಽನ್ಯೋ ವಿಜಾನೀಯಾತ್ ?''** । ಇದರ ತಾತ್ಪರ್ಯವೇನೆಂದರೆ ಅವಿದ್ಯೆಯಿಂದ ಕೂಡಿದ ವ್ಯವಹಾರದೃಷ್ಟಿಯಲ್ಲಿ ಅರಿಯುವವನಿಗೆ ಇನ್ನೊಂದು ವಸ್ತುವಿನ ವಿಷಯಕ್ಕೆ ಜಿಜ್ಞಾಸೆಯುಂಟಾಗುವದೇ ಹೊರತು ತನ್ನನ್ನು ತಾನು

ಅರಿಯಬೇಕೆಂಬ ಬಯಕೆಯಾಗುವದಿಲ್ಲ. ಹೇಗೆ ಅಗ್ನಿಯು ತನ್ನನ್ನು ತಾನು ಸುಟ್ಟುಕೊಳ್ಳಲಾರದೋ ಹಾಗೆ ಮಿಕ್ಕ ಎಲ್ಲವನ್ನೂ ಅರಿಯುವ ತನ್ನನ್ನು ಅರಿಯಲು ಯಾರು ಇಚ್ಛಿಸುವರು ? ಹಾಗೂ ಏತರಿಂದ ಅರಿಯಲು ಸಾಧ್ಯ ? ಏಕೆಂದರೆ ಅರಿಯುವ ಕರಣವು ಅರಿಯಲ್ಪಡುವ ವಸ್ತುವಿನ ವಿಷಯದಲ್ಲಿಯೇ ವಿನಿಯೋಗವಾಗುವದೇ ಹೊರತು ಅರಿಯುವವನ ಬಗ್ಗೆ ಉಪಯೋಗಿಸುವದಕ್ಕಾಗಲಾರದಷ್ಟೆ.

**ಪ್ರಶ್ನೆ :– ಹೌದು, ಸ್ವಾಮಿ. 'ನಾನು' ಎಂಬುವನು ಕರಣಗಳಿಂದ ಮುಂದಿನ ವಿಷಯಗಳನ್ನು ತಿಳಿಯಬಲ್ಲನೇ ಹೊರತು ಆ ಕರಣಗಳಿಗೆ ತಾನೇ ವಿಷಯನಾಗಲಾರ ನೆಂಬುದಲ್ಲವೆ, ಇಲ್ಲಿ ತಾತ್ಪರ್ಯ ?**

ಉತ್ತರ :– ನಿಜ, ನಿಜ, ಸರಿಯಾಗಿ ಗ್ರಹಿಸಿದಿರಿ. ಸ್ವಾಭಾವಿಕವಾದ ಅವಿದ್ಯಾವಸ್ಥೆಯಲ್ಲಿಯ ನಾನು ಎಂಬುದೇ ಹೀಗೆ ವಿಷಯವಾಗದು ಎಂದಮೇಲೆ ಇನ್ನು ಪರಮಾರ್ಥದೃಷ್ಟಿಯಿಂದ ಎಂದರೆ ವಿವೇಕಿಗಳ, ಜ್ಞಾನಿಗಳ ದೃಷ್ಟಿಯಿಂದ ತನಗೆರಡನೆ ಯದಿಲ್ಲದ, ಕೇವಲ ತಾನೇ ತಾನಾದ ಸಾಕ್ಷಿಸ್ವರೂಪಚೈತನ್ಯಮಾತ್ರವೇ ಇರತಕ್ಕದ್ದೆಂದು ಗೊತ್ತಾಗಿರುವ ಆ ಕೇವಲಾತ್ಮಸ್ವರೂಪವನ್ನು ಎಂದರೆ ಈ ವ್ಯವಹಾರದೆಶೆಯ ನಾನು ಎಂಬುದರ ತೋರುವಿಕೆ, ಅಡಗುವಿಕೆಯನ್ನೂ ಬೆಳಗುವ ಅರಿವಿನ ಸ್ವರೂಪವನ್ನು ಯಾವನು ಏತರಿಂದ ಅರಿತಾನು ? ಕೇವಲ ಅದ್ವಯವಾದ ತತ್ತ್ವದಲ್ಲಿ ಅರಿಯುವ ಕರಣ, ಅರಿಯುವವನು– ಎಂಬ ಭೇದವಾದರೂ ಹೇಗೆ ಇದ್ದೀತು ? ಈ ಅಭಿಪ್ರಾಯ ವನ್ನೇ ಆಚಾರ್ಯರು **''ಯದಾ ತು ಪುನಃ ಪರಮಾರ್ಥವಿವೇಕಿನೋ ಬ್ರಹ್ಮವಿದೋ ವಿಜ್ಞಾತೈವ ಕೇವಲೋऽದ್ವಯೋ ವರ್ತತೇ, ತಂ ವಿಜ್ಞಾತಾರಮ್ ಅರೇ ಕೇನ ವಿಜಾನೀಯಾತ್ ಇತಿ।''** ಎಂಬ ಮಾತಿನಿಂದ ತಿಳಿಸಿದ್ದಾರೆ.

**ಪ್ರಶ್ನೆ :– ಸರಿ, ಸ್ವಾಮಿ. ಅಂತೂ ವ್ಯವಹಾರದ ಅವಿದ್ಯಾದೃಷ್ಟಿಯಲ್ಲೂ ಪರಮಾರ್ಥತತ್ತ್ವಜ್ಞರ ವಿದ್ಯಾದೃಷ್ಟಿಯಲ್ಲೂ ಆತ್ಮನು ವಿಷಯನಾಗುವದಿಲ್ಲ, ಅವನನ್ನರಿಯಲು ಸಾಧ್ಯವೇ ಇಲ್ಲ, ಎಂದಾಯಿತಲ್ಲ ?**

ಉತ್ತರ :– ಹೌದು, ಇದೇ ಮಾತನ್ನೇ ಬೃಹದಾರಣ್ಯಕದಲ್ಲಿ **''ನ ದೃಷ್ಟೇಃ ದ್ರಷ್ಟಾರಂ ಪಶ್ಯೇಃ''** (೩–೪–೨) ಎಂಬಲ್ಲಿ **''ಯತ್ಪುನರುಕ್ತಂ ತಮಾತ್ಮಾನಂ ಘಟಾದಿವತ್ ವಿಷಯೀ ಕುರು ಇತಿ, ತದಶಕ್ಯತ್ವಾತ್ ನ ಕ್ರಿಯತೇ । ಕಸ್ಮಾತ್ ಪುನಸ್ತದಶಕ್ಯಮಿತಿ ? ಆಹ । ವಸ್ತುಸ್ವಾಭಾವ್ಯಾತ್ । ಕಿಂ ಪುನಸ್ತದ್ವಸ್ತುಸ್ವಾಭಾವ್ಯಮ್ ? ದೃಷ್ಟ್ಯಾದಿ ದ್ರಷ್ಟೃತ್ವಮ್ । ದೃಷ್ಟೇರ್ದ್ರಷ್ಟಾ ಹಿ ಆತ್ಮಾ।''** ಎಂದಿದ್ದಾರೆ. ಇದರ ಸಂದರ್ಭವೇನೆಂದರೆ– ಉಷಸ್ತಚಾಕ್ರಾಯಣನೆಂಬುವನು ಯಾಜ್ಞವಲ್ಕ್ಯರನ್ನು ಕುರಿತು **''ಸಾಕ್ಷಾತ್ ಅಪರೋಕ್ಷನಾದ ಆತ್ಮನನ್ನು ''ಇದು ಎತ್ತು ಇದು ಕುದುರೆ''– ಎಂಬಂತೆ**

**ಸ್ಪಷ್ಟವಾಗಿ ತೋರಿಸು''** ಎಂದು ಕೇಳುತ್ತಾನೆ. ಅದಕ್ಕೆ ಯಾಜ್ಞವಲ್ಕ್ಯರು **''ದೃಷ್ಟಿಯ ದ್ರಷ್ಟೃವನ್ನು ನೀನು ನೋಡಲಾರೆ''** ಎಂದು ಉತ್ತರಿಸಿದ್ದಾರೆ. ಈ ಮಾತನ್ನು ವಿವರಿಸುವಾಗಲೇ ಆಚಾರ್ಯರು ಮೇಲಿನ ವಾಕ್ಯಗಳನ್ನು ಬರೆದಿದ್ದಾರೆ. ಹೊರಗಿನ ಘಟಾದಿಗಳಂತೆ ಆತ್ಮನನ್ನು ವಿಷಯೀಕರಿಸಿ ತೋರಿಸು ಎಂದು ನೀನು ಕೇಳುತ್ತಿರುವಿಯಷ್ಟೆ. ಅದನ್ನು ಮಾಡಲು ಶಕ್ಯವಿಲ್ಲ. ಏಕೆಂದರೆ ಆ ವಸ್ತುವಿನ ಸ್ವಭಾವವೇ ಹಾಗಿದೆ. ಅದೇನು ವಸ್ತುಸ್ವಭಾವವು ? ಎಂದರೆ ನೋಡುವದೇ ಮುಂತಾದದ್ದನ್ನು ನೋಡುವವನು ಈ ಆತ್ಮನು. ಅರ್ಥಾತ್ ನೋಡುತ್ತೇನೆ, ಕೇಳುತ್ತೇನೆ, ಅರಿಯುತ್ತೇನೆ– ಎಂಬ ಈ ಅಹಂಪ್ರತ್ಯಯವನ್ನೇ ಬೆಳಗುವವನಾದ್ದರಿಂದ ಅಂಥ ಆತ್ಮನನ್ನು ಹೇಗೂ ವಿಷಯೀಕರಿಸಲು ಸಾಧ್ಯವೇ ಇಲ್ಲ– ಎಂಬುದು ಇದರ ತಾತ್ಪರ್ಯ.

**ಪ್ರಶ್ನೆ :– ಒಟ್ಟಿನಲ್ಲಿ ಆತ್ಮನನ್ನು ಅರಿಯುವದೆಂದರೆ ಆತ್ಮನನ್ನು ವಿಷಯೀಕರಿಸುವದಲ್ಲ– ಎಂಬುದು ಇಲ್ಲಿಯವರೆಗಿನ ಅಭಿಪ್ರಾಯ ತಾನೆ ?**

ಉತ್ತರ :– ಹೌದು.

**ಪ್ರಶ್ನೆ :– ಹಾಗಾದರೆ ಆತ್ಮನನ್ನರಿಯಬೇಕೆಂಬ ಮಾತಿಗೆ ಅರ್ಥವೇನು ?**

ಉತ್ತರ :– ಹಾ ! ಅದೇ ಇಲ್ಲಿ ರಹಸ್ಯವಾದದ್ದು. ಈ ರಹಸ್ಯವೇ ಈಗ ಬಹಳ ಜನರಿಗೆ ತಿಳಿಯದು ಎಂದು ನಾವು ಹೇಳಿದ್ದು. ಆದರೆ ಆಚಾರ್ಯರು ಈ ರಹಸ್ಯವನ್ನು ತಮ್ಮ ಭಾಷ್ಯಗಳಲ್ಲಿ ಹೊರಗೆಡಹಿ ಮುಮುಕ್ಷುಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಇದೋ ನೋಡಿ ಈ ಗೀತಾಭಾಷ್ಯದ ವಾಕ್ಯವನ್ನು ! **''ತಸ್ಮಾತ್ ಅವಿದ್ಯಾಧ್ಯಾರೋಪಿತ ನಿರಾಕರಣಮಾತ್ರಂ ಬ್ರಹ್ಮಣಿ ಕರ್ತವ್ಯಂ । ನ ತು ಬ್ರಹ್ಮವಿಜ್ಞಾನೇ ಯತ್ನಃ''** (೧೮–೫೦) ಎಂದಿದ್ದಾರೆ. ಅವಿದ್ಯೆಯಿಂದ ಅಧ್ಯಾರೋಪಿತವಾಗಿರುವ ಅನಾತ್ಮಗಳನ್ನು ನಿರಾಕರಿಸುವದೊಂದನ್ನೇ ಮಾಡತಕ್ಕದ್ದೇ ಹೊರತು ಬ್ರಹ್ಮವನ್ನು ಅರಿಯುವದಕ್ಕೆ ಯತ್ನಮಾಡಬೇಕಾದ್ದಿಲ್ಲ– ಎಂಬುದು ಇದರ ತಾತ್ಪರ್ಯ. ಅಹಂಪ್ರತ್ಯಯದವರೆಗಿನ ಅನಾತ್ಮಗಳೆಲ್ಲವುಗಳನ್ನೂ ಅಲ್ಲಗಳೆದು ವಿವೇಕದಿಂದ ಕೈ ಬಿಟ್ಟಾಗ ಸಹಜವಾಗಿಯೇ ತಾನು ಆತ್ಮನಾಗಿ ನಿಲ್ಲುತ್ತಾನೆಯೇ ಹೊರತು ಈಗಿನ 'ನಾನು' ಎಂಬುದನ್ನಿಟ್ಟುಕೊಂಡು ಬ್ರಹ್ಮವನ್ನು ಅರಿಯಲು ಹೊರಡುವದಲ್ಲ– ಎಂದಾಯಿತು. ಆದ್ದರಿಂದಲೇ ಆತ್ಮನನ್ನರಿಯುವದೆಂದರೆ ಆತ್ಮನಾಗಿ ನಿಲ್ಲುವದು ; ಅನಾತ್ಮದಲ್ಲಿ ಆತ್ಮಬುದ್ಧಿಯನ್ನು ಬಿಡುವದು ಎಂದರ್ಥವೇ ಹೊರತು ವಿಷಯಗಳನ್ನರಿತಂತೆ ಅರಿಯುವದಲ್ಲ. **''ಬ್ರಹ್ಮವಿದಾಪ್ನೋತಿ ಪರಂ''** (ತೈ. ೨–೧) ಎಂಬುದಕ್ಕೆ ಇದೇ ತಾತ್ಪರ್ಯ. ಬ್ರಹ್ಮವನ್ನರಿತವನು ಪರವನ್ನು ಹೊಂದುತ್ತಾನೆ, ಎಂದರೆ ಬ್ರಹ್ಮವೇ ಆಗುತ್ತಾನೆ– ಎಂದದ್ದರಿಂದ ಬ್ರಹ್ಮವನ್ನರಿಯುವದೆಂದರೆ ಬ್ರಹ್ಮವೇ ತಾನಾಗಿ – ತಾನೇ ತಾನಾಗಿ – ನಿಲ್ಲುವದೆಂದೇ ಅರ್ಥ.

ಈಗ ಮೊದಲಿನ ವಿಷಯಕ್ಕೆ ಬರೋಣ. ಐದನೆಯದಾಗಿ, ಕಾಲಭಾವನೆ ದೇಶಭಾವನೆಗಳು ಪರಮಾರ್ಥವಾಗಿರುವಂತೆ ಈಗಿನವರು ಭಾವಿಸುತ್ತಾರೆ. ಆದರೆ ಕಾಲ ಹಾಗೂ ದೇಶ ಎಂಬ ಭಾವಗಳು ಜಾಗ್ರತ್ತಿನಲ್ಲಿ ಒಂದು ಬಗೆಯಾಗಿಯೂ ಸ್ವಪ್ನ ದಲ್ಲಿ ಇನ್ನೊಂದು ಬಗೆಯಾಗಿಯೂ ತೋರಿಕೊಳ್ಳುತ್ತವೆ. ಗಾಢನಿದ್ರೆಯಲ್ಲಿ ಕಾಲದೇಶ ಗಳ ತೋರಿಕೆಯೇ ಇರುವದಿಲ್ಲ. ಇದು ಸಾರ್ವತ್ರಿಕಾನುಭವದಿಂದ ನೋಡಿದಾಗ ಸ್ಪಷ್ಟವಾಗಿ ಗೋಚರವಾಗುತ್ತದೆ. ಈ ಸಾರ್ವತ್ರಿಕಾನುಭವವನ್ನೇ ಕೈಬಿಟ್ಟು ವ್ಯವಹಾರ ದಲ್ಲಿ ಜನರು ಒಂದು ದಿನದಲ್ಲಿ ಮೂರು ಅವಸ್ಥೆಗಳು ಎಂದು ತಿಳಿದುಕೊಳ್ಳುವ ದೃಷ್ಟಿಯನ್ನೇ ಇಟ್ಟುಕೊಂಡು ಕಾಲದಲ್ಲಿ ಅವಸ್ಥೆಗಳೂ ಅವಸ್ಥೆಯಲ್ಲಿ ಆತ್ಮನೂ ಇದ್ದು ಆತ್ಮನು ನಿತ್ಯನಾಗಿದ್ದಾನೆ ಎಂದು ಉಪದೇಶಿಸುವದು ಎಂದಿಗೂ ತತ್ತ್ವವಿವೇಕವೆನಿಸ ಲಾರದು. ಆಗ ಆತ್ಮನು ಕಾಲದಲ್ಲಿರುವವನೆಂದಾಗಿ ಆತ್ಮನಂತೆ ಕಾಲವೂ ಪರಮಾರ್ಥ ಸತ್ಯವೆಂದಾಗುತ್ತದೆ. ಶ್ರೀಶಂಕರರು ಆತ್ಮನು ಕಾಲದೇಶಗಳಿಗೆ ಅತೀತನು, ಆತ್ಮನಲ್ಲಿ ಕಾಲದೇಶಗಳ ಅಪೇಕ್ಷೆ ಇರುವದಿಲ್ಲ ಎಂದು ಸ್ಪಷ್ಟವಾಗಿ ಭಾಷ್ಯಗಳಲ್ಲಿ ಬರೆದಿದ್ದಾರೆ. ಹೀಗೆ ಸಾರ್ವತ್ರಿಕಾನುಭವ ಹಾಗೂ ಭಾಷ್ಯಾಭಿಪ್ರಾಯಗಳಿಗೆ ಭಿನ್ನವಾಗಿ ಬೋಧಿಸುವ ಈ ಪದ್ಧತಿಯು ಸಾಂಪ್ರದಾಯಿಕವೆನಿಸಲಾರದು.

**ಪ್ರಶ್ನೆ :– ಈ ಕಾಲದೇಶಗಳ ವಿಚಾರವನ್ನು ಶ್ರೀಶಂಕರರು ಎಲ್ಲಿ ತೆಗೆದು ಕೊಂಡಿದ್ದಾರೆ?**

ಉತ್ತರ :– **ಏತೇನ ದಿಕ್ಕಾಲಮನಃಪರಮಾಣ್ವಾದೀನಾಂ ಕಾರ್ಯತ್ವಂ ವ್ಯಾಖ್ಯಾತಮ್''** (ಸೂ.ಭಾ.೨–೩–೭). **''ಅಸ್ಯ ಜಗತೋ ನಾಮರೂಪಾಭ್ಯಾಂ ವ್ಯಾಕೃತಸ್ಯ ಅನೇಕ ಕರ್ತೃಭೋಕ್ತೃ ಸಂಯುಕ್ತಸ್ಯ ಪ್ರತಿನಿಯತದೇಶಕಾಲನಿಮಿತ್ತ ಕ್ರಿಯಾಫಲಾ ಶ್ರಯಸ್ಯ.....''** (ಸೂ. ೨) **''ಯದಾ ತು ಸರ್ವದಿಕ್ಕಾಲಾದಿವಿವಿದಿಷಾ ನಿವರ್ತಿತಾ ಸ್ಯಾತ್ ಸರ್ವೋಪಾಧಿನಿರಾಕರಣದ್ವಾರೇಣ.....''** (ಬೃ.ಭಾ.೨–೩–೬). **''ಸರ್ವಭಾವಾನಾಂ ಚ ತೇನಾವಿಭಕ್ತದೇಶಕಾಲತ್ವಾತ್ ಕಾಲಾಕಾಶಾದಿ ಕಾರಣತ್ವಾತ್''......** (ತೈ.ಭಾ. ೨–೧) ಈ ನಾಲ್ಕು ವಾಕ್ಯಗಳಲ್ಲಿ ಆಚಾರ್ಯರು ದೇಶಕಾಲಗಳ ಬಗ್ಗೆ ಬರೆದಿದ್ದಾರೆ.

**ಪ್ರಶ್ನೆ :– ಇವುಗಳ ತಾತ್ಪರ್ಯವೇನು ?**

ಉತ್ತರ :– ಮೊದಲಿನ ವಾಕ್ಯದಲ್ಲಿ ''ದೇಶ, ಕಾಲ, ಮನಸ್ಸು, ಪರಮಾಣು– ಮುಂತಾದವುಗಳೂ ಕಾರ್ಯವೆಂದು ತಿಳಿಸಿದಂತೆ ಆಯಿತು'' ಎಂದಿದ್ದಾರೆ. ಎರಡನೆಯ ವಾಕ್ಯದಲ್ಲಿ ''ಈ ಜಗತ್ತಿಗೆ ಎಂದರೆ ನಾಮರೂಪಗಳಿಂದ ವಿಂಗಡವಾಗಿರುವ, ಅನೇಕ ಕರ್ತೃಭೋಕ್ತೃಗಳಿಂದ ಕೂಡಿರುವ, ಗೊತ್ತಾದ ದೇಶ ಕಾಲ ನಿಮಿತ್ತಕ್ರಿಯಾಫಲಗಳಿಂದ ಕೂಡಿರುವ..... .....'' ಎಂದಿದ್ದಾರೆ. ಮೂರನೆಯ ವಾಕ್ಯದಲ್ಲಿ ''ಯಾವಾಗ

ದೇಶಕಾಲಾದಿ ಎಲ್ಲ ವಿಧದ ಜಿಜ್ಞಾಸೆಯನ್ನೂ ಎಲ್ಲಾ ಉಪಾಧಿಗಳನ್ನೂ ತಳ್ಳಿಹಾಕುವದರ ಮೂಲಕ ತೊಲಗಿಸಿದಂತಾಗಿರುವದೋ....'' ಎಂದಿದ್ದಾರೆ. ನಾಲ್ಕನೆಯ ವಾಕ್ಯದಲ್ಲಿ ''ಎಲ್ಲ ಪದಾರ್ಥಗಳೂ ಕಾಲದೇಶಾದಿಗಳೂ ಆತ್ಮನಿಗಿಂತ ಬೇರೆಯಾಗಿರುವದೇ ಇಲ್ಲವಾದ್ದರಿಂದಲೂ ಆತ್ಮನು ದೇಶಕಾಲಾದಿಗಳಿಗೂ ಕಾರಣನಾಗಿರುವದರಿಂದಲೂ......'' ಎಂದಿದ್ದಾರೆ.

**ಪ್ರಶ್ನೆ :– ಈ ನಾಲ್ಕೂ ವಾಕ್ಯಗಳಿಂದ ಯಾವ ಯಾವ ಅಭಿಪ್ರಾಯಗಳನ್ನು ಹೊರಗೆಡಹಿದಂತಾಗಿರುತ್ತದೆ ?**

ಉತ್ತರ :– ಕೇಳಿ. ಮೊದಲನೆಯ ವಾಕ್ಯದಿಂದ– ಕಾಲದಲ್ಲಿ ದೇಶದಲ್ಲಿ ಜಗತ್ತಿನ ಉತ್ಪತ್ತಿಯಾಗುವದಿಲ್ಲ ; ಮತ್ತೇನೆಂದರೆ ಕಾಲದೇಶಸಮೇತವಾದ ಇಡೀ ಜಗತ್ತು ಆತ್ಮನಲ್ಲಿ ಹುಟ್ಟುತ್ತದೆ, ಅರ್ಥಾತ್ ತೋರುತ್ತದೆ ಎಂದು ಹೇಳಿ, ಕಾಲದೇಶಗಳನ್ನೂ ಅನಾತ್ಮದಲ್ಲಿಯೇ ಸೇರಿಸಿದ್ದಾರೆ. ಇದನ್ನೇ ಎರಡನೆಯ ವಾಕ್ಯದಲ್ಲಿ– ಬ್ರಹ್ಮದಿಂದ ಜಗತ್ತು ಹುಟ್ಟುವದೆಂಬ ಮಾತು ಬಂದಾಗ ದೇಶಕಾಲ ಕಾರ್ಯಕಾರಣಭಾವಸಮೇತವಾದ ಜಗತ್ತೇ ಬ್ರಹ್ಮದಿಂದ ಹುಟ್ಟುವದೆಂದು ಹೇಳಿ, ದೇಶ– ಕಾಲ– ಕಾರ್ಯಕಾರಣಾದಿಭಾವಗಳು ಅನಾತ್ಮಗಳಾದ ಹುಸಿತೋರಿಕೆಗೇ ಸೇರಿದವುಗಳೆಂಬುದನ್ನು ಗಟ್ಟಿಗೊಳಿಸಿದ್ದಾರೆ. ಮೂರನೆಯ ವಾಕ್ಯದಲ್ಲಿ– ಆತ್ಮನನ್ನು ಕಂಡಾಗ ಕಾಲದೇಶಾದಿ ಯಾವ ಜಿಜ್ಞಾಸೆಯೂ ಉಳಿಯುವದಿಲ್ಲ ; ಅವನು ದೇಶಕಾಲಾದಿಭಾವಗಳಿಗೆ ಅತೀತವಾದ ಸ್ವರೂಪದಲ್ಲಿ ನೆಲೆನಿಂತಿರುವನು ಎಂದು ಹೇಳಿ, ಆತ್ಮಸ್ವರೂಪವು ಕಾಲದೇಶಾದಿಭಾವಗಳಿಗೆ ಅತೀತವು ಎಂದು ಸ್ಪಷ್ಟಪಡಿಸಿದ್ದಾರೆ. ನಾಲ್ಕನೆಯ ವಾಕ್ಯದಲ್ಲಿಯಂತೂ– ಬ್ರಹ್ಮವು ಕಾಲದೇಶಾದಿಗಳನ್ನೆಲ್ಲಾ ವ್ಯಾಪಿಸಿದ್ದೂ ಕಾಲದೇಶಕ್ಕಿಂತ ಸೂಕ್ಷ್ಮವಾದದ್ದೂ ಕಾಲದೇಶಾದಿಗಳಿಗೆ ಕಾರಣವಾದದ್ದೂ ಆಗಿದೆ– ಎಂದು ಹೇಳಿ, ಕಾಲದೇಶಭಾವಗಳಿಗೆ ಅತೀತವಾದ ಪೂರ್ಣಾನುಭವದ ಆಧಾರದಿಂದಲೇ ಬ್ರಹ್ಮತತ್ತ್ವವನ್ನು ಗೊತ್ತುಮಾಡಿಕೊಳ್ಳಬೇಕೆಂದು ಆಚಾರ್ಯರು ನಿಚ್ಚಳವಾಗಿ ತಿಳಿಸಿದ್ದಾರೆ. ಈಗಿನ ವೇದಾಂತಿಗಳಲ್ಲಿ ಈ ರೀತಿಯ ವಿಚಾರಸರಣಿಯೇ ಕಂಡುಬರುವದಿಲ್ಲವಷ್ಟೆ.

ಇರಲಿ, ಇನ್ನು ಆರನೆಯದಾಗಿ ಜಾಗ್ರತ್ ಪ್ರಪಂಚವು ನಮ್ಮೆಲ್ಲರಿಗೂ ಸಾಮಾನ್ಯವಾಗಿದ್ದು ಅದರಲ್ಲಿ ನಾವು ಒಂದು ಕಾಲದಲ್ಲಿ ಈ ಪ್ರಪಂಚದಲ್ಲಿ ಹುಟ್ಟಿದ್ದೇವೆ; ಇಂಥ ನಮಗೆ ಸ್ವಪ್ನ ಸುಷುಪ್ತಿಗಳಾಗುವವು– ಎಂಬ ಈ ಲೌಕಿಕದೃಷ್ಟಿಯನ್ನೇ ಇಟ್ಟುಕೊಂಡು ಈಗಿನ ಬಹುಜನ ವೇದಾಂತಿಗಳು ವಿಚಾರಕ್ಕೆ ಹೊರಡುತ್ತಾರೆ. ಆದರೆ ಶ್ರೀ ಶಂಕರಾಚಾರ್ಯರ ಭಾಷ್ಯಗಳಲ್ಲಿ ಅಧ್ಯಾತ್ಮ ಅಧಿದೈವ, ಅಧಿಭೂತಗಳಿಂದಲೂ

ಅನೇಕ ಜೀವರುಗಳಿಂದಲೂ ಕಾಲದೇಶಕಾರ್ಯಕಾರಣಾದಿಭಾವಗಳಿಂದಲೂ ಕೂಡಿದ ಇಡೀ ಜಾಗ್ರದವಸ್ಥೆಯೇ ತನ್ನಲ್ಲಿ ತೋರಿ ಅಡಗುವದೆಂಬ ಸಾರ್ವತ್ರಿಕ ಪೂರ್ಣಾನುಭವದ ಪರಮಾರ್ಥದೃಷ್ಟಿಯನ್ನೇ ವಿವೇಕಕ್ಕೆ ಅವಲಂಬಿಸಿರುತ್ತದೆ. ಇದರಿಂದ ತಾನು, ತನ್ನಲ್ಲಿ ಎಚ್ಚರದವಸ್ಥೆ, ಆ ಅವಸ್ಥೆಯಲ್ಲಿ ನಾನು ಎಂಬ ಅನಿಸುವಿಕೆ ಹಾಗೂ ಅನೇಕ ಜೀವರುಗಳು ತೋರುವರೆಂದೇ ಕಂಡುಕೊಳ್ಳಬೇಕು ಎಂದರ್ಥವಾಗುತ್ತದೆ. ಹೀಗೆ ಕಂಡಾಗಲೇ ಒಬ್ಬ ಆತ್ಮನೇ – ಒಬ್ಬ ತಾನೇ– ಎಲ್ಲ ಜೀವರುಗಳಾಗಿಯೂ ಸಮಗ್ರ ಜಗತ್ತಾಗಿಯೂ ಕಂಡುಬರುವನೆಂಬ ವೇದಾಂತದ ಉಪದೇಶವು ಅನುಭವಕ್ಕೆ ಬರುತ್ತದೆ. ಈ ಪದ್ಧತಿಯು ಗೊತ್ತಿಲ್ಲದ್ದರಿಂದಲೇ ನಾವು ಹಿಂದೆ ತೋರಿಸಿದಂತೆ ಜೀವಸಾಕ್ಷಿಗಳು ಅನೇಕ, ಈಶ್ವರಸಾಕ್ಷಿ ಏಕ ಎಂಬ ತಪ್ಪು ವಿಚಾರಗಳಿಗೆ ಈಗಿನವರು ತುತ್ತಾಗಿರುತ್ತಾರೆ. ಆದ್ದರಿಂದ ಅಧ್ಯಾತ್ಮ ಪ್ರಪಂಚದ ಜೊತೆಗೆ ಎಂದರೆ ನಾನೆಂಬ ಅನಿಸುವಿಕೆಯಿಂದ ದೇಹದವರೆಗಿನ ಪ್ರಪಂಚದ ಜೊತೆಗೆ ಅಧಿಭೂತ ಹಾಗೂ ಅಧಿದೈವಿಕಪ್ರಪಂಚವನ್ನೂ ಕಾಲದೇಶಾದಿಭಾವಗಳನ್ನೂ ಸೇರಿಸಿಕೊಂಡೇ ವಿಚಾರ ಮಾಡಬೇಕೆಂಬುದು ನಿಜವಾದ ವೇದಾಂತಪ್ರಕ್ರಿಯೆಯು ಎಂದು ತಿಳಿಯಬೇಕು.

**ಪ್ರಶ್ನೆ :– ಹೀಗೆಯೇ ವಿಚಾರಮಾಡಬೇಕೆಂಬುದಾಗಿ ಆಚಾರ್ಯರು ಎಲ್ಲಿ ಹೇಳಿದ್ದಾರೆ?**

ಉತ್ತರ :– ಮಾಂಡೂಕ್ಯೋಪನಿಷತ್ತಿನ ಮೂರನೆಯ ಮಂತ್ರದ ಭಾಷ್ಯದಲ್ಲಿ **"ಸರ್ವಸ್ಯ ಪ್ರಪಂಚಸ್ಯ ಸಾಧಿದೈವಿಕಸ್ಯ ಅನೇನಾತ್ಮನಾ ಚತುಷ್ಪಾತ್ತ್ವಸ್ಯ ವಿವಕ್ಷಿತತ್ವಾತ್। ಏವಂ ಚ ಸತಿ ಸರ್ವಪ್ರಪಂಚೋಪಶಮೇ ಅದ್ವೈತ ಸಿದ್ಧಿಃ । ಸರ್ವಭೂತಸ್ಥಶ್ಚ ಆತ್ಮಾ ಏಕೋ ದೃಷ್ಟಃ ಸ್ಯಾತ್ । ಸರ್ವಭೂತಾನಿ ಚಾತ್ಮನಿ । ....... ಅನ್ಯಥಾ ಹಿ ಸ್ವದೇಹ ಪರಿಚ್ಛಿನ್ನ ಏವ ಪ್ರತ್ಯಗಾತ್ಮಾ ಸಾಂಖ್ಯಾದಿಭಿರಿವ ದೃಷ್ಟಃ ಸ್ಯಾತ್ । ತಥಾ ಚ ಸತಿ ಅದ್ವೈತಮಿತಿ ಶ್ರುತಿಕೃತೋ ವಿಶೇಷೋ ನ ಸ್ಯಾತ್ ॥** ಎಂದಿದ್ದಾರೆ.

ಈ ಪ್ರತ್ಯಗಾತ್ಮನಿಗೇ ಎಂದರೆ ತಾನೆಂಬ ಸಾಕ್ಷಿಸ್ವರೂಪಕ್ಕೇ ಅಧಿದೈವ ಸಮೇತವಾದ ಸರ್ವಪ್ರಪಂಚವೂ ಉಪಾಧಿಯಾಗಿರುವದೆಂಬುದನ್ನು ಹೇಳುವದಕ್ಕಾಗಿಯೇ ಈ ಆತ್ಮನು ನಾಲ್ಕು ಪಾದಗಳುಳ್ಳವನು ಎಂದು ಇಲ್ಲಿ ಬಂದಿದೆ. ಹೀಗೆ ಕಂಡುಕೊಂಡರೇ ಪ್ರಪಂಚವೆಲ್ಲವೂ ಆತ್ಮನಿಂದ ವ್ಯಾಪ್ತವಾಗಿದೆ ಎಂದಾಗಿ ಪ್ರಪಂಚವೆಂಬುದು ಇಲ್ಲವೇ ಇಲ್ಲವೆಂದಾದಾಗ ಅದ್ವೈತವು ತಾನಾಗಿಯೇ ಉಳಿಯುತ್ತದೆ. ಎಲ್ಲರಲ್ಲಿಯೂ ಒಬ್ಬ ಆತ್ಮನಿರುವದನ್ನೂ ಆತ್ಮನಲ್ಲಿಯೇ ಎಲ್ಲ ಭೂತಗಳೂ ಇರುವದನ್ನೂ ಹೀಗಾದರೇ ಕಂಡುಕೊಂಡಂತಾಗುತ್ತದೆ. ಇದನ್ನು ಬಿಟ್ಟು ಒಂದೊಂದು ದೇಹಕ್ಕೆ ಒಬ್ಬೊಬ್ಬ ಆತ್ಮನೆಂದು ಕಂಡುಕೊಂಡರೆ ಸಾಂಖ್ಯಾದಿಗಳಂತೆ ದ್ವೈತವನ್ನೇ ಕಂಡಂತಾಗುತ್ತದೆ. ಆಗ ಶ್ರುತಿಗಳಲ್ಲಿ ತಿಳಿಸಿರುವ ಅದ್ವೈತವೆಂಬ ವಿಶೇಷವೇ ಇಲ್ಲದಂತಾಗುತ್ತದೆ– ಎಂಬುದು

ಇದರ ಭಾವಾರ್ಥವು. ಈ ವಾಕ್ಯದಿಂದ ಸಮಷ್ಟಿಪ್ರಪಂಚವನ್ನೇ ಆತ್ಮನಿಗೆ ಉಪಾಧಿಯಾಗಿ ವಿಚಾರಿಸುವ ವೇದಾಂತಶಾಸ್ತ್ರಸಂಪ್ರದಾಯದ ಉತ್ತಮ ಉಪದೇಶವನ್ನು ಆಚಾರ್ಯರು ನಿರೂಪಿಸಿದಂತಾಗಿದೆ. ಈ ವಿಚಾರಪದ್ಧತಿಯು ಈಗಿನವರಲ್ಲಿ ಇಲ್ಲದಿರುವದೂ ಕಂಡುಬರುತ್ತದೆ. ಮುಂದೆ ಅವಸ್ಥಾತ್ರಯವಿವೇಕವನ್ನು ಪ್ರಕಟಿಸುವ ಪ್ರಸಂಗ ಬಂದಾಗ ಈ ಬಗ್ಗೆ ವಿಸ್ತಾರವಾಗಿ ಚರ್ಚಿಸೋಣ.

**ಪ್ರಶ್ನೆ :– ಇನ್ನೂ ಯಾವ ಯಾವ ಭಾಗಗಳಲ್ಲಿ ಈಗಿನ ಬೋಧಪದ್ಧತಿಗೂ ಆಚಾರ್ಯರ ಪದ್ಧತಿಗೂ ವ್ಯತ್ಯಾಸವಿದೆ ?**

ಉತ್ತರ :– ಸಂದರ್ಭಾನುಸಾರ ಮುಂದಿನ ಪ್ರಕಟಣೆಗಳಲ್ಲಿ ಅವುಗಳನ್ನು ವಿಸ್ತಾರವಾಗಿ ಆಯಾ ವಿಷಯಗಳ ಮಾತು ಬಂದಾಗ ತಿಳಿಸೋಣ. ಪ್ರಕೃತ ಇನ್ನೆರಡು ಉದಾಹರಣೆಗಳನ್ನು ಹೇಳಿ ಈ ವಿಷಯವನ್ನು ಮುಗಿಸೋಣ.

**ಪ್ರಶ್ನೆ :– ಈ ಉದಾಹರಣೆಗಳಾದರೂ ಯಾವವು ?**

ಉತ್ತರ :– ಕಾರ್ಯಕಾರಣಭಾವವನ್ನು ಆಚಾರ್ಯರು ಆರೋಪಿತವೆಂದೊಪ್ಪಿ ಕೊನೆಯಲ್ಲಿ ಪರಮಗುರುಗಳಾದ ಗೌಡಪಾದರ ಸಂಪ್ರದಾಯದಂತೆ ಕಾರ್ಯಕಾರಣವಾದವನ್ನು ನಿರಾಸಮಾಡಿ ಬ್ರಹ್ಮವು ಕಾರಣ, ಜಗತ್ತು ಕಾರ್ಯ ಎಂದರೆ ಬ್ರಹ್ಮವೇ ಪರಮಾರ್ಥ, ಜಗತ್ತು ಹುಸಿತೋರಿಕೆ– ಎಂಬರ್ಥದಲ್ಲಿ ವಿವರಿಸಿರುತ್ತಾರೆ. ಆದರೆ, ಈಗಿನವರು ಬ್ರಹ್ಮದಿಂದ ಜಗತ್ತು ಹುಟ್ಟುತ್ತದೆ– ಎಂಬುದನ್ನೇ ಪಟ್ಟಾಗಿಟ್ಟುಕೊಂಡು ಪ್ರತಿಪಾದಿಸತೊಡಗುತ್ತಾರೆ.

ಇದರಂತೆಯೇ ಆತ್ಮಜ್ಞಾನದ ಅನಂತರ ದೃಢಾಪರೋಕ್ಷಕ್ಕಾಗಿ ಬ್ರಹ್ಮಾಭ್ಯಾಸ, ಸಮಾಧಿಭೂಮಿಕೆಗಳು– ಮುಂತಾದವುಗಳನ್ನು ಈಗಿನವರು ಹೇಳುತ್ತಿದ್ದಾರೆ. ಆದರೆ ಆಚಾರ್ಯರು ಆತ್ಮಜ್ಞಾನದ ಅನಂತರ ಕೃತಕೃತ್ಯತೆಯೇ ಬರುವದೇ ಹೊರತು ಮಾಡಬೇಕಾದದ್ದೇನೂ ಇರುವದಿಲ್ಲ. ಶ್ರವಣ ಮನನ ನಿದಿಧ್ಯಾಸಗಳೆಲ್ಲವೂ ದರ್ಶನಕ್ಕಾಗಿಯೇ ಇವೆಯೇ ಹೊರತು ದರ್ಶನದ ಅನಂತರ ಏನೂ ಕರ್ತವ್ಯವು ಉಳಿಯಲಾರದೆಂದು ಬಾರಿಬಾರಿಗೂ ಸಾರಿಸಾರಿ ಹೇಳಿದ್ದಾರೆ. ಇಂಥ ಇನ್ನೂ ಅನೇಕ ವಿಚಾರಗಳಲ್ಲಿ ಬಹಳ ವ್ಯತ್ಯಾಸವಿದೆ. ಅವುಗಳೆಲ್ಲಕ್ಕೂ ಭಾಷ್ಯಾಧಾರವನ್ನು ಕೊಟ್ಟು ಮುಂದೆ ಪ್ರತಿಪಾದಿಸೋಣ.

———————

## ಪ್ರಕರಣ ನಾಲ್ಕು

## ಎರಡು ದೃಷ್ಟಿಗಳು

### (೧) ವ್ಯವಹಾರ ದೃಷ್ಟಿ

**ಪ್ರಶ್ನೆ :– ಹೀಗೆ ಈಗಿನವರ ಬೋಧೆಗೂ ಆಚಾರ್ಯರ ನಿರೂಪಣೆಗೂ ಅಂತರ ಬರುವದಕ್ಕೆ ಕಾರಣವಾದರೂ ಏನು ?**

ಉತ್ತರ :– ಒಂದು ಮುಖ್ಯ ಕಾರಣವಿದೆ.

**ಪ್ರಶ್ನೆ :– ಅದೇನು ?**

ಉತ್ತರ :– ಆಚಾರ್ಯರು ತತ್ತ್ವನಿರೂಪಣೆಮಾಡುವಾಗ ವ್ಯವಹಾರದೃಷ್ಟಿ, ಪರಮಾರ್ಥದೃಷ್ಟಿ ಎಂಬ ದೃಷ್ಟಿಭೇದಗಳನ್ನಿಟ್ಟುಕೊಂಡು ವಿಷಯಗಳನ್ನು ನಿರೂಪಿಸುತ್ತಾರೆ. ಈಚಿನವರಿಗೆ ಈ ದೃಷ್ಟಿಭೇದಗಳೇ ಅರ್ಥವಾಗಿಲ್ಲ. ಎಲ್ಲವನ್ನೂ ವ್ಯಾವಹಾರಿಕ ದೃಷ್ಟಿಯಿಂದಲೇ ನೋಡಲು ಹೊರಡುತ್ತಾರಾದ್ದರಿಂದ ಈ ವ್ಯತ್ಯಾಸಗಳು ಬರುತ್ತವೆ.

**ಪ್ರಶ್ನೆ :– ಹಿಂದೆ ಎಷ್ಟೋ ಸಲ ಈ ದೃಷ್ಟಿಭೇದದ ಮಾತು ಬಂದಿದೆಯಾದರೂ ಈಗ ಇದೇ ವಿಷಯವನ್ನು ಕುರಿತು ವಿವರವಾಗಿ ತಿಳಿಸುವಿರಾ ?**

ಉತ್ತರ :– ಆಗಲಿ, ಕೇಳಿ. ವ್ಯವಹಾರ ಎಂದರೆ ಯೋಚಿಸುವದು, ಮಾತನಾಡುವದು ಹಾಗೂ ಕೃತಿಯಲ್ಲಿ ತರುವದು. ಇದು ಎಲ್ಲೆಲ್ಲಿದೆಯೋ ಅದೆಲ್ಲವೂ ವ್ಯವಹಾರವೇ ಆಗಿರುತ್ತದೆ. ಈ ವ್ಯವಹಾರವು ಲೌಕಕ, ವೈದಿಕ ಎಂದು ಎರಡು ಪ್ರಕಾರವಾಗಿರುವದೆಂದು ಭಾಗಮಾಡಬಹುದು.

**ಪ್ರಶ್ನೆ :– ಈ ಭಾಗಗಳನ್ನು ಹೇಗೆ ಗುರುತಿಸಬೇಕು ?**

ಉತ್ತರ :– ಲೋಕದಲ್ಲಿ ಇಂದ್ರಿಯಗಳಿಂದ ವಸ್ತುಗಳನ್ನು ಕಂಡು ತನಗೆ ಬೇಕಾದದ್ದನ್ನು ತೆಗೆದುಕೊಳ್ಳುವ ಬೇಡಾದದ್ದನ್ನು ತೊಲಗಿಸಿಕೊಳ್ಳುವ ರೂಪದ ಸರ್ವವ್ಯವಹಾರವೂ ಲೌಕಿಕವ್ಯವಹಾರವೆನಿಸುತ್ತದೆ. ಸಾಮಾನ್ಯ ಮಾನವನಿಂದ ಹಿಡಿದು ಪ್ರಚಂಡಭೌತಿಕವಿಜ್ಞಾನಶಾಸ್ತ್ರಪರಿಣತರವರೆಗಿನ ಎಲ್ಲವೂ ಈ ಭಾಗದಲ್ಲಿ ಸಮಾವೇಶವಾಗುತ್ತವೆ. ಇಹಲೋಕಕ್ಕೆ ಬೇಕಾದ ಎಲ್ಲ ಬಗೆಯ ವ್ಯವಹಾರವೂ ಲೌಕಿಕ ವ್ಯವಹಾರವೆನಿಸಿರುತ್ತದೆ.

**ಪ್ರಶ್ನೆ :– ವೈದಿಕವ್ಯವಹಾರವೆಂದರೇನು ?**

ಉತ್ತರ :– (೧) ವೇದದಲ್ಲಿ ಹೇಳಿರುವಂತೆ ವರ್ಣಾಶ್ರಮಧರ್ಮಗಳು, ಇತರ ಧರ್ಮಾಧರ್ಮಗಳು, ಜನ್ಮಾಂತರ, ಪಾಪ–ಪುಣ್ಯ, ಸ್ವರ್ಗ–ನರಕ, ದೇವತೆಗಳು, ಈಶ್ವರ– ಮುಂತಾದವುಗಳಿರುವವೆಂಬುದನ್ನು ನಂಬಿ ಅದಕ್ಕನುಗುಣವಾಗಿ ವೇದೋಕ್ತ

ಅಥವಾ ಪುರಾಣೋಕ್ತಕರ್ಮಗಳನ್ನೂ ದೇವತೆಗಳ ಉಪಾಸನೆಗಳನ್ನೂ ಈಶ್ವರನ ಆರಾಧನೆ, ಧ್ಯಾನಾದಿಗಳನ್ನೂ ಮಾಡಿ ಆಯಾ ದೃಷ್ಟ ಅಥವಾ ಅದೃಷ್ಟಫಲಗಳನ್ನು ಪಡೆಯುವ ವ್ಯವಹಾರವೂ ಮತ್ತು (೨) ವೇದಾಂತಗಳ ಬೋಧನೆಯ ತತ್ತ್ವವನ್ನು ತಿಳಿಯುವದಕ್ಕಾಗಿ ಫಲಾಭಿಸಂಧಿವರ್ಜಿತವಾಗಿ ಈಶ್ವರಾರ್ಪಣಬುದ್ಧಿಯಿಂದ ಉಪಾಸನಾಯುಕ್ತವಾದ ಸತ್ಕರ್ಮಗಳನ್ನು ಮಾಡಿ ಚಿತ್ತಶುದ್ಧಿಯನ್ನು ಪಡೆಯುವ ಹಾಗೂ ಚಿತ್ತದ ಏಕಾಗ್ರತೆಯನ್ನು ಪಡೆಯುವ ಮತ್ತು ನಿತ್ಯಾನಿತ್ಯವಸ್ತುವಿವೇಕದಿಂದ ವೈರಾಗ್ಯಾದಿಗಳನ್ನೂ ಶಮದಮಾದಿಗಳನ್ನೂ ಸಂಪಾದಿಸಿ ಬ್ರಹ್ಮನಿಷ್ಠರ ಬಳಿಸಾರಿ ಅನುಭವಪೂರ್ವಕವಾದ ಆತ್ಮವಿಜ್ಞಾನದ ಬಗ್ಗೆ ಶ್ರವಣಮನನನಿದಿಧ್ಯಾಸನಗಳೆಂಬ ಸಾಕ್ಷಾತ್ ಸಾಧನಗಳಿಂದ ಆತ್ಮನಿಷ್ಠೆಯನ್ನು ಪಡೆಯುವವರೆಗಿನ ಸರ್ವವ್ಯವಹಾರವೂ ವೈದಿಕವ್ಯವಹಾರವೆನಿಸುತ್ತದೆ.

**ಪ್ರಶ್ನೆ :– ಸರಿ, ಈ ವ್ಯವಹಾರದ ಎರಡು ಬಗೆಗಳನ್ನು ಅರಿತದ್ದಾಯಿತು. ಇನ್ನು ವ್ಯವಹಾರದೃಷ್ಟಿ ಎಂದರೇನು ?**

ಉತ್ತರ :– ಮೇಲೆ ವರ್ಣಿಸಿದ ಎರಡೂ ಬಗೆಯ ವ್ಯವಹಾರವು ನಡೆಯ ಬೇಕಾದರೆ ಅಂತಃಕರಣ, ಇಂದ್ರಿಯಗಳು, ಪ್ರಾಣದೇಹಾದಿ ಆಧ್ಯಾತ್ಮಿಕ ಸಾಮಗ್ರಿಗಳು, ಹೊರಗಿನ ದೇಶಕಾಲ ಕಾರ್ಯಕಾರಣಭಾವಗಳ ನಿಮಿತ್ತ, ಈ ನಿಮಿತ್ತದ ಸಂಬಂಧ ದಿಂದಾಗುವ ಫಲಗಳು, ಹೊರಗಿನ ವಸ್ತುಗಳು– ಇವೆಲ್ಲವುಗಳೂ ಬೇಕೇಬೇಕು. ಒಟ್ಟಿನಲ್ಲಿ ನಾನು ಎಂಬ ಅನಿಸುವಿಕೆಯಿಂದ ಹಿಡಿದು ಮುಂದಿನ ಎಲ್ಲವೂ ವ್ಯವಹಾರಕ್ಕೆ ಅಗತ್ಯವಾಗಿರುವದೇ ಆಗಿದೆ. ಈ ದೃಷ್ಟಿಯನ್ನಿಟ್ಟುಕೊಂಡೇ ಎಂದರೆ ಕಾಲದೇಶ ಕಾರ್ಯಕಾರಣಭಾವಾದಿಗಳನ್ನವಲಂಬಿಸಿಯೇ ಮಾತನಾಡುವದು, ಕಾರ್ಯರೂಪಕ್ಕೆ ತರುವದು, ಯೋಚಿಸುವದು ನಡೆದಿದೆಯಷ್ಟೆ. ಇದೆಲ್ಲವನ್ನೂ ಸೇರಿಸಿಯೇ ವ್ಯವಹಾರದೃಷ್ಟಿ ಎಂದು ಕರೆಯುತ್ತೇವೆ.

## (೨) ಪರಮಾರ್ಥದೃಷ್ಟಿ

**ಪ್ರಶ್ನೆ :– ವ್ಯವಹಾರವನ್ನವಲಂಬಿಸಿರುವ ದೃಷ್ಟಿಗೆ ಅರ್ಥಾತ್ ಮಾತು ಕೃತಿ ಯೋಚನೆಗಳನ್ನವಲಂಬಿಸಿದ ದೃಷ್ಟಿಗೆ ವ್ಯವಹಾರದೃಷ್ಟಿ ಎನ್ನುವಿರಷ್ಟೆ. ಈಗ ಪರಮಾರ್ಥ ಹಾಗೂ ಪರಮಾರ್ಥದೃಷ್ಟಿ ಎಂದರೇನು ? ಎಂಬುದನ್ನು ತಿಳಿಸುವಿರಾ?**

ಉತ್ತರ :– ಕೇಳಿ. ಮೇಲೆ ವ್ಯವಹಾರದೃಷ್ಟಿಯಲ್ಲಿ ವರ್ಣಿಸಿದ ನಾನು ಎಂಬ ಅನಿಸುವಿಕೆಯಿಂದ ಹಿಡಿದು ಕಾಲದೇಶಾದಿಸರ್ವಭಾವಗಳನ್ನೂ ಯೋಚನೆ ಮಾತುಕೃತಿ ಗಳ ಎಲ್ಲೆಕಟ್ಟನ್ನೂ ಮೀರಿದ ಎಂದರೆ ಇವುಗಳ ಚಲಾವಣೆಯೇ ಇಲ್ಲದಿರುವ ಹಾಗೂ ಇವೆಲ್ಲವುಗಳೂ ತೋರಿದರೂ ತೋರದಿದ್ದರೂ ತನ್ನಲ್ಲಿ ಸ್ವಲ್ಪವೂ ಬದಲಾವಣೆಯಾಗದೆ ಒಂದೇ ಬಗೆಯಾಗಿರುವ ತತ್ತ್ವವನ್ನು ಪರಮಾರ್ಥ ಎಂದು ಕರೆಯುತ್ತೇವೆ.

**ಪ್ರಶ್ನೆ :— ಇಂಥ ತತ್ತ್ವವು ಇದೆ ಎಂದು ಹೇಗೆ ನಂಬುವದು ?**

ಉತತರ :— ನಂಬಬೇಕಾದದ್ದೇನಿಲ್ಲ. ಸಮಗ್ರವ್ಯವಹಾರವೂ ತೋರುವದು ಹೇಗೆ ನಮ್ಮ ಅನುಭವದಲ್ಲಿಯೋ ಹಾಗೆಯೇ ಇದೊಂದೂ ಇಲ್ಲದ, ಇದನ್ನೂ ಮೀರಿದ, ಪರಮಾರ್ಥತತ್ತ್ವವೂ ಸಹ ಸರ್ವರಿಗೂ ಅನುಭವದಲ್ಲಿರುವ ಸಾರ್ವತ್ರಿಕ ತತ್ತ್ವವಾಗಿದೆ.

**ಪ್ರಶ್ನೆ :— ಓಹೋ ! ತಿಳಿಯಿತು ಸ್ವಾಮಿ. ಈ ಹಿಂದೆ ತಾವು ಈ ಗ್ರಂಥದಲ್ಲಿ ತಿಳಿಸಿಕೊಟ್ಟಿರುವ ಸಾಕ್ಷ್ಯನುಭವಸ್ವರೂಪವೇ ಪರಮಾರ್ಥತತ್ತ್ವವೆಂದು ತಮ್ಮ ಅಭಿಪ್ರಾಯ ತಾನೆ ?**

ಉತ್ತರ :— ಸರಿಯಾಗಿ ಹೇಳಿದಿರಿ. ಹಿಂದೆ ತಿಳಿಸಿದ್ದನ್ನು ಜ್ಞಾಪಿಸೋಣವೆನ್ನು ವಷ್ಟರಲ್ಲಿ ನೀವೇ ಹೇಳಿಬಿಟ್ಟರಲ್ಲ! ಹೀಗೆ ವಿಷಯಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ಗ್ರಹಿಸುವದೇ ಇಲ್ಲಿ ಮುಖ್ಯವಾದದ್ದು. ಅಂತೂ ಪರಮಾರ್ಥ ಎಂದರೆ ನಮ್ಮೆಲ್ಲರಿಗೂ ಸ್ವರೂಪವೇ ಆಗಿರುವ ಸಾಕ್ಷ್ಯನುಭವವು ಎಂಬುದನ್ನು ಮರೆಯಬಾರದು.

**ಪ್ರಶ್ನೆ :— ಸರಿ, ಈಗ ಪರಮಾರ್ಥದೃಷ್ಟಿ ಎಂಬ ಮಾತಿಗೆ ಏನರ್ಥ ?**

ಉತ್ತರ :— ಈ ಪರಮಾರ್ಥತತ್ತ್ವದಲ್ಲಿಯೇ ನಿಂತು ಅದು ಹೇಗಿದೆಯೋ ಹಾಗೆಯೇ ಅದನ್ನು ನಿರೂಪಿಸುವ ಹಾಗೂ ಕಂಡುಕೊಳ್ಳುವ ದೃಷ್ಟಿಗೆ **ಪರಮಾರ್ಥದೃಷ್ಟಿ** ಎಂದು ಹೆಸರು.

**ಪ್ರಶ್ನೆ :— ನಿರೂಪಣೆ ಹಾಗೂ ಕಂಡುಕೊಳ್ಳುವದು ಎಂಬುದು ವ್ಯವಹಾರ ವಲ್ಲವೆ? ಪರಮಾರ್ಥದ ಬಗ್ಗೆ ಇದು ಹೇಗೆ ಹೊಂದುತ್ತದೆ ?**

ಉತ್ತರ :— ಇದು ನಿಜವೇ ಹೌದು. ಪರಮಾರ್ಥದಲ್ಲಿ ವ್ಯವಹಾರವಿಲ್ಲವಲ್ಲ— ಎಂದು ತಾನೆ ನಿಮ್ಮ ಪ್ರಶ್ನೆ ?

**ಪ್ರಶ್ನೆ :— ಹೌದು.**

ಉತ್ತರ :— ನೀವು ಈ ಮಾತನ್ನಾಡುವಾಗ ಅನುಸರಿಸಿದ ದೃಷ್ಟಿಗೇ ಪರಮಾರ್ಥ ದೃಷ್ಟಿ ಎಂದು ಹೆಸರು. ಪರಮಾರ್ಥ ಎಂದರೇನೆಂಬುದನ್ನು ಗ್ರಹಿಸಿ ತಾನೆ ನೀವೀಗ ಮಾತನಾಡಿದ್ದು ? ಆದ್ದರಿಂದ ಆಡುವ ಮಾತುಗಳಲ್ಲಿ ಪರಮಾರ್ಥದೃಷ್ಟಿ ವ್ಯವಹಾರ ದೃಷ್ಟಿ ಎಂಬ ಎರಡು ಬಗೆಯ ಭೇದಗಳಾಗುವವೆಂದು ನೀವೇ ಈಗ ನಿಮ್ಮ ಮಾತಿನಿಂದ ತೋರಿಸಿಕೊಟ್ಟಂತಾಯಿತು.

**ಪ್ರಶ್ನೆ :— ಅಂತೂ ವ್ಯವಹಾರಾದಿಗಳಿರುವದನ್ನಿಟ್ಟುಕೊಂಡು ಮಾತನಾಡಿದ್ದು ಅಥವಾ ವಿಚಾರಿಸಿದ್ದು ವ್ಯಾವಹಾರಿಕದೃಷ್ಟಿ, ಇದಾವದೂ ಇಲ್ಲದ್ದನ್ನು ಅನುಲಕ್ಷಿಸಿ ಮಾತನಾಡಿದ್ದು ಪರಮಾರ್ಥದೃಷ್ಟಿ ಎಂದು ತಾನೆ ನಿಮ್ಮ ಅಭಿಪ್ರಾಯ ?**

ಉತ್ತರ :– ಸರಿಯಾಗಿ ತಿಳಿದಿರಿ, ಇದು ಹೀಗೆಯೇ ಹೌದು. ವೇದಾಂತಶಾಸ್ತ್ರದಲ್ಲಿ ಉಪಯೋಗಿಸುವ ಈ ಎರಡೂ ದೃಷ್ಟಿಗಳು ಸಾರ್ವತ್ರಿಕರಿಗೂ ಅನುಭವದಲ್ಲಿರುವ ವಿಷಯಗಳನ್ನೇ ಆಧರಿಸಿ ಹೇಳಿದವುಗಳಾಗಿರುತ್ತವೆ. (೧) ಇದರಲ್ಲಿ ವ್ಯಾವಹಾರಿಕ ದೃಷ್ಟಿಯಂತೂ ಗೊತ್ತೇ ಇರುತ್ತದೆ. ಅದರಲ್ಲೂ ಲೌಕಿಕವ್ಯವಹಾರವು ಎಲ್ಲರಿಗೂ ಸಹಜವಾಗಿಯೇ ಗೊತ್ತಿರುತ್ತದೆ. (೨) ವೈದಿಕವ್ಯವಹಾರವು ಸಂಸ್ಕಾರ, ಶಾಸ್ತ್ರ ಹಾಗೂ ಶಾಸ್ತ್ರದಂತೆ ಆಚರಿಸುವ ಜನರ ಸಂಗಗಳಿಂದ ತಿಳಿಯುತ್ತದೆ. ಇವೆರಡರ ಬಗೆಗಿನ ಯೋಚನೆ ಹಾಗೂ ಮಾತುಗಳು ವ್ಯವಹಾರಿಕದೃಷ್ಟಿಯವೇ ಆಗಿರುತ್ತವೆ. (೩) ಆದರೆ ಪರಮಾರ್ಥತತ್ತ್ವವು ನಮ್ಮೆಲ್ಲರ ಸ್ವರೂಪವೇ ಆಗಿ ನಮ್ಮ ನಿತ್ಯಾನುಭವದಲ್ಲಿದ್ದರೂ ಸಹ ಆ ಕಡೆಗೆ ಗಮನವಿಲ್ಲದ್ದರಿಂದ ಅದರ ಅರಿವು ಇರುವದಿಲ್ಲ. ವೇದಾಂತಶಾಸ್ತ್ರ ಹಾಗೂ ಅನುಭವಿಗಳ ಉಪದೇಶವನ್ನನುಸರಿಸುವದರಿಂದಲೇ ಪರಮಾರ್ಥ ದೃಷ್ಟಿಯು ಪ್ರಾಪ್ತವಾಗುತ್ತದೆ. (೪) ಈ ಪರಮಾರ್ಥತತ್ತ್ವವು ಮಾತ್ರವೇ ಪರಮ ಸತ್ಯವು; ಮಿಕ್ಕ ವ್ಯವಹಾರವೆಂಬುದೆಲ್ಲವೂ ಹುಸಿತೋರಿಕೆ ; ನಿಜವಾದ ತತ್ತ್ವದಲ್ಲಿ ಪರಮಾರ್ಥ, ವ್ಯವಹಾರ– ಎಂಬ ಭೇದಗಳಿಲ್ಲ ; ತತ್ತ್ವವು ಎರಡನ್ನೂ ಮೀರಿದೆ ಎಂಬುದನ್ನು ಕಂಡುಕೊಂಡವರ ದೃಷ್ಟಿಗೆ ವಿದ್ವಜ್ಜನರ ದೃಷ್ಟಿ, ವಿದ್ವದನುಭವ, ಜ್ಞಾನಿಗಳ ಅನುಭವ ಎನ್ನುತ್ತಾರೆ.

ಹೀಗೆ ಜ್ಞಾನಿಯ ದೃಷ್ಟಿಗೆ ಏರಬೇಕಾದರೆ ಮೊದಲು ವ್ಯಾವಹಾರಿಕ ದೃಷ್ಟಿಯನ್ನು ಬಿಟ್ಟು ನಮ್ಮಲ್ಲಿಯೇ ಇರುವ ಪರಮಾರ್ಥದೃಷ್ಟಿಯ ಕಡೆಗೆ ಗಮನವನ್ನು ಕೊಡಬೇಕು. ಕೊನೆಯಲ್ಲಿ ವಿದ್ವದನುಭವದ ಮಜಲಿಗೆ ಬರುತ್ತೇವೆ. ಈ ಕೊನೆಯ ಮಜಲಿಗೇರುವದಕ್ಕಾಗಿಯೇ ಅಧ್ಯಾರೋಪಪ್ರಕ್ರಿಯೆಯ ಪ್ರಕಾರ ಪರಮಾರ್ಥದೃಷ್ಟಿ, ವ್ಯವಹಾರ ದೃಷ್ಟಿ ಎಂಬ ಭೇದವನ್ನು ಕಲ್ಪಿಸಿ ಉಪದೇಶಿಸಿರುತ್ತದೆ.

## (೩) ಭಾಷ್ಯಕಾರರ ಬೋಧೆ

**ಪ್ರಶ್ನೆ :– ಶ್ರೀ ಶಂಕರರು ತಮ್ಮ ಭಾಷ್ಯಗಳಲ್ಲಿ ಈ ರೀತಿ ಎಲ್ಲಿ ಹೇಳಿದ್ದಾರೆ ?**

ಉತ್ತರ :– ಬೃಹದಾರಣ್ಯಕೋಪನಿಷತ್ತಿನಲ್ಲಿ ಬರೆದ ಈ ವಾಕ್ಯಗಳನ್ನು ನೋಡಿ:

**ಯದಾ ತು ಪರಮಾರ್ಥದೃಷ್ಟ್ಯಾ ಪರಮಾತ್ಮತತ್ತ್ವಾಚ್ಛ್ರುತ್ಯನುಸಾರಿಭಿಃ ಅನ್ಯತ್ವೇನ ನಿರೂಪ್ಯಮಾಣೇ ನಾಮರೂಪೇ ಮೃದಾದಿವಿಕಾರವದ್ ವಸ್ತ್ವನ್ತರೇ ತತ್ತ್ವತೋ ನ ಸ್ತಃ, ಸಲಿಲಫೇನಘಟಾದಿವಿಕಾರವದೇವ, ತದಾ ತದಪೇಕ್ಷ್ಯ ''ಏಕಮೇವಾ ದ್ವಿತೀಯಮ್'' (ಛಾಂ. ೬–೨–೧), ''ನೇಹ ನಾನಾಸ್ತಿ ಕಿಂಚನ'' (೪–೫–೧೯) ಇತ್ಯಾದಿ ಪರಮಾರ್ಥದರ್ಶನಗೋಚರತ್ವಂ ಪ್ರತಿಪದ್ಯತೇ ||** (೩–೫–೧)

**ಯದಾ ತು ಸ್ವಾಭಾವಿಕ್ಯಾ ಅವಿದ್ಯಯಾ ಬ್ರಹ್ಮಸ್ವರೂಪಂ ರಜ್ಜುಶುಕ್ತಿಕಾ ಗಗನಸ್ವರೂಪವದೇವ ಸ್ವೇನರೂಪೇಣ ವರ್ತಮಾನಂ ಕೇನಚಿತ್ ಅಸ್ಪೃಷ್ಟ**

ಸ್ವಭಾವಮಪಿ ಸತ್ ನಾಮರೂಪಕೃತಕಾರ್ಯಕರಣೋಪಾಧಿಭ್ಯೋ ವಿವೇಕೇನ ನಾವಧಾರ್ಯತೇ, ನಾಮರೂಪೋಪಾಧಿದೃಷ್ಟಿರೇವ ಚ ಭವತಿ ಸ್ವಾಭಾವಿಕೀ ತದಾ ಸರ್ವೋಽಯಂ ವಸ್ತ್ವಂತರಾಸ್ತಿತ್ವವ್ಯವಹಾರಃ ॥ (೩–೫–೧).

ಪ್ರಶ್ನೆ :– ಮೇಲೆ ಹೇಳಿದ ಎರಡೂ ವಾಕ್ಯಗಳ ತಾತ್ಪರ್ಯವೇನು ?

ಉತ್ತರ :– ಯಾವಾಗ ಶ್ರುತಿಗೆ ಅನುಸರಿಸಿದ ಪರಮಾರ್ಥದೃಷ್ಟಿಯಿಂದ ಹೇಗೆ ಮಣ್ಣಿಗಿಂತ ಬೇರಾಗಿ ಮಡಕೆ, ನೀರಿಗಿಂತ ಬೇರಾಗಿ ನೊರೆ ಮುಂತಾದದ್ದು ಇರುವ ದಿಲ್ಲವೋ ಹಾಗೆಯೇ ಈ ಪರಮಾತ್ಮತತ್ತ್ವಕ್ಕಿಂತ ಬೇರೆಯಾಗಿ ಜಗತ್ತೆಂಬುದಿರುವದೇ ಇಲ್ಲವೋ, ಆಗ ಆ ಆತ್ಮವಿಜ್ಞಾನದ ಪರಮಾರ್ಥದೃಷ್ಟಿಯನ್ನನುಸರಿಸಿ ''ಒಂದೇ, ಎರಡನೆಯದಿಲ್ಲದ್ದು'' (ಛಾಂ.೬–೨–೧), ''ಇಲ್ಲಿ ಒಂದಿಷ್ಟೂ ನಾನಾತ್ವವಿಲ್ಲ'' (೪–೪–೧೯) ಮುಂತಾಗಿ ಪರಮಾರ್ಥದರ್ಶನಕ್ಕೆ ಗೋಚರವಾಗುವ ವಿಷಯವನ್ನು ಶ್ರುತಿಗಳಲ್ಲಿ ಹೇಳಿರುತ್ತದೆ– ಎಂಬುದು ಮೊದಲಿನ ವಾಕ್ಯದ ಸಾರಾಂಶ. ಇನ್ನು ಎರಡನೆಯ ವಾಕ್ಯದಲ್ಲಿ:

ಇನ್ನು ಯಾವಾಗಲಾದರೋ ಸ್ವಾಭಾವಿಕವಾದ ಅವಿದ್ಯಾದೃಷ್ಟಿಯಿಂದ ಹೇಗೆ ಹಗ್ಗ, ಕಪ್ಪೆಚಿಪ್ಪು, ಆಕಾಶಾದಿಗಳು ಇರುವಂತೆಯೇ ಇರುತ್ತಿದ್ದರೂ ನಿಜವನ್ನರಿಯದವ ರಿಗೆ ಹಾವು, ಬೆಳ್ಳಿ, ಕೊಪ್ಪರಿಗೆಯ ಆಕಾರಾದಿಗಳು ಕಂಡುಬರುವವೋ, ಹಾಗೆ ಕಂಡರೂ ಆ ಹುಸಿತೋರಿಕೆಯ ಲೇಪವು ಆ ಆಧಾರವಸ್ತುಗಳಿಗೆ ಇರುವದೇ ಇಲ್ಲವೋ ಹಾಗೆಯೇ, ಬ್ರಹ್ಮಸ್ವರೂಪವನ್ನರಿಯದವರು ಅದರಲ್ಲಿ ಅವಿದ್ಯೆಯಿಂದ ನಾಮರೂಪ ಕಾರ್ಯಕರಣಗಳ ಉಪಾಧಿಗಳನ್ನು ಕಲ್ಪಿಸಿದರೂ ಆ ಸ್ವರೂಪಕ್ಕೆ ಅದರ ಲೇಪವಿಲ್ಲದೆ ತಾನೇ ತಾನಾಗಿರುತ್ತದೆ. ಹೀಗಿದ್ದರೂ ಸಹ ಇದನ್ನರಿಯದೆ ಕೇವಲ ನಾಮರೂಪ ಕಾರ್ಯಕರಣ ಉಪಾಧಿಗಳಲ್ಲಿಯೇ ಸ್ವಾಭಾವಿಕವಾಗಿ ಜನಗಳ ದೃಷ್ಟಿಯು ನೆಟ್ಟಿರುತ್ತದೆ. ಇದನ್ನೇ ಸ್ವಾಭಾವಿಕ– ಅವಿದ್ಯಾದೃಷ್ಟಿ ಎಂದಿದೆ. ಈ ದೃಷ್ಟಿಯನ್ನವಲಂಬಿಸಿ ಬ್ರಹ್ಮ ಸ್ವರೂಪಕ್ಕಿಂತ ಪ್ರತ್ಯೇಕವಾಗಿ ಈ ಎಲ್ಲ ವಸ್ತುಗಳ ಅಸ್ತಿತ್ವದ ವ್ಯವಹಾರವು ಆರಂಭ ವಾಗುತ್ತದೆ– ಎಂದಿದ್ದಾರೆ.

ಪ್ರಶ್ನೆ :– ಇಲ್ಲಿ ಮೊದಲನೆಯ ವಾಕ್ಯದಲ್ಲಿ ಪರಮಾರ್ಥದೃಷ್ಟಿಯನ್ನೂ ಎರಡ ನೆಯ ವಾಕ್ಯದಲ್ಲಿ ವ್ಯವಹಾರದೃಷ್ಟಿಯನ್ನೂ ವಿವರಿಸಿದಂತಾಯಿತಲ್ಲವೆ ?

ಉತ್ತರ : ಹೌದು, ಸರಿಯಾಗಿ ತಿಳಿದಿರಿ.

ಪ್ರಶ್ನೆ :– ಈ ದೃಷ್ಟಿಭೇದಗಳನ್ನು ಶ್ರೀ ಶಂಕರರೇ ಕಲ್ಪಿಸಿ ತಮಗೆ ಬೇಕಾದದ್ದನ್ನು ಪರಮಾರ್ಥದೃಷ್ಟಿಗೂ ಬೇಡವಾದದ್ದನ್ನು ವ್ಯವಹಾರದೃಷ್ಟಿಗೂ ಸೇರಿಸುತ್ತಾರೆಂದು ಕೆಲವರು ಆರೋಪಿಸುವರಲ್ಲ! ಇದು ನಿಜವೆ ?

ಉತ್ತರ :– ಇಲ್ಲ, ಲೋಕದಲ್ಲಿ ಹಾಗೆ ದೃಷ್ಟಿಭೇದಗಳಿವೆ. ಎಲ್ಲ ವಾದಿಗಳೂ ಪರಮಾರ್ಥ ಹಾಗೂ ವ್ಯವಹಾರ ಎಂಬ ಭೇದವನ್ನು ಒಪ್ಪಲೇ ಬೇಕಾಗಿರುತ್ತದೆ.

**ಪ್ರಶ್ನೆ :– ಅದು ಹೇಗೆ ?**

ಉತ್ತರ :– ನೋಡಿ, ಸೂರ್ಯೋದಯ ಸೂರ್ಯಾಸ್ತಗಳೆಂಬುದು ವ್ಯವಹಾರ ದೃಷ್ಟಿ. ಸೂರ್ಯನಿಗೆ ಉದಯಾಸ್ತಗಳಿಲ್ಲ, ಪೃಥ್ವಿಯ ತಿರುಗುವಿಕೆಯಿಂದ ಹಾಗೆ ಕಾಣುತ್ತದೆ ಎಂಬುದು ಪರಮಾರ್ಥದೃಷ್ಟಿ. ಹೀಗೆ ಪ್ರತಿಯೊಂದರಲ್ಲೂ ಇದ್ದೇ ಇದೆ. ಆದ್ದರಿಂದ ಆಚಾರ್ಯರು ಇದ್ದದ್ದನ್ನೇ ಕ್ರಮಪಡಿಸಿ ತಿಳಿಸಿರುತ್ತಾರೆಯೇ ಹೊರತು ಅವರೇನೂ ಹೊಸದಾಗಿ ಕಲ್ಪಿಸಿಲ್ಲ. ಹಾಗೆಂದು ಹೇಳಿಯೂ ಬಿಟ್ಟಿದ್ದಾರೆ.

**ಪ್ರಶ್ನೆ :– ಎಲ್ಲಿ ಹೇಳಿದ್ದಾರೆ ಸ್ವಾಮಿ ?**

ಉತ್ತರ :– ಹಿಂದೆ ನೋಡಿದ ವಾಕ್ಯದ ಕೊನೆಯಲ್ಲಿ ಈ ಮಾತುಗಳನ್ನು ಬರೆದಿದ್ದಾರೆ, ಕೇಳಿ. **''ತಸ್ಮಾತ್ ಜ್ಞಾನಾಜ್ಞಾನೇ ಅಪೇಕ್ಷ್ಯ ಸರ್ವಃ ಸಂವ್ಯವಹಾರಃ ಶಾಸ್ತ್ರೀಯೋ ಲೌಕಿಕಶ್ಚ । ಅತೋ ನ ಕಾಚನ ವಿರೋಧಶಙ್ಕಾ । ಸರ್ವವಾದಿನಾಮಪಿ ಅಪರಿಹಾರ್ಯಃ ಪರಮಾರ್ಥಸಂವ್ಯವಹಾರಕೃತೋ ವ್ಯವಹಾರಃ ॥''** (ಬೃ.ಭಾ. ೩–೫–೧) ಜ್ಞಾನ ಹಾಗೂ ಅಜ್ಞಾನಗಳ ಅಪೇಕ್ಷೆಯಿಂದ ಎಲ್ಲ ಲೌಕಿಕ ಹಾಗೂ ಶಾಸ್ತ್ರೀಯ ವ್ಯವಹಾರಗಳು ನಡೆಯುತ್ತವೆ. ಆದ್ದರಿಂದ ಯಾವ ವಿರೋಧದ ಸಂಶಯಕ್ಕೂ ಇಲ್ಲಿ ಎಡೆಯಿಲ್ಲ. ಎಲ್ಲ ವಾದಿಗಳೂ ಪರಮಾರ್ಥ ಹಾಗೂ ವ್ಯವಹಾರ ಎಂಬ ದೃಷ್ಟಿಭೇದ ವನ್ನು ಅವಶ್ಯವಾಗಿ ಒಪ್ಪಿಕೊಳ್ಳಲೇಬೇಕು, ಒಪ್ಪದಿದ್ದರೆ ಆಗುವದೇ ಇಲ್ಲ– ಎಂಬುದು ಇದರ ತಾತ್ಪರ್ಯ.

**ಪ್ರಶ್ನೆ :– ಅಂತೂ ಸ್ವಾಭಾವಿಕ ಅವಿದ್ಯಾದೃಷ್ಟಿಯು ವ್ಯವಹಾರದೃಷ್ಟಿ, ಶಾಸ್ತ್ರಾದಿಪ್ರಮಾಣದಿಂದ ಸಂಪಾದಿಸಿದ ಜ್ಞಾನದೃಷ್ಟಿಯು ಪರಮಾರ್ಥದೃಷ್ಟಿ ಎಂದಾಯಿತಷ್ಟೆ ?**

ಉತ್ತರ :– ಹೌದು, ಪರಮಾರ್ಥದೃಷ್ಟಿಯು ಬಂದೊಡನೆಯೇ ವ್ಯವಹಾರ ದೃಷ್ಟಿಯು ಬಾಧಿತವಾಗುತ್ತದೆ, ಎಂದರೆ ಹಾಗೆ ತೋರಿದರೂ ಹಾಗಿಲ್ಲ ಎಂದು ಗೊತ್ತಾಗುತ್ತದೆ.

### (೪) ಎರಡು ಉದಾಹರಣೆಗಳು

**ಪ್ರಶ್ನೆ :– ಆಗಲಿ ಸ್ವಾಮಿ. ಈಗ ಈಚಿನವರು ಪರಮಾರ್ಥದೃಷ್ಟಿಯನ್ನು ಅವಲಂಬಿಸದೆ ಎಲ್ಲವನ್ನೂ ವ್ಯಾವಹಾರಿಕದೃಷ್ಟಿಯಿಂದಲೇ ಅಳೆಯುತ್ತಾರೆ ಎಂದಿರಲ್ಲ, ಅದು ಹೇಗೆ ? ಸ್ವಲ್ಪ ವಿವರಿಸಬಾರದೆ ?**

ಉತ್ತರ :– ಇದಕ್ಕೆ ಎರಡು ಉದಾಹರಣೆಗಳನ್ನು ಕೊಟ್ಟು ತಿಳಿಯಪಡಿಸುತ್ತೇನೆ, ಕೇಳಿ. ಮೊದಲನೆಯದಾಗಿ :– ತನಗೆರಡನೆಯದಿಲ್ಲದ – ಅದ್ವಯವಾದ– ಆತ್ಮಸ್ವರೂಪದಲ್ಲಿ ಈಶ್ವರ, ಈಶಿತವ್ಯ, ಈಶಿತೃತ್ವ– ಎಂಬ ಭೇದವು ಪರಮಾರ್ಥದೃಷ್ಟಿಯಿಂದ ಇರುವದೇ ಇಲ್ಲ. ಆದರೆ ಸ್ವಾಭಾವಿಕವಾದ ಅವಿದ್ಯಾದೃಷ್ಟಿಯಿಂದ ನೋಡಿದಾಗ ತೋರತಕ್ಕ ಈ ನಾಮರೂಪಾತ್ಮಕಪ್ರಪಂಚವೂ ಇದರಲ್ಲಿರುವ ಎಲ್ಲಾ ಜೀವರುಗಳೂ ಆತ್ಮಸ್ವರೂಪದ ಆಧಾರದಿಂದಲೇ ತೋರುತ್ತ, ಇರುತ್ತ, ಅಡಗುತ್ತಲಿರುವಂತೆ ಭಾಸವಾಗುವದರಿಂದ ಈ ದೃಷ್ಟಿಯಿಂದ ಈ ಅದ್ವಯಾತ್ಮಸ್ವರೂಪವೇ 'ಈಶ್ವರ' ಎನಿಸಿಕೊಂಡು ಸರ್ವಜ್ಞ, ಸರ್ವೇಶ್ವರ, ಸರ್ವನಿಯಾಮಕ, ಸೃಷ್ಟಿಸ್ಥಿತಿಲಯಕರ್ತನೆಂದು ವ್ಯವಹರಿಸಲ್ಪಡುತ್ತದೆ. ಹೀಗಿದ್ದರೂ ಪರಮಾರ್ಥದೃಷ್ಟಿಯಿಂದ ಕೇವಲ ಅದ್ವಯತತ್ತ್ವವೇ ಆಗಿರುತ್ತದೆ– ಎಂಬ ಅಭಿಪ್ರಾಯವನ್ನು ಬ್ರಹ್ಮಸೂತ್ರಭಾಷ್ಯದಲ್ಲಿ ಆಚಾರ್ಯರು ವಿವರಿಸುವಾಗ ಈ ದೃಷ್ಟಿಭೇದಗಳನ್ನವಲಂಬಿಸಿಯೇ ನಿರೂಪಿಸಿರುತ್ತಾರೆ.

ಪ್ರಶ್ನೆ :– ಹಾಗೂ ನಿರೂಪಿಸಿರುವ ವಾಕ್ಯಗಳಾವವು ?

ಉತ್ತರ :– "ಏವಮ್ ಅವಿದ್ಯಾಕೃತನಾಮರೂಪೋಪಾಧ್ಯನುರೋಧಿ ಈಶ್ವರೋ ಭವತಿ, ವ್ಯೋಮೇವ ಘಟಕರಕಾದ್ಯುಪಾಧ್ಯನುರೋಧಿ । ಸ ಚ ಸ್ವಾತ್ಮಭೂತಾನೇವ ಘಟಾಕಾಶಸ್ಥಾನೀಯಾನ್ ಅವಿದ್ಯಾಪ್ರತ್ಯುಪಸ್ಥಾಪಿತನಾಮರೂಪಕೃತಕಾರ್ಯಕರಣಸಙ್ಘಾತಾನುರೋಧಿನೋ ಜೀವಾಖ್ಯಾನ್ ವಿಜ್ಞಾನಾತ್ಮನಃ ಪ್ರತಿ ಈಷ್ಟೇ ವ್ಯವಹಾರವಿಷಯೇ । ತದೇವಮ್ ಅವಿದ್ಯಾತ್ಮಕೋಪಾಧಿಪರಿಚ್ಛೇದಾಪೇಕ್ಷಮೇವ ಈಶ್ವರಸ್ಯ ಈಶ್ವರತ್ವಮ್, ಸರ್ವಜ್ಞತ್ವಮ್, ಸರ್ವಶಕ್ತಿತ್ವಂ ಚ । ನ ಪರಮಾರ್ಥತೋ ವಿದ್ಯಯಾ ಅಪಾಸ್ತಸರ್ವೋಪಾಧಿಸ್ವರೂಪೇ ಆತ್ಮನಿ ಈಶಿತ್ರೀಶಿತವ್ಯಸರ್ವಜ್ಞತ್ವಾದಿ ವ್ಯವಹಾರಃ ಉಪಪದ್ಯತೇ ।" (ಸೂ.ಭಾ.೨–೧–೧೪).

"ಅಪಿ ಚ ಯದಾ 'ತತ್ತ್ವಮಸಿ' ಇತ್ಯೇವಜಾತೀಯಕೇನ ಅಭೇದ ನಿರ್ದೇಶೇನ ಅಭೇದಃ ಪ್ರತಿಬೋಧಿತೋ ಭವತಿ ಅಪಗತಂ ಭವತಿ ತದಾ ಜೀವಸ್ಯ ಸಂಸಾರಿತ್ವಂ, ಬ್ರಹ್ಮಣಶ್ಚ ಸ್ರಷ್ಟೃತ್ವಮ್ । ಸಮಸ್ತಸ್ಯ ಮಿಥ್ಯಾಜ್ಞಾನವಿಜೃಮ್ಭಿತಸ್ಯ ಭೇದ ವ್ಯವಹಾರಸ್ಯ ಸಮ್ಯಗ್ಜ್ಞಾನೇನ ಬಾಧಿತತ್ವಾತ್ । ...... ಅವಿದ್ಯಾಪ್ರತ್ಯುಪಸ್ಥಾಪಿತ ನಾಮರೂಪಕೃತಕಾರ್ಯಕರಣಸಂಘಾತೋಪಾಧ್ಯವಿವೇಕತಾ ಹಿ ಭ್ರಾನ್ತಿಃ ಹಿತಾಕರಣಾದಿಲಕ್ಷಣಃ ಸಂಸಾರಃ, ನ ತು ಪರಮಾರ್ಥತೋಽಸ್ತಿ ಇತಿ ಅಸಕೃತ್ ಅವೋಚಾಮ ।" (ಸೂ.ಭಾ.೨–೧–೨೨).

ಈ ಎರಡೂ ವಾಕ್ಯಗಳಲ್ಲಿ, ಅವಿದ್ಯಾಕೃತವ್ಯಾವಹಾರಿಕ ದೃಷ್ಟಿಯಲ್ಲಿ ಈಶ್ವರ, ಈಶಿತವ್ಯ ಎಂಬ ಭೇದವ್ಯವಹಾರವಿರುತ್ತದೆ. ಪರಮಾರ್ಥದೃಷ್ಟಿಯಲ್ಲಿ ಅವಿದ್ಯೆಯೂ

ಅದರಿಂದ ಕಲ್ಪಿತವಾದ ಸರ್ವವ್ಯವಹಾರವೂ ಬಾಧಿತವಾಗಿಬಿಟ್ಟಿರುವದರಿಂದ ಕೇವಲ ಅದ್ವಯವಾದ ಪರಮಾರ್ಥತತ್ತ್ವವೇ ಇರುತ್ತದೆ. ಆ ದೃಷ್ಟಿಯಿಂದ ಸಂಸಾರಿಯಾದ ಜೀವನೆಂಬ ಅಥವಾ ಸರ್ವಜ್ಞನಾದ ಈಶ್ವರನೆಂಬ ಭೇದವೇ ಇರುವದಿಲ್ಲ– ಎಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ.

**ಪ್ರಶ್ನೆ :– ಇಲ್ಲಿಯೂ ಸಹ ವ್ಯಾವಹಾರಿಕದೃಷ್ಟಿ, ಪರಮಾರ್ಥದೃಷ್ಟಿ– ಎಂಬ ದೃಷ್ಟಿಭೇದಗಳನ್ನೇ ಅನುಸರಿಸಿರುವರೆಂದಾಯಿತಲ್ಲವೆ ?**

ಉತ್ತರ :– ಹೌದು, ಈ ದೃಷ್ಟಿಭೇದಗಳನ್ನರಿಯದ ಕೆಲವರು ಈಶ್ವರ, ಈಶಿತೃತ್ವ, ಸರ್ವಜ್ಞತ್ವಾದಿಗಳು ಪರಮಾರ್ಥವಾಗಿಯೇ ಇವೆ ಎಂಬ ಮೊಂಡತನಕ್ಕೆ ಅಂಟಿಕೊಂಡಿರುತ್ತಾರೆ. ಆದ್ದರಿಂದಲೇ ಭಾಷ್ಯಕಾರರ ಹೃದಯವನ್ನು ಗೊತ್ತುಪಡಿಸಲು ಈ ದೃಷ್ಟಿದ್ವಯದ ರಹಸ್ಯವನ್ನು ತಿಳಿದಿರಲೇ ಬೇಕಾಗಿರುತ್ತದೆ.

**ಪ್ರಶ್ನೆ :– ಸರಿ, ಈಗ ಇನ್ನೊಂದು ಉದಾಹರಣೆಯನ್ನು ಹೇಳೋಣವಾಗಲಿ:**

ಉತ್ತರ :– ನೋಡಿ, ಎರಡನೆಯ ಉದಾಹರಣೆ ಎಂದರೆ ಸೂತ್ರಭಾಷ್ಯಗಳಲ್ಲಿ ಶ್ರುತಿಗೂ ಯುಕ್ತಿಗೂ ಅನುಗುಣವಾಗಿ ಈ ಜಗತ್ತಿಗೆ ಬ್ರಹ್ಮವೇ ಕಾರಣವು ; ಪರಮಾಣುಗಳಾಗಲಿ ಸಾಂಖ್ಯರು ಹೇಳುವ ಪ್ರಧಾನವಾಗಲಿ (ಪ್ರಕೃತಿ) ಅಥವಾ ಸಂಸಾರಿಯಾಗಲಿ ಕಾರಣವಲ್ಲ ಎಂಬುದಾಗಿ ಪ್ರತಿಪಾದಿಸಿರುವದಲ್ಲದೆ ಬ್ರಹ್ಮವು ಬರೀ ನಿಮಿತ್ತಕಾರಣ ಎಂಬುವರ ಮತವನ್ನೂ ತಳ್ಳಿಹಾಕಿ ಉಪಾದಾನ ಹಾಗೂ ನಿಮಿತ್ತಕಾರಣ ಗಳೆರಡೂ ಬ್ರಹ್ಮವೇ ಆಗಿದೆ ಎಂಬುದನ್ನು ಬಹಳ ಚೆನ್ನಾಗಿ ಪ್ರತಿಪಾದಿಸಿರುತ್ತಾರೆ. ಇದೆಲ್ಲವೂ ವ್ಯಾವಹಾರಿಕದೃಷ್ಟಿಯಿಂದ ಜಗತ್ತಿದೆ ಎಂಬುದನ್ನಿಟ್ಟುಕೊಂಡು ಪ್ರತಿಪಾದಿಸಿದ ಭಾಗವಾಗಿದೆ. ಆದರೆ ಪರಮಾರ್ಥದೃಷ್ಟಿಯಿಂದ ಕಾರ್ಯಕಾರಣ ಭಾವವನ್ನೇ ನಿರಾಸಮಾಡಿ, ಕೇವಲ ಅದ್ವಯತತ್ತ್ವವೇ ಇರತಕ್ಕದ್ದು ; ಜಗತ್ತೆಂಬುದು ಬರೀ ಮಾತು ಮಾತ್ರ ; ಬ್ರಹ್ಮವನ್ನರಿಯದಾಗ ಬ್ರಹ್ಮವೇ ಜಗತ್ತಿನಂತೆ ತೋರಿಕೊಳ್ಳುವ ದಾದ್ದರಿಂದ ವೇದಾಂತಗಳಲ್ಲಿ ಕಾರಣ ಎಂದರೆ ಪರಮಾರ್ಥತತ್ತ್ವ, ಕಾರ್ಯ ಎಂದರೆ ಅದನ್ನರಿಯದಿರುವಾಗ ತೋರುವ ಹುಸಿತೋರಿಕೆ ಎಂಬರ್ಥದಲ್ಲಿಯೇ ಬಳಸಿರುವ ದೆಂದು ತಿಳಿಸಿ, ಹುಸಿತೋರಿಕೆಗೂ ಪರಮಾರ್ಥಕ್ಕೂ ಯಾವ ಕಾರ್ಯಕಾರಣಭಾವವೂ ಹೇಗೂ ಹೊಂದುವದಿಲ್ಲ ಎಂಬುದನ್ನು ಪ್ರತಿಪಾದಿಸಿ ಪರಮಾರ್ಥದೃಷ್ಟಿಯ ಕೊನೆಯ ನಿರ್ಣಯವನ್ನು ಭಾಷ್ಯಗಳಲ್ಲಿ ಕೊಟ್ಟಿದ್ದಾರೆ.

**ಪ್ರಶ್ನೆ :– ಈ ವಿಷಯಗಳನ್ನು ಎಲ್ಲಿ ತಿಳಿಸಿದ್ದಾರೆ ?**

ಉತ್ತರ :– ನಿಧಾನವಾಗಿ ಕೇಳಿ. ಸೂತ್ರಭಾಷ್ಯದ ಜನ್ಮಾದ್ಯಧಿಕರಣದಲ್ಲಿ **''ಜನ್ಮಾದ್ಯಸ್ಯ ಯತಃ'' ಎಂಬಲ್ಲಿಂದ ಆರಂಭಿಸಿ ''ನ ಯಥೋಕ್ತವಿಶೇಷಣಸ್ಯ ಜಗತಃ**

**ಯಥೋಕ್ತವಿಶೇಷಣಮ್ ಈಶ್ವರಂ ಮುಕ್ತ್ವಾ ಅನ್ಯತಃ ಪ್ರಧಾನಾತ್ ಅಚೇತನಾತ್, ಅಣುಭ್ಯಃ, ಅಭಾವಾತ್ ಸಂಸಾರಿಣೋ ವಾ ಉತ್ಪತ್ತ್ಯಾದಿ ಸಂಭಾವಯಿತುಂ ಶಕ್ಯಮ್ ।''** ಎಂದು ವಾಕ್ಯವನ್ನು ಮುಗಿಸಿದ್ದಾರೆ. ಇದರ ತಾತ್ಪರ್ಯವೇನೆಂದರೆ ನಾವು ಹಿಂದೆ ಹೇಳಿದಂತೆ ''ದೇಶಕಾಲನಿಮಿತ್ತಫಲಸಂಬಂಧಾದಿಗಳಿಂದಲೂ ಅನೇಕ ಕರ್ತೃಭೋಕ್ತೃಗಳಿಂದಲೂ ಕೂಡಿಕೊಂಡು ನಾಮರೂಪಗಳಿಂದ ಹರಡಿಕೊಂಡು ಮನಸ್ಸಿನಿಂದ ಇದರ ರಚನೆ ಹೇಗಾಯಿತೆಂದು ಚಿಂತಿಸಲೂ ಸಾಧ್ಯವಿಲ್ಲದಂಥ ಈ ಜಗತ್ತಿನ ಉತ್ಪತ್ತಿಸ್ಥಿತಿಲಯಗಳು ಸರ್ವಜ್ಞನೂ ಸರ್ವಶಕ್ತನೂ ಆಗಿರುವ ಈಶ್ವರನನ್ನು ಬಿಟ್ಟು ಬೇರೆ ಅಚೇತನವಾದ ಪ್ರಧಾನದಿಂದಾಗಲಿ, ಅಣುಗಳಿಂದಾಗಲಿ, ಅಭಾವ ದಿಂದಾಗಲಿ, ಯಾವನೊಬ್ಬ ಸಂಸಾರಿಯಿಂದಾಗಲಿ ಆಗುವದಕ್ಕೆ ಶಕ್ಯವಿಲ್ಲ.'' ಹೀಗೆಂದು ಈಶ್ವರಕಾರಣವಾದವನ್ನು ಆರಂಭಿಸಿ ಮುಂದುವರಿಸುತ್ತಾ ಎರಡನೆಯ ಅಧ್ಯಾಯದ ಆರಂಭದಲ್ಲಿ **''ಪ್ರಥಮೇ ಅಧ್ಯಾಯೇ ಸರ್ವಜ್ಞಃ ಸರ್ವೇಶ್ವರೋ ಜಗತಃ ಉತ್ಪತ್ತಿಕಾರಣಮ್ ಮೃತ್ಸುವರ್ಣಾದಯ ಇವ ಘಟರುಚಕಾದೀನಾಮ್ । ಉತ್ಪನ್ನಸ್ಯ ಜಗತಃ ನಿಯನ್ತೃತ್ವೇನ ಸ್ಥಿತಿಕಾರಣಮ್, ಮಾಯಾವೀವ ಮಾಯಾಯಾಃ। ಪ್ರಸಾರಿತಸ್ಯ ಚ ಜಗತಃ ಪುನಃ ಸ್ವಾತ್ಮನ್ಯೇವ ಉಪಸಂಹಾರಕಾರಣಮ್ । ಅವನಿರಿವ ಚತುರ್ವಿಧಸ್ಯ ಭೂತಗ್ರಾಮಸ್ಯ । ಸ ಏವ ಚ ಸರ್ವೇಷಾಂ ನ ಆತ್ಮಾ ಇತ್ಯೇತತ್ ವೇದಾನ್ತವಾಕ್ಯ ಸಮನ್ವಯಪ್ರತಿಪಾದನೇನ ಪ್ರತಿಪಾದಿತಮ್ । ಪ್ರಧಾನಾದಿಕಾರಣವಾದಾಶ್ಚ ಅಶಬ್ದತ್ವೇನ ನಿರಾಕೃತಾಃ ।''** ಎಂದಿದ್ದಾರೆ. ಎಂದರೆ ''ಒಂದನೆಯ ಅಧ್ಯಾಯದಲ್ಲಿ ಸರ್ವಜ್ಞನಾದ ಸರ್ವೇಶ್ವರನು ಅಸಲಿ ಮುಂತಾದ ಆಭರಣಗಳಿಗೆ ಬಂಗಾರದಂತೆಯೂ ಮಡಕೆ ಮುಂತಾದವುಗಳಿಗೆ ಮಣ್ಣಿನಂತೆಯೂ ಜಗತ್ತಿಗೆ ಉತ್ಪತ್ತಿಕಾರಣನು ; ಉತ್ಪತ್ತಿ ಯಾದ ಜಗತ್ತನ್ನು ಕಟ್ಟಿನಲ್ಲಿಟ್ಟಿರುವದರಿಂದ ಮಾಯಾವಿಯು ಮಾಯೆಗೆ ಕಾರಣವಾಗಿ ರುವಂತೆ ಸ್ಥಿತಿಕಾರಣನು ; ಮತ್ತು ಹರಡಿರುವ ಜಗತ್ತಿಗೆ ಭೂಮಿಯು ನಾಲ್ಕು ಬಗೆಯ ಭೂತಸಮೂಹಕ್ಕೆ ಕಾರಣವಾಗಿರುವಂತೆ ಆತ್ಮನಲ್ಲಿಯೇ ಅಡಗಿಸಿಕೊಳ್ಳುವ ಕಾರಣನು; ಆತನೇ ನಮ್ಮಗಳೆಲ್ಲರ ಆತ್ಮನು– ಎಂದು ವೇದಾಂತವಾಕ್ಯಸಮನ್ವಯಪ್ರತಿಪಾದನೆ ಯಿಂದ ನಿರೂಪಿಸಿದ್ದಾಯಿತು. ಪ್ರಧಾನವೇ ಮುಂತಾದವು ಜಗತ್ತಿಗೆ ಕಾರಣವೆಂಬ ವಾದಗಳನ್ನು ನಿರಾಕರಿಸಿದ್ದೂ ಆಯಿತು'' ಎಂದು ಹೇಳಿ ಈಶ್ವರಕಾರಣವಾದವನ್ನೇ ಮುಖ್ಯವಾಗಿ ಪ್ರತಿಪಾದಿಸಿ ಮುಂದೆ ಈ ಪ್ರತಿಪಾದನೆಯ ವಿಷಯದಲ್ಲಿ ಬರುವ ಸ್ಮೃತಿವಿರೋಧಾದಿ ಅನೇಕಸಂಶಯಗಳನ್ನು ಪರಿಹರಿಸಿದ್ದಾರೆ.

ಇದಾದಮೇಲೆ ''ತದನನ್ಯತ್ವಮಾರ್ಭಣಶಬ್ದಾದಿಭ್ಯಃ ।'' (೨–೧–೧೪) ಎಂಬ ಸೂತ್ರದಲ್ಲಿ **''ನ ತು ಅಯಂ ವಿಭಾಗಃ ಪರಮಾರ್ಥತೋಽಸ್ತಿ। ಯಸ್ಮಾತ್ ತಯೋಃ ಕಾರ್ಯಕಾರಣಯೋಃ ಅನನ್ಯತ್ವಮ್ ಅವಗಮ್ಯತೇ । ಕಾರ್ಯಮ್ ಆಕಾಶಾದಿಕಂ**

**ಬಹುಪ್ರಪಞ್ಚಂ ಜಗತ್, ಕಾರಣಂ ಪರಂ ಬ್ರಹ್ಮ। ತಸ್ಮಾತ್ ಕರಣಾತ್ ಪರಮಾರ್ಥ-ತೋಽನನ್ಯತ್ವಮ್, ವ್ಯತಿರೇಕೇಣ ಅಭಾವಃ ಕಾರ್ಯಸ್ಯ ಅವಗಮ್ಯತೇ । ಕುತಃ? ಆರಮ್ಭಣಶಬ್ದಾದಿಭ್ಯಃ।''** ಎಂದಿದ್ದಾರೆ. ಇದರ ಅರ್ಥವೇನೆಂದರೆ- ಈ ವ್ಯಾವಹಾರಿಕ ವಾದ ಭೋಕ್ತೃಭೋಗ್ಯರೂಪವಾದ ವಿಭಾಗವನ್ನು ಒಪ್ಪಿಕೊಂಡು ಲೋಕದಂತೆ ಇರಬಹುದು ಎಂಬ ಪರಿಹಾರವನ್ನು ಹೇಳಿದ್ದಾಯಿತು. ಆದರೆ ಈ ವಿಭಾಗವು ಪರಮಾರ್ಥವಾಗಿ ಇರುವದಿಲ್ಲ. ಏಕೆಂದರೆ, ಅವುಗಳಿಗೆ ಎಂದರೆ ಕಾರ್ಯಕಾರಣ ಗಳಿಗೆ ಅನನ್ಯತ್ವವಿದೆ ಎಂದು ನಿಶ್ಚಯವಾಗುತ್ತದೆ. ಕಾರ್ಯವೆಂದರೆ ಆಕಾಶವೇ ಮುಂತಾದ ಅನೇಕ ಪ್ರಕಾರವಾದ ಜಗತ್ತು; ಕಾರಣವೆಂದರೆ ಪರಬ್ರಹ್ಮವು. ಆ ಕಾರಣಕ್ಕಿಂತ ಕಾರ್ಯವು ಪರಮಾರ್ಥವಾಗಿ ಅನನ್ಯವು, ಎಂದರೆ ಅದಕ್ಕಿಂತ ಬೇರೆಯಾಗಿ ಇಲ್ಲ ಎಂದು ನಿಶ್ಚಯವಾಗುತ್ತದೆ. ಏತರಿಂದ ? ಎಂದರೆ ಆರಂಭಣಶಬ್ದವೇ ಮುಂತಾದವುಗಳಿಂದ.

ಇಲ್ಲಿ ಆಚಾರ್ಯರು ಪರಮಾರ್ಥದೃಷ್ಟಿಯಿಂದ, ಹಿಂದೆ ಅಧ್ಯಾರೋಪಿತವಾಗಿ ಹೇಳಿದ ಕಾರ್ಯಕಾರಣಭಾವವನ್ನು ಅಲ್ಲಗಳೆದು, ಕಾರಣವೆಂದರೆ ಪರಮಾರ್ಥ ವೆಂದೂ ಕಾರ್ಯವೆಂದರೆ ಹುಸಿತೋರಿಕೆಯೆಂದೂ ನಿರ್ಣಯವನ್ನು ಕೊಟ್ಟು ಬ್ರಹ್ಮವೇ ಪರಮಾರ್ಥವು ಎಂಬುದನ್ನು ಪ್ರತಿಪಾದಿಸಿದ್ದಾರೆ. ಈ ಸೂತ್ರದ ಭಾಷ್ಯವನ್ನು ಪೂರ್ಣವಾಗಿ ಅಭ್ಯಸಿಸಿ ನೋಡಿದ್ದಾದರೆ ಈ ಮಾತು ಮನದಟ್ಟಾಗುತ್ತದೆ. ಈಗ ಪರಮಾರ್ಥದೃಷ್ಟಿಯ ನಿರ್ಣಯದ ಒಂದು ವಾಕ್ಯವನ್ನು ಮಾತ್ರ ಉದಾಹರಿಸಿ ವಿಷಯವನ್ನು ಮುಗಿಸುತ್ತೇವೆ.

**ಪ್ರಶ್ನೆ :– ಈ ವಾಕ್ಯವಾವುದು ?**

ಉತ್ತರ :– **''ತಸ್ಮಾತ್ ಯಥಾ ಘಟಕರಕಾದ್ಯಾಕಾಶಾನಾಂ ಮಹಾಕಾಶಾನನ್ಯ ತ್ವಮ್, ಯಥಾ ಚ ಮೃಗತೃಷ್ಣಿಕೋದಕಾದೀನಾಮ್ ಊಷರಾದಿಭ್ಯೋಽನನ್ಯತ್ವಮ್। ದೃಷ್ಟನಷ್ಟಸ್ವರೂಪತ್ವಾತ್, ಸ್ವರೂಪೇಣಾನುಪಾಖ್ಯತ್ವಾತ್, ಏವಮ್ ಅಸ್ಯ ಭೋಕ್ತ್ರಾದಿಪ್ರಪಞ್ಚಜಾತಸ್ಯ ಬ್ರಹ್ಮವ್ಯತಿರೇಕೇಣ ಅಭಾವಃ ಇತಿ ದ್ರಷ್ಟವ್ಯಮ್ ।''** (ಸೂ.ಭಾ.೨-೧-೧೪).

ಆದ್ದರಿಂದ ಹೇಗೆ ಗಡಿಗೆ, ಕುಡಿಕೆ- ಮುಂತಾದವುಗಳ ಆಕಾಶವು ಮಹಾಕಾಶಕ್ಕಿಂತ ಅನ್ಯವಲ್ಲವೋ ಮತ್ತು ಹೇಗೆ ಬಿಸಿಲುಕುದುರೆಯ ನೀರೇ ಮುಂತಾ ದವುಗಳು ತೋರಿಹಾರುವ ಸ್ವರೂಪವಾಗಿರುವದರಿಂದಲೂ ತಮ್ಮ ರೂಪದಿಂದ ಅನುಪಾಖ್ಯವಾಗಿರುವದರಿಂದಲೂ (ಆಧಾರವಸ್ತುವಿಗಿಂತ ಬೇರೆಯೆಂದಾಗಲಿ, ಬೇರೆಯಲ್ಲವೆಂದಾಗಲಿ ಹೇಳಲು ಬಾರದವುಗಳಾಗಿರುವದರಿಂದಲೂ ಎಂದರ್ಥ) ಚೌಳುನೆಲವೇ ಮುಂತಾದವುಗಳಿಗಿಂತ ಅನ್ಯವಲ್ಲವೋ ಹಾಗೆಯೇ ಈ ಭೋಗ್ಯ

ಭೋಕ್ತೃ– ಮುಂತಾದ ಪ್ರಪಂಚಸಮೂಹವು ಬ್ರಹ್ಮಕ್ಕಿಂತ ಬೇರೆಯಾಗಿ ಇರುವದಿಲ್ಲ ಎಂದು ತಿಳಿಯಬೇಕು– ಎಂಬುದು ಮೇಲಿನ ವಾಕ್ಯದ ತಾತ್ಪರ್ಯವು.

**ಪ್ರಶ್ನೆ :– ಈ ವಾಕ್ಯದಿಂದ ಜಗತ್ತೆಂಬುದು ಅವಿದ್ಯೆಯಿಂದ ತೋರುವ ಹುಸಿ ತೋರಿಕೆಯೇ ಹೊರತು ಇದು ಬ್ರಹ್ಮಕ್ಕಿಂತ ಬೇರಾದ ತತ್ತ್ವವೇ ಅಲ್ಲ ಎಂದಾಯಿತಲ್ಲವೆ?**

ಉತ್ತರ :– ಹೌದು. ಈಗ ನಮಗೆ ಜಗತ್ತಾಗಿ ತೋರುವದರ ತತ್ತ್ವವೇ ಬ್ರಹ್ಮವು. ಬ್ರಹ್ಮವನ್ನೇ ಜಗತ್ತೆಂದು ತಪ್ಪಾಗಿ ತಿಳಿಯುತ್ತೇವೆಯೇ ಹೊರತು ಮತ್ತೇನೂ ಇಲ್ಲ. ಜಗತ್ತು ಎಂಬ ರೂಪದಿಂದ ಇದು ಹುಸಿತೋರಿಕೆಯು ; ಬ್ರಹ್ಮರೂಪದಿಂದಲೇ ಇದು ಸತ್ಯವು. ಪರಮಾರ್ಥವು ಹೀಗಿರುವದರಿಂದ ಈ ದೃಷ್ಟಿಯಲ್ಲಿ ಬ್ರಹ್ಮ ಹಾಗೂ ಜಗತ್ತುಗಳಿಗೆ ನಿಜವಾದ ಕಾರ್ಯಕಾರಣಭಾವವು ಹೊಂದುವದಿಲ್ಲ ಎಂಬುದೇ ತಾತ್ಪರ್ಯ.

**ಪ್ರಶ್ನೆ :– ಹಾಗಾದರೆ ಬ್ರಹ್ಮದಿಂದ ಜಗತ್ತು ಹುಟ್ಟಿದೆ ಎಂದು ಹೇಳುವ ಶ್ರುತಿಗಳ ಗತಿಯೇನು ?**

ಉತ್ತರ :– ಶ್ರೀಶಂಕರಾಚಾರ್ಯರ ಪರಮಗುರುಗಳಾದ ಶ್ರೀಮದ್‌ಗೌಡಪಾದರು ತಮ್ಮ ಮಾಂಡೂಕ್ಯಕಾರಿಕೆಗಳಲ್ಲಿ ಈ ವಿಷಯವನ್ನು ಸ್ಪಷ್ಟಗೊಳಿಸಿ ಪರಮಾರ್ಥದೃಷ್ಟಿಯಿಂದ ಕಾರ್ಯಕಾರಣಭಾವದ ನಿರಾಸವನ್ನು ಮಾಡಿದ್ದಾರೆ. ಈ ವಿಷಯವನ್ನು ನಾವು ಮುಂದೆ ಸೃಷ್ಟಿಶ್ರುತಿಗಳ ತಾತ್ಪರ್ಯವನ್ನು ನಿರ್ಣಯಿಸುವ ಸಮಯವು ಬಂದಾಗ ವಿಶದವಾಗಿ ಚರ್ಚಿಸಬೇಕೆಂದುಕೊಂಡಿದ್ದೇವೆ.

**ಪ್ರಶ್ನೆ :– ಸದ್ಯಕ್ಕೆ ಸ್ವಲ್ಪವಾದರೂ ಈ ಬಗ್ಗೆ ಹೇಳಬಾರದೆ ?**

ಉತ್ತರ :– ಆಗಲಿ. **"ಮೃಲ್ಲೋಹವಿಸ್ಫುಲಿಙ್ಗಾದ್ಯೈಃ ಸೃಷ್ಟಿರ್ಯಾ ಚೋದಿತಾಽನ್ಯಥಾ । ಉಪಾಯಃ ಸೋಽವತಾರಾಯ ನಾಸ್ತಿ ಭೇದಃ ಕಥಂಚನ ॥"** (ಮಾಂ.ಕಾ. ೩–೧೫). ಶ್ರುತಿಗಳಲ್ಲಿ ಮಣ್ಣು, ಕಬ್ಬಿಣ, ಬೆಂಕಿಯ ಕಿಡಿಗಳು– ಮುಂತಾದ ದೃಷ್ಟಾಂತಗಳಿಂದ ಬೇರೆಬೇರೆಯಾಗಿ ಜಗತ್ತಿನ ಹಾಗೂ ಜೀವರ ಉತ್ಪತ್ತಿಯನ್ನು ಹೇಳಿರುತ್ತದೆಯಷ್ಟೆ. ಅದು ಅಜಾದ್ವಯವಾದ ಆತ್ಮತತ್ತ್ವದಲ್ಲಿ ನೆಲೆನಿಲ್ಲುವ ಮಟ್ಟಕ್ಕೆ ಇಳಿಸಲು ಉಪಾಯಮಾತ್ರವೇ ಹೊರತು ಪರಮಾರ್ಥವಾಗಿ ಯಾವ ಭೇದವೂ ಯಾವಾಗಲೂ ಇಲ್ಲ– ಎಂಬುದು ಈ ಶ್ಲೋಕದ ತಾತ್ಪರ್ಯವು.

ಶ್ರೀ ಶಂಕರಾಚಾರ್ಯರ ಭಾಷ್ಯಸಮೇತವಾಗಿ ಗೌಡಪಾದಕಾರಿಕೆಗಳನ್ನು ಅಧ್ಯಯನಮಾಡಿ ನೋಡಿದಾಗ ಕಾರ್ಯಕಾರಣಭಾವವು ಪರಮಾರ್ಥವಲ್ಲ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

**ಪ್ರಶ್ನೆ :— ಹಾಗಾದರೆ ಕಾರ್ಯಕಾರಣಭಾವವನ್ನು ಉಪದೇಶಿಸಿದ್ದು ಅಧ್ಯಾರೋಪದೃಷ್ಟಿ ಅಥವಾ ವ್ಯವಹಾರದೃಷ್ಟಿ ಎಂತಲೂ ಪರಮತತ್ತ್ವವನ್ನು ತಿಳಿಸಿ ಕಾರ್ಯಕಾರಣಭಾವವನ್ನು ನಿರಸನಮಾಡಿದ್ದು ಅಪವಾದ ಅಥವಾ ಪರಮಾರ್ಥ ದೃಷ್ಟಿ ಎಂತಲೂ ಇಲ್ಲಿ ತಿಳಿಯಬಹುದಲ್ಲವೇ ?**

ಉತ್ತರ :— ಹೌದು, ಹೀಗೆಯೇ ತಿಳಿಯಬೇಕು. ಸಾಕ್ಷ್ಯನುಭವದ ಪರಮಾರ್ಥ ದೃಷ್ಟಿಯಲ್ಲಿ ಕೇವಲ ಅದ್ವಯವಾದ ತತ್ತ್ವವೇ ಇರುವದನ್ನೂ ಆ ಸಾಕ್ಷಿಸ್ವರೂಪ ದಲ್ಲಿಯೇ ಈ ಜಗತ್ತು ತೋರಿ ಅಡಗುತ್ತಿರುವದನ್ನೂ ತೋರುವಾಗಲೂ ಸಹ ಸಾಕ್ಷಿಯಿಂದಲೇ ಪೂರ್ಣವ್ಯಾಪ್ತವಾಗಿರುವದನ್ನೂ, ಕಂಡುಕೊಂಡರೆ ಈವರೆಗೆ ಪ್ರತಿಪಾದಿಸಿದ ಕಾರ್ಯಕಾರಣಭಾವದ ನಿರಾಸ ಅಥವಾ ಕಾರ್ಯಕಾರಣಗಳ ಅನನ್ಯತ್ವ ಪ್ರಕ್ರಿಯೆಯ ಮರ್ಮವನ್ನು ತಿಳಿದುಕೊಂಡಂತಾಗುತ್ತದೆ.

(೫) ತಿಳಿಯುವದೆಂದರೇನು ?

**ಪ್ರಶ್ನೆ :— ಸರಿ, ತತ್ತ್ವವನ್ನು ಹೀಗೆಯೇ ತಿಳಿಯಬೇಕೆಂದು ಹೇಳಿದುದರ ಅಭಿಪ್ರಾಯವು ಹೀಗೇಯೇ ಕಂಡುಕೊಳ್ಳಬೇಕು ಎಂದಂತಾಗುವದಲ್ಲವೆ ?**

ಉತ್ತರ :— ಹೌದು, 'ಹೀಗೆ ತಿಳಿಯಬೇಕು' ಎಂದರೆ ಬುದ್ಧಿಯಿಂದ ಭಾವಿಸಿಕೊಳ್ಳಬೇಕೆಂದು ಅರ್ಥವಲ್ಲ. ತಿಳಿವಳಿಕೆಯನ್ನು ವಿಧಿಸುವದಕ್ಕಾಗುವದಿಲ್ಲ. ವಸ್ತುಸ್ಥಿತಿಯನ್ನು ಲಕ್ಷಿಸಿದರೆ ಜ್ಞಾನವು ತಾನೇ ಹುಟ್ಟುತ್ತದೆ. ಆದ್ದರಿಂದ ತಿಳಿದುಕೊಳ್ಳಿ ಎಂಬ ಮಾತಿಗೆ ಹಾಗಿರುವದನ್ನು ಅನುಭವದಲ್ಲಿ ಕಂಡುಕೊಳ್ಳಿ— ಎಂದೇ ಅರ್ಥ. ಹೀಗೆ ಪ್ರತಿಯೊಂದನ್ನೂ ಅನುಭವದಲ್ಲಿ ಕಂಡುಕೊಂಡಾಗ ಯಾವ ಸಂಶಯಗಳೂ ಬರುವದಿಲ್ಲ. ಯಾವ ತಪ್ಪು ತಿಳುವಳಿಕೆಗೂ ಆಸ್ಪದವಿರುವದಿಲ್ಲ.

**ಪ್ರಶ್ನೆ :— ಹಾಗಾದರೆ ಬ್ರಹ್ಮಕ್ಕೂ ಜಗತ್ತಿಗೂ ಕಾರ್ಯಕಾರಣಭಾವವು ನಿಜವಾಗಿಯೂ ಪರಮಾರ್ಥವಾಗಿಯೂ ಇದೆಯೆಂದು ಪಟ್ಟುಹಿಡಿಯುವವರು ಸರಿಯಾಗಿ ತತ್ತ್ವವನ್ನು ಕಂಡಿಲ್ಲವೆಂದೇ ಆಯಿತಲ್ಲವೆ ?**

ಉತ್ತರ :— ಹೌದು, ಸಾಕ್ಷ್ಯನುಭವದ ಪರಮಾರ್ಥದೃಷ್ಟಿಯನ್ನವಲಂಬಿಸಿ ನೋಡದೆ ಎಲ್ಲವನ್ನೂ ಬರಿಯ ವ್ಯಾವಹಾರಿಕದೃಷ್ಟಿಯಿಂದಲೇ ನೋಡುವವರಿಗೆ ಈ ರೀತಿ ತಪ್ಪು ತಿಳಿವಳಿಕೆಯಾಗುತ್ತದೆ. ಆದ್ದರಿಂದಲೇ ಈ ಗ್ರಂಥದ ಆರಂಭದಲ್ಲಿ ನಾವು ಶಾಂಕರ ವೇದಾಂತದ ಮರ್ಮವನ್ನು ಭೇದಿಸಲು ಸಾಕ್ಷ್ಯನುಭವದ ವಿಷಯವನ್ನು ಚೆನ್ನಾಗಿ ತಿಳಿದಿರಲೇಬೇಕು ಎಂದು ಪ್ರತಿಪಾದಿಸಿದ್ದೇವೆ.

## (೬) ಉಪಸಂಹಾರ

ಸಾಕ್ಷ್ಯನುಭವದ ವಿಷಯವನ್ನು ಸರಿಯಾಗಿ ಗ್ರಹಿಸಿದರೆ ಪರಮಾರ್ಥ ದೃಷ್ಟಿಯು ಪ್ರಾಪ್ತವಾಗುತ್ತದೆ. ಆಗ ಶ್ರೀಶಂಕರಾಚಾರ್ಯರ ಭಾಷ್ಯವಾಕ್ಯಗಳ ಅರ್ಥವು ಸರಿಯಾಗಿ ಅನುಭವಕ್ಕೆ ಬರುತ್ತದೆ. ಮತ್ತು ಭಾಷ್ಯದಲ್ಲಿ ಪ್ರತಿಪಾದಿತವಾದ ಜ್ಞಾನದ ವಿಷಯವು ವಸ್ತುತಂತ್ರವಾಗಿದೆಯೇ ಹೊರತು ಕರ್ತೃತಂತ್ರವಲ್ಲ ಎಂಬುದು ಗೊತ್ತಾಗುತ್ತದೆ. ಈ ವಸ್ತು ಸ್ವರೂಪಜ್ಞಾನದ ಕಡೆಗೆ ತಿರುಗಿಸಲು ಆ ಜ್ಞಾನವಿಲ್ಲದಾಗ ವಸ್ತುವಿನಲ್ಲಿ ಆರೋಪಿಸಲ್ಪಟ್ಟ ತತ್ತ್ವಗಳನ್ನು ಅನುವಾದಿಸಿಕೊಂಡು ಅವುಗಳಿಂದ ನಮ್ಮ ಚಿತ್ತವನ್ನು ಹಿಂದೆಳೆದು ಅದ್ವಿತೀಯಸಾಕ್ಷಿಸ್ವರೂಪದಲ್ಲಿ ನೆಲೆನಿಲ್ಲಿಸುತ್ತಾರೆಂಬುದು ಗೊತ್ತಾಗುವದಲ್ಲದೆ ಅಧ್ಯಾರೋಪಾಪವಾದವೇ ವೇದಾಂತದ ಮುಖ್ಯಪ್ರಕ್ರಿಯೆ ಎಂಬುದು ತಿಳಿಯುತ್ತದೆ. ಇದು ಗೊತ್ತಿಲ್ಲದಾಗ ವೇದಾಂತವಿಚಾರದಲ್ಲಿ ಅಸಾಂಪ್ರದಾಯಕಗಳಾದ ಪ್ರಕ್ರಿಯೆಗಳು ಬಂದು ಸೇರಿಕೊಳ್ಳುತ್ತವೆ– ಎಂಬೀ ಅಭಿಪ್ರಾಯವನ್ನೇ ನಾವು ಈವರೆಗಿನ ಪ್ರಶ್ನೋತ್ತರರೂಪದ ಈ ಗ್ರಂಥದಲ್ಲಿ ತೋರಿಸಿಕೊಟ್ಟಿದ್ದೇವೆ.

ಶ್ರೀ ಶಂಕರಭಗವತ್ಪಾದರ ಅನುಗ್ರಹದಿಂದ ಮುಮುಕ್ಷುಗಳಿಗೆ ಪರಿಶುದ್ಧ ಸಾಂಪ್ರದಾಯಕವಾದ ವೇದಾಂತಪ್ರಕ್ರಿಯೆಯು ದೊರಕಿ ಈಗಲೇ ನಿರಪವಾದವೂ ನಿರಾಕಾಂಕ್ಷವೂ ಆದ ಪರಮಾರ್ಥತತ್ತ್ವದಲ್ಲಿ ನೆಲೆನಿಲ್ಲುವಿಕೆಯುಂಟಾಗಲೆಂದು ಆ ಮಹಾಮಹಿಮರನ್ನು ಪ್ರಾರ್ಥಿಸೋಣ.

------

## ಇದೇ ಗ್ರಂಥಕರ್ತರ ಕೆಲವು ಕೃತಿಗಳು

೧. **ಶಂಕರದರ್ಶನ** : (ಬ್ರಹ್ಮಜ್ಞಾವಚನಗಳು–ತ್ರಿಪದಿ) "ಗ್ರಂಥಭಾಗವನ್ನು ಮಂಗಲಾಚರಣೆಯಿಂದ ಪ್ರಾರಂಭಿಸಿ **ಶಂಕರಸಿದ್ಧಾಂತದ** ರೂಪರೇಖೆಯನ್ನು ಹೇಳಿ ವಿವರಣಪ್ರಸ್ಥಾನ, ತರ್ಕ, ಭೌತಿಕವಿಜ್ಞಾನ ಪ್ರಕರಣಗಳಲ್ಲಿ ವೇದಾಂತಸ್ವರೂಪವನ್ನು ವಿವರಿಸಿ ಶಂಕರಾಚಾರ್ಯರು ಕಾರ್ಯಗಳನ್ನು ನಿವೇದಿಸಿದ್ದಾರೆ. ಸ್ವತಃ ಕೈಗೊಂಡ ತ್ರಿಪದಿಗಳೇ ಸಾಕಷ್ಟು ಸುಂದರವಾಗಿದ್ದರೂ ಅಚ್ಚುಕಟ್ಟಿನ ದೃಷ್ಟಿಯಿಂದ ಗದ್ಯಸಾರಾಂಶ ಬಂದಿದೆ – ಎಂದು ಹೇಳಬೇಕು. ಸುಂದರಸರಳಪದಗಳಿಂದ ಬಂಧುರವಾಗಿ **ಶಂಕರದರ್ಶನವನ್ನು** ಮಾಡಿಸಿಕೊಟ್ಟಿರುವ **ಶ್ರೀ || ದೇವರಾಯ ಕುಲಕರ್ಣಿಗಳು** ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಸಂಸ್ಕೃತದಲ್ಲಿದ್ದ ಉಕ್ಕಿನ ಕಡಲೆಯನ್ನು ಸುಲಿದ ಬಾಳೆಯ ಹಣ್ಣನ್ನಾಗಿಸಿದ್ದಾರೆ. ಉತ್ತಮ ಸಂಸ್ಕಾರ ನೀಡುವಂಥದ್ದಾಗಿದೆ – ಈ ಗ್ರಂಥ."

– ಸಂಯುಕ್ತಕರ್ನಾಟಕ (೧–೬–೧೯೭೦)

೨. **ಶಂಕರಸಂಸ್ಮರಣ** : ಶಾಂಕರವೇದಾಂತದ ಶುದ್ಧಪ್ರಕ್ರಿಯರೂಪವನ್ನು ತಿಳಿದುಕೊಳ್ಳಲು ಅನುಕೂಲವಾಗುವಂಥ ಪ್ರಶ್ನೋತ್ತರ ರೂಪವಾದ ಗ್ರಂಥ.

೩. **ಶಂಕರಸಿದ್ಧಾಂತಸಂಸ್ಮರಣ** : ಸಾಕ್ಷ್ಯನುಭವದ (ಔಪನಿಷದ್ ಪುರುಷ) ಒಂದೇ ವಿಷಯವನ್ನು ವಿಸ್ತಾರವಾಗಿ ಸರಳವಾದ ಪ್ರಶ್ನೋತ್ತರಗಳ ರೂಪವಾಗಿ ಈ ಗ್ರಂಥದಲ್ಲಿ ವಿವರಿಸಲಾಗಿದೆ.

(೨ ಮತ್ತು ೩ ಪುಸ್ತಕಗಳನ್ನು ಒಟ್ಟು ಸೇರಿಸಿ ಈಗ ಒಂದೇ ಪುಸ್ತಕವಾಗಿ ಎರಡನೆಯ ಬಾರಿಗೆ ಪುನಃ ಮುದ್ರಣವಾಗಿ ಹೊರಬಂದಿದೆ. **ಈಗ ಇದು ನಿಮ್ಮ ಕೈಯಲ್ಲಿದೆ**).

೪. **ಶ್ರೀ ಮದ್ಭಗವದ್ಗೀತಾಲಾವಣಿ** (ಸಮೀಕ್ಷಣೆ ಸಮೇತ)

೫. **ಅಧ್ಯಾತ್ಮಯೋಗ** (ಕನ್ನಡ – ತೆಲುಗು–ಇಂಗ್ಲಿಷ್)

೬. **ಶ್ರೀದತ್ತನಾಮಾಮೃತ ಹಾಗೂ ಉಪಾಸನೆ**

೭. **ಶ್ರವಣ–ಮನನ–ನಿದಿಧ್ಯಾಸನ** (ಸಾಕ್ಷಾತ್ ಸಾಧನಗಳು)

------

# ಗ್ರಂಥಕರ್ತರ ಕಿರುಪರಿಚಯ



**ಲೇಖಕರು :**

**ಶ್ರೀ ಬ್ರಹ್ಮಜ್ಞಕವಿ ಶ್ರೀದೇವರಾಯ ಕುಲಕರ್ಣಿ (ಹೊಂಬಳ)**

**(1922 - 1993)**

ಕರ್ನಾಟಕರಾಜ್ಯದ ಗದಗ ಜಿಲ್ಲೆಯ ಹೊಂಬಳ ಗ್ರಾಮದವರಾದ ಆಗರ್ಭ ಶ್ರೀಮಂತರಾದ ರಾಘವೇಂದ್ರರಾಯರ ಪುತ್ರರಾದ **ಶ್ರೀದೇವರಾಯಕುಲಕರ್ಣಿ** ಯವರು **ತಾ। 2-12-1922**ರಲ್ಲಿ ಜನಿಸಿದರು. ಅನಂತರ ಪ್ರಾಪ್ತವಯಸ್ಕರಾದಾಗ ಶ್ರೀಅಗ್ನಿಹೋತ್ರಿ ಶಂಕರಭಟ್ಟರೆಂಬ ಗುರುಗಳಲ್ಲಿ ಸಂಸ್ಕೃತಭಾಷೆ ಹಾಗೂ ಅರ್ವಾಚೀನವೇದಾಂತ ಸಂಪ್ರದಾಯದಂತೆ ಶಂಕರವೇದಾಂತಾಧ್ಯಯನ ಮಾಡಿದರು. 1954 ರಿಂದ ಹೊಳೆನರಸೀಪುರದ ಪೂಜ್ಯ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳಶಿಷ್ಯರಾಗಿ ಶಾಂಕರವೇದಾಂತವನ್ನು ಪ್ರಸ್ಥಾನತ್ರಯಶಂಕರಭಾಷ್ಯಾನುಸಾರವಾಗಿ ಅಧ್ಯಯನಮಾಡಿ ಪ್ರವಚನ ಹಾಗೂ ಗ್ರಂಥರಚನೆಗಳ ಮೂಲಕ ವೇದಾಂತತತ್ತ್ವ ಪ್ರಚಾರವನ್ನು ದೇಶ-ವಿದೇಶಗಳಲ್ಲಿ ಕೈಗೊಂಡರು. 1956 ರಿಂದ ಬೆಂಗಳೂರು ನಗರದಲ್ಲಿ ನೆಲೆಸಿದ್ದರು.

ಸಂಸ್ಕೃತ, ಕನ್ನಡ, ಮರಾಠಿ, ತೆಲುಗು, ಇಂಗ್ಲಿಷ್ - ಭಾಷಾಭಿಜ್ಞರಾದ ಗ್ರಂಥಕರ್ತರು ತಮ್ಮ ಸಾವಿರಾರು ವೇದಾಂತಪ್ರವಚನಗಳ ಮೂಲಕ ಶಂಕರ ಸಿದ್ಧಾಂತವನ್ನು ಆಂಧ್ರ, ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಲ್ಲಿ ಪ್ರಚಾರಮಾಡಿ ವಿದ್ವಾಂಸರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕೆಲವು ವಿದೇಶೀಯ ಜಿಜ್ಞಾಸುಗಳಿಗೂ ಶಾಂಕರವೇದಾಂತವನ್ನು ಬೋಧಿಸಿದ್ದಾರೆ. ಸಾಧನಮಾರ್ಗದಲ್ಲಿಯೂ ಅನುಭವಿಗಳಾಗಿದ್ದು ಶ್ರೀ ದತ್ತಗುರುವಿನ ಉಪಾಸಕರೂ ಶಿಷ್ಟಾಚಾರ ಸಂಪ್ರದಾಯವಂತರೂ ಆಗಿದ್ದು ತಾ। 7-12-1993 ರಂದು ತಮ್ಮ 72ನೆಯ ವಯಸ್ಸಿನಲ್ಲಿ ದೈವಾಧೀನರಾದರು. ಈ ಮಹನೀಯರ ಅಮೋಘವಾದ ಅಧ್ಯಾತ್ಮವಿದ್ಯಾಪ್ರಚಾರಸೇವೆಗೆ ಕಾರ್ಯಾಲಯದವರು ಕೃತಜ್ಞರಾಗಿರುತ್ತಾರೆ.

**********